ಮಂಗಳೂರು
ಸೋಮವಾರ, 23 ಮಾರ್ಚ್ 2026
ಸಂಪುಟ 48, ಸಂಚಿಕೆ 4, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎಲ್‌ಪಿಜಿ ಹಂಚಿಕೆ ಹೆಚ್ಚಿಸಲು ಕೇಂದ್ರ ಆದೇಶ |೦೨ · ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ! |೦೨ · ಏ.1ಕ್ಕೆ ರಾಷ್ಟ್ರಪತಿ ಸಿದ್ದಗಂಗಾ ಮಠಕ್ಕೆ ಭೇಟಿ |೦೫



ಮೋದಿ ಸುದೀರ್ಘ ಜನ ಸೇವಕ

ದಾಖಲೆಯ ನಾಯಕ

24 ವರ್ಷಗಳ ದೀರ್ಘಾವಧಿ ಸೇವೆ ಸಲ್ಲಿಸಿದ ನರೇಂದ್ರ ಮೋದಿ

8,930 ದಿನಗಳ ಚಾಮ್ಲಿಂಗ್ ದಾಖಲೆ ಮುರಿದ ನಮೋ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ಸರ್ಕಾರವೊಂದರ ಮುಖ್ಯಸ್ಥರಾಗಿ ಅತ್ಯಂತ ಸುದೀರ್ಘ ಅವಧಿಗೆ ಅಂದರೆ 8,931 ದಿನಗಳ ಮೈಲುಗಲ್ಲು ದಾಟಿ ಹೊಸ ದಾಖಲೆ ಬರೆದಿದ್ದಾರೆ. ಈ ಮೂಲಕ ಅವರು 24 ವರ್ಷಗಳ ಕಾಲ ಸಿಕ್ಕಿಮ್‌ನ ಮುಖ್ಯಮಂತ್ರಿಯಾಗಿದ್ದ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆಯನ್ನು (8,930 ದಿನಗಳು) ಮುರಿದಿದ್ದಾರೆ.

2001-2014
ನರೇಂದ್ರ ಮೋದಿಯವರು 2001ರ ಅ.7ರಂದು ಗುಜರಾತ್ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 2014ರ ಮೇ 21ರವರೆಗೆ ಅಧಿಕಾರದಲ್ಲಿದ್ದರು.



4 ಗುಜರಾತಿನ ಸಿಎಂ ಆಗಿಯೂ ಅವರು ಅತ್ಯಂತ ಸುದೀರ್ಘ ಅವಧಿಗೆ (2001, 2002, 2007 ಮತ್ತು 2012ರಲ್ಲಿ ಸತತ 4 ಬಾರಿ ಗೆಲುವು) ಅಧಿಕಾರದಲ್ಲಿದ್ದ ದಾಖಲೆ ಬರೆದಿದ್ದರು.

2014
3 2014ರಲ್ಲಿ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಅವರು, 2019 ಮತ್ತು 2024ರಲ್ಲಿ ಸತತ ಗೆಲುವು ಸಾಧಿಸಿ 3ನೇ ಬಾರಿ ಪ್ರಧಾನಿಯಾಗಿದ್ದಾರೆ.



ತಮ್ಮ ಸುದೀರ್ಘ ಸಾರ್ವಜನಿಕ ಸೇವೆಯಲ್ಲಿ ಮಹತ್ವದ ಮೈಲುಗಲ್ಲು ಸ್ಥಾಪಿಸಿದ ಸಾಧನೆಗಾಗಿ ಪ್ರಧಾನಿಯವರನ್ನು ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ವಿವಿಧ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ಅಚಲ ಬದ್ಧತೆಯ ಪ್ರತೀಕ: ಶಾ

ಪ್ರಧಾನಿ ಮೋದಿಯವರ ಸರ್ಕಾರದ ಸೇವೆ ಎಂಬುದು ಕಠಿಣ ದುಡಿಮೆ ಮತ್ತು ಅಚಲ ಬದ್ಧತೆಯ ಪ್ರತೀಕ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಅಭಿನಂದಿಸಿದ್ದಾರೆ. ಸೇವೆ, ಕಠಿಣ ದುಡಿಮೆ ಮತ್ತು ಅಚಲ ನಿಷ್ಠೆಯ ಹಾದಿಯಲ್ಲಿ ಒಂದು ಮೈಲುಗಲ್ಲು. ಮೋದಿಯವರು 8,930 ದಿನಗಳ ದಾಖಲೆ ಮಾಡಿದ್ದ ಸಿಕ್ಕಿಮ್‌ನ ಮಾಜಿ ಸಿಎಂ ಪವನ್ ಕುಮಾರ್ ಚಾಮ್ಲಿಂಗ್ ಅವರ ದಾಖಲೆ ದಾಟಿದ್ದಾರೆ. ➡ಪುಟ ೪

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್; ದಾಖಲೆ • ಪುಟ ೪

ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ • ಪುಟ ೨

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ ಕಾಂಗ್ರೆಸ್‌ನಿಂದ ಕಣಕ್ಕೆ

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ



ಸಮರ್ಥ್



ಉಮೇಶ್



• **ಬೆಂಗಳೂರು:** ಸಾಕಷ್ಟು ಹಗ್ಗಜಗ್ಗಾಟ, ಲೆಕ್ಕಾಚಾರದ ಬಳಿಕ ಕಾಂಗ್ರೆಸ್ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಅಭ್ಯರ್ಥಿಗಳ ಹೆಸರನ್ನು ಘೋಷಣೆ ಮಾಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ದಿ. ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಹಾಗೂ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್‌ರವರ ಪುತ್ರ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ದಿ. ಎಚ್.ವೈ. ಮೇಟಿಯವರ ಕಿರಿಯ ಪುತ್ರ ಉಮೇಶ್ ಮೇಟಿ ಹೆಸರನ್ನು ಪ್ರಕಟಿಸಿದೆ.

ತೀರಾ ಲೆಕ್ಕಾಚಾರ, ಎಲ್ಲವನ್ನೂ ಅಳೆದು ತೂಗಿ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಶಾಮನೂರು ಕುಟುಂಬದ ಪಾಲಾಗಿದ್ದರೆ, ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದ ಟಿಕೆಟ್‌ನ್ನು ಎಚ್.ವೈ. ಮೇಟಿಯವರ ಕುಟುಂಬಕ್ಕೆ ನೀಡಲಾಗಿದೆ. ಈ 2 ಕ್ಷೇತ್ರಗಳಲ್ಲೂ ಉಪಚುನಾವಣೆಯಲ್ಲಿ ಅನುಕಂಪದ ಲಾಭ ಪಡೆಯುವ ಲೆಕ್ಕಾಚಾರ ಅಡಗಿದೆ. ಸಾಮಾನ್ಯವಾಗಿ ಉಪ ಚುನಾವಣೆಗಳಲ್ಲಿ ಆ ಕ್ಷೇತ್ರಗಳಲ್ಲಿ ನಿಧರಾಗಿರುವ ಶಾಸಕರ ಕುಟುಂಬದವರಿಗೆ ಟಿಕೆಟ್ ನೀಡುವ ಪದ್ಧತಿಯನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ರೂಢಿಸಿಕೊಂಡಿದ್ದು, ಈ ಉಪ ಚುನಾವಣೆಯಲ್ಲೂ ಅದನ್ನೇ ಮುಂದುವರಿಸಿದೆ. ➡ಪುಟ ೪

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪಕ್ಷದ ಬಿ ಉಪ ಚುನಾವಣೆಗೆ ಸೋಮವಾರ (ಮಾ.23) ಬಿ ಫಾರಂ ಜತೆ ನಾಮಪತ್ರ ಸಲ್ಲಿಸಲಿದ್ದು, ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ಈ ನಾಮಪತ್ರ ಸಲ್ಲಿಕೆ ವೇದಿಕೆಯಾಗಲಿದೆ. ➡ಪುಟ ೪

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ



• **ಟೆಹ್ರಾನ್:** ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದ್ದಾರೆ. ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರ, ಅವುಗಳಿಗೆ ನೆರವು ನೀಡಿದ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ಇಲ್ಲ ಎಂದಿದ್ದಾರೆ. • ವಿವರ ಪುಟ ೨

ಕಿರುಸುದ್ದಿ

ಬಂಗಾಳಿ ಹಿಂದುಗಳ ಮೇಲೆ ಪಾಕ್ ದಾಳಿ 'ನರಮೇಧ' • ಪುಟ ೨

ಇಂಧನ, ರಸಗೊಬ್ಬರ ಪೂರೈಕೆ ಕುರಿತು ಪ್ರಧಾನಿ ಪರಿಶೀಲನೆ • ಪುಟ ೨

ವಿಮಾನಯಾನ ದರ ಮಿತಿ ತೆರವು ಮಾಡಿದ ಸರ್ಕಾರ • ಪುಟ ೨

ಹೊನ್ನಾಕಟ್ಟೆ ಚೆಕ್‌ಪೋಸ್ಟ್‌ನಲ್ಲಿ 32.50 ಲಕ್ಷ ನಗದು ಜಪ್ತಿ • ಪುಟ ೫

ವಿದ್ಯುತ್ ಸ್ಥಾವರಗಳ ನಾಶಗೊಳಿಸುವುದಾಗಿ ಟ್ರಂಪ್ ಬೆದರಿಕೆ | ಅಮೆರಿಕ ಅಧ್ಯಕ್ಷರಿಗೆ ಕ್ಯಾರೇ ಎನ್ನದ ಇರಾನ್
ವೈರಿ ದೇಶಗಳ ಹೊರತುಪಡಿಸಿ ಉಳಿದೆಲ್ಲಾ ರಾಷ್ಟ್ರಗಳ ನೌಕೆಗಳಿಗೆ ಹಾರ್ಮುಜ್ ಜಲಸಂಧಿ ತೆರೆದ ಇರಾನ್

ಶತ್ರುಗಳಿಗಿಲ್ಲ ಹಾರ್ಮುಜ್ ಪ್ರವೇಶ

ಟೆಹ್ರಾನ್: ತನ್ನ ಶತ್ರುಗಳು ಮತ್ತು ಅವರೊಂದಿಗೆ ನಂಟಿರುವ ರಾಷ್ಟ್ರಗಳಿಗೆ ಸೇರಿದ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲಾ ತೈಲ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡುವುದಾಗಿ ಇರಾನ್ ಪ್ರತಿನಿಧಿ ಅಲಿ ಮೌಸಾವಿ ಭಾನುವಾರ ಘೋಷಿಸಿದೆ.

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ನೀಡಿದ ಬಳಿಕ ಇರಾನ್ ತನ್ನ ನಿಲುವು ಸಡಿಲಗೊಳಿಸಿದೆ. ಆದರೆ ಶತ್ರು ರಾಷ್ಟ್ರಗಳು, ಅವುಗಳೊಂದಿಗೆ ನಂಟಿರುವ ರಾಷ್ಟ್ರಗಳ ಹಡಗುಗಳಿಗೆ ಹಾರ್ಮುಜ್ ಜಲಸಂಧಿಯನ್ನು ದಾಟಲು ಅವಕಾಶ ನೀಡುವುದಿಲ್ಲ ಎಂದು ಇರಾನ್ ಪ್ರತಿನಿಧಿ ತಿಳಿಸಿದ್ದಾರೆ.

ರಾಜತಾಂತ್ರಿಕ ಮಾತುಕತೆಗಳು ಇರಾನ್‌ಗೆ ಆದ್ಯತೆಯಾಗಿವೆ. ಆದರೆ ದಾಳಿಗಳ ಸಂಪೂರ್ಣ ನಿಲ್ಲಿಸುವುದು, ಪರಸ್ಪರ ನಂಬಿಕೆ ಮತ್ತು ವಿಶ್ವಾಸ ಇನ್ನಷ್ಟು ಮುಖ್ಯ ಎಂದು ಮೌಸವಿ ಹೇಳಿದ್ದಾರೆ.

ಶತ್ರುಗಳಿಗಿಲ್ಲ ಹಡಗು ಸಂಚಾರಕ್ಕೆ ಅವಕಾಶ: ಇರಾನ್ ಶತ್ರುಗಳೆಂದರೆ, ಇಸ್ರೇಲ್ ಮತ್ತು ಅಮೆರಿಕ. ಅಂದರೆ ಇಸ್ರೇಲ್, ಅಮೆರಿಕ ಸಹಿತ ಅವುಗಳೊಂದಿಗೆ ನಿಕಟ ಸಂಪರ್ಕದಲ್ಲಿರುವ ರಾಷ್ಟ್ರಗಳ ಹಡಗುಗಳಿಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್ ಹೇಳಿದೆ.

ಇರಾನ್ ವಕ್ತಾರ ಹೇಳಿಕೆಯು, ಟ್ರಂಪ್ ಬೆದರಿಕೆ ಹಾಕಿದ ಕೆಲವೇ ಗಂಟೆಗಳ ಬಳಿಕ ಬಂದಿದೆ. ಅಂತಾರಾಷ್ಟ್ರೀಯ ಸಮುದ್ರಯಾನ ಸಂಘಟನೆಯ ಇರಾನ್ ಪ್ರತಿನಿಧಿ ಅಲಿ ಮೌಸವಿ ಭಾನುವಾರ ಮಾತನಾಡಿದ್ದು, ಇರಾನ್‌ನೊಂದಿಗೆ ಭದ್ರತೆ ಮತ್ತು ಸುರಕ್ಷತಾ ವ್ಯವಸ್ಥೆ ಖಚಿತಪಡಿಸುವ ಮೂಲಕ ಕಿರಿದಾದ ಜಲಮಾರ್ಗದಲ್ಲಿ ಸಂಚರಿಸಲು ಅವಕಾಶ ನೀಡಲಾಗುವುದು ಎಂದು ಇರಾನ್ ಹೇಳಿದೆ.

ಈಗಿನ ಸ್ಥಿತಿಗೆ ಇಸ್ರೇಲ್, ಅಮೆರಿಕ ಕಾರಣ: ಗಲ್ಫ್‌ನಲ್ಲಿ ಸಮುದ್ರ ಸುರಕ್ಷತೆಯನ್ನು ಸುಧಾರಿಸಲು ಮತ್ತು ನಾವಿಕರನ್ನು ರಕ್ಷಿಸಲು ವಿಶ್ವಸಂಸ್ಥೆಯೊಂದಿಗೆ ಸಹಕರಿಸಲು ಇರಾನ್ ಸಿದ್ಧವಾಗಿದೆ. ಹಾರ್ಮುಜ್‌ನ ಈಗಿನ ಪರಿಸ್ಥಿತಿಗೆ ಇಸ್ರೇಲ್ ಮತ್ತು ಅಮೆರಿಕ ನಡೆಸಿದ ದಾಳಿಗಳೇ ಮೂಲ ಕಾರಣವೆಂದು ಮೌಸವಿ ವಾದಿಸಿದ್ದಾರೆ.

ಶತ್ರುಗಳ ಮಿತ್ರರಿಗೆ 1 ಲೀ. ತೈಲ ಕೊಡಲ್ಲ: ಫೆ.28ರಂದು ಮಹತ್ವದ ಇಂಧನ ಪೂರೈಕೆ ಮಾರ್ಗವನ್ನು ಇರಾನ್ ಮುಚ್ಚಿತ್ತು. ವಿಶ್ವದ ಸುಮಾರು ಐದನೇ ಒಂದು ಭಾಗ (ಶೇ.20) ತೈಲ ಮತ್ತು ಎಲ್‌ಪಿಜಿ ಈ ಮಾರ್ಗದ ಮೂಲಕ ಸಾಗುತ್ತದೆ. ಒಂದು ಲೀ. ತೈಲವನ್ನೂ ಅಮೆರಿಕ, ಇಸ್ರೇಲ್ ಮತ್ತು ಅವುಗಳ ಮಿತ್ರರಾಷ್ಟ್ರಗಳಿಗೆ ಕೊಡುವುದಿಲ್ಲ ಎಂದು ಇರಾನ್ ಹೇಳಿತ್ತು.

ಇಂಧನ ವ್ಯತ್ಯಯ ತಡೆಗಟ್ಟಿದ ಇರಾನ್?: ಮಧ್ಯಪ್ರಾಚ್ಯ ಯುದ್ಧದಿಂದ ಉಂಟಾದ ಜಾಗತಿಕ ಮಟ್ಟದ ಇಂಧನ ವ್ಯತ್ಯಯ ಬಹುಶಃ ಕಡಿಮೆ ಆಗಬಹುದು. ಇರಾನ್ ನಿರ್ಧಾರದಿಂದ ಹಲವು ರಾಷ್ಟ್ರಗಳು ನಿಟ್ಟುಸಿರು ಬಿಡುವಂತಾಗಿದೆ.

ನ್ಯಾಟೋಗಿಲ್ಲ ಆಸಕ್ತಿ: ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ರಕ್ಷಣೆ ಒದಗಿಸಲು ಅಮೆರಿಕಾ ನೌಕಾಪಡೆ ಒಕ್ಕೂಟವನ್ನು ರಚಿಸಲು ಪ್ರಯತ್ನಿಸಿದೆ. ಆದರೆ ಅಧ್ಯಕ್ಷ ಟ್ರಂಪ್ ಕರೆಗೆ ಯಾವುದೇ ನ್ಯಾಟೋ ಮಿತ್ರರಾಷ್ಟ್ರಗಳು ಬೆಂಬಲ ನೀಡಿಲ್ಲ.



ಟ್ರಂಪ್ ಬೆದರಿಕೆ

ಮುಂದಿನ 48 ಗಂಟೆಗಳೊಳಗೆ ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣ ತೆರೆಯದಿದ್ದರೆ, ಇರಾನ್‌ನ ವಿದ್ಯುತ್ ಸ್ಥಾವರಗಳನ್ನು ನಾಶ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ರಾತ್ರಿ ಬೆದರಿಕೆ ಹಾಕಿದ್ದರು. ಇರಾನ್‌ನ ಹಲವು ವಿದ್ಯುತ್ ಸ್ಥಾವರಗಳ ಮೇಲೆ ಅಮೆರಿಕ ದಾಳಿ ನಡೆಸಲಿದ್ದು, ಇರಾನ್‌ನ ಅತಿ ದೊಡ್ಡ ವಿದ್ಯುತ್ ಸ್ಥಾವರವನ್ನು ನಾಶ ಮಾಡುವ ಮೂಲಕ ಆರಂಭಿಸಲಿದ್ದೇವೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್ಸ್‌ನಲ್ಲಿ ಬರೆದಿದ್ದಾರೆ.

ಇಸ್ರೇಲ್ ಮೇಲೆ ಇರಾನ್ ದಾಳಿ: 180 ಜನಕ್ಕೆ ಗಾಯ

ಜೆರುಸಲೇಂ: ಇರಾನ್ ಶನಿವಾರ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು ಇಸ್ರೇಲ್‌ನ ದಕ್ಷಿಣದ ನಗರಗಳಾದ ಡಿಮೋನಾ ಮತ್ತು ಆರಾದ್ ಮೇಲೆ ಅಪ್ಪಳಿಸಿದ್ದು, ಕನಿಷ್ಠ 180 ಜನರು ಗಾಯಗೊಂಡಿದ್ದಾರೆ. ಇದರಿಂದ ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿರುವ ಸಂಘರ್ಷ ಮತ್ತಷ್ಟು ಉಲ್ಬಣಿಸಿದೆ. ಇಸ್ರೇಲ್ ಆರೋಗ್ಯ ಸಚಿವಾಲಯದ ಪ್ರಕಾರ, ಆರಾದ್‌ನಲ್ಲಿ 116 ಮತ್ತು ಡಿಮೋನಾದಲ್ಲಿ 64 ಜನರು ಗಾಯಗೊಂಡಿದ್ದು, ಇವರಲ್ಲಿ 10 ವರ್ಷದ ಬಾಲಕನೂ ಸೇರಿದ್ದಾನೆ. ವಸತಿ ಕಟ್ಟಡಗಳು ನಾಶವಾಗಿದ್ದು, ಹಲವಾರು ಕಡೆ ಬೆಂಕಿ ಕಾಣಿಸಿಕೊಂಡಿದೆ. ವಾಯು ರಕ್ಷಣಾ ವ್ಯವಸ್ಥೆಗಳು ಕ್ಷಿಪಣಿಗಳನ್ನು ತಡೆಯುವಲ್ಲಿ ವಿಫಲವಾಗಿವೆ, ಎಂದು ಇಸ್ರೇಲ್ ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ.



ವಿಕಿರಣ ಸೋರಿಕೆ ಆಗಿಲ್ಲ

ನಟಾಂಜ್ ಪರಮಾಣು ಸಂಕೀರ್ಣದ ಮೇಲೆ ನಡೆದ ದಾಳಿಗೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ. ಡಿಮೋನಾದಲ್ಲಿ ಇಸ್ರೇಲ್‌ನ ಪ್ರಮುಖ ಪರಮಾಣು ಸಂಶೋಧನಾ ಕೇಂದ್ರವಿದ್ದರೂ, ಅಲ್ಲಿ ಯಾವುದೇ ಹಾನಿ ಅಥವಾ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಎಂದು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಖಚಿತಪಡಿಸಿದೆ.

10 ಹಿಜ್ಬುಲ್ಲಾ ಉಗ್ರರು ಬಲಿ

ದಕ್ಷಿಣ ಲೆಬನಾನ್‌ನ ಹಲವು ಹಿಜ್ಬುಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿ, 10ಕ್ಕೂ ಹೆಚ್ಚು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದೇವೆ. ದೊಡ್ಡ ಪ್ರಮಾಣದ ಶಸ್ತ್ರಾಗಾರಗಳನ್ನು ಪತ್ತೆಹಚ್ಚಿರುವುದಾಗಿ ಇಸ್ರೇಲ್ ಸೇನೆ (ಐಡಿಎಫ್) ಭಾನುವಾರ ಘೋಷಿಸಿದೆ.ದಾಳಿ ನಡೆಸಿದ ಅಡಗುದಾಣಗಳಲ್ಲಿ ದಕ್ಷಿಣ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ಸಭಾ ಕೇಂದ್ರವೂ ಸೇರಿದ್ದು, ಪ್ರದೇಶದಿಂದ ರಾಕೆಟ್‌ಗಳ ಸಹಿತ ಹಲವು ಶಸ್ತ್ರಾಸ್ತ್ರಗಳನ್ನು ಇಸ್ರೇಲ್ ಸೇನೆ ವಶಪಡಿಸಿಕೊಂಡಿದೆ. ಈ ಶಸ್ತ್ರಗಳನ್ನು ಐಡಿಎಫ್ ಸೈನಿಕರು ಮತ್ತು ಇಸ್ರೇಲ್ ಸೇನೆಯ ವಿರುದ್ಧ ಭಯೋತ್ಪಾದನಾ ದಾಳಿಗಳನ್ನು ನಡೆಸಲು ಬಳಸಲಾಗುತ್ತಿತ್ತು ಎಂದು ಐಡಿಎಫ್ ತಿಳಿಸಿದೆ. ಶನಿವಾರ ರಾತ್ರಿ 9 ಹಿಜ್ಬುಲ್ಲಾ ಉಗ್ರರನ್ನು ಐಡಿಎಫ್ ಹೊಡೆದುರುಳಿಸಿತ್ತು.

ಅಮೆರಿಕದ ಎಫ್‌-15 ಹೊಡೆದುರುಳಿಸಿದ ಇರಾನ್

ಟೆಹ್ರಾನ್: ಅಮೆರಿಕ ಮೇಲೆ ಇನ್ನಿಲ್ಲದಂತೆ ಮುಗಿಬಿದ್ದಿರುವ ಇರಾನ್ ಇದೀಗ ಅಮೆರಿಕದ ಮತ್ತೊಂದು ಎಫ್‌-15 ಯುದ್ಧ ವಿಮಾನವನ್ನು ಹೊಡೆದುರುಳಿಸಿದ್ದಾಗಿ ಘೋಷಿಸಿದೆ. ಇರಾನ್ ಸೇನೆಯು ಭಾನುವಾರ ದೇಶದ ದಕ್ಷಿಣ ಕರಾವಳಿಯಲ್ಲಿ ಮತ್ತು ಹಾರ್ಮುಜ್ ದ್ವೀಪದ ಬಳಿ ತನ್ನ ವಾಯು ರಕ್ಷಣಾ ವ್ಯವಸ್ಥೆಯನ್ನು ಬಳಸಿಕೊಂಡು ಶತ್ರು ರಾಷ್ಟ್ರ ಅಮೆರಿಕದ ಎಫ್‌-15 ಅನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ. ಇತ್ತೀಚಿನ ದಾಳಿ ದೃಢಪಟ್ಟರೆ, ಅಮೆರಿಕದ ವಿರುದ್ಧ ನಡೆಯುತ್ತಿರುವ ಸಂಘರ್ಷದಲ್ಲಿ ಇರಾನ್ ಕನಿಷ್ಠ ಅರ್ಧ ಡಜನ್ ಅಮೆರಿಕನ್ ಜೆಟ್‌ಗಳನ್ನು ಹೊಡೆದುರುಳಿಸಿದಂತಾಗಿದೆ ಎನ್ನಲಾಗಿದೆ. ಸುಧಾರಿತ ಎಫ್ -15 ಫೈಟರ್ ಜೆಟ್ ಅನ್ನು ಇರಾನಿನ ವಾಯು ರಕ್ಷಣಾ ಪಡೆಯ ನೆಲದಿಂದ ಗಾಳಿಗೆ ವ್ಯವಸ್ಥೆಗಳನ್ನು ಬಳಸಿಕೊಂಡು ಹೊಡೆದುರುಳಿಸಲಾಗಿದೆ ಎಂದು ಇರಾನ್‌ನ ಫಾರ್ಸ್ ನ್ಯೂಸ್ ವರದಿ ಮಾಡಿದೆ. ಇರಾನ್ ನ ವಾಯು ರಕ್ಷಣಾ ವ್ಯವಸ್ಥೆಯು ಎಫ್ -15 ಫೈಟರ್ ಜೆಟ್ ಅನ್ನು ಯಶಸ್ವಿಯಾಗಿ ಲಾಕ್ ಮಾಡಿರುವುದನ್ನು ತೋರಿಸುವ ವೀಡಿಯೊವನ್ನು ಇರಾನಿನ ಮಾಧ್ಯಮವು ಅಪ್‌ಲೋಡ್ ಮಾಡಿದೆ.

ಟ್ರಂಪ್ ಬೆದರಿಕೆಗೆ ಇರಾನ್ ಪ್ರತ್ಯುತ್ತರ

ಹಾರ್ಮುಜ್ ಜಲಸಂಧಿಯಲ್ಲಿ ಸಂಚರಿಸಲು ಮುಕ್ತ ಅವಕಾಶ ನೀಡದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದಾಗಿ ಅಮೆರಿಕದ ಬೆದರಿಕೆಗೆ ಇರಾನ್ ಪ್ರತ್ಯುತ್ತರ ನೀಡಿದ್ದು, ಒಂದು ವೇಳೆ ವಾಷಿಂಗ್ಟನ್ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚುತ್ತೇವೆಂದು ಹೇಳಿದೆ.

ಇರಾನ್ ಕ್ಷಿಪಣಿ ದಾಳಿಯಿಂದ ಜಗತ್ತಿಗೆ ಅಪಾಯ: ಇಸ್ರೇಲ್



ಜೆರುಸಲೇಂ: ಇತ್ತೀಚೆಗೆ ಇಸ್ರೇಲ್ ಮತ್ತು ಡಿಯಾಗೋ ಗಾರ್ಸಿಯಾ ಮೇಲೆ ಇರಾನ್ ನಡೆಸಿದ ಬ್ಯಾಲಿಸ್ಟಿಕ್ ಕ್ಷಿಪಣಿ ದಾಳಿಗಳು, ಟೆಹ್ರಾನ್ ಈಗ ಇಡೀ ಯುರೋಪ್ ಖಂಡಕ್ಕೆ ಅಪಾಯವನ್ನುಂಟು ಮಾಡುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ಸಾಬೀತುಪಡಿಸಿವೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಭಾನುವಾರ ಎಚ್ಚರಿಸಿದ್ದಾರೆ.

ಶನಿವಾರ ನಡೆದ ಕ್ಷಿಪಣಿ ದಾಳಿಯಲ್ಲಿ 115 ಜನರು ಗಾಯಗೊಂಡಿದ್ದ ದಕ್ಷಿಣ ಇಸ್ರೇಲ್‌ನ ಆರಾದ್ ನಗರಕ್ಕೆ ನೆತನ್ಯಾಹು ಭೇಟಿ ನೀಡಿದ್ದರು. ಇರಾನ್ ಪಡೆಗಳು 4,000 ಕಿಮೀ ದೂರದಲ್ಲಿರುವ ಡಿಯಾಗೋ ಗಾರ್ಸಿಯಾದ ಬ್ರಿಟಿಷ್–ಅಮೆರಿಕನ್ ವಾಯುನೆಲೆ ಮತ್ತು ಜೆರುಸಲೇಂನ ಪವಿತ್ರ ಸ್ಥಳಗಳ ಸಮೀಪವಿರುವ ಪ್ರದೇಶಗಳನ್ನು ಗುರಿಯಾಗಿಸಿಕೊಂಡಿದ್ದವು ಎಂದು ವರದಿಯಾಗಿದೆ.

ಇರಾನ್ ಆಡಳಿತವನ್ನು ಎದುರಿಸಲು ಇಸ್ರೇಲ್ ಮತ್ತು ಅಮೆರಿಕದ ನಡುವಿನ ಸಹಯೋಗ ಅತ್ಯಗತ್ಯ. ಟೆಹ್ರಾನ್‌ನ ಪರಮಾಣು ಮತ್ತು ಕ್ಷಿಪಣಿ ಉತ್ಪಾದನಾ ಸಾಮರ್ಥ್ಯಗಳನ್ನು ನಾಶಪಡಿಸುವತ್ತ ಪ್ರಸ್ತುತ ಮಿಲಿಟರಿ ಕಾರ್ಯಾಚರಣೆಗಳನ್ನು ಕೇಂದ್ರೀಕರಿಸಲಾಗಿದೆ. ಈ ಜಾಗತಿಕ ಬೆದರಿಕೆಯನ್ನು ಹತ್ತಿಕ್ಕಲು ಮತ್ತು ಇರಾನ್‌ನ ಪ್ರಸ್ತುತ ಆಡಳಿತವನ್ನು ಉರುಳಿಸಲು ಅಂತಾರಾಷ್ಟ್ರೀಯ ಸಮುದಾಯ ಕೈಜೋಡಿಸಬೇಕೆಂದು ಅವರು ಕರೆ ನೀಡಿದರು.

ಭಾರತದ ಯೂರಿಯಾ ಉತ್ಪಾದನೆಗೆ ಹೊಡೆತ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಭಾರತದ ಯೂರಿಯಾ ಸ್ಥಾವರಗಳು ಅರ್ಧದಷ್ಟು ಸಾಮರ್ಥ್ಯದಲ್ಲಿ



ಕಾರ್ಯನಿರ್ವಹಿಸುತ್ತಿವೆ. ಪೂರೈಕೆದಾರರು ಒಪ್ಪಂದದ ಪ್ರಮಾಣವನ್ನು ತಲುಪಿಸಲು ವಿಫಲವಾದ ಕಾರಣ ಪೆಟ್ರೋನೆಟ್ ಎಲ್‌ಎನ್‌ಜಿ ಫೋರ್ಸ್ ಮೆರ್ಜ಼ ಘೋಷಿಸಿದೆ. ಈ ಬೆಳವಣಿಗೆಯಿಂದಾಗಿ ಗೇಲ್ (ಜಿಎಐಎಲ್) ಮತ್ತು ಐಒಸಿನಂತಹ ಸರ್ಕಾರಿ ವಿತರಕರು ದೇಶೀಯ ರಸಗೊಬ್ಬರ ಘಟಕಗಳಿಗೆ ಅನಿಲ ಪೂರೈಕೆಯನ್ನು ಸುಮಾರು 40 ಪ್ರತಿಶತದಷ್ಟು ಕಡಿತಗೊಳಿಸಲು ಸೂಚಿಸಲಾಗಿದೆ. ಉತ್ಪಾದನೆ ಅರ್ಧದಷ್ಟು ಕುಸಿದಿದೆ, ಅಲ್ಲದೆ ಉಷ್ಣತೆಯ ಅಭಾವದಿಂದ ಈ ಘಟಕಗಳಲ್ಲಿನ ಇಂಧನ ಬಳಕೆ 40 ಪ್ರತಿಶತದಷ್ಟು ಹೆಚ್ಚಿರುವುದು ಸಮಸ್ಯೆಗೆ ಕಾರಣವಾಗಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಹಠಾತ್ ಲೋಡ್ ಬದಲಾವಣೆ ಉಪಕರಣಗಳ ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತಿವೆ. ಗೇಲ್ ಪರಿಚಯಿಸಿದ ಹೊಸ ಬೆಲೆ ಮಾದರಿಗಳು ಆರ್ಥಿಕ ಅನಿಶ್ಚಿತತೆ ಹೆಚ್ಚಿಸಿದ್ದು, ಮುಂಬರುವ ಖಾರಿಫ್ ಬಿತ್ತನೆ ಹಂಗಾಮಿನ ಮೇಲೆ ಇದು ಪರಿಣಾಮ ಬೀರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಕಿರುಸುದ್ದಿ

ವಿಮಾನಯಾನ ದರ ಮಿತಿ ತೆರವುಗೊಳಿಸಿದ ಸರ್ಕಾರ

ಹೊಸದಿಲ್ಲಿ: ದೇಶೀಯ ವಿಮಾನಯಾನ ಟಿಕೆಟ್ ದರಗಳ ಮೇಲಿನ ತಾತ್ಕಾಲಿಕ ಮಿತಿಯನ್ನು ತೆಗೆದುಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮಾ.23ರಿಂದ ಈ ವಿಮಾನಯಾನ ದರ ಮಿತಿಯನ್ನು ತೆಗೆದುಹಾಕುವುದಾಗಿ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಆದೇಶ ಹೊರಡಿಸಿದೆ. ಸಾಮಾನ್ಯವಾಗಿ ವಿಮಾನ ಹಾರಾಟ ವ್ಯತ್ಯಯದ ವೇಳೆ ಟಿಕೆಟ್ ದರ ಮಿತಿಮೀರಿ ಹೆಚ್ಚಾಗುವ ವೇಳೆ ಗ್ರಾಹಕರ ಕಾಳಜಿಯಿಂದ ಸರ್ಕಾರ ತಾತ್ಕಾಲಿಕ ಮಿತಿ ಹೇರುತ್ತದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ದೇಶದೆಲ್ಲೆಡೆ ಉಂಟಾಗಿದ್ದ ಇಂಡಿಗೋ ವಿಮಾನಯಾನ ಹಾರಾಟ ವ್ಯತ್ಯಯದ ವೇಳೆ ಗ್ರಾಹಕರ ರಕ್ಷಣೆಗಾಗಿ ಕೇಂದ್ರ ಸರ್ಕಾರ ತಾತ್ಕಾಲಿಕ ಮಿತಿ ಹೇರಿತ್ತು. ಹಾರಾಟ ವ್ಯತ್ಯಯ ಮತ್ತು ಟಿಕೆಟ್‌ಗಾಗಿ ಬೇಡಿಕೆ ಹೆಚ್ಚಾದಾಗ ವಿಮಾನಯಾನ ದರ ಹೆಚ್ಚಾಗುತ್ತದೆ. ಈ ವೇಳೆ ಸರ್ಕಾರ ಹೇರಿದ ಮಿತಿಗಿಂತ ಹೆಚ್ಚು ಹಣವನ್ನು ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಂದ ವಸೂಲಿ ಮಾಡುವಂತಿಲ್ಲ. ಮಿತಿ ತೆರವುಗೊಳಿಸಿದ್ದರಿಂದ, ವಿಮಾನಯಾನ ಸಂಸ್ಥೆಗಳು ಬೇಡಿಕೆಗೆ ಅನುಗುಣವಾಗಿ ಟಿಕೆಟ್ ದರ ಹೆಚ್ಚಿಸುವ ಸಾಧ್ಯತೆಯಿದೆ.

ಇಂಧನ ಪೂರೈಕೆ ಕುರಿತು ಪರಿಶೀಲನೆ



ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಳ್ಳುತ್ತಿರುವ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲ, ಅನಿಲ, ವಿದ್ಯುತ್ ಮತ್ತು ರಸಗೊಬ್ಬರ ವಲಯಗಳ ಸ್ಥಿತಿಗತಿಗಳ ಕುರಿತು ಪ್ರಧಾನಿ ನರೇಂದ್ರ ಮೋದಿಯವರು ಭಾನುವಾರ ಹಿರಿಯ ಸಚಿವರೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದರು.

ದೇಶಾದ್ಯಂತ ಅಗತ್ಯ ವಸ್ತುಗಳ ಅಡೆತಡೆಯಿಲ್ಲದ ಪೂರೈಕೆ, ಸ್ಥಿರ ಲಾಜಿಸ್ಟಿಕ್ ಮತ್ತು ಸಮರ್ಥ ವಿತರಣಾ ಜಾಲವನ್ನು ಖಚಿತಪಡಿಸಿಕೊಳ್ಳುವತ್ತ ಗಮನ ಹರಿಸುವಂತೆ ಸಭೆಯಲ್ಲಿ ಪ್ರಧಾನಿ ಸೂಚಿಸಿದರು ಎನ್ನಲಾಗಿದೆ. ಫೆ.28ರಿಂದ ಪ್ರಾದೇಶಿಕ ಸಂಘರ್ಷದಿಂದ ಪ್ರಾರಂಭವಾದ ಯುದ್ಧದಿಂದ ಉಂಟಾಗಿರುವ ಸಮಸ್ಯೆಗಳನ್ನು ನಿವಾರಿಸಲು ಮತ್ತು ಗ್ರಾಹಕರು ಹಾಗೂ ಕೈಗಾರಿಕೆಗಳ ಹಿತಾಸಕ್ತಿಗಳನ್ನು ರಕ್ಷಿಸಲು ಕೈಗೊಳ್ಳಲಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ, ರಕ್ಷಣೆ, ಗೃಹ, ವಿದೇಶಾಂಗ ಮತ್ತು ಹಣಕಾಸು ಸಚಿವರು ಸೇರಿದಂತೆ ಹಿರಿಯ ಕ್ಯಾಬಿನೆಟ್ ಸದಸ್ಯರು ಪ್ರಧಾನಿಯೊಂದಿಗೆ ಚರ್ಚಿಸಿದ್ದಾರೆ.

ಜಾಗತಿಕ ಇಂಧನ ಸಾರಿಗೆಯ ಶೇ.20ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯಲ್ಲಿ ಉಂಟಾಗಿರುವ ಅಡೆತಡೆಗಳು ಪ್ರಸ್ತುತ ಪೂರೈಕೆ ಸವಾಲುಗಳಿಗೆ ಪ್ರಾಥಮಿಕ ಕಾರಣ. ಸಂಘರ್ಷದ ಆರಂಭದಿಂದಲೂ ಈ ಮಾರ್ಗದಲ್ಲಿ ಹಡಗುಗಳ ಸಂಚಾರ ನಿರ್ಬಂಧಿಸಲ್ಪಟ್ಟಿದೆ. ಇಂತಹ ಅಂತರಾಷ್ಟ್ರೀಯ ಪೂರೈಕೆ ಸರಪಳಿ ಬಿಕ್ಕಟ್ಟುಗಳನ್ನು ಎದುರಿಸಲು ಸಾರ್ವಜನಿಕ ಜಾಗೃತಿ ಮತ್ತು ಕಾರ್ಯತಂತ್ರದಲ್ಲಿ ತಾಳ್ಮೆ ಅತ್ಯಗತ್ಯ ಎಂದು ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಸೌದಿ ಅರೇಬಿಯಾ, ಯುಎಇ, ಕತಾರ್, ಇಸ್ರೇಲ್ ಮತ್ತು ಇರಾನ್ ಸೇರಿದಂತೆ ವಿವಿಧ ದೇಶಗಳ ನಾಯಕರೊಂದಿಗೆ ಪ್ರಧಾನಿ ನಡೆಸಿದ ಇತ್ತೀಚಿನ ಮಾತುಕತೆಗಳ ಬಗ್ಗೆಯೂ ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಎಲ್ಪಿಜಿ ಸಿಲಿಂಡರ್ ಹಂಚಿಕೆ ಹೆಚ್ಚಿಸಲು ಕೇಂದ್ರ ನಿರ್ದೇಶ

ಹೊಸದಿಲ್ಲಿ: ಜಾಗತಿಕ ಮಟ್ಟದಲ್ಲಿ ತೈಲ ಮತ್ತು ಅನಿಲ ಪೂರೈಕೆ ವ್ಯತ್ಯಯದ ಹಿನ್ನೆಲೆ ನಗರ ಅನಿಲ ಸರಬರಾಜು ಯೋಜನೆಯನ್ವಯ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ ಮತ್ತು ವಾಣಿಜ್ಯ ಎಲ್‌ಪಿಜಿ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಭಾನುವಾರ ನಿರ್ದೇಶಿಸಿದೆ.

ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ತನ್ನ ಕಚೇರಿಗಳಿಗೆ ನಗರ ಅನಿಲ ವಿತರಣೆ (ಸಿಸಿಡಿ) ಅರ್ಜಿಗಳನ್ನು ಇನ್ನು 10 ದಿನಗಳೊಳಗೆ ವಿಲೇವಾರಿ ಮಾಡಲು ಸೂಚಿಸಿದೆ. ಇದರಿಂದ ಪೈಪ್ ನೈಸರ್ಗಿಕ ಅನಿಲ (ಪಿಎನ್‌ಜಿ) ವಿತರಣೆಯ ವೇಗವರ್ಧನೆಯಾಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಪ್ರಮುಖ ನಗರ ಮತ್ತು ನಗರ ಪ್ರದೇಶಗಳಲ್ಲಿನ ವಾಣಿಜ್ಯ ಎಲ್‌ಪಿಜಿ ಬಳಕೆದಾರರು, ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮೇಲಿನ ಅವಲಂಬನೆ ಕಡಿಮೆ ಮಾಡಲು, ಪಿಎನ್‌ಜಿಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದೆ.

ಗೃಹ ಬಳಕೆಯ ಎಲ್‌ಪಿಜಿ ಸರಬರಾಜು ಸ್ಥಿರವಾಗಿದ್ದು, ಡೀಲರ್‌ಗಳಲ್ಲಿಯೂ ಯಾವುದೇ ಕೊರತೆ ವರದಿಯಾಗಿಲ್ಲ. ದೇಶದಾದ್ಯಂತ ಸಾಮಾನ್ಯ ವಿತರಣೆ ಕ್ರಮ ಮುಂದುವರಿದಿದ್ದು, ಬಹುತೇಕ ವಿತರಣೆಗಳು ಡೆಲಿವರಿ ಅಥೆಂಟಿಕೇಶನ್ ಕೋಡ್ (ಡಿಎಸಿ) ಆಧಾರದಲ್ಲಿ ನಡೆಯುತ್ತಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕೂಡ ಕಡಿಮೆಯಾಗಿದೆ ಎಂದು ಹೇಳಿದೆ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆಯನ್ನು ಸರ್ಕಾರ ಹಂತ ಹಂತವಾಗಿ ಹೆಚ್ಚಿಸಿದೆ.

ಪ್ರಧಾನಿ ನಿವಾಸಕ್ಕೆ ಪುಟ್ಟ ಅತಿಥಿ!

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ತಮ್ಮ 7, ಲೋಕ ಕಲ್ಯಾಣ ಮಾರ್ಗದ ಅಧಿಕೃತ ನಿವಾಸದಲ್ಲಿ ಖಾಸಗಿ ಕುಟುಂಬವೊಂದರ ಭೇಟಿಯ ಸಂದರ್ಭದಲ್ಲಿ ಪುಟ್ಟ ಮಗುವಿನೊಂದಿಗೆ ಇರುವ ಭಾವಚಿತ್ರವನ್ನು ಹಂಚಿಕೊಂಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಕುತೂಹಲ ಮೂಡಿಸಿತು.

ಯಾರು ಈ ಅತಿಥಿಗಳು?: ವೈರಲ್ ಚಿತ್ರದಲ್ಲಿರುವ ಮಗುವನ್ನು ನೀಯೋಮ್ ಅಶ್ವಿನ್ ಕೃಷ್ಣ (ಓಮಿ) ಎಂದು ಗುರುತಿಸಲಾಗಿದೆ. ಈತ ಸಾಮಾಜಿಕ ಜಾಲತಾಣದ ಇನ್ಫ್ಲುಯೆನ್ಸರ್ ದಿಯಾ ಕೃಷ್ಣ ಅವರ ಪುತ್ರ ಮತ್ತು ಬಿಜೆಪಿ ಜತೆ ಸಂಪರ್ಕವಿರುವ ಕೇರಳದ ಪ್ರಮುಖ ನಟ ಹಾಗೂ ರಾಜಕಾರಣಿ ಕೃಷ್ಣಕುಮಾರ್ ಅವರ ಮೊಮ್ಮಗ ಎಂದು ತಿಳಿದುಬಂದಿದೆ. ಪ್ರಧಾನಿ ಮೋದಿ, ಕೃಷ್ಣಕುಮಾರ್ ಕುಟುಂಬದ ಸದಸ್ಯರಾದ ಸಿಂಧು ಕೃಷ್ಣಕುಮಾರ್ ಅಶ್ವಿನ್ ಮತ್ತು ಪುತ್ರಿಯರಾದ ಅಹಾನಾ, ದಿಯಾ, ಇಶಾನಿ ಮತ್ತು ಹನ್ಸಿಕಾ ಅವರೊಂದಿಗೆ ಒಂದು ಗಂಟೆಗಳ ಕಾಲ ಸಂವಾದ ನಡೆಸಿದ್ದಾರೆ.



ಜಾಲತಾಣದಲ್ಲಿ 'ಪುಟಾಣಿ ಮಿತ್ರ'

ಪುಟಾಣಿ ಮಿತ್ರನೊಂದಿಗೆ ಎಂಬ ಅರ್ಥ ಬರುವ ಶೀರ್ಷಿಕೆ ನೀಡಿ ಪ್ರಧಾನಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡ ಈ ಫೋಟೋ 1.7 ಮಿಲಿಯನ್‌ಗಿಂತಲೂ ಹೆಚ್ಚು ಲೈಕ್‌ಗಳನ್ನು ಪಡೆದುಕೊಂಡಿದೆ. ಈ ಭೇಟಿಯ ಹೆಚ್ಚಿನ ಚಿತ್ರಗಳು ಮತ್ತು ವಿಡಿಯೋಗಳು ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿವೆ. ಪ್ರಧಾನಿ ಭೇಟಿಯನ್ನು ದಿಯಾ ಕೃಷ್ಣ ಅತ್ಯಂತ ಸಂಭ್ರಮದ ಕ್ಷಣವೆಂದು ಬಣ್ಣಿಸಿದರೆ, ನಟಿ ಅಹಾನಾ ಕೃಷ್ಣ, ಪ್ರಧಾನಿ ಆತ್ಮೀಯವಾಗಿ ಮಾತನಾಡಿಸಿದರು ಎಂದು ತಮ್ಮ ಅನುಭವ ಹಂಚಿಕೊಂಡಿದ್ದಾರೆ.

1971ರ ಬಾಂಗ್ಲಾ ವಿಮೋಚನೆ ವೇಳೆ ದೌರ್ಜನ್ಯ: ಅಮೆರಿಕ ನಿರ್ಣಯ
ಹಿಂದುಗಳ ಮೇಲೆ ಪಾಕ್ ದಾಳಿ ನರಮೇಧ

ವಾಷಿಂಗ್ಟನ್: 1971ರ ಬಾಂಗ್ಲಾದೇಶ ವಿಮೋಚನಾ ಹೋರಾಟದ ವೇಳೆ ಬಂಗಾಳಿ ಹಿಂದುಗಳ ಮೇಲೆ ನಡೆದ ದೌರ್ಜನ್ಯಗಳನ್ನು 'ನರಮೇಧ' ಮತ್ತು 'ಯುದ್ಧಾಪರಾಧಗಳು' ಎಂದು ಅಧಿಕೃತವಾಗಿ ಗುರುತಿಸುವಂತೆ ಅಮೆರಿಕ ಸಂಸತ್ತಿನಲ್ಲಿ ಮಹತ್ವದ ನಿರ್ಣಯ ಮಂಡಿಸಲಾಗಿದೆ. ಓಹಿಯೋ ರಾಜ್ಯದ ಡೆಮೋಕ್ರಟಿಕ್ ಪಕ್ಷದ ಸಂಸದ ಗ್ರೆಗ್ ಲ್ಯಾಂಡ್ಸ್‌ಮನ್ ಅವರು ಈ ನಿರ್ಣಯವನ್ನು ಪ್ರತಿನಿಧಿಗಳ ಸದನದಲ್ಲಿ ಮಂಡಿಸಿದ್ದು, ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಮಿತಿಗೆ ರವಾನಿಸಲಾಗಿದೆ.



ಆಪರೇಷನ್ ಸರ್ಚ್‌ಲೈಟ್: 1971ರ ಮಾರ್ಚ್ 25ರಂದು ಪಾಕಿಸ್ತಾನದ ಸರ್ಕಾರವು ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜಿಬುರ್ ರೆಹಮಾನ್ ಅವರನ್ನು ಬಂಧಿಸಿತು. ಇದಾದ ನಂತರ ಪಾಕಿಸ್ತಾನ ಸೇನೆ ಮತ್ತು ಜಮಾತ್–ಎ–ಇಸ್ಲಾಮಿ ಸಂಘಟನೆ ಸೇರಿ ಆಪರೇಷನ್ ಸರ್ಚ್‌ಲೀಟ್ ಹೆಸರಿನಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಭಾರೀ ಮಟ್ಟದ ಸೈನಿಕ ದಾಳಿಗಳನ್ನು ಆರಂಭಿಸಿತು. ಈ ಕಾರ್ಯಾಚರಣೆಯಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ಕ್ರೂರ ಹತ್ಯಾಕಾಂಡ ನಡೆಯಿತು.

ಹಿಂದು ಸಮುದಾಯ ಗುರಿ: ನಿರ್ಣಯದಲ್ಲಿ ಬಂಗಾಳಿ ಹಿಂದುಗಳನ್ನು ವಿಶೇಷವಾಗಿ ಗುರಿಯಾಗಿಸಿಕೊಂಡು ಹತ್ಯೆ, ಅತ್ಯಾಚಾರ ಮತ್ತು ಬಲವಂತದ ಮತಾಂತರ ನಡೆದಿದೆ ಎಂದು ಉಲ್ಲೇಖಿಸಲಾಗಿದೆ. ರಾಜಕೀಯ ನಾಯಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಸೇರಿದಂತೆ ಸಾಮಾನ್ಯ ನಾಗರಿಕರು ಈ ಹಿಂಸಾಚಾರದ ಬಲಿಯಾಗಿದ್ದರು. ಸಾವಿರಾರು ಮಹಿಳೆಯರನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಪಡಿಸಲಾಗಿತ್ತು ಎಂದು ಹೇಳಲಾಗಿದೆ.

ಬ್ಲಡ್ ಟೆಲಿಗ್ರಾಮ್ ಬಹಿರಂಗಪಡಿಸಿದ ಸತ್ಯ: ಢಾಕಾದಲ್ಲಿದ್ದ ಅಮೆರಿಕದ ಕಾನ್ಸುಲ್ ಜನರಲ್ ಆರ್ಚರ್ ಬ್ಲಡ್ ಅವರು 1971ರ ಮಾರ್ಚ್ 28ರಂದು ಸೆಲೆಕ್ಟೀವ್ ಜೆನೊಸೈಡ್(ಆಯ್ದ ನರಮೇಧ) ಎಂಬ ಶೀರ್ಷಿಕೆಯಲ್ಲಿ ಕಳುಹಿಸಿದ ಟೆಲಿಗ್ರಾಮ್‌ನಲ್ಲಿ, ಪಾಕಿಸ್ತಾನ ಸೇನೆಯು ಬಂಗಾಳಿಗಳು ಮತ್ತು ಹಿಂದುಗಳನ್ನು ವ್ಯವಸ್ಥಿತವಾಗಿ ಹತ್ಯೆ ಮಾಡುತ್ತಿದೆ ಎಂದು ಎಚ್ಚರಿಸಿದ್ದರು. ಈ ಸಂದೇಶವು ನಂತರ ಬ್ಲಡ್ ಟೆಲಿಗ್ರಾಮ್ ಎಂದು ಪ್ರಸಿದ್ಧಿಯಾಯಿತು.

ಅಮೆರಿಕದ ಮೌನಕ್ಕೆ ವಿರೋಧ: ಅಂದಿನ ಹತ್ಯಾಕಾಂಡದ ಬಗ್ಗೆ ಅಮೆರಿಕ ಸರ್ಕಾರ ಮೌನ ವಹಿಸಿತ್ತು ಎಂಬುದನ್ನು ನಿರ್ಣಯದಲ್ಲಿ ಟೀಕಿಸಲಾಗಿದೆ. 1971ರ ಏ.6ರಂದು ಕಾನ್ಸುಲೇಟ್‌ನ 20 ಅಧಿಕಾರಿಗಳು 'ಬ್ಲಡ್ ಟೆಲಿಗ್ರಾಮ್' ಮೂಲಕ ಸರ್ಕಾರದ ನಿಲುವಿಗೆ ವಿರೋಧ ವ್ಯಕ್ತಪಡಿಸಿದ್ದರು. ಈ ಘಟನೆ ಅಮೆರಿಕದ ರಾಜತಾಂತ್ರಿಕ ಇತಿಹಾಸದಲ್ಲಿ ಪ್ರಮುಖ ಘಟನೆ ಎಂದು ಪರಿಗಣಿಸಲಾಗಿದೆ.

ಮಾನವ ಹಕ್ಕುಗಳ ಪರ ಒತ್ತಾಯ: ಈ ನಿರ್ಣಯವು 1971ರ ಘಟನೆಗಳನ್ನು ಮಾನವೀಯತೆಯ ವಿರುದ್ಧದ ಅಪರಾಧಗಳೆಂದು ಗುರುತಿಸಲು ಮತ್ತು ಭವಿಷ್ಯದಲ್ಲಿ ಇಂತಹ ಕ್ರೌರ್ಯಗಳು ಮರುಕಳಿಸದಂತೆ ಜಾಗತಿಕ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಒತ್ತಾಯಿಸುತ್ತದೆ. ಜತೆಗೆ, ಅಮೆರಿಕ ಅಧ್ಯಕ್ಷರು ಈ ವಿಷಯದಲ್ಲಿ ಸ್ಪಷ್ಟ ನಿಲುವು ಕೈಗೊಳ್ಳಬೇಕೆಂದು ಆಗ್ರಹಿಸಲಾಗಿದೆ.

ಸಿಎಂ, ಪ್ರಧಾನಿಯಾಗಿ ಮೋದಿ ಸುದೀರ್ಘ ಸಾರ್ವಜನಿಕ ಸೇವಾ ದಾಖಲೆ
ಕೇಂದ್ರ ಸಚಿವರು, ಬಿಜೆಪಿ ಅಧ್ಯಕ್ಷರ ಅಭಿನಂದನೆ

ಹೊಸದಿಲ್ಲಿ: ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ ಅತ್ಯಂತ ಸುದೀರ್ಘ ಅವಧಿಯ ಸಾರ್ವಜನಿಕ ಸೇವಾ ದಾಖಲೆ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಹಾಗೂ ವಿವಿಧ ಕೇಂದ್ರ ಸಚಿವರುಗಳು, ಮುಖ್ಯಮಂತ್ರಿಗಳು ಅಭಿನಂದಿಸಿದ್ದಾರೆ.



ದೇಶದ ಬಡವರು, ಜನಸಾಮಾನ್ಯರ ಬದುಕಿಗೆ ಶಕ್ತಿ ತುಂಬುವಲ್ಲಿ ಆಳ ಬದ್ಧತೆ ಮತ್ತು ಜಾಗತಿಕ ವೇದಿಕೆಗಳಲ್ಲಿ ಭಾರತದ ಗೌರವವನ್ನು ಎತ್ತಿಹಿಡಿದ ಸಮರ್ಥ ನಾಯಕತ್ವದ ಮೋದಿಯವರ ಸಾಧನೆ ದೇಶದ ಮತ್ತು ಜನತೆಯ ಹೆಮ್ಮೆ ಎಂದು ಬಣ್ಣಿಸಿದ್ದಾರೆ.

ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ, ಪಿಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ನಿತಿನ್ ನವೀನ್ ಅವರುಗಳು "ಮೋದಿ ಶಕೆಯು ಹೊಸ ಮೈಲುಗಲ್ಲುಗಳನ್ನು ಸ್ಥಾಪಿಸುವಲ್ಲಿ ಭಾರತವನ್ನು ವಿಸ್ಮಯಕಾರಿಯಾಗಿ ಪರಿವರ್ತಿಸಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೋದಿಯವರ ನಾಯಕತ್ವದಲ್ಲಿ ಭಾರತವು ವಿಕಸಿತ ಭಾರತದ ವಿಷನ್‌ನೊಂದಿಗೆ ಮುನ್ನುಗ್ಗುತ್ತಿದೆ. ಜನಪರವಾದ ನೀತಿಗಳ ಮೂಲಕ ಬಡವರು, ಯುವಜನತೆ, ಮಹಿಳೆಯರು ಮತ್ತು ರೈತರು ಸೇರಿದಂತೆ ದೇಶದ ಸಮಗ್ರ ಉನ್ನತಿ ಕುರಿತಾದ ಅವರ ಕಳಕಳಿ ಅನನ್ಯವಾದುದು. ಇದರಿಂದಾಗಿಯೇ ಇಂದು ಭಾರತ ಜಗತ್ತಿನಲ್ಲಿ ಅತ್ಯಂತ ಆತ್ಮವಿಶ್ವಾಸ ಮತ್ತು ಪ್ರಭಾವಿಯಾಗಿ ಮುಂದುವರಿಯಲು ಸಾಧ್ಯವಾಗಿದೆ. ಯಾಕೆಂದರೆ ಮೋದಿಯವರು ನೈಜ ಪರಿವರ್ತನೆ ತರಲು ಶ್ರಮಿಸುತ್ತಿರುವವರು. ನಂಬಿಕೆ, ಸಮರ್ಪಣೆ, ಸ್ಪಷ್ಟ ದೃಷ್ಟಿಯ ಮೂಲಕ ಅವರದು ಸಾಟಿಯಿಲ್ಲದ ಸಾಧನೆ ಎಂದು ಜೆ.ಪಿ.ನಡ್ಡಾ ಹೇಳಿದ್ದಾರೆ.

ಮೋದಿಯವರ ಜನಸೇವೆಯು ಎಲ್ಲರನ್ನೊಳಗೊಂಡ ಅಭಿವೃದ್ಧಿಯೆಡೆಗಿನ ಸಾಟಿಯಿಲ್ಲ ಬದ್ಧತೆಯಾಗಿದ್ದು, ಇದು ಭಾರತದ ಬೆಳವಣಿಗೆಯ ಯಶೋಗಾಥೆಗೆ ಶಕ್ತಿ ತುಂಬಿದೆ ಎಂದಿದ್ದಾರೆ ಸಚಿವ ಗೋಯಲ್.

ಜನಸೇವೆಯ ಸಾಧನೆ: ನಿತಿನ್ ನವೀನ್

ಬಿಜೆಪಿ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್ ಅವರು, ಪ್ರಧಾನಿ ಮೋದಿಯವರ ಅಧಿಕಾರದಲ್ಲಿ ಮೂಲಸೌಕರ್ಯಗಳ ಅಭೂತಪೂರ್ವ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಪರಿಣಾಮಕಾರಿ ಸಾರ್ವಜನಿಕ ಕಲ್ಯಾಣ ಯೋಜನೆಗಳೊಂದಿಗೆ ಆತ್ಮನಿರ್ಭರ ಭಾರತದೆಡೆಗೆ ಸಾಗುತ್ತಿರುವುದು ಹೆಮ್ಮೆಯ ಸಂಗತಿ. ಅವರದು ಸಾಟಿಯಿಲ್ಲದ ಜನಸೇವೆಯ ಸಾಧನೆ ಎಂದಿದ್ದಾರೆ.

> ಪ್ರಧಾನಿ ಮೋದಿಯವರ ಈ ಸಾಧನೆ ಅವಿಶ್ರಾಂತ ಸಮರ್ಪಣಾ ಸೇವೆ, ಸಮಗ್ರತೆ ಮತ್ತು ರಾಷ್ಟ್ರ-ಮೊದಲೆನ್ನುವ ಆಡಳಿತಕ್ಕೆ ಸಾಕ್ಷಿಯಾಗಿದೆ. ಇದು ನಂಬಿಕೆ ಮತ್ತು ಸೇವೆಯ ಪ್ರೇರಣಾದಾಯಿ ಪಯಣ.
> ■ ಕಿರಣ್ ರಿಜಿಜು, ಸಂಸದೀಯ ಸಚಿವ

ಕಿರುಸುದ್ದಿ

ಮಾ.24ರಂದು ಮೊದಲ ಮತಗಟ್ಟೆ ಅಧಿಕಾರಿಗಳಿಗೆ ಪ್ರಥಮ ಹಂತದ ತರಬೇತಿ ಆರಂಭ

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಮೊದಲ ಹಂತದ ರ್‍ಯಾಂಡಮೈಸೇಶನ್ ಮೂಲಕ ಮತದಾನದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಪ್ರಿಸೈಡಿಂಗ್ ಆಫೀಸರ್‌ಗಳಿಗೆ ಮತ್ತು ಪ್ರಥಮ ಮತಗಟ್ಟೆ ಅಧಿಕಾರಿಗಳಿಗೆ ಮೊದಲ ಹಂತದ ತರಬೇತಿಯು ಮಾ.24ರಂದು ಪ್ರಾರಂಭವಾಗಲಿದೆ. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಪ್ರಿಸೈಡಿಂಗ್ ಆಫೀಸರ್‌ಗಳು ಮತ್ತು ಪ್ರಥಮ ಮತಗಟ್ಟೆ ಅಧಿಕಾರಿಗಳಿಗೆ ಮಾ.24 ಮತ್ತು 25ರಂದು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಸಮಗ್ರ ತರಬೇತಿ ಕಾರ್ಯಕ್ರಮ ನಡೆಯಲಿದೆ. ಕಾಸರಗೋಡು ಕ್ಷೇತ್ರದ ಅಧಿಕಾರಿಗಳಿಗೆ ಮಾ.26 ಮತ್ತು 27 ರಂದು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಉದುಮ ಕ್ಷೇತ್ರದ ಅಧಿಕಾರಿಗಳಿಗೆ ಮಾ.24 ಮತ್ತು 25 ರಂದು ನಾಯನ್ಮಾರಮೂಲೆ ತನ್‌ಬಿಹುಲ್ ಇಸ್ಲಾಂ ಹೈಯರ್ ಸೆಕೆಂಡರಿ ಶಾಲೆಯಲ್ಲಿ ತರಬೇತಿ ಜರಗಲಿದೆ. ಕಾಞಂಗಾಡು ಕ್ಷೇತ್ರದ ಅಧಿಕಾರಿಗಳಿಗೆ ಮಾ.26 ಮತ್ತು 27 ರಂದು ಕಾಞಂಗಾಡಿನ ಎಸ್‌ಎನ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ತರಬೇತಿ ನಡೆಯಲಿದೆ. ತೃಕ್ಕರೀಪ್ಪುರ ಕ್ಷೇತ್ರದ ಅಧಿಕಾರಿಗಳಿಗೆ ತರಬೇತಿ ಪ್ರಕ್ರಿಯೆಯನ್ನು ಕಾಞಂಗಾಡು ನೆಹರೂ ಕಾಲೇಜಿನಲ್ಲಿ ಮಾ.26 ಮತ್ತು 27ರಂದು ಏರ್ಪಡಿಸಲಾಗಿದೆ.

ಮಾ.25ರಂದು ಕೋಡಿಬೆಟ್ಟು ರಾಜಲಕ್ಷ್ಮಿ ಅವರ ಕೃತಿ ಬಿಡುಗಡೆ

ಮಂಗಳೂರು: ಹಿರಿಯ ಲೇಖಕಿ, ಪತ್ರಕರ್ತೆ ಕೋಡಿಬೆಟ್ಟು ರಾಜಲಕ್ಷ್ಮಿ ಅವರು ಬರೆದ ಆರ್ಹನಿಶಿ ಪ್ರಕಾಶನ ಹೊರತಂದಿರುವ 'ಲಲಿತ ಮಂಟಪ' ಕೃತಿ ಬಿಡುಗಡೆ ಹಾಗೂ ಅದರ ವಿನೂತನ ರಂಗಪ್ರಯೋಗ ಕಾರ್ಯಕ್ರಮ ಮಾ.25ರಂದು ಸಂಜೆ 5ಕ್ಕೆ ನಗರದ ಹಂಪನಕಟ್ಟೆ ಸಪ್ನ ಬುಕ್ ಹೌಸ್‌ನಲ್ಲಿ ನಡೆಯಲಿದೆ. ಜಾನಪದ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ.ಕೆ. ಚಿನ್ನಪ್ಪ ಗೌಡ, ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ಮಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷ ಪಿ.ಬಿ. ಹರೀಶ್ ರೈ ಹಾಗೂ ಲೇಖಕಿ ರಾಜಲಕ್ಷ್ಮಿ ಕೋಡಿಬೆಟ್ಟು ಭಾಗವಹಿಸಲಿದ್ದಾರೆ. ವಿದುಷಿ ಮಂಜುಳಾ ಸುಬ್ರಹ್ಮಣ್ಯ

ನಿವೃತ್ತ ಸಾಧಕ ಯೋಧ ಪ್ರಶಸ್ತಿ



ಬೆಳ್ತಂಗಡಿ: ನಿವೃತ್ತ ಯೋಧ ಡಾ. ಗೋಪಾಲಕೃಷ್ಣ ಭಟ್ ಕಾಂಚೋಡು ಅವರಿಗೆ ನಿವೃತ್ತ ಸಾಧಕ ಯೋಧ ಪ್ರಶಸ್ತಿಯನ್ನು ಮಾ.20 ರಂದು ಪ್ರದಾನ ಮಾಡಲಾಯಿತು.ದಿಲ್ಲಿಯ ಸೇನಾ ಮುಖ್ಯಾಲಯದಲ್ಲಿ ಜ.ಉಪೇಂದ್ರ ದ್ವಿವೇದಿ ಪ್ರಶಸ್ತಿ ಪ್ರದಾನ ಮಾಡಿದರು. ಭಾರತೀಯ ಸೇನೆಯಲ್ಲಿ ಪೂರ್ಣ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ವಿಶೇಷವಾಗಿ ಸಮಾಜಕ್ಕೆ ಆದರ್ಶಪ್ರಾಯವಾದ ರೀತಿಯಲ್ಲಿ ಮಾದರಿ ಸೇವೆ ಸಲ್ಲಿಸುತ್ತಿರುವ ನಿವೃತ್ತ ಯೋಧರಿಗೆ ಭಾರತೀಯ ಸೇನೆಯ ಮಹಾ ದಂಡನಾಯಕ ಜ. ಉಪೇಂದ್ರ ದ್ವಿವೇದಿ ನೀಡುವ ಈ ಪ್ರಶಸ್ತಿಗೆ ಡಾ.ಗೋಪಾಲಕೃಷ್ಣ ಕಾಂಚೋಡು ದ.ಭಾರತದಿಂದ ಆಯ್ಕೆಯಾದ ಪ್ರಥಮ ವ್ಯಕ್ತಿಯಾಗಿದ್ದಾರೆ.

ಅನನ್ಯ ಕಲಾ ಸಾಧಕ ಸೂರಿಕುಮೇರಿ ಗೋವಿಂದ ಭಟ್: ಹರಿಕೃಷ್ಣ ಪುನರೂರು

ಮಂಗಳೂರು : ಸೂರಿಕುಮೇರಿ ಗೋವಿಂದ ಭಟ್ ಅವರದು ಯಕ್ಷಗಾನ ಕಲಾ ಸೇವೆಯಲ್ಲೊಂದು ಅಪೂರ್ವ ಕೊಡುಗೆಯಾಗಿದ್ದು, ನಡೆದಾಡುವ ವಿಶ್ವಕೋಶ ,ದಶಾವತಾರಿ, ಯಕ್ಷಗುರು ಎಂಬ ಅಭಿದಾನಕ್ಕೆ ಭಾಜನರಾದವರು. ಅವರ ಅಗಲುವಿಕೆ ಯಕ್ಷಗಾನ ಕಲಾರಂಗಕ್ಕೆ ತುಂಬಿಕೊಳ್ಳಲಾಗದಂತಹದ್ದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಧರ್ಮದರ್ಶಿ ಹರಿಕೃಷ್ಣ ಪುನರೂರು ತಿಳಿಸಿದ್ದಾರೆ. ಗೋವಿಂದ ಭಟ್ ಜೊತೆ ಆತ್ಮೀಯ ಬಾಂಧವ್ಯ ಹೊಂದಿದ್ದು,ಯಕ್ಷಗಾನಕ್ಕೆ ಅವರು ನೀಡಿದ ಕೊಡುಗೆಗಳನ್ನು ಅತ್ಯಂತ ಹತ್ತಿರದಿಂದ ನೋಡಿದವ ನಾನು. ಅವರ ಬದುಕಿನ ಪರಿಳಿತಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದ ಗೋವಿಂದ ಭಟ್ ಅವರ ಜೊತೆಗಿನ ದಶಕಗಳ ಒಡನಾಟ ಮರೆಯಲಾಗದ್ದು . ಅವರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಮತ್ತು ಅವರ ಕುಟುಂಬ ಮತ್ತು ಎಲ್ಲ ಅಭಿಮಾನಿಗಳಿಗೆ ಅವರ ಅಗಲುವಿಕೆ ದುಃಖವನ್ನು ಭರಿಸುವ ಶಕ್ತಿಯೂ ಒದಗಲಿ ಎಂದು ಅವರು ಪ್ರಾರ್ಥಿಸಿದ್ದಾರೆ.

ತೃಶೂರು ಪಾಲಿಯೇಕ್ಕರದಲ್ಲಿ ಗ್ಯಾಸ್ ಸೋರಿಕೆ | ಗರಿಷ್ಠ ಮುನ್ನೆಚ್ಚರಿಕೆ ವಹಿಸಲು ಕ್ರಮ | ಸುರಕ್ಷತೆಗೆ ಧಕ್ಕೆ ತಂದರೆ ಶಿಕ್ಷೆ

ಕಾಸರಗೋಡಿನಲ್ಲೂ ಪೈಪ್‌ಲೈನ್ ಮೇಲೆ ನಿಗಾ





ಕಾಸರಗೋಡು: ತೃಶೂರು ಜಿಲ್ಲೆಯ ಪಾಲಿಯೇಕ್ಕರ ಎಂಬಲ್ಲಿ ಸಂಭವಿಸಿದ ಗ್ಯಾಸ್ ಪೈಪ್ ಲೈನ್ ಸೋರಿಕೆಯ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಹಾದುಹೋಗುವ ಭೂಗರ್ಭ ನೈಸರ್ಗಿಕ ಅನಿಲ ಪೈಪ್‌ಲೈನ್ ಯೋಜನೆಯಡಿ ಗರಿಷ್ಠ ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ಗೈಲ್ ಇಂಡಿಯಾ ಲಿಮಿಟೆಡ್ ಕಂಪೆನಿಯ ನೇತೃತ್ವದಲ್ಲಿ ಜಿಲ್ಲೆಯ ಸಾರ್ವಜನಿಕರಿಗಾಗಿ ಈ ಜಾಗೃತಾ ನಿರ್ದೇಶನ ಹೊರಡಿಸಲಾಗಿದೆ. ಕೊಚ್ಚಿಯಿಂದ ಕುಟ್ಟನ್ನಾಡು ಮೂಲಕ ಕಾಸರಗೋಡು ಜಿಲ್ಲೆಯಿಂದ ಮಂಗಳೂರು ದಾರಿಯಾಗಿ ಬೆಂಗಳೂರಿಗೆ ಕೆಕೆಬಿಎಂಪಿಎಲ್ ಅಡುಗೆ ಅನಿಲ ಪೈಪ್‌ಲೈನ್ ಹಾದುಹೋಗುತ್ತದೆ.

ಮುಂಜಾಗ್ರತಾ ನಿರ್ದೇಶನ

ಪೈಪ್‌ಲೈನ್ ಮುಖೇನ ಪೂರೈಕೆಯಾಗುತ್ತಿರುವುದು ಅತ್ಯಂತ ಜ್ವಲನ ಸಾಮರ್ಥ್ಯವಿರುವ ನೈಸರ್ಗಿಕ ಅನಿಲವಾಗಿದ್ದು, ಒಂದು ವೇಳೆ ಇದು ಸೋರಿಕೆಯಾದರೆ ಭಾರೀ ದುರಂತ ನಡೆಯುವ ಸಾಧ್ಯತೆಯಿದೆ ಎಂದು ಸಂಸ್ಥೆಯು ಎಚ್ಚರಿಸಿದೆ. ಈ ನಿಟ್ಟಿನಲ್ಲಿ ಗೈಲ್ ಇಂಡಿಯಾ ಕಂಪೆನಿಯು ಮುಂಜಾಗ್ರತಾ ನಿರ್ದೇಶನಗಳನ್ನು ಹೊರಡಿಸಿದೆ.

ಪೈಪ್‌ಲೈನ್ ಅಳವಡಿಸುವ ಯೋಜನೆಯಾಗಿ ಸ್ವಾಧೀನಪಡಿಸಿದ ಭೂಪ್ರದೇಶಗಳನ್ನು ಪೈಪ್‌ಲೈನ್ ಅಳವಡಿಸಿದ ಬಳಿಕ ಆಯಾ ಭೂ ಮಾಲಕರಿಗೆ ಬಿಟ್ಟುಕೊಡಲಾಗಿದೆ. ಗಡಿಕಲ್ಲುಗಳನ್ನು ಮತ್ತು ಗುರುತುಗಳನ್ನು ಸ್ಥಾಪಿಸಲಾದ ಸ್ಥಳಗಳಲ್ಲಿ ಪೈಪ್ ಲೈನ್‌ಗೆ ಯಾವುದೇ ಸಮಸ್ಯೆಯಾಗದ ರೀತಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಲು ಕಂಪೆನಿಯು ಭೂ ಮಾಲಕರಿಗೆ ಅನುಮತಿ ನೀಡಿದೆ. ಆದರೆ ಪೈಪ್‌ಲೈನ್‌ಗೆ ತೊಂದರೆಯಾಗದಂತೆ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ.

ಕಟ್ಟುನಿಟ್ಟಿನ ಕ್ರಮ

ಪೈಪ್‌ಲೈನ್ ಹಾದುಹೋಗುವ ಸ್ಥಳಗಳಲ್ಲಿ ಯಾವುದೇ ನಿರ್ಮಾಣ ಕಾಮಗಾರಿ, ಗಣಿಗಾರಿಕೆ, ಕಾಂಕ್ರೀಟ್ ಟ್ಯಾಂಕ್ ಅಳವಡಿಕೆ, ಡ್ಯಾಮ್, ಕೊಳವೆ ಬಾವಿ, ತೆರೆದ ಬಾವಿ ಮೊದಲಾದ ನಿರ್ಮಾಣ ಕೆಲಸಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಎತ್ತರವಾಗಿ ಬೆಳೆಯುವ ಮರಗಿಡಗಳನ್ನು ನೆಟ್ಟು ಬೆಳೆಸಲು ಕೂಡಾ ಅನುಮತಿ ನೀಡಲಾಗದು ಎಂದು ಸಂಸ್ಥೆಯು ತಿಳಿಸಿದೆ. ಪೈಪ್‌ಲೈನ್‌ನ ಸುರಕ್ಷತೆಗೆ ಬಾಧಿಸುವ ರೀತಿಯಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡರೆ ಕಟ್ಟುನಿಟ್ಟಿನ ಕಾನೂನು ಕ್ರಮದಂತೆ ಉಲ್ಲೇಖಿತ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ.

ಈ ಮಧ್ಯೆ ತೋರಿಕೆಗಾಗಿ ಮಾತ್ರ ಸಾರ್ವಜನಿಕ ಸುರಕ್ಷತೆಯನ್ನು ಮುಂದಿರಿಸಿ ಬಳಿಕ ಪೈಪ್‌ಲೈನ್‌ಗೆ ಹಾನಿಯುಂಟು ಮಾಡುವ ಕಾಮಗಾರಿಯು ಗಮನಕ್ಕೆ ಬಂದರೆ 1800118430 ಅಥವಾ 15101 ಟೋಲ್ ಫ್ರೀ ನಂಬರ್‌ಗಳನ್ನು ನಾಗರಿಕರು ಸಂಪರ್ಕಿಸಬಹುದು. ಪೈಪ್‌ಲೈನ್‌ಗೆ ಸಂಬಂಧಪಟ್ಟ ಕಾಸರಗೋಡು ಜಿಲ್ಲೆಯ ಪರಿಪಾಲನಾ ಕೇಂದ್ರವು ಕಣ್ಣೂರು ಜಿಲ್ಲೆಯ ಮಾಂಜಟುಪರಂಬ (ದೂರವಾಣಿ: 0497 – 2783548) ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪರಿಪಾಲನಾ ಕೇಂದ್ರವು ಮಂಗಳೂರಿನ ಪಣಂಬೂರು (ದೂರವಾಣಿ: 0824 2953663) ಪ್ರದೇಶದಲ್ಲಿದೆ. ವಾಲ್ವ್ ಸ್ಟೇಷನ್ ಆದ ಅಂಬಲತ್ತರದಿಂದ ಮಂಜೇಶ್ವರ ವರೆಗೆ ಜಿಲ್ಲೆಯ ಪ್ರಧಾನ ಪೈಪ್‌ಲೈನ್ ಹಾದುಹೋಗುತ್ತದೆ. ವಾಲ್ವ್ ಸ್ಟೇಷನ್ ಅಂಬಲತ್ತರದಿಂದ ಕಾಸರಗೋಡು ತನಕ ಶಾಖೆ ಲೈನ್ ಕೂಡಾ ಒಳಗೊಂಡಿದೆ.

> **ವಿವಿಧ ಕಂದಾಯ ತಾಲೂಕುಗಳಲ್ಲಿ ಜಾಗ್ರತಾ ನಿರ್ದೇಶನ**
>
> **ಕಾಸರಗೋಡು ಜಿಲ್ಲೆಯ ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಮತ್ತು ವೆಳ್ಳರಿಕುಂಡು ಕಂದಾಯ ತಾಲೂಕುಗಳ ವ್ಯಾಪ್ತಿಯಲ್ಲಿ ಗ್ಯಾಸ್ ಪೈಪ್‌ಲೈನ್ ಹಾದುಹೋಗಿದ್ದು, ಈ ಹಿನ್ನೆಲೆಯಲ್ಲಿ ಗರಿಷ್ಠ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಡಳಿತವು ನಿರ್ದೇಶಿಸಿದೆ. ನೈಸರ್ಗಿಕ ಅನಿಲ ಪೂರೈಕೆ ಪೈಪ್‌ಲೈನ್‌ಗೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಎಚ್ಚರಿಕೆ ವಹಿಸಬೇಕು. ಒಂದು ವೇಳೆ ಯಾವುದೇ ಭಾಗದಲ್ಲಿ ಅನಿಲ ಸೋರಿಕೆ ಕಂಡುಬಂದರೆ ತಕ್ಷಣ ಸಂಬಂಧಪಟ್ಟವರಿಗೆ ಸಮಗ್ರ ಮಾಹಿತಿ ನೀಡಬೇಕು. ಈ ವಿಚಾರದಲ್ಲಿ ಉದಾಸೀನತೆ ಮಾಡಬಾರದು. ಎಲ್ಲೂ ಕೂಡಾ ಅನಾಹುತಗಳು ಸಂಭವಿಸದಂತೆ ತಡೆಯುವ ನಿಟ್ಟಿನಲ್ಲಿ ಸಾರ್ವಜನಿಕರ ಸಂಪೂರ್ಣ ಸಹಭಾಗಿತ್ವ ಅತ್ಯಗತ್ಯವಾಗಿದೆ ಎಂದು ಜಿಲ್ಲಾಡಳಿತವು ಹೇಳಿದೆ.**

ಕೊಡಗಿನಲ್ಲಿ ಕೊನೆಯಿಲ್ಲವೇ ಆನೆ-ಮಾನವ ಸಂಘರ್ಷಕ್ಕೆ?




ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡಾನೆ–ಮಾನವ ಸಂಘರ್ಷ ಸದ್ಯಕ್ಕೆ ಕೊನೆಗೊಳ್ಳುವ ಲಕ್ಷಣ ಗೋಚರಿಸುತ್ತಿಲ್ಲ. ಸಿದ್ದಾಪುರದಲ್ಲಿ ಕಾಫಿ ಬೆಳೆಗಾರರೊಬ್ಬರನ್ನು ಬಲಿ ತೆಗೆದುಕೊಂಡ ಕಾಡಾನೆಯೊಂದನ್ನು ಅರಣ್ಯ ಇಲಾಖೆ ಸೆರೆ ಹಿಡಿದು ಬೇರೆಡೆಗೆ ಸಾಗಿಸಿದೆ.

ಆದರೆ ಇದೀಗ ಸಿದ್ದಾಪುರ ಸಮೀಪದ ನೆಲ್ಲಿಹುದಿಕೇರಿಯಲ್ಲಿ ಮನೆ ಬಳಿ ನಿಲ್ಲಿಸಿದ್ದ ಆಟೋ ರಿಕ್ಷಾದ ಮೇಲೆ ಕಾಡಾನೆಯೊಂದು ದಾಳಿ ನಡೆಸಿ ಜಖಂಗೊಳಿಸಿದೆ. ಅಲ್ಲಿನ ಬೆಟ್ಟದಕಾಡು ನಿವಾಸಿ ಹೆಚ್.ಟಿ. ಸುನಿಲ್ ಎಂಬವರಿಗೆ ಸೇರಿದ ಆಟೋ ಮೇಲೆ ಕಾಡಾನೆ ದಾಳಿ ಮಾಡಿದ್ದು, ದಂತದಿಂದ ಗುದ್ದಿದ ಪರಿಣಾಮ ಆಟೋ ಜಖಂಗೊಂಡಿದೆ.

ಗ್ರಾಮದ ಶ್ರೀ ಸತ್ಯನಾರಾಯಣ ದೇವಾಲಯದ ಸುತ್ತಮುತ್ತ ಹಾಗೂ ಎಂ.ಜಿ. ಕಾಲೋನಿ ಸುತ್ತಮುತ್ತ ಸಂಚರಿಸಿದ ಈ ಕಾಡಾನೆ ಕಾಫಿ ತೋಟದೊಳಗೂ ದಾಂಧಲೆ ನಡೆಸಿದೆ. ಸಲಗವನ್ನು ಕಂಡ ಗ್ರಾಮಸ್ಥರು ದಿಕ್ಕಾಪಾಲಾಗಿ ಓಡಿ ದಾಳಿಯಿಂದ ತಪ್ಪಿಸಿಕೊಂಡಿದ್ದಾರೆ.

ಒಂಟಿ ಸಲಗ ಗ್ರಾಮದಲ್ಲಿ ಸಂಚರಿಸಿದ ಬಗ್ಗೆ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಅರಣ್ಯ ಸಿಬ್ಬಂದಿ ಡ್ರೋನ್ ಕ್ಯಾಮೆರಾ ಬಳಸಿ ಆನೆಯನ್ನು ಪತ್ತೆಹಚ್ಚಿ ಕಾಡಿಗೆ ಅಟ್ಟಿದ್ದಾರೆ.

ಕಲ್ಲಾಡಿ ದೇವಿಪ್ರಸಾದ್ ಶೆಟ್ಟಿಗೆ ಅಗರಿ ಪ್ರಶಸ್ತಿ ಪ್ರದಾನ



ಸುರತ್ಕಲ್: ಜೀವನದಲ್ಲಿನ ಒಳ್ಳೆಯ ಸಾಧನೆಗಳು ಸ್ಮರಣೆಯಲ್ಲಿದ್ದು, ನಿತ್ಯ ಸ್ಮರಿಸಲಾಗುತ್ತದೆ. ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿದಂತಹ ಶ್ರೀನಿವಾಸ ಭಾಗವತರಂತಹ ವ್ಯಕ್ತಿತ್ವ ಬೇರೆ ಯಾರು ಇಲ್ಲ ಎಂದು ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕ ವೇದಮೂರ್ತಿ ಕಮಲಾದೇವಿ ಪ್ರಸಾದ ಆಸ್ರಣ್ಣ ಹೇಳಿದರು. ಸುರತ್ಕಲ್‌ನ ಗೋವಿಂದದಾಸ ಕಾಲೇಜು ಹಾಗೂ ಅಗರಿ ಶ್ರೀನಿವಾಸ ಭಾಗವತರ ಸಂಸ್ಮರಣಾ ವೇದಿಕೆ ಆಶ್ರಯದಲ್ಲಿ ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಯಕ್ಷ ಕೇಸರಿ ಅಗರಿ ರಘುರಾಮ ಭಾಗವತ ವೇದಿಕೆಯಲ್ಲಿ ಅಗರಿ ಪ್ರಶಸ್ತಿ ಪ್ರದಾನ ಹಾಗೂ ಸಂಸ್ಮರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಮಾರಂಭದಲ್ಲಿ ಕಟೀಲು ಮೇಳದ ಸಂಚಾಲಕ ಕಲ್ಲಾಡಿ ದೇವಿಪ್ರಸಾದ್ ಶೆಟ್ಟಿ ಅಗರಿ ಪ್ರಶಸ್ತಿ ಹಾಗೂ ರಘುರಾಮ ಭಾಗವತ ಪ್ರಶಸ್ತಿಯನ್ನು ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಕಾಸರಗೋಡಿಗೆ 50 ಇಂಚಿನ ಎಲ್ ಇ ಡಿ ಟಿವಿ ನೀಡಿ ಗೌರವಿಸಲಾಯಿತು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಉದ್ಯಮಿ ಶ್ರೀಪತಿ ಭಟ್ ಮೂಡುಬಿದಿರೆ ವಹಿಸಿದ್ದು, ಹಿಂದು ವಿದ್ಯಾದಾಯಿನೀ ಸಂಘ ಸುರತ್ಕಲ್‌ನ ಅಧ್ಯಕ್ಷ ಜಯಚಂದ್ರ ಹತ್ವಾರ್ ಎಸ್ , ಕಿನ್ನಿಗೋಳಿಯ ಶ್ರೀನಿವಾಸ ಕಾಲೇಜಿನ ಪ್ರೊ. ಶ್ರೀನಾಥ್ ರಾವ್, ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಪ್ರಾಂಶುಪಾಲ ಪ್ರೊ. ಹರೀಶ್. ಆಚಾರ್ಯ ಪಿ. ಕಾಲೇಜಿನ ಆಡಳಿತಾತ್ಮಕ ನಿರ್ದೇಶಕ ರಮೇಶ ಭಟ್ ಎಸ್. ಜಿ., ಯಕ್ಷಯಾನ ಸಂಚಾಲಕಿ ಪೂರ್ಣಿಮಾ ಯತೀಶ್ ರೈ, ಅಗರಿ ದಿನೇಶ್ ರಾವ್ ಹಾಗೂ ವೇದಿಕೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಅಗರಿ ಸಂಸ್ಮರಣಾ ಭಾಷಣವನ್ನು ಕೃಷ್ಣ ಪ್ರಕಾಶ ಉಳಿತ್ತಾಯ ಅವರು ಹಾಗೂ ಅಭಿನಂದನಾ ಭಾಷಣವನ್ನು ವಾದಿರಾಜ ಕಲ್ಲೂರಾಯ ಮಾಡಿದರು. ಬೆಳಗ್ಗೆಯಿಂದ ಸಂಜೆವರೆಗೆ ಮಂಗಳೂರು ವಿವಿ ಮಟ್ಟದ ಅಂತರ್ ಕಾಲೇಜು ತೆಂಕುತಿಟ್ಟು ಯಕ್ಷಗಾನ ಸ್ಪರ್ಧೆ ನಡೆಯಿತು. ವೇದಿಕೆಯ ಅಗರಿ ರಾಘವೇಂದ್ರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ವಾಗತಿಸಿದರು. ಗಿರೀಶ್ ನಾವಡ ನಿರೂಪಿಸಿದರು.

ಸ್ವಯಂ ಸೇವಕರಿಗಾಗಿ ಸ್ಪರ್ಧಾವಳಿ 'ಸೃಜನ –2026'

ತುಳುನಾಡ ವೈಭವ ಕಾರ್ಯಕ್ರಮ

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ, ಕೆನರಾ ಕಾಲೇಜು (ಸ್ವಾಯತ್ತ) ಮಂಗಳೂರು ಆಯೋಜಿಸುವ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರಿಗಾಗಿ ಸ್ಪರ್ಧಾವಳಿ 'ಸೃಜನ –2026' ತುಳುನಾಡ ವೈಭವ ಕಾರ್ಯಕ್ರಮ ಮಾ. 26 ರಂದು ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 9.15ಕ್ಕೆ ಮೇರ ಮಜಲು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ನಾಯ್ಗ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬೆಳಿಗ್ಗೆ 9.30ಕ್ಕೆ ಪಾಂಡೇಶ್ವರ ಶ್ರೀನಿವಾಸ ವಿಶ್ವವಿದ್ಯಾಲಯ ಸಹಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ನಾಯಕ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕೆನರಾ ವಿಕಾಸ್ ಸಮೂಹ ಸಂಸ್ಥೆಯ ಸಂಯೋಜಕ ಬಸ್ತಿ ಪುರುಷೋತ್ತಮ ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 4ಕ್ಕೆ ಸಮಾರೋಪದಲ್ಲಿ ಮಂಗಳೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಶೇಷಪ್ಪ ಕೆ. ಮುಖ್ಯ ಅತಿಥಿಯಾಗಿ ಭಾಗವಹಿಸಿ ಸಮಾರೋಪ ಭಾಷಣ ಮಾಡಲಿದ್ದಾರೆ. ಕೆನರಾ ಸಂಧ್ಯಾ ಕಾಲೇಜ್ ಮತ್ತು ಕೆನರಾ ವಿಕಾಸ್ ಸಮೂಹ ಸಂಸ್ಥೆಯ ಸಂಚಾಲಕ ಸಿ.ಎ ಎಂ. ವಾಮನ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ.

ನೋಂದಾವಣೆಗಾಗಿ...

ಈ ಕಾರ್ಯಕ್ರಮದಲ್ಲಿ ರಸವೈಭವ – ತುಳುನಾಡ ವೈಭವ, ವಾಗ್ವಿಲಾಸ (ಚರ್ಚೆ), ಭಿತ್ತಿ ಪತ್ರ ರಚನೆ, ಮುಖ ಚಿತ್ರಕಲೆ, ಸಮೂಹ ಗಾಯನ, ಕಸದಿಂದ ರಸ, ಬೀದಿ ನಾಟಕ, ಸಾಕ್ಷ್ಯ ಚಿತ್ರ, ದಿ ಆಲ್ ರೌಂಡರ್ ಮುಂತಾದ ಸ್ಪರ್ಧೆಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಾವಣೆಗಾಗಿ nss@canaracollege.org ವಿಳಾಸಕ್ಕೆ ಇ–ಮೇಲ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಡಾ.ಆರ್.ಕೆ. ನಾಯರ್‌ಗೆ ರೋಟರಿ ವಂದನಾ ಪ್ರಶಸ್ತಿ ಪ್ರದಾನ

ರೋಟರಿ ಸಂಸ್ಥೆಯ ಕಾರ್ಯ ಶ್ಲಾಘನೀಯ



ಮಂಗಳೂರು: ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಮತ್ತು ರೋಟರ್‍ಯಾಕ್ಟ್ ಕ್ಲಬ್ ಮಂಗಳೂರು ಸಿಟಿ ಜಂಟಿ ಆಶ್ರಯದಲ್ಲಿ ಪ್ರಾಯೋಜಿಸಿದ ರಾಜ್ಯ ಮಟ್ಟದ 23ನೇ ವಾರ್ಷಿಕ ಮತ್ತು 2026ನೇ ಸಾಲಿನ ಪ್ರತಿಷ್ಠಿತ 'ವಂದನಾ ಪ್ರಶಸ್ತಿ'ಯನ್ನು ಪರಿಸರ ತಜ್ಞ ಮತ್ತು ಹಸಿರು ಕ್ರಾಂತಿಕಾರ ಡಾ.ಆರ್.ಕೆ. ನಾಯರ್ ಅವರಿಗೆ ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಜರುಗಿದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಸನ್ಮಾನಕ್ಕೆ ಪ್ರತಿಕ್ರಿಯಿಸಿದ ಡಾ.ಆರ್.ಕೆ. ನಾಯರ್, ತಮ್ಮ ಸಾಧನೆಗೆ ಸರ್ಕಾರದ ಪ್ರೋತ್ಸಾಹ ಮತ್ತು ವೈಯಕ್ತಿಕ ಶ್ರಮ ಕಾರಣ. ಈ ಪ್ರಶಸ್ತಿ ಸ್ವೀಕರಿಸಿದ ಬಳಿಕ ಇನ್ನಷ್ಟು ಸಾಧಿಸಲು ಪ್ರೇರಣೆ ದೊರೆತಿದೆ ಎಂದು ನುಡಿದು, ರೋಟರಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಸಾಧಕರನ್ನು ಗುರುತಿಸಿ, ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡುವ ರೋಟರಿ ಸಂಸ್ಥೆಯ ನಿಸ್ವಾರ್ಥ ಸಮಾಜಸೇವಾ ಕಾರ್ಯ ಶ್ಲಾಘನೀಯ ಮತ್ತು ಅನುಕರಣೀಯ ಎಂದರು.

ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಡಾ. ದೇವದಾಸ್ ರೈ ಪ್ರಶಸ್ತಿ ಪ್ರದಾನದ ವಿಧಿವಿಧಾನವನ್ನು ನೆರವೇರಿಸಿ ಮಾತನಾಡಿ, ಡಾ. ರಾಧಾಕೃಷ್ಣ ನಾಯರ್ ಅವರು ದೇಶದ 13 ರಾಜ್ಯಗಳಲ್ಲಿನ ಸಾವಿರಾರು ಎಕರೆ ಬಂಜರು ಭೂಮಿಯಲ್ಲಿ 130 ಅರಣ್ಯ ಪ್ರದೇಶಗಳನ್ನು ಜಪಾನ್ ದೇಶದ ಮಿಯಾವಾಕಿ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ್ದನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಅಭಿನಂದಿಸಿದರು.

ರೋಟರ್‍ಯಾಕ್ಟ್ ಸಂಸ್ಥೆಯ ಅಧ್ಯಕ್ಷ ಅಕ್ಷಯ್ ರೈ ಪ್ರಶಸ್ತಿ ವಿಜೇತರ ಪರಿಚಯ ನೀಡಿದರು. ಸಹಾಯಕ ಗವರ್ನರ್ ಡಾ. ಚಿನ್ನಗಿರಿ ಗೌಡ ಅಭಿನಂದನಾ ಭಾಷಣ ಮಾಡಿದರು. ರೋಟರ್‍ಯಾಕ್ಟ್ ಸಂಸ್ಥೆಯ ಜಿಲ್ಲಾ ಪ್ರತಿನಿಧಿ ಪ್ರಜ್ವಲ್ ಆರ್. ಅವರು ಸಂಸ್ಥೆಯ ಸಾಪ್ತಾಹಿಕ ಗೃಹ ವಾರ್ತಾ ಪತ್ರಿಕೆ 'ಸೆಂಟೊರ್' ಬಿಡುಗಡೆಗೊಳಿಸಿದರು. ರೋಟರಿ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ವಿವೇಕ್ ಕೋಟ್ಯಾನ್ ವರದಿ ಮಂಡಿಸಿದರು. ಸಂಸ್ಥೆಯ ಮಾಜಿ ಅಧ್ಯಕ್ಷ ಬ್ರಾಯನ್ ಪಿಂಟೋ, ವಲಯ ಪ್ರತಿನಿಧಿ ರವಿ ಜಲಾನ್ ಉಪಸ್ಥಿತರಿದ್ದರು.

ಈ ಕಾರ್ಯಕ್ರಮವನ್ನು ಸಂಸ್ಥೆಯ ಚುನಾಯಿತ ಅಧ್ಯಕ್ಷ ರವೀಂದ್ರ, ಸದಸ್ಯರಾದ ಡಾ. ಶಿವಪ್ರಕಾಶ್ ಮತ್ತು ಜನಾರ್ದನ ಅಳ್ವ ಪ್ರಾಯೋಜಿಸಿದ್ದರು. ಡಾ. ಶೆಲ್ಡನ್ ಕ್ರಾಸ್ತಾ ನಿರೂಪಿಸಿದರು. ರೋಟರ್‍ಯಾಕ್ಟ್ ಸಂಸ್ಥೆಯ ಕಾರ್ಯದರ್ಶಿ ವಿವೇಕ್ ರಾವ್ ವಂದಿಸಿದರು.

ದೇರೆಬೈಲ್ ಉತ್ತರದಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಸಾಮಾನ್ಯ | ಟ್ಯಾಂಕರ್ ನೀರು ಸಾಕಾಗುತ್ತಿಲ್ಲ

ನೀರಿನ ಸಮಸ್ಯೆಗೆ ಅಧಿಕಾರಿಗಳ ಸ್ಪಂದನೆಯಿಲ್ಲ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್



ಕೋಡಿಕಲ್ ಕ್ರಾಸ್ ಕರಾವಳಿ ಕಾಲೇಜು ಮುಂಭಾಗ ರಾಜಕಾಲುವೆಗೆ ತಡೆಗೋಡೆ ನಿರ್ಮಾಣವಾಗುತ್ತಿದೆ

ಮಂಗಳೂರು: ಮನಪಾ ವಾರ್ಡ್ 17 ದೇರೆಬೈಲ್ ಉತ್ತರದ ಶ್ರೀ ಕುರು ಅಂಬಾ ದೇವಸ್ಥಾನ ಬಳಿ, 11ನೇ ಕ್ರಾಸ್ ಜೋಗಟ್ಟೆ, ಬಾಬೂಜಿನಗರ, ಕುದ್ಮುಲ್ ರಂಗರಾವ್ ನಗರ, ಗಣೇಶನಗರ, ಮಂಜಪ್ಪ ಉಳ್ಳಾಲ್ ರಸ್ತೆ ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ.

ಮನಪಾ ಬಹುತೇಕ ವಾರ್ಡ್‌ಗಳಲ್ಲಿ ಇರುವ ನೀರು ಪೂರೈಕೆಯಲ್ಲಿ ಪ್ರೆಶರ್ ಇಲ್ಲದಿರುವಿಕೆ, ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ತಲುಪುತ್ತಿಲ್ಲ ಎಂಬ ದೂರು ಇಲ್ಲೂ ಇದೆ. ಈ ವಾರ್ಡ್‌ನ ಬಹುತೇಕ ಸ್ಥಳಗಳಿಗೆ ಚಿಲಿಂಬಿ ಟ್ಯಾಂಕ್‌ನಿಂದ ನೀರು ಪೂರೈಕೆಯಾಗುತ್ತಿದೆ. ಟ್ಯಾಂಕ್‌ನಿಂದ ಕಡಿಮೆ ಪ್ರಮಾಣ ನೀರು ಸರಬರಾಜು ಆಗುತ್ತಿರುವ ಕಾರಣ ಪ್ರೆಶರ್ ಇಲ್ಲದೆ ಎತ್ತರದ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ ಎಂದು ಸ್ಥಳೀಯರು ಹೇಳುತ್ತಾರೆ.

ಈ ವಾರ್ಡ್‌ನಲ್ಲಿ ಪ್ರತಿದಿನ ಬೆಳಗ್ಗೆ 6ರಿಂದ 7ರ ನಡುವೆ ನೀರು ಪೂರೈಕೆ ಆರಂಭವಾಗುತ್ತದೆ. ಎಡಿಬಿ ಪೈಪ್‌ಲೈನ್‌ನಲ್ಲಿ ಬೆಳಗ್ಗೆ 9ಕ್ಕೆ ನೀರು ಬರುತ್ತದೆ. ಇದರಲ್ಲಿ ಸುಮಾರು ಒಂದೂವರೆ ಗಂಟೆಗಳಷ್ಟು ಕಾಲ ಮಾತ್ರ ನೀರು ಸರಬರಾಜು ಮಾಡಲಾಗುತ್ತಿದೆ. ಚಿಲಿಂಬಿ ಟ್ಯಾಂಕ್‌ನಿಂದ ಗ್ರ್ಯಾವಿಟಿ ಮೂಲಕ ಕೋಡಿಕಲ್ ಕಟ್ಟೆಯವರೆಗೆ ನೀರು ಪೂರೈಕೆ ಇದೆ. ಆದರೆ, ಪ್ರೆಶರ್ ಇಲ್ಲದ ಕಾರಣ ಕೊನೆಯ ಸ್ಥಳಗಳಿಗೆ ನೀರು ಬರುವುದು ಕಷ್ಟವಾಗಿದೆ. ಪಂಪಿಂಗ್ ಲೈನ್‌ನಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ನೀರು ಬರುತ್ತಿದೆ ಎನ್ನುವುದು ಸ್ಥಳೀಯರ ಮಾತು.

ಕೋಡಿಕಲ್‌ನ ಶ್ರೀ ಕುರು ಅಂಬಾ ರಾಜರಾಜೇಶ್ವರಿ ಸುಬ್ರಹ್ಮಣ್ಯ ದೇವಸ್ಥಾನ ಪರಿಸರದಲ್ಲಿ ಕಳೆದ ನಾಲ್ಕು ತಿಂಗಳಿನಿಂದ ನೀರಿನ ಸಮಸ್ಯೆ ಇದೆ. ಈ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೂ, ಇದುವರೆಗೆ ಸಮಸ್ಯೆ ಪರಿಹಾರ ಆಗಿಲ್ಲ. ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶಾಸಕ ಡಾ. ವೈ. ಭರತ್ ಶೆಟ್ಟಿ ಅವರು ಅಧಿಕಾರಿಗಳ ಜತೆ ಸಭೆ ನಡೆಸಿ, ನೀರಿನ ಪೂರೈಕೆ ಮಾಡುವಂತೆ ಸೂಚನೆ ನೀಡಿದ್ದಾರೆ. ಆದರೆ, ಯಾವುದೇ ಕೆಲಸ ಇಲ್ಲಿ ಆಗುತ್ತಿಲ್ಲ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.



> **ದೇರೆಬೈಲ್ ಉತ್ತರದ ಹಲವೆಡೆ ನೀರಿನ ಸಮಸ್ಯೆ ಇದ್ದು, ಮಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಸ್ಪಂದನೆ ಇಲ್ಲ. ಈ ವಾರ್ಡ್‌ನಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಪ್ರತಿವರ್ಷದ ಸಮಸ್ಯೆ. ಕೃತಕ ನೆರೆ ತಡೆಗೆ ಕರಾವಳಿ ಕಾಲೇಜು ಬಳಿ 1.5 ಕೋಟಿ ರೂ. ವೆಚ್ಚದಲ್ಲಿ ತಡೆಗೋಡೆ ಕಾಮಗಾರಿ ನಡೆಯುತ್ತಿದೆ. ನಾನು ಮೇಯರ್ ಆಗಿದ್ದ ಸಂದರ್ಭ ಈ ಅನುದಾನ ಮಂಜೂರುಗೊಳಿಸಲಾಗಿತ್ತು.**
>
> ■ ಮನೋಜ್ ಕುಮಾರ್ ಕೋಡಿಕಲ್, ದೇರೆಬೈಲ್ ಉತ್ತರ ನಿಕಟಪೂರ್ವ ಕಾರ್ಪೊರೇಟರ್



> **ಕೋಡಿಕಲ್‌ನ ವಿವೇಕನಗರ, ಜೋಗಟ್ಟೆ ಪ್ರದೇಶಗಳಿಗೆ ಸಮರ್ಪಕವಾಗಿ ಕುಡಿಯುವ ನೀರಿನ ಪೂರೈಕೆ ಆಗುತ್ತಿಲ್ಲ. ಈ ಬಗ್ಗೆ ಮಂಗಳೂರು ಮಹಾನಗರ ಪಾಲಿಕೆಗೆ ಕರೆ ಮಾಡಿ ತಿಳಿಸಿದರೆ 'ಟ್ಯಾಂಕರ್ ಲಭ್ಯವಿಲ್ಲ' ಎಂಬ ಉತ್ತರ ನೀಡುತ್ತಾರೆ. ನಮ್ಮಲ್ಲಿ ನೀರು ಬಂದರೆ ಬಂತು, ಇಲ್ಲವಾದರೆ ಇಲ್ಲ ಎಂಬಂತಾಗಿದೆ. ಎತ್ತರದ ಸ್ಥಳಗಳಿಗೆ ನೀರು ತಲುಪುವುದೇ ಇಲ್ಲ.**
>
> ■ ಭರತ್‌ಕುಮಾರ್ ಕೋಡಿಕಲ್ ಸ್ಥಳೀಯ ನಿವಾಸಿ

ರಾಜಕಾಲುವೆ ಹೂಳೆತ್ತಿಲ್ಲ..

ದೇರೆಬೈಲ್ ಉತ್ತರದಲ್ಲಿ ಮಳೆಗಾಲದಲ್ಲಿ ಕೃತಕ ನೆರೆ ಪ್ರತಿವರ್ಷದ ಸಮಸ್ಯೆ. ರಾಜಕಾಲುವೆಗಳ ಸಮರ್ಪಕ ನಿರ್ವಹಣೆ ಇಲ್ಲದ ಕಾರಣ ಈ ಸಮಸ್ಯೆ ಉದ್ಭವಿಸುತ್ತಿದೆ. ಪ್ರತಿವರ್ಷ ಮಾರ್ಚ್ ತಿಂಗಳಿನಲ್ಲಿ ರಾಜಕಾಲುವೆಗಳ ಹೂಳೆತ್ತುವ ಕೆಲಸ ನಡೆಯುತ್ತದೆ. ಈ ಬಾರಿ ಹೂಳೆತ್ತುವ ಪ್ರಕ್ರಿಯೆ ಇನ್ನೂ ಆರಂಭಗೊಂಡಿಲ್ಲ. ಕೊಟ್ಟಾರ ಚೌಕಿ, ಕೊಟ್ಟಾರ, ಕಲ್ಲಾವಿ, ಅಬ್ಬಕ್ಕ ನಗರ, ಸಾಗರ್ ಕೋರ್ಟ್, ಕೊಟ್ಟಾರ, ಕುರು ಅಂಬಾ ದೇವಸ್ಥಾನ ಬಳಿಯಲ್ಲಿ ರಾಜಕಾಲುವೆ ಇದೆ. ಇಲ್ಲಿ ಹೂಳೆತ್ತುವ ಕಾಮಗಾರಿ ನಡೆಸಬೇಕು ಎಂಬುದು ಸ್ಥಳೀಯರ ಆಗ್ರಹ.

ಎರಡು ದಿನಕ್ಕೊಮ್ಮೆ ಟ್ಯಾಂಕರ್ ನೀರು

ದೇರೆಬೈಲ್ ಉತ್ತರ ವಾರ್ಡ್‌ನಲ್ಲಿ ಹಲವೆಡೆ ನೀರಿನ ಸಮಸ್ಯೆ ಇದ್ದರೂ, ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ'ಯಂತಾಗಿದೆ. ಮಂಗಳೂರು ನಗರ ಉತ್ತರ ವಿಧಾನಸಭಾ ಕ್ಷೇತ್ರದ ಮನಪಾ ವ್ಯಾಪ್ತಿಗೆ ನೀರು ಪೂರೈಕೆಗೆ ಎರಡು ಟ್ಯಾಂಕರ್ ಮಾತ್ರ ಇದೆ. ಈ ಎರಡು ಟ್ಯಾಂಕರ್‌ಗಳು ಸುರತ್ಕಲ್ ಕೇಂದ್ರಿತವಾಗಿ ಕಾರ್ಯಾಚರಿಸುತ್ತವೆ. ನಮ್ಮಲ್ಲಿ ಟ್ಯಾಂಕರ್ ನೀರಿಗೆ ಕರೆ ಮಾಡಿ, ಬೆನ್ನುಹಿಡಿದರೆ ಎರಡು ದಿನ ಬಿಟ್ಟು ಟ್ಯಾಂಕರ್ ನೀರು ಬರುತ್ತದೆ ಎಂದು ಸ್ಥಳೀಯರು ದೂರಿದ್ದಾರೆ.

ನಾಳೆ ವಾರ್ಡ್ 18, ಕಾವೂರು ಪರಿಸರದ ಸ್ಥಿತಿಗತಿ



ಬೆಂಗಳೂರಿನಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿಗೆ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಬಿ ಫಾರಂ ನೀಡಿದರು.

ಕಡ್ಡಾಯ ಯೋಗ ಶಿಕ್ಷಣ ಯೋಜನೆ ಆರಂಭ: ಭಗವಾನ್



• **ಉಜಿರೆ:** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಎಸ್.ಡಿ.ಎಂ ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನ ಮಹಾವಿದ್ಯಾಲಯ ಹಾಗೂ ಇನ್ನಿತರ ಸಂಸ್ಥೆಗಳ ಸಹಯೋಗದಲ್ಲಿ ಪೌಷ್ಟಿಕಾಂಶ ಮೌಲ್ಯ, ಜೀವನಶೈಲಿ ಮೌಲ್ಯ, ಮತ್ತು ಕಡ್ಡಾಯ ಯೋಗ ಶಿಕ್ಷಣ ಯೋಜನೆಯನ್ನು ಮುಂದಿನ ದಿನಗಳಲ್ಲಿ ಪ್ರಾರಂಭಿಸುವುದಾಗಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಕರ್ನಾಟಕ ಉಪಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.

ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಉಜಿರೆ ಇದರ 31ನೇಯ ಪದವಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದರು. ಭಾರತವು ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಜಾಗತಿಕ ಮಟ್ಟದಲ್ಲಿ ನಾಯಕತ್ವ ಸ್ಥಾನ ಪಡೆದುಕೊಳ್ಳುವುದರ ಕಡೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಪ್ರಾಚೀನ ಕಾಲದಿಂದಲೂ ಚಿಕಿತ್ಸೆಯಲ್ಲಿ ಚರಕ, ಶುಶ್ರುತರಂತಹ ಭಾರತೀಯರು ಮುಂಚೂಣಿಯಲ್ಲಿದ್ದರು. ಆದರೆ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ವಿಷಯದ ಕುರಿತು ಅರಿವು ಕಡಿಮೆಯಾಗಿದೆ. ಪ್ರಕೃತಿ ಚಿಕಿತ್ಸೆ ಮತ್ತು ಯೋಗವಿಜ್ಞಾನದಲ್ಲಿ ಪಾಶ್ಚ್ಯ ದೇಶಗಳ ಪ್ರಾಬಲ್ಯತೆಗೆ ಸಿಲುಕದೆ ಭಾರತದ ಅದ್ಭುತ ವೈಜ್ಞಾನಿಕ ವೈದ್ಯಕೀಯ ಪರಂಪರೆಗೆ ಗಮನಹರಿಸುವ ಅಗತ್ಯವಿದೆ. ಏಕೆಂದರೆ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಚಲಿತ ವಿದ್ಯಾಮಾನಗಳನ್ನು ನೋಡಿದರೆ ಪ್ರಕೃತಿಯೊಂದಿಗೆ ಹೊಂದಿಕೊಂಡಿರುವ ಚಿಕಿತ್ಸೆಯು ಮುಂದಿನ ಭವಿಷ್ಯವಾಗಿದೆ ಎಂದರು.

ಪದವಿ ಪಡೆದ ವಿದ್ಯಾರ್ಥಿಗಳ ವೈದ್ಯಕೀಯ ವೃತ್ತಿಗೆ ಶುಭಾಶಯಗಳನ್ನು ತಿಳಿಸುತ್ತಾ, ಸೇವೆ ಎಂಬುದು ಮಹತ್ವಪೂರ್ಣ ಜವಾಬ್ದಾರಿ. ವೈದ್ಯಕೀಯ ವೃತ್ತಿಯ ಮೌಲ್ಯ, ತತ್ವಗಳೊಂದಿಗೆ ಪರಾನುಭೂತಿ, ನೈತಿಕತೆ, ಪ್ರಜ್ಞೆ, ಪ್ರಾಮಾಣಿಕತೆ, ವೃತ್ತಿಪರತೆಯ ಜೊತೆಗೆ ಕಾರ್ಯನಿರ್ವಹಿಸಿದಾಗ ವೃತ್ತಿ ಜೀವನದಲ್ಲಿ ತೃಪ್ತಿ ಸಾಧಿಸಬಹುದು. ವಿಶೇಷವಾಗಿ ಎಐ ಇರುವ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಸದಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾ ಪ್ರಸ್ತುತತೆ ಸಾಧಿಸಬೇಕು. ಏಕೆಂದರೆ ಕಲಿಕೆ ನಿಂತರೆ ಜೀವನವೇ ಕೊನೆ ಗೊಂಡಂತೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಜಿರೆಯ ಎಸ್.ಡಿ.ಎಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಹೆಚ್ಚುತ್ತಿರುವ ಜೀವನ ಶೈಲಿ ಅಸ್ವಸ್ಥತೆಯನ್ನು ಗುಣಪಡಿಸಲು ವೈದ್ಯರು ಬೇಕಾಗಿದ್ದಾರೆ. ಈ ನಿಟ್ಟಿನಲ್ಲಿ ಇಂದು ತೇರ್ಗಡೆ ಹೊಂದುತ್ತಿರುವ ವಿದ್ಯಾರ್ಥಿಗಳು ಸುಸ್ಥಿರ ವೈದ್ಯಕೀಯ ಅಭ್ಯಾಸದಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಬೇಕು ಎಂದು ಶುಭ ಹಾರೈಸಿದರು. ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಡಾ. ಭಗವಾನ್ ಬಿ.ಸಿ ಪದವಿ ಪ್ರಧಾನ ಮಾಡಿದರು. ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ. ಸುಜಾತ ಕೆ.ಜೆ. ಪ್ರಮಾಣ ವಚನ ಬೋಧಿಸಿದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಕೃತ್ತಿಕೆ

ದಿನದ ಮಾತು

ಇಂದ್ರಿಯಗಳ ಸೇನೆಗೆ ಮನಸ್ಸೇ ನಾಯಕ. ಆದ್ದರಿಂದ ಮನಸ್ಸನ್ನು ಜಯಿಸಿದಲ್ಲಿ ಆದು ನಿಜವಾದ ವಿಜಯ.

▲ಸ್ವಾಮಿ ವಿವೇಕಾನಂದ

ದಿನ ಭವಿಷ್ಯ

ಮೇಷ ಎಲ್ಲ ಕೆಲಸ ಇಂದು ವಿಳಂಬಗೊಳ್ಳುವುದು. ಕೆಲವರ ಅಸಹಕಾರ. ಅಸಹನೆ ಅಧಿಕ. ಆರ್ಥಿಕ ಒತ್ತಡ ಹೆಚ್ಚಳ. ಕರಿದ ತಿಂಡಿಯಿಂದ ದೂರವಿರಿ.

ವೃಷಭ ಉತ್ಸಾಹಪೂರ್ಣ ದಿನ. ಕಠಿಣ ಕೆಲಸವೂ ಸುಲಭದಲ್ಲಿ ಸಾಧ್ಯ. ಉದ್ದೇಶಿತ ಕೆಲಸ ಫಲಪ್ರದ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶ.

ಮಿಥುನ ಎಲ್ಲ ಬೆಳವಣಿಗೆ ಪೂರಕವಾಗಿ ನಡೆಯಲಿದೆ. ಅಡ್ಡಿ ನಿವಾರಣೆ. ಹಣದ ಕೊರತೆ ಪರಿಹಾರ. ನವದಂಪತಿಗಳಿಗೆ ಶುಭಕರ ಬೆಳವಣಿಗೆ.

ಕಟಕ ತಲೆನೋವು ಅಥವಾ ಅಜೀರ್ಣದ ಸಮಸ್ಯೆ ಕಾಡಬಹುದು. ಕುಟುಂಬ ಸದಸ್ಯರ ಜತೆ ಕಳೆಯಿರಿ, ಒತ್ತಡ ನಿವಾರಿಸಿಕೊಳ್ಳಿ. ಧನಹಾನಿ ಸಂಭವ.

ಸಿಂಹ ಕಾರ್ಯಸಿದ್ಧಿ. ಆತ್ಮೀಯರ ಜತೆಗಿನ ಭಿನ್ನಮತ ನಿವಾರಣೆ. ಕೌಟುಂಬಿಕ ಸಮಸ್ಯೆ ಇದ್ದರೆ ಸಂಜೆಯೊಳಗೆ ಪರಿಹಾರ. ಖರ್ಚು ಹೆಚ್ಚಬಹುದು.

ಕನ್ಯಾ ಮಾನಸಿಕ ಒತ್ತಡವು ದಂಪತಿ ಮಧ್ಯೆ ಕಲಹಕ್ಕೆ ಕಾರಣವಾದೀತು. ಸಮಾಧಾನದಿಂದ ವ್ಯವಹರಿಸಿ. ಚರ್ಮದ ಅಲರ್ಜಿ ಕಾಣಿಸೀತು.

ತುಲಾ ಹೊಟ್ಟೆನೋವು, ಕಣ್ಣಿನ ಕಿರಿಕಿರಿಯಂತಹ ಸಮಸ್ಯೆ ಉಂಟಾದೀತು. ವೃತ್ತಿಯಲ್ಲಿ ಹೆಚ್ಚು ಹೊಣೆ. ಸಂಗಾತಿ ಜತೆಗೆ ವಾಗ್ವಾದ. ಆರ್ಥಿಕ ಉನ್ನತಿ.

ವೃಶ್ಚಿಕ ಕೆಲದಿನಗಳ ಒತ್ತಡ ಇಂದು ನಿವಾರಣೆ. ಅನುಚಿತ ಆಹಾರ ಸೇವನೆ ಆರೋಗ್ಯಕ್ಕೆ ಸಮಸ್ಯೆ ಒಡ್ಡಬಹುದು. ಪ್ರೀತಿಯಲ್ಲಿ ಯಶಸ್ಸು.

ಧನು ಮಕ್ಕಳಿಂದ ಸಮಸ್ಯೆ ಉಂಟಾದೀತು. ಅದನ್ನು ತಾಳ್ಮೆಯಿಂದ ನಿಭಾಯಿಸಿ. ಸಾಂಸಾರಿಕ ಬಿಕ್ಕಟ್ಟು ಪರಿಹರಿಸಲು ಸಮಯ ವ್ಯಯ. ಧನನಷ್ಟ.

ಮಕರ ಅನವಶ್ಯ ಚಿಂತೆ ಕಾಡಲು ಬಿಡಬೇಡಿ. ಸಮಸ್ಯೆಗೆ ಪರಿಹಾರ ಇದ್ದೇ ಇದೆ. ಹಣ ಹೂಡಿಕೆಗೆ ಪೂರಕ ದಿನವಲ್ಲ. ಮನೆಯಲ್ಲಿ ಸಾಮರಸ್ಯ.


ಕುಂಭ ಬಿಕ್ಕಟ್ಟಿಗೆ ತಕ್ಷಣ ಪ್ರತಿಕ್ರಿಯಿಸಿ. ವಿಳಂಬ ಧೋರಣೆ ಒಳ್ಳೆಯದಲ್ಲ. ಉಪಯುಕ್ತ ಕಾರ್ಯಕ್ಕೆ ಹಣ ಹೆಚ್ಚು ಖರ್ಚು. ಕೌಟುಂಬಿಕ ಸಮಾಧಾನ.

ಮೀನ ಸಂಗಾತಿ ಜತೆ ಪ್ರಾಮಾಣಿಕವಾಗಿ ವರ್ತಿಸಿ. ಮುಚ್ಚುಮರೆ ಬೇಡ. ಅನಿರೀಕ್ಷಿತ ಖರ್ಚು. ಮೇಲಧಿಕಾರಿಯ ಕಿರುಕುಳ ಎದುರಿಸುವಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 9,4,7,5

ಹೃದಯಾಘಾತ: ಸೇನಾಧಿಕಾರಿ ಸಾವು



• **ಬೆಳಗಾವಿ:** ನಾನಾವಾಡಿಯ ಕಮಾಂಡೋ ವಿಂಗ್ ಆವರಣದಲ್ಲಿ ಸ್ವಿಮ್ಮಿಂಗ್ ಪೂಲ್‌ನಲ್ಲಿ ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಹೃದಯಾಘಾತದಿಂದ ಸೇನಾಧಿಕಾರಿ ಮೃತಪಟ್ಟ ಘಟನೆ ನಡೆದಿದೆ. ಹರಿಯಾಣ ಮೂಲದ ಲೆಫ್ಟಿನೆಂಟ್ ಅಮಿತ್ ಸಿಂಗ್ ಹೃದಯಾಘಾತದಿಂದ ಮೃತಪಟ್ಟ ಸೇನಾಧಿಕಾರಿ. ಬೆಳಗಾವಿಯ ಎಂಎಲ್‌ಆರ್‌ಸಿ ಕಮಾಂಡೋ ವಿಂಗ್‌ನಲ್ಲಿ ಟ್ರೇನಿಂಗ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಸ್ವಿಮ್ಮಿಂಗ್ ಮಾಡುತ್ತಿದ್ದಾಗ ಅಮಿತ್ ಸಿಂಗ್ ಹೃದಯಾಘಾತಕ್ಕೊಳಗಾಗಿದ್ದಾರೆ. ತಕ್ಷಣ ಲೈಫ್ ಗಾರ್ಡ್ ಪ್ರದೀಪ್ ಕುಮಾರ್ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಆಸ್ಪತ್ರೆಗೆ ತೆರಳುತ್ತಿದ್ದ ವೇಳೆ ಕೊನೆಯುಸಿರು ಎಳೆದಿದ್ದಾರೆ.

ಚಾಲಾಕಿಗಳ ನಕಲಿ ನಾಟಕ ಬಯಲಿಗೆಳೆದ ಮಹಿಳೆ

• **ಬೆಂಗಳೂರು:** ಸೈಬರ್ ವಂಚಕರ ಜಾಲ ಈಗ ಮುಂದಿನ ಹಂತಕ್ಕೆ ತಲುಪಿದೆ. ಇಷ್ಟು ದಿನ ಬೇರೆ ರಾಜ್ಯದ ಪೊಲೀಸರ ಹೆಸರಿನಲ್ಲಿ ಜನರನ್ನು ಹೆದರಿಸುತ್ತಿದ್ದ ವಂಚಕರು, ಈಗ ಸ್ಥಳೀಯ ಪೊಲೀಸರ ಹೆಸರನ್ನೇ ಬಳಸಿಕೊಂಡು ಜನರನ್ನು ದಾರಿ ತಪ್ಪಿಸಲು ಮುಂದಾಗಿದ್ದಾರೆ. ನಗರದ ಮಹಿಳೆಯೊಬ್ಬರಿಗೆ ಬಂದ ಕರೆ ಮತ್ತು ಅವರು ತೋರಿದ ಸಮಯಪ್ರಜ್ಞೆ ಈ ಚಾಲಾಕಿಗಳ ನಕಲಿ ನಾಟಕವನ್ನು ಬಯಲಿಗೆಳೆದಿದೆ. ನಯನಾ ಪ್ರಕಾಶ್ ಎಂಬ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿದ್ದ ಖದೀಮರು ಬೆಂಗಳೂರಿನ ಮಹಿಳೆಯೊಬ್ಬರಿಗೆ ಮೊದಲು ಆಡಿಯೋ ಕಾಲ್ ಮಾಡಿ, ನಿಮ್ಮ ತಾಯಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಬೆದರಿಸಿದ್ದರು,

ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು

ಎಲ್ಲರೂ ಬಸವತತ್ವ ಪಾಲಿಸಿ



• **ಬೀದರ್:** ಅಹಂ ಇಲ್ಲದ, ಧೈರ್ಯಶಾಲಿಗಳಾದ ಮತ್ತು ಸಮಯೋಚಿತವಾಗಿ ನುಡಿವ ಹಾಗೂ ದಾನ ಮಾಡುವ ಪ್ರವೃತ್ತಿ ಮೈಗೂಡಿಸಿಕೊಂಡಿರುವ ಈಶ್ವರ ಖಂಡ್ರೆ ತಮ್ಮ ಚತುರ್ಗುಣದಿಂದಲೇ ಜನಮೆಚ್ಚಿದ ನಾಯಕರಾಗಿದ್ದು, ಎಲ್ಲಾ ಸಮುದಾಯಕ ನಾಯಕರು ಬಸವತತ್ವ ಪಾಲಿಸಬೇಕು ಎಂದು ಹಾರಕೋಡು ಶ್ರೀ ಚನ್ನವೀರ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಬೀದರ್ ಕರ್ನಾಟಕ ಫಾರ್ಮಸಿ ಕಾಲೇಜಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯಲ್ಲಿ ಪ್ರೀತಿಪೂರ್ವಕವಾಗಿ ಎಲ್ಲರೂ ಆಗಮಿಸಿದ್ದೀರಿ. ಸದ್ಗುಣ ಸಂಪನ್ನರಾದ ಈಶ್ವರ್ ಖಂಡ್ರೆಯವರು ಶತಾಯುಷಿಗಳಾಗಿ ಬಾಳಲಿ, ಈ ನಾಡು ಬೆಳಗಲಿ ಎಂದರು.

ಇಡೀ ಬೀದರ್ ನಗರದ ಇತಿಹಾಸದಲ್ಲಿಯೇ ಬಸವತತ್ವದವರು, ಪಂಚಾಚಾರ್ಯ ಪರಂಪರೆಯವರು, ವಿರಕ್ತರು ಎಲ್ಲರೂ ಒಂದೇ ವೇದಿಕೆ ಯಲ್ಲಿ ಸೇರಿದ್ದಾರೆ. ರೇಣುಕಾಚಾರ್ಯರಿಗೆ, ಬಸವಣ್ಣನವರಿಗೆ ಹಾಗೂ ಹಾನಗಲ್ಲ ಕುಮಾರೇಶ್ವರರ ಭಾವ ಚಿತ್ರಕ್ಕೆ ಇಂದು ಪುಷ್ಪನಮನ ಸಲ್ಲಿಸಿದ ಐಕ್ಯಕ ಕಾರ್ಯಕ್ರಮ ಇದಾಗಿದೆ ಎಂದರು. ಚನ್ನಬಸವಪಟ್ಟದ್ದೇವರು ನಮ್ಮೆಲ್ಲರ ಹೃದಯದಲ್ಲಿದ್ದಾರೆ. ಅವರಿಗೂ ಸೇರಿದಂತೆ ನಮಗೆಲ್ಲರಿಗೂ ಆಧ್ಯಾತ್ಮಿಕ ಶಕ್ತಿಯನ್ನು ತುಂಬಿದವರು ಕುಮಾರೇಶ್ವರರು ಎಂದರು. ಚನ್ನಬಸವ ಪಟ್ಟದ್ದೇವರ ಪರಮಭಕ್ತರಾದ ಈಶ್ವರ ಖಂಡ್ರೆಯವರು ಸಮಾಜಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದರು.

ಮಾಜಿ ಶಾಸಕ ಅಶೋಕ್ ಖೇಣಿ ಮಾತನಾಡಿ, ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ದೊಡ್ಡ ಶಕ್ತಿಯಾಗಲಿದೆ ಎಂದರು. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬೀದರ್‌ನ ಆಶಾಕಿರಣ ಈಶ್ವರ ಖಂಡ್ರೆ ಅವರ ಕೈಯನ್ನು ನಾವೆಲ್ಲರೂ ಬಲಪಡಿಸಬೇಕು ಎಂದರು.

ಸಿದ್ದಾರೂಢಮಠದ ಶ್ರೀ ಶಿವಕುಮಾರ ಸ್ವಾಮೀಜಿ ಮಾತನಾಡಿ, ಈಶ್ವರ ಖಂಡ್ರೆ ಅವರಿಗೆ ಭೀಮಣ್ಣ ಖಂಡ್ರೆ ಅವರಿಂದ ದಿವ್ಯ ಶಕ್ತಿ ಲಭಿಸಿದೆ. ಸಮಾಜದ ಒಳಿತಿಗಾಗಿ ಸದಾ ಶ್ರಮಿಸುತ್ತಿರುವ ಈಶ್ವರ ಖಂಡ್ರೆ ಅವರಲ್ಲಿ ಸಂತರ ಕರುಣೆ, ಯೋಧನ ಶೌರ್ಯ, ದಾನಿಯ ದಯಾಗುಣವಿದೆ. ಅವರು ತಮ್ಮ ಗುಣದಿಂದಲೇ ಗೌರವ ಪಡೆದಿದ್ದಾರೆ. ಹೀಗಾಗಿಯೇ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಆಗಮಿಸಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್, ಶಾಸಕರುಗಳಾದ ಚಂದ್ರಕಾಂತ್ ಪಾಟೀಲ್, ಭೀಮರಾವ್ ಪಾಟೀಲ್, ಮುಖಂಡರಾದ ಸೂರ್ಯಕಾಂತ ಪಾಟೀಲ್, ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು, ಸಿದ್ದಾರೂಢ ಮಠ ಬೀದರ್‌ನ ಶ್ರೀ ಶಿವಕುಮಾರಸ್ವಾಮಿ, ಹಾರಕೊಡು ಮಠದ, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಬೇಲೂರು ನಿಜಗುಣಾನಂದ ಸ್ವಾಮೀಜಿ, ಬೇಲ್ದಾಳ ಶರಣರು ಮತ್ತಿತರರು ಪಾಲ್ಗೊಂಡಿದ್ದರು.

ಖಂಡ್ರೆ ಮೇಲೆ ದೊಡ್ಡ ಜವಾಬ್ದಾರಿ: ರಾಜಶೇಖರ ಪಾಟೀಲ್

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷತೆ ಅತಿ ದೊಡ್ಡ ಹೊಣೆಯಾಗಿದ್ದು, ಈ ಜವಾಬ್ದಾರಿ ಚಿಕ್ಕ ವಯಸ್ಸಿನಲ್ಲೇ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು. ಬೀದರ್‌ನ ಕರ್ನಾಟಕ ಫಾರ್ಮಸಿ ಕಾಲೇಜಿನ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಭಾಲ್ಕಿ ಕ್ಷೇತ್ರದಿಂದ 4 ಬಾರಿ ಶಾಸಕರಾಗಿ, 2 ಬಾರಿ ಸಚಿವರಾಗಿ ಕಾಂಗ್ರೆಸ್ ಪಕ್ಷದ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ ಈಶ್ವರ ಖಂಡ್ರೆ ಅವರಿಗೆ ಲಭಿಸಿದೆ. ಅವರು ಈಗ ಸಭಾ ಅಧ್ಯಕ್ಷರಾಗಿ ಬೀದರ್‌ನಿಂದ ಚಾಮರಾಜನಗರದವರೆಗೆ ಸಂಘಟನೆಯನ್ನು ಬಲಪಡಿಸಬೇಕು ಎಂದರು. ವೀರಶೈವ ಮತ್ತು ಲಿಂಗಾಯತ ಒಂದೇ ನಾಣ್ಯದ ಎರಡು ಮುಖ ಇದ್ದಂತೆ. ನಾವು ಜೊತೆಯಾಗಿ ಸಾಗಿದಾಗ ಅಭಿವೃದ್ಧಿ ಸಾಧ್ಯ ಎಂದರು.

ಮೋದಿ ಜನಪ್ರಿಯತೆ ಹೆಚ್ಚುತ್ತಿದೆ: ವಿಜಯೇಂದ್ರ



• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದೀಜಿ ಅವರು 8,931 ದಿನಗಳ ಕಾಲ ನಿರಂತರವಾಗಿ ಆಡಳಿತ ನಡೆಸುತ್ತಿರುವುದು ನಮ್ಮೆಲ್ಲರಿಗೂ ತುಂಬ ಸಂತೋಷ ತಂದು ಕೊಟ್ಟ ವಿಚಾರ. ಇದು ಬಹಳ ದೊಡ್ಡ ಮೈಲಿಗಲ್ಲು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ಲೇಷಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ಪ್ರಧಾನ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಇವತ್ತು ದೇಶಾದ್ಯಂತ ಶ್ಲಾಘನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು. ಭಾರತವು ಎಲ್ಲ ಕ್ಷೇತ್ರಗಳಲ್ಲೂ ಮುಂದೆ ಸಾಗುತ್ತಿರುವ ಸಂದರ್ಭದಲ್ಲಿ ಮೋದೀಜಿ ಅವರು ದಿಟ್ಟ ನಾಯಕತ್ವ ನೀಡಿದ್ದಾರೆ. ಸ್ವಾತಂತ್ರ್ಯ ಬಂದ ನಂತರದಲ್ಲಿ ಸತತ 3ನೇ ಬಾರಿಗೆ ಪ್ರಧಾನಿಯಾಗಿ ಮೋದಿ ಅವರ ಜನಪ್ರಿಯತೆ ಯಾವತ್ತೂ ಕುಗ್ಗಿಲ್ಲ, ಬದಲಿಗೆ ಹೆಚ್ಚುತ್ತಿದೆ ಎಂದು ನುಡಿದರು.

ಬಿಜೆಪಿ ಅಭ್ಯರ್ಥಿಗಳು ಗೆದ್ದುಬರುತ್ತಾರೆ

ಬಾಗಲಕೋಟೆಗೆ ಮಾಜಿ ಶಾಸಕ ವೀರಣ್ಣ ಚರಂತಿಮಠ್, ದಾವಣಗೆರೆ ದಕ್ಷಿಣಕ್ಕೆ ಶ್ರೀನಿವಾಸ ದಾಸ್ ಕರಿಯಪ್ಪ ನಮ್ಮ ಅಭ್ಯರ್ಥಿಯಾಗಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹ ಕಾಣುತ್ತಿದೆ. ಮತ್ತೊಂದು ಕಡೆ ಮತದಾರರು ರಾಜ್ಯ ಸರಕಾರದ ವಿರುದ್ಧ ಬೇಸತ್ತಿದ್ದಾರೆ. ಜನವಿರೋಧಿ, ಬಡವರ ವಿರೋಧಿ, ರೈತ ವಿರೋಧಿ, ಯುವಜನತೆಯ ಭವಿಷ್ಯವನ್ನು ಹಾಳುಗೆಡವಿದ ಈ ಕಾಂಗ್ರೆಸ್ ಸರಕಾರದ ವಿರುದ್ಧ ಜನರು ದಂಡೆಳುವ ಪರಿಸ್ಥಿತಿಯಲ್ಲಿ ಉಪ ಚುನಾವಣೆ ಘೋಷಣೆ ಆಗಿದೆ. ಬಾಗಲಕೋಟೆ ಕ್ಷೇತ್ರದ ಪ್ರಜ್ಞಾವಂತ ಮತದಾರರು ಈ ಬಾರಿ ಬಿಜೆಪಿಯನ್ನು ಬೆಂಬಲಿಸುತ್ತಾರೆ. ಹಿರಿಯರಾದ ವೀರಣ್ಣ ಚರಂತಿಮಠ್ ಅವರು ಗೆದ್ದು ಬಂದೇ ಬರುತ್ತಾರೆಂಬ ವಿಶ್ವಾಸ ಇದೆ ಎಂದು ಹೇಳಿದರು. ಅದೇರೀತಿ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲೂ ಒಂದು ಅಚ್ಚರಿಯ ಫಲಿತಾಂಶ ಬರಲಿದ್ದು, ಬಿಜೆಪಿ ಅಭ್ಯರ್ಥಿ ಗೆದ್ದು ಬರುತ್ತಾರೆ ಎಂದು ವಿಶ್ವಾಸದಿಂದ ತಿಳಿಸಿದರು. ಕೇಂದ್ರ ಸಚಿವರಾದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಜೊತೆಗೂ ಚರ್ಚೆ ಮಾಡಿದ್ದೇನೆ. ಅವರೂ ಸಂಪೂರ್ಣ ಬೆಂಬಲ ಕೊಡುತ್ತಿದ್ದಾರೆ ಎಂದು ಹೇಳಿದರು. ಇದೆಲ್ಲದರ ಪರಿಣಾಮವಾಗಿ ಎರಡೂ ಕ್ಷೇತ್ರಗಳಲ್ಲಿ ನಾವು ಗೆಲ್ಲಲಿದ್ದೇವೆ ಎಂದರು.

ಕಲಾಪಕ್ಕೆ ಪ್ರಮುಖ ನಾಯಕರು ಗೈರು

• **ಬೆಂಗಳೂರು:** ಯುಗಾದಿ ಮತ್ತು ರಂಜಾನ್ ಹಬ್ಬದ ರಜಾ ದಿನಗಳ ನಂತರ ಬಜೆಟ್ ಅಧಿವೇಶನ ಮತ್ತೆ ಸೋಮವಾರದಿಂದ ಆರಂಭವಾಗಲಿದ್ದು, ಬಜೆಟ್ ಮೇಲಿನ ಚರ್ಚೆಗೆ ಪ್ರಮುಖ ನಾಯಕರು ಗೈರು ಹಾಜರಾಗಲಿದ್ದಾರೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭೆ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಜೊತೆಯಾಗಿ ಭಾಗವಹಿಸಲಿದ್ದು, ಸದನದಲ್ಲಿ ಗೈರಾಗಲಿದ್ದಾರೆ. ಬಿಜೆಪಿಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮತ್ತು ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಕೂಡಾ ತಮ್ಮ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಭಾಗಿಯಾಗಲಿದ್ದು, ಇದರ ಜತೆಗೆ ಪಂಚರಾಜ್ಯಗಳ ಚುನಾವಣೆ ಪ್ರಚಾರದಲ್ಲಿ ಪ್ರಮುಖ ಸಚಿವರು ಕೂಡಾ ತೆರಳಿದ್ದಾರೆ. ಆಡಳಿತ ಮತ್ತು ಪ್ರತಿಪಕ್ಷಗಳ ಪ್ರಮುಖ ನಾಯಕರ ಅನುಪಸ್ಥಿತಿಯಿಂದ ಬಜೆಟ್ ಮೇಲಿನ ಚರ್ಚೆಯ ತೀವ್ರತೆ ಕಡಿಮೆಯಾಗಲಿದೆ. ವಿರೋಧ ಪಕ್ಷಗಳ ಪ್ರಶ್ನೆಗಳಿಗೆ ಸರ್ಕಾರವನ್ನು ಸಮರ್ಥಿಸಿಕೊಳ್ಳುವ ಜವಾಬ್ದಾರಿ ಒಂದಿಬ್ಬರು ಸಚಿವರ ಮೇಲೆ ಇದೆ.

ಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿ

ಟಿಕೆಟ್ ಆಕಾಂಕ್ಷಿಗಳಿಂದ ಬಂಡಾಯ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮುಸ್ಲಿಂ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂಬ ಬೇಡಿಕೆ ನಡುವೆಯೂ ಪುತ್ರನಿಗೆ ಟಿಕೆಟ್ ತರುವಲ್ಲಿ ಸಚಿವ ಮಲ್ಲಿಕಾರ್ಜುನ್ ಯಶಸ್ವಿಯಾಗಿದ್ದಾರೆ. ಇದರೊಂದಿಗೆ ಟಿಕೆಟ್ ಸಮರಕ್ಕೆ ತೆರೆಬಿದ್ದಿದ್ದರೂ, ಟಿಕೆಟ್ ಆಕಾಂಕ್ಷಿಗಳಾಗಿದ್ದ ಮುಸ್ಲಿಂ ಮುಖಂಡರ ಮುಂದಿನ ನಡೆ ಕುತೂಹಲಕ್ಕೆ ಕಾರಣವಾಗಿದೆ. ಪಕ್ಷದಲ್ಲಿನ ಭಿನ್ನಮತ ಚುನಾವಣಾ ವೇಳೆಗೆ ಜ್ವಾಲಾಮುಖಿಯಾಗಿ ಸ್ಫೋಟಗೊಳ್ಳುವ ಲಕ್ಷಣಗಳು ದಟ್ಟವಾಗಿವೆ.

ಕಾಂಗ್ರೆಸ್ ಮುಖಂಡ ಸಾದಿಕ್ ಪೈಲ್ವಾನ್ ಈಗಾಗಲೇ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಮೂಲಕ ಬಂಡಾಯದ ಬಾವುಟ ಹಾರಿಸಿದ್ದಾರೆ. ಟಿಕೆಟ್ ಘೋಷಣೆ ನಂತರವೂ ನಿಲುವು ಬದಲಿಸದ ಸಾದಿಕ್ ಪೈಲ್ವಾನ್ ಸೋಮವಾರ ಮತ್ತೆ ನಾಮಪತ್ರ ಸಲ್ಲಿಸುವ ಮೂಲಕ ಕಣದಲ್ಲಿ ಉಳಿಯುವುದಾಗಿ ಘೋಷಿಸಿದ್ದಾರೆ.

ಇವರಿಗೆ ಎಐಎಂಐಎಂ, ಎಸ್.ಡಿ.ಪಿ.ಐ ಪಕ್ಷಗಳು ಬೆಂಬಲಿಸಿದಲ್ಲಿ ಮುಸ್ಲಿಂ ಮತಗಳು ಚದುರಿಹೋಗಿ, ಸಮರ್ಥ ಶಾಮನೂರು ಗೆಲುವು ಪ್ರಯಾಸದ ಹಾದಿಯಾಗಲಿದೆ. ಸಮರ್ಥ ಶಾಮನೂರುಗೆ ಟಿಕೆಟ್ ಘೋಷಣೆ ಆಗುತ್ತಿದ್ದಂತೆ ಇನ್ನೋರ್ವ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಬಣವು ಸಾಮಾಜಿಕ ಜಾಲತಾಣಗಳಲ್ಲಿ 'ತಾವು ಮತಬ್ಯಾಂಕ್ ಅಲ್ಲ, ಮತ ಪವರ್ ಎಂಬುದನ್ನು ಚುನಾವಣೆ ವೇಳೆ ತೋರಿಸುತ್ತೇವೆ ಅಂತಾ ಆಕ್ರೋಶ ವ್ಯಕ್ತಪಡಿಸಿದೆ.

ಹಿಂದೆ ಸರಿಯುವ ಮಾತೇ ಇಲ್ಲ: ಸಾದಿಕ್

ದಾವಣಗೆರೆ: ಬಾಲ್ಯದಿಂದಲೂ ನಾನೊಬ್ಬ ಪೈಲ್ವಾನ್. ಒಮ್ಮೆ ಅಖಾಡಕ್ಕಿಳಿದರೆ ಮತ್ತೆ ಹಿಂದೆ ಸರಿಯುವ ಮಾತೇ ಇಲ್ಲ ಎಂದು ಕಾಂಗ್ರೆಸ್ ಹಾಗೂ ಮುಸ್ಲಿಂ ಸಮಾಜದ ಹಿರಿಯ ಮುಖಂಡ ಸಾದಿಕ್ ಪೈಲ್ವಾನ್ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೊಡುವಂತೆ ಕೇಳಿದ್ದೆವು. ಮುಸ್ಲಿಮರಿಗೆ ಟಿಕೆಟ್ ಸಿಕ್ಕಿಲ್ಲ. ಹಾಗಾಗಿ ನಾನು ಪಕ್ಷೇತರನಾಗಿಯೇ ಕಣಕ್ಕಿಳಿಯುತ್ತೇನೆ. ಎದುರಾಳಿಯಾಗಿ ಆನೆಯೇ ಇದ್ದರೂ ನಾನು ಸೆಡ್ಡು ಹೊಡೆಯುತ್ತೇನೆ. ದಕ್ಷಿಣ ಕ್ಷೇತ್ರದಲ್ಲಿ ನನಗೆ ಕಾಂಗ್ರೆಸ್ ಪಕ್ಷವೇ ಎದುರಾಳಿ. ಯಾರು ಏನೇ ಹೇಳಿದರೂ ನಾನು ಸ್ಪರ್ಧೆ ಮಾಡುವುದು ಶತಃಸಿದ್ಧ. ನಾನು ಮಾ.23ರಂದು ಬೆಳಿಗ್ಗೆ 11.30ಕ್ಕೆ ಅರಳೀ ಮರ ವೃತ್ತದಿಂದ ಪಾದಯಾತ್ರೆ ಮೂಲಕ ತೆರಳಿ, ಚುನಾವಣಾಧಿಕಾರಿಗೆ ಇನ್ನೊಂದು ಸಲ ನನ್ನ ನಾಮಪತ್ರ ಸಲ್ಲಿಸುತ್ತೇನೆ ಎಂದು ತಿಳಿಸಿದರು.

ವಿರಾಜಪೇಟೆಯಲ್ಲಿ ಒಂಟಿ ಸಲಗ ಸೆರೆ

• **ಮಡಿಕೇರಿ:** ವಿರಾಜಪೇಟೆ ವ್ಯಾಪ್ತಿಯಲ್ಲಿ ಮಾನವ-ಆನೆ ಸಂಘರ್ಷಕ್ಕೆ ಕಾರಣವಾಗಿದ್ದ ಮತ್ತೊಂದು ಒಂಟಿ ಸಲಗವನ್ನು ಸೆರೆ ಹಿಡಿಯುವಲ್ಲಿ ಕೊಡಗು ವಿಭಾಗದ ಅರಣ್ಯ ಇಲಾಖೆ ಯಶಸ್ವಿಯಾಗಿದೆ. ಮೂರು ಗಂಟೆಗಳ ಯಶಸ್ವಿ ಕಾರ್ಯಾಚರಣೆ ಬಳಿಕ 35 ವರ್ಷದ ಒಂಟಿ ಸಲಗವನ್ನು ಯಶಸ್ವಿಯಾಗಿ ಸೆರೆ ಹಿಡಿಯಲಾಗಿದೆ.

ಕಾಡಾನೆಗಳ ಚಲನವಲನದ ಹೆಚ್ಚಳ ಹಾಗೂ ಕಕ್ಕೂರು, ಚೆಂಬ ಬೆಳ್ಳೂರು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಬೀಡುಬಿಟ್ಟು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಒಂಟಿ ಸಲಗ ಸೆರೆ ಹಿಡಿಯಲು ಸರ್ಕಾರ ಅನುಮತಿ ನೀಡಿತ್ತು.

ಭಾನುವಾರ ಬೆಳಗ್ಗೆ ಆನೆ ಪತ್ತೆಯಾದ ನಂತರ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭವಾಗಿದ್ದು, ಮಧ್ಯಾಹ್ನದ ವೇಳೆಗೆ ಅರಣ್ಯಾಧಿಕಾರಿಗಳು ಯಶಸ್ವಿಯಾಗಿ ಒಂಟಿ ಸಲಗವನ್ನು ಸೆರೆ ಹಿಡಿದಿದ್ದಾರೆ. ಕೊಡಗಿನಲ್ಲಿ ಕಾಫಿ ಬೆಳೆಗಾರನ ಬಲಿ ಪಡೆದಿದ್ದ ಕಾಡಾನೆ ಸೆರೆ ದುಬಾರೆ ಹಾಗೂ ಮತ್ತಿಗೋಡು ಶಿಬಿರದ ಸಾಕಾನೆಗಳಾದ ಅಭಿಮನ್ಯು, ಮಹೇಂದ್ರ, ಕಂಜನ್, ಭೀಮ, ಸುಗ್ರೀವ ಮತ್ತು ಹರ್ಷ ಸೇರಿದಂತೆ 100 ಕ್ಕೂ ಹೆಚ್ಚು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಉಪ ಚುನಾವಣೆಗೆ ಸಜ್ಜಾಯ್ತು ಅಖಾಡ

ಪುಟ 0➡ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡಗಳು ಇದ್ದವಾದರೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕಳೆದ ಎರಡು ದಿನಗಳಿಂದ ಎಲ್ಲರ ಜತೆಗೆ ಮಾತನಾಡಿ ಅಲ್ಪಸಂಖ್ಯಾತರ ಮನವೊಲಿಸಿ ಸಮರ್ಥ ಶಾಮನೂರುರವರ ಹೆಸರನ್ನು ಅಂತಿಮಗೊಳಿಸಿದ್ದರು. ಹಾಗೆಯೇ ಬಾಗಲಕೋಟೆ ಕ್ಷೇತ್ರದಿಂದ ಉಮೇಶ್ ಮೇಟಿ ಅವರ ಹೆಸರನ್ನು ಅಂತಿಮಗೊಳಿಸಿ ಹೈಕಮಾಂಡ್‌ಗೆ ಕಳುಹಿಸಲಾಗಿತ್ತು.

ಕುಟುಂಬದಲ್ಲಿಯೇ ಪೈಪೋಟಿಯಿತ್ತು: ಬಾಗಲಕೋಟೆ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ದಿ.ಮೇಟಿಯವರ ಕುಟುಂಬದಲ್ಲೇ ಪೈಪೋಟಿಯಿತ್ತು. ಮೇಟಿಯವರ ಪುತ್ರಿ ಮಹಾದೇವಿ ಮೇಟಿರವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಿಎಂ ಸಿದ್ದರಾಮಯ್ಯನವರು ದಿ.ಎಚ್.ವೈ. ಮೇಟಿಯವರ ಇಬ್ಬರು ಪುತ್ರರು ಹಾಗೂ ಪುತ್ರಿಯರನ್ನು ಕರೆಸಿ ಸಭೆ ನಡೆಸಿ, ನಾವು ಯಾರಿಗೆ ಟಿಕೆಟ್ ಕೊಡುತ್ತೇವೋ ಅವರ ಪರ ಕೆಲಸ ಮಾಡಬೇಕು ಎಂದು ಸೂಚಿಸಿದ್ದರು. ಮೇಟಿಯವರ ಪುತ್ರಿ ಮಹದೇವಿ ಮೇಟಿ ತಮ್ಮ ಸಹೋದರ ಮಲ್ಲಿಕಾರ್ಜುನ ಮೇಟಿ ಬದಲು ಮತ್ತೊಬ್ಬ ಸಹೋದರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ತಾವು ಚುನಾವಣಾ ಕಣಕ್ಕೆ ಇಳಿಯುವುದಾಗಿ ಹೇಳಿದ್ದರು. ಈಗ ಕಾಂಗ್ರೆಸ್ ಹೈಕಮಾಂಡ್ ಉಮೇಶ್ ಮೇಟಿಯವರಿಗೆ ಟಿಕೆಟ್ ಘೋಷಣೆ ಮಾಡಿರುವುದರಿಂದ ಪರಿಹಾರವಾದಂತಾಗಿದ್ದು, ಮಹಾದೇವಿ ಮೇಟಿಯವರ ಆಶಯವೂ ಈಡೇರಿದಂತಾಗಿದೆ. ಈಗ ಎರಡೂ ಕ್ಷೇತ್ರಗಳಲ್ಲೂ ಟಿಕೆಟ್ ಹಂಚಿಕೆಯ ಗೊಂದಲಗಳು ಮುಗಿದಿದ್ದು, ಮುಂದಿನ ಹಣಾಹಣಿಗೆ ಕಾಂಗ್ರೆಸ್ ಪಕ್ಷ ಸಜ್ಜಾಗಿದೆ. ಕಾಂಗ್ರೆಸ್ ಪಕ್ಷ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಿರುವುದರಿಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಸಮರ್ಥ್ ಮಲ್ಲಿಕಾರ್ಜುನ್ ಮತ್ತು ಬಿಜೆಪಿಯ ಶ್ರೀನಿವಾಸ ದಾಸ ಕರಿಯಪ್ಪ ನಡುವೆ ಚುನಾವಣಾ ಗೆಲುವಿಗೆ ಹಣಾಹಣಿ ನಡೆಯಲಿದ್ದು, ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಮತ್ತು ಬಿಜೆಪಿಯ ವೀರಣ್ಣ ಚರಂತಿಮಠ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಇಂದು ನಾಮಪತ್ರ ಸಲ್ಲಿಕೆ, ಶಕ್ತಿ ಪ್ರದರ್ಶನ

ಪುಟ 0➡ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಸಮರ್ಥ ಮಲ್ಲಿಕಾರ್ಜುನ್ ಅವರು ಬಿ ಫಾರಂ ಇಲ್ಲದೆ ಶುಭ ದಿನವೆಂದು ಕಳೆದ ಶುಕ್ರವಾರವೇ ನಾಮಪತ್ರ ಸಲ್ಲಿಸಿದ್ದರು. ಹಾಗೆಯೇ ಬಿಜೆಪಿಯ ಶ್ರೀನಿವಾಸದಾಸ ಕರಿಯಪ್ಪ ಕೂಡ ಕಳೆದ ಶುಕ್ರವಾರವೇ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದರು. ಬಾಗಲಕೋಟೆಯಲ್ಲಿ ಬಿಜೆಪಿಯ ವೀರಣ್ಣ ಚರಂತಿಮಠ ಅವರು ಸಹ ಕಳೆದ ಶುಕ್ರವಾರ ನಾಮಪತ್ರ ಸಲ್ಲಿಕೆ ಮಾಡಿದ್ದರು. ಈ ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮೊದಲಾದ ಪ್ರಮುಖರು ಭಾಗಿಯಾಗಲಿದ್ದು, ಬಿಜೆಪಿ ಅಭ್ಯರ್ಥಿಗಳ ಪರವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಪ್ರಮುಖ ಮುಖಂಡರುಗಳು ಪಾಲ್ಗೊಳ್ಳಲಿದ್ದು, ಇಂದಿನ ನಾಮಪತ್ರ ಸಲ್ಲಿಕೆ ಎರಡೂ ಪಕ್ಷಗಳ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಲಿದೆ.



ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ. ಎಲ್ಲರೂ ಸೇರಿ ಪಕ್ಷ ಗೆಲ್ಲಿಸಿಕೊಂಡು ಬರುತ್ತೇವೆ.

■ **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಅಚಲ ಬದ್ಧತೆಯ ಪ್ರತೀಕ: ಶಾ

ಪುಟ 0➡ಮೊದಲಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ನಂತರ ಪ್ರಧಾನಿಯಾಗಿ 'ರಾಷ್ಟ್ರ ಮೊದಲು ಎನ್ನುವ ಬದ್ಧತೆಯೊಂದಿಗೆ ತಮ್ಮ ಕೃತಿಯಲ್ಲಿ ಸಮಗ್ರತೆಯನ್ನು ಕಾಯ್ದುಕೊಂಡು ದೇಶದ ಪ್ರತಿ ನಾಗರಿಕನ ಉನ್ನತಿಯ ಚಿಂತನೆಯೊಂದಿಗೆ ಅವಿಶ್ರಾಂತ ಸೇವೆ ಸಲ್ಲಿಸುತ್ತಿದ್ದಾರೆ. ಇದು ಅಭೂತಪೂರ್ವ ವಿಶ್ವಾಸ ಮತ್ತು ಸಾಟಿಯಿಲ್ಲದ ಸೇವೆಯೊಂದರ ಮೇಲೆ ನಿರ್ಮಿಸಲಾದ ಅಪೂರ್ವ ಪರಂಪರೆ ಎಂಬುದಾಗಿ ಬರೆದುಕೊಂಡಿದ್ದಾರೆ.

ಪ್ರಧಾನಿ ಮೋದಿಯವರು ಈಗ ಭಾರತ ಸರ್ಕಾರದ ಮುಖ್ಯಸ್ಥರಾಗಿ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ ಮಾಡಿದ್ದು, ರಾಷ್ಟ್ರ ಮತ್ತು ರಾಷ್ಟ್ರದ ಜನತೆಗೆ ಪೂರ್ಣ ಸಮರ್ಪಿತವಾದ ಮೋದಿಯವರ ನಿಷ್ಠೆಯೇ ಅವರನ್ನು ಈ ಸಾಧನೆಗೈಯ್ಯುವಂತೆ ಮಾಡಿದೆ.

■ **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

ಮೋದಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ ಫಾಲೋವರ್ಸ್; ದಾಖಲೆ

ಇದಕ್ಕೂ ಮುನ್ನ ಪ್ರಧಾನಿ ಮೋದಿಯವರು ಇನ್‌ಸ್ಟಾಗ್ರಾಮ್‌ನಲ್ಲಿ 10 ಕೋಟಿ (100ಮಿಲಿಯ)ಫಾಲೋವರ್ಸ್‌ಗಳನ್ನು ಹೊಂದಿದ ವಿಶ್ವದ ಮೊದಲ ನಾಯಕನೆಂಬ ಖ್ಯಾತಿಗೆ ಭಾಜನರಾಗಿದ್ದರು. ಇದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ (43ಮಿ.ಫಾಲೋವರ್ಸ್) ಅವರಿಗಿಂತ ದುಪ್ಪಟ್ಟು ಸಂಖ್ಯೆ ಎಂಬುದಿಲ್ಲಿ ಉಲ್ಲೇಖನೀಯ.

ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಗುರಿ: ಗೌರವ್ ಗುಪ್ತ



ಬೆಂಗಳೂರು: ಮುಂದಿನ 5 ವರ್ಷಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿಯನ್ನು ಕರ್ನಾಟಕ ಹೊಂದಿದ್ದು, ಇದನ್ನು ಸಾಧಿಸಲು ಸರ್ಕಾರ ಸಾಕಷ್ಟು ಪೂರಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದ್ದಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ (ಕ್ರೆಡಲ್), ಸಿಇಇಡಬ್ಲ್ಯು ಸಹಯೋಗದೊಂದಿಗೆ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಹೂಡಿಕೆದಾರರು ಮತ್ತು ಜನರ ಸಹಯೋಗದೊಂದಿಗೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು 25 ಸಾವಿರ ಮೆಗಾವ್ಯಾಟ್‌ಗೆ ಹೆಚ್ಚಿಸುವ ಗುರಿ ಸಾಧಿಸಬೇಕಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಸಾಕಷ್ಟು ಭೂಮಿ ಬೇಕಾಗುತ್ತದೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಜನರಿಂದ ಸಾಕಷ್ಟು ವಿರೋಧಗಳು ಬರುತ್ತಿವೆ. ಯೋಜನೆಗಳಿಗೆ ನಮಗೆ ತೊಂದರೆಯಾಗುತ್ತದೆ ಎಂಬ ಆತಂಕ ಅವರಲ್ಲಿರುತ್ತದೆ. ಭೂಸ್ವಾಧೀನಕ್ಕೆ ಬರುವ ವಿರೋಧಗಳನ್ನು ಹೂಡಿಕೆದಾರರು ಅಡೆತಡೆ ಎಂದು ಯೋಚಿಸುತ್ತಾರೆ. ಆದ್ದರಿಂದ ನವೀಕರಿಸಬಹುದಾದ ಇಂಧನ ನೇತೃತ್ವದ ಬೆಳವಣಿಗೆಯು ದೇಶದ ಅಭಿವೃದ್ಧಿಗೆ ಮಾರ್ಗ ಎಂಬುದನ್ನು ಜನರಿಗೆ ಮನದಟ್ಟು ಮಾಡಿಕೊಟ್ಟರೆ ಅವರು ಯೋಜನೆಗಳನ್ನು ಬೆಂಬಲಿಸುತ್ತಾರೆ ಎಂದು ತಿಳಿಸಿದರು.

ಉದ್ಯಮ ವಲಯದಿಂದ ಬಂದಿರುವ ಪ್ರತಿಕ್ರಿಯೆಗಳನ್ನು ಆಧರಿಸಿ ಭೂಸ್ವಾಧೀನ ವಿಚಾರದಲ್ಲಿ ಸರಳೀಕರಣ ಮಾಡಲಾಗಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಭೂಮಿ ಪಡೆಯಲು ರಾಜ್ಯ ಸರ್ಕಾರ ವಿಶೇಷ ಆನ್ ಲೈನ್ ಪೋರ್ಟಲ್ ಸಿದ್ಧಪಡಿಸಿದೆ. ಹೂಡಿಕೆದಾದರರು ರೈತರೊಂದಿಗೆ ಮಾತುಕತೆ ನಡೆಸಿದ ಬಳಿಕ ಭೂ ಪರಿವರ್ತನೆಗಾಗಿ ಆನ್‌ಲೈನ್ ನೋಂದಣಿ ಮಾಡಿ, ಪರಿವರ್ತನೆ ಮಾಡಿಸಿಕೊಳ್ಳಬಹುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸೌರ ಕೃಷಿ ಯೋಜನೆಗೆ ಮೆಚ್ಚುಗೆ

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕವು ಸಾಕಷ್ಟು ಸಾಧನೆಗಳನ್ನು ಮಾಡಿದ್ದು, ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಾಧನೆಗಾಗಿ ಭೂಸ್ವಾಧೀನದಲ್ಲಿ ಸುಧಾರಣೆಗಳನ್ನು ತಂದಿದೆ. ಈ ಬಾರಿಯ ಆಯವ್ಯಯದಲ್ಲಿ ಮುಖ್ಯಮಂತ್ರಿ ಸೌರ ಕೃಷಿ ಯೋಜನೆಯನ್ನು ಘೋಷಿಸಿದ್ದು, ಇದು ಕೃಷಿ ಮತ್ತು ನವೀಕರಿಸಬಹುದಾದ ಇಂಧನವನ್ನು ಒಂದೇ ವೇದಿಕೆಯಲ್ಲಿ ತರುವ ಮಹತ್ವದ ಯೋಜನೆಯಾಗಿದೆ.ಅಭಿವೃದ್ಧಿಪರ ಯೋಜನೆಗಳ ರೂಪರೇಷೆ ಮತ್ತು ಅನುಷ್ಠಾನದಲ್ಲಿ ಗುಣಮಟ್ಟವನ್ನ ಹೆಚ್ಚಿಸಬೇಕಾದ ಅವಶ್ಯಕತೆ ಇದ್ದು, ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೂಡಿಕೆದಾರರು ಮತ್ತು ಜನರ ಮಧ್ಯೆ ಸಮನ್ವಯತೆ ಸಾಧಿಸಿ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಕ್ರೆಡಲ್ ಅಧ್ಯಕ್ಷ ಟಿ.ಡಿ.ರಾಜೇಗೌಡ ಹೇಳಿದರು.

ಅಧಿವೇಶನ ಸಮಾರಂಭ



ರಾಜಸ್ಥಾನದ ಭಾರತೀಯ ಯುವ ಸಂಸತ್ತು ಮತ್ತು ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವ ವಿದ್ಯಾನಿಲಯಗಳ ಜಂಟಿ ಆಶ್ರಯದಲ್ಲಿ ನಾಗ್ಪುರದ ಆರ್. ಎಸ್. ಎಸ್. ಪ್ರಧಾನ ಕಚೇರಿಯ ಸಭಾಂಗಣದಲ್ಲಿ ನಡೆಯುತ್ತಿರುವ 29ನೇ ಭಾರತೀಯ ಯುವ ಸಂಸತ್ ಮೂರು ದಿನಗಳ ಅಧಿವೇಶನದಲ್ಲಿ ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಪಾಲ್ಗೊಂಡರು. ತೆಲಂಗಾಣ ರಾಜ್ಯಪಾಲ ಜಿಷ್ಣುದೇವ ವರ್ಮಾ, ಶ್ರೀರಾಮಾನುಜ ಪರಂಪರೆಯ ಶ್ರೀ ಚಿನ್ನಜೀಯರ್ ಸ್ವಾಮೀಜಿ, ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಡಾ. ಶ್ರೀನಿವಾಸ ವರಖೇಡಿ ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಏ.1ರಂದು ರಾಷ್ಟ್ರಪತಿ ಸಿದ್ಧಗಂಗಾ ಮಠಕ್ಕೆ ಭೇಟಿ

ತುಮಕೂರು: ನಗರದ ಸಿದ್ಧಗಂಗಾ ಮಠದಲ್ಲಿ ಏ.1ರಂದು ಹಮ್ಮಿಕೊಂಡಿರುವ ಲಿಂ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 119 ಜನ್ಮ ವರ್ಧಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿದ್ದಾರೆ.



ಏ.1ರಂದು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಗದ್ದುಗೆ ದರ್ಶನ ಪಡೆದು, ಪೂಜೆ ಸಲ್ಲಿಸಿ, ಧ್ಯಾನ ಮಂದಿರ ಭೇಟಿ ಬಳಿಕ ಮಕ್ಕಳೊಂದಿಗೆ ಸಂವಾದ ನಡೆಸಿ, ಬಳಿಕ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಸಚಿವ ಸೋಮಣ್ಣ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಾ. 31ರಂದು ಬೆಂಗಳೂರಿಗೆ ಆಗಮಿಸಿ ಲೋಕ್ ಪಾಲ್ ಭವನದಲ್ಲಿ ತಂಗಲಿದ್ದಾರೆ. ಏ.1ರಂದು ಬೆಳಗ್ಗೆ 9ಕ್ಕೆ ಸಿದ್ಧಗಂಗಾ ಮಠಕ್ಕೆ ಆಗಮಿಸುವರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಸಚಿವರಾದ ಎಂಬಿ ಪಾಟೀಲ್ ಸೇರಿದಂತೆ ಸ್ಥಳೀಯ ಶಾಸಕರು ಭಾಗವಹಿಸಲಿದ್ದಾರೆ.

ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನಲ್ಲಿ ₹32.50 ಲಕ್ಷ ನಗದು ಜಪ್ತಿ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಹೊನ್ನಾಕಟ್ಟಿ ಚೆಕ್‌ಪೋಸ್ಟ್‌ನ ಅಧಿಕಾರಿಗಳ ತಂಡ ಭಾನುವಾರ ಬೆಳಗಿನ ಜಾವ 4 ಗಂಟೆ ಸುಮಾರಿಗೆ ನಡೆದ ಕಾರ್ಯಾಚರಣೆಯಲ್ಲಿ ದಾಖಲೆ ಇಲ್ಲದ ಒಟ್ಟು 32.50 ಲಕ್ಷ ರೂ.ಗಳ ನಗದು ಹಣವನ್ನು ಜಪ್ತಿ ಮಾಡಿದೆ. ಪಂಚಾಯತ ರಾಜ್ ಇಲಾಖೆಯ ಶಶಿಧರ ಸಂಗನಾಳ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿರುವ ವೇಳೆಯಲ್ಲಿ ಕೆಎ-36, ಪಿ-3991 ಮಾರುತಿ ಎರ್ಟಿಗಾ ಕಾರಿನಲ್ಲಿ 32.50 ಲಕ್ಷ ರೂ.ಗಳ ನಗದು ಪತ್ತೆಯಾಗಿದೆ. ಪತ್ತೆಯಾದ ಹಣಕ್ಕೆ ದಾಖಲೆಗಳನ್ನು ಒದಗಿಸಲಾಗದ ಹಿನ್ನೆಲೆಯಲ್ಲಿ ಹಣವನ್ನು ಜಪ್ತಿ ಮಾಡಲಾಯಿತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಕಾರ್ಯಾಚರಣೆ ತಂಡದಲ್ಲಿ ಎ.ಎಸ್.ಐ ಸುರೇಶ ನಾಯಕ, ಪಿಸಿ ಮಂಜುನಾಥ ಕುರಿ, ಅಬಕಾರಿ ಕಾನ್ಸಟೇಬಲ್ ಶಂಕರಾನಂದ ಮುಧೋಳ ಇದ್ದರು.

ಮಂಡ್ಯ ನಗರಕ್ಕೆ ಮೂರು ದಿನ ನೀರು ವ್ಯತ್ಯಯ

ಮಂಡ್ಯ: ಮಂಡ್ಯ ನಗರಕ್ಕೆ ನೀರು ಸರಬರಾಜಾಗುವ ಪೈಪ್‌ಲೈನ್ ಕಾಮಗಾರಿಯ ಬದಲಿ ಮಾರ್ಗದ ಹೊಸ ಪೈಪ್‌ಲೈನ್ ಅಳವಡಿಸುವುದರಿಂದ 24 ರಿಂದ 26ರವರೆಗೆ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಒಳಚರಂಡಿ ನಿರ್ವಹಣಾ ಮಂಡಳಿ ಸಹಾಯಕ ಕಾರ್ಯಪಾಲಕರು ತಿಳಿಸಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಂಡ್ಯ ನಗರ ನೀರು ಸರಬರಾಜು ವ್ಯವಸ್ಥೆ ನಿರ್ವಹಣೆಯಡಿ ರಾಗಿಮುದ್ದನಹಳ್ಳಿಯಲ್ಲಿರುವ ಕೆಳಮಟ್ಟದ ಜಲಸಂಗ್ರಹಗಾರವನ್ನು ಸ್ವಚ್ಛಗೊಳಿಸುವ ಸಲು ವಾಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಶ್ರೀರಂಗಪಟ್ಟಣ ತಾಲೂಕು ಎಂ. ಶೆಟ್ಟಿಹಳ್ಳಿ ಸಮೀಪದಲ್ಲಿ ಈಗಾಗಲೇ ಅಳವಡಿಸಲಾಗಿರುವ 1016 ಮಿ.ಮಿ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಬದಲೀ ಪಥದಲ್ಲಿ ಹೊಸ 1016 ಮಿ.ಮೀ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ ಹಿನ್ನೆಲೆಯಲ್ಲಿ ಮಂಡ್ಯ ನಗರಕ್ಕೆ ಸರಬರಾಜಾಗುವ ನೀರಿನಲ್ಲಿ ವ್ಯತ್ಯಯವಾಗಲಿದೆ.

ಕಳುಹಿಸಿದ ಪಟ್ಟಿಯನ್ನೇ ಅಂತಿಮಗೊಳಿಸಿದ ಹೈಕಮಾಂಡ್: ಡಿಸಿಎಂ

ಚರ್ಚೆ ಬಳಿಕ ಅಭ್ಯರ್ಥಿ ಆಯ್ಕೆ

ಬೆಂಗಳೂರು: ಪಕ್ಷದಲ್ಲಿ ಸಾಕಷ್ಟು ಚರ್ಚೆ ನಡೆಸಿಯೇ ಉಪಚುನಾವಣೆಗೆ ಅಭ್ಯರ್ಥಿಗಳನ್ನು ಘೋಷಣೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.



ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ರಾಜ್ಯ ಉಸ್ತುವಾರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಾವು ಸೇರಿದಂತೆ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಎಲ್ಲರೊಡನೆ ಚರ್ಚಿಸಿ ಹೈಕಮಾಂಡ್‌ಗೆ ಪಟ್ಟಿ ಕಳುಹಿಸಿದೆವು. ನಾವು ಕಳುಹಿಸಿದ ಪಟ್ಟಿಯನ್ನೇ ಹೈಕಮಾಂಡ್ ಘೋಷಣೆ ಮಾಡಿದೆ ಎಂದರು. ಚುನಾವಣೆ ಎಂದ ಮೇಲೆ ಹಲವು ಜನ ಆಕಾಂಕ್ಷಿಗಳಿರುತ್ತಾರೆ. ದಾವಣಗೆರೆ ದಕ್ಷಿಣದಲ್ಲಿ ಅಲ್ಪಸಂಖ್ಯಾತರು ಟಿಕೆಟ್ ಕೇಳಿದ್ದರಲ್ಲಿ ತಪ್ಪೇನಿಲ್ಲ. ನಾವು ಎಲ್ಲಾ ಅಲ್ಪಸಂಖ್ಯಾತ ಮುಖಂಡರೊಂದಿಗೆ ಚರ್ಚಿಸಿ, ಎಲ್ಲರನ್ನು ಸಮಾಧಾನಗೊಳಿಸಿಯೇ ಶಾಮನೂರು ಶಿವಶಂಕರಪ್ಪನವರ ಮೊಮ್ಮಗ ಸಮರ್ಥ್ ರವರಿಗೆ ಟಿಕೆಟ್ ಅಂತಿಮಗೊಳಿಸಿದೆವು ಎಂದರು.

ಹಾಗೆಯೇ ಬಾಗಲಕೋಟೆಯಲ್ಲಿ ದಿ. ಹೆಚ್. ವೈ. ಮೇಟಿಯವರ ಕುಟುಂಬದಲ್ಲೇ ಟಿಕೆಟ್‌ಗೆ ಪೈಪೋಟಿ ಇತ್ತು. ನಾನು ಹಿರಿಯ ಪುತ್ರ ಮಲ್ಲಿಕಾರ್ಜುನ ಮೇಟಿಯವರಿಗೆ ಟಿಕೆಟ್ ಕೊಡಬೇಕು ಎಂದಿದ್ದೆ. ಆದರೆ ಅವರ ಕುಟುಂಬಸ್ಥರೊಡನೆ ಚರ್ಚಿಸಿದ ನಂತರ ಕಿರಿಯ ಪುತ್ರ ಉಮೇಶ್ ಮೇಟಿಯವರಿಗೆ ಟಿಕೆಟ್ ನೀಡಿದ್ದೇವೆ. ಎಲ್ಲರೂ ಸೇರಿ ಪಕ್ಷವನ್ನು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಹೇಳಿದ್ದಾರೆ ಎಂದರು.

ನಮ್ಮ ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆ ನಾನು ಹಾಗೂ ಮುಖ್ಯಮಂತ್ರಿಗಳು ದಾವಣಗೆರೆ ಹಾಗೂ ಬಾಗಲಕೋಟೆಗೆ ಹೋಗುತ್ತಿದ್ದೇವೆ. ಎರಡೂ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಲು ಎಲ್ಲಾ ರೀತಿಯ ತಂತ್ರಗಳನ್ನು ರೂಪಿಸಲಾಗಿದೆ ಎಂದರು. ಬುಧವಾರ ಮಾ. 26 ರಂದು ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಆ ಸಭೆಯಲ್ಲಿ ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ರವರು ಭಾಗಿಯಾಗಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ಸಚಿವರು ಹಾಗೂ ಶಾಸಕರಿಗೆ ಜವಾಬ್ದಾರಿ ನೀಡುವ ಸಂಬಂಧ ಸಭೆಯಲ್ಲಿ ಚರ್ಚೆಗಳು ಆಗಲಿವೆ ಎಂದರು.

ಉಪಚುನಾವಣೆ ಕಾಂಗ್ರೆಸ್‌ಗೆ ಗೆಲುವು: ಜಾರಕಿಹೊಳಿ

ಬೆಳಗಾವಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಉಮೇಶ ಮೇಟಿ ಅವರಿಗೆ ಟಿಕೆಟ್ ನೀಡಬೇಕೆಂದು ಜನರ, ನಮ್ಮ ನಿರೀಕ್ಷೆ ಇತ್ತು. ಅದರಂತೆಯೇ ಹೈಕಮಾಂಡ್ ಅವರು ಉಮೇಶ ಮೇಟಿಗೆ ಟಿಕೆಟ್ ನೀಡಿದ್ದಾರೆಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಭಾನುವಾರ ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಾಗಲಕೋಟೆ ವಿಧಾನಸಭಾ ಕ್ಷೇತ್ರ ದಲ್ಲಿ ಮೇಟಿ ಕುಟುಂಬಸ್ಥರ ಮೇಲೆ ಅಲ್ಲಿನ ಜನ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಬಾಗಲಕೋಟೆ ಯಲ್ಲಿ ಕಳೆದ ಎರಡು ತಿಂಗಳಿಂದ ನಾವು ಚುನಾವಣೆ ಗೆಲುವಿಗಾಗಿ ಕೆಲಸ ಮಾಡುತ್ತಿದ್ದೇವೆ. ಆದ್ದರಿಂದ ಉಮೇಶ ಮೇಟಿ ಗೆಲುವಿಗೆ ಕಷ್ಟವಿಲ್ಲ ಎಂದರು.

ಡಿಜಿ ರಾಮಚಂದ್ರರಾವ್ ವಿರುದ್ಧ ತನಿಖೆ: ಪರಂ

ಬೆಂಗಳೂರು: ಡಿಜಿಪಿ ರಾಮಚಂದ್ರ ರಾವ್ ಅವರ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಅದನ್ನು ಆಧರಿಸಿ ಕ್ರಮದ ಬಗ್ಗೆ ತೀರ್ಮಾನ ಆಗಲಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.




ಸುದ್ದಿಗಾರರೊಂದಿಗೆ ಮಾತನಾಡಿ, ರಾಮಚಂದ್ರರಾವ್ ವೈರಲ್ ವೀಡಿಯೋ ಅಸಲಿ ಅಂತ ಎಫ್‌ಎಸ್‌ಎಲ್ ವರದಿ ನೀಡಿದೆ. ಆ ಹಿನ್ನೆಲೆಯಲ್ಲಿ ರಾಮಚಂದ್ರರಾವ್ ವಿರುದ್ಧ ಇಲಾಖಾ ತನಿಖೆ ಆಗಲಿದ್ದು, ಬಳಿಕ ಸರ್ಕಾರಕ್ಕೆ ವರದಿ ಸಲ್ಲಿಕೆ ಆಗಲದಿಎ. ಅದನ್ನು ಆಧರಿಸಿ ಕ್ರಮದ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು' ಎಂದರು. ವೈರಲ್ ಆಗಿದ್ದ ತಮ್ಮ ವೀಡಿಯೋ ಎಐ ವೀಡಿಯೋ' ಅಂತ ರಾಮಚಂದ್ರರಾವ್ ಹೇಳಿದ್ದರು. ಸತ್ಯ ತಿಳಿಯಲಯ ಎಫ್‌ಎಸ್‌ಎಲ್‌ಗೆ ಕೊಟ್ಟಿದ್ದೆವು ಎಂದು ಸ್ಪಷ್ಟಪಡಿಸಿದರು.

ವರದಿ ಬಂದ ನಂತರ ಕ್ರಮ: ಪಾವಗಡದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ ಮಾಡಿ ಕೊಂಡಿರುವ ಬಗ್ಗೆ ಆ ಇಲಾಖೆಯವರು ಪರಿಶೀಲಿಸಿ ವರದಿ ನೀಡಬೇಕು. ನಂತರ ಕ್ರಮ ಕೈಗೊಳ್ಳಲಾಗುತ್ತದೆ ಪರಮೇಶ್ವರ್ ತಿಳಿಸಿದರು. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ನೇರವಾಗಿ ಜಂಟಿ ನಿರ್ದೇಶಕರ ಮೇಲೆ ಆರೋಪ ಮಾಡಿದ್ದಾರೆ. ಜಂಟಿ ನಿರ್ದೇಶನಕರು ಆ ರೀತಿ ಮಾಡಬೇಕಾದರೂ ಬೇರೆ ಯಾರಾದರೂ ಕಾರಣವೇ ಅಂತ ನೋಡಬೇಕಾಗುತ್ತದೆ ಎಂದರು.

ಎರಡೂ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸ

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ನಮ್ಮವರೇ ಗೆದ್ದ ಕ್ಷೇತ್ರಗಳಾಗಿವೆ. ಅವುಗಳನ್ನು ಬಿಟ್ಟುಕೊಡಲು ಆಗದು. ಅದೊಂದೇ ಈಗ ನಮಗೆ ಮುಖ್ಯ ಎಂದು ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು. ಉಪಚುನಾವಣೆಯಲ್ಲಿ ಕುಟುಂಬಗಳಿಗೇ ಟಿಕೆಟ್ ನೀಡಿರುವ ಬಗ್ಗೆ ಕೇಳಿದಾಗ, ಕೆಲವು ಮಾನದಂಡಗಳನ್ನು ಇಟ್ಟುಕೊಂಡು, ಇಂದಿನ ರಾಜಕೀಯ ಸನ್ನಿವೇಶವನ್ನು ನೋಡಿ ತೀರ್ಮಾನ ಮಾಡಲಾಗುತ್ತದೆ. ನಮ್ಮ ಪಕ್ಷದವರೇ ಈ ಎರಡೂ ಕ್ಷೇತ್ರಗಳನ್ನು ಗೆದ್ದಿದ್ದು, ಅದನ್ನು ವಾಪಸ್ ಗೆಲ್ಲಿಸಿಕೊಳ್ಳಬೇಕಷ್ಟೇ. ಬಿಟ್ಟುಕೊಡಲು ಆಗುವುದಿಲ್ಲ. ಅದು ನಮಗೆ ಮುಖ್ಯ ಅಷ್ಟೇ ಎಂದು ಹೇಳಿದರು. ಉಪಚುನಾವಣೆಯಲ್ಲಿ ಇಂತಹ ಸಮಸ್ಯೆ ಬಹಳಷ್ಟು ಬಂದಿವೆ. ನಾನು ಅಧ್ಯಕ್ಷನಾಗಿದ್ದಾಗಲೂ ಇಂತಹ ಸಮಸ್ಯೆ ಬಗೆಹರಿಸಿದ್ದೇವೆ. ಅಂತಿಮವಾಗಿ ಯಾರಿಗಾದರೂ ಟಿಕೆಟ್ ಕೊಡಲೇಬೇಕಲ್ಲವೇ ಎಂದು ಮರುಪ್ರಶ್ನಿಸಿದ ಅವರು, ಸಾಧಕ-ಬಾಧಕಗಳನ್ನು ನೋಡಿ ಹೈಕಮಾಂಡ್ ತೀರ್ಮಾನ ಮಾಡಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಮಂಗಳೂರಿಗೆ ಬಂತು ಎಲ್‌ಪಿಜಿ ಹಡಗು!



ಮಂಗಳೂರು: ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ನವ ಮಂಗಳೂರು ಬಂದರಿಗೆ ಆಗಮಿಸಿದ್ದು, ತೈಲ ಇಳಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಅದೇ ರೀತಿ ಅಮೆರಿಕದಿಂದ ಎಲ್‌ಪಿಜಿ ಕಾರ್ಗೋ ಹಡಗು ಕೂಡ ಭಾನುವಾರ ನವಮಂಗಳೂರು ಬಂದರು ತಲುಪಿದೆ. ಅಮೆರಿಕದ ಟೆಕ್ಸಾಸ್‌ನಿಂದ ಮಂಗಳೂರಿಗೆ ಆಗಮಿಸಿರುವ 'ಪಿಕ್ಸಿಸ್ ಪಯನೀರ್' ಹೆಸರಿನ ಎಲ್‌ಪಿಜಿ ಕಾರ್ಗೋ ಹಡಗು 16,714 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದಿದೆ. ವಿದೇಶದಿಂದ ಕರ್ನಾಟಕಕ್ಕೆ ಆಗಮಿಸಿದ ಮೊದಲ ಎಲ್‌ಪಿಜಿ ಹಡಗು ಇದಾಗಿದೆ. ಈ ಹಡಗು ಮಾ.14 ರಂದು ಅಮೆರಿಕದಿಂದ ಹೊರಟಿತ್ತು.

ಅದಾಲತ್: 55.85 ಲಕ್ಷ ಪ್ರಕರಣ ಇತ್ಯರ್ಥ

ಬೆಂಗಳೂರು: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 55.85 ಲಕ್ಷ ಪ್ರಕರಣಗಳನ್ನು ಇತ್ಯರ್ಥಪಡಿಸುವ ಮೂಲಕ ಜನರಿಗೆ ತ್ವರಿತ ನ್ಯಾಯ ಒದಗಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಒಟ್ಟು 3,248 ಕೋಟಿ ರೂ.ಗಳ ಪರಿಹಾರದ ಮೊತ್ತವನ್ನು ಕಕ್ಷಿದಾರರಿಗೆ ಕೊಡಿಸಲಾಗಿದೆ.

ಹೈಕೋರ್ಟ್‌ನ ಎಕ್ಸಿಕ್ಯೂಟಿವ್ ಚೇರ್‌ಮನ್ ಮೀಟಿಂಗ್ ಹಾಲ್‌ನಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಹೈಕೋರ್ಟ್‌ನ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ಅನು ಸಿವರಾಮನ್, ಸರ್ವರಿಗೂ ನ್ಯಾಯ ಎಂಬ ಧ್ಯೇಯೋದ್ದೇಶದೊಂದಿಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಆಯೋಜಿಸಿದ್ದ ವರ್ಷದ ಮೊದಲನೇ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಅಭೂತಪೂರ್ವ ಯಶಸ್ಸು ಲಭಿಸಿದೆ ಎಂದರು.

ಈ ಲೋಕ ಅದಾಲತ್‌ನಲ್ಲಿ ಉಚ್ಚ ನ್ಯಾಯಲಯದ ಪೀಠಗಳಲ್ಲಿದ್ದ 956 ಪ್ರಕರಣಗಳು, ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿಯಿದ್ದ 2,60,204 ಪ್ರಕರಣಗಳು ಇತ್ಯರ್ಥಗೊಂಡಿವೆ.

ನಾಳೆ ಒಳಮೀಸಲಾತಿ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಸರ್ಕಾರದ ಒಳಮೀಸಲಾತಿ ನೀತಿ, ಆಯೋಗಗಳ ವರದಿ ಹಾಗೂ ರೋಸ್ಟರ್ ವ್ಯವಸ್ಥೆಗಳನ್ನು ವಿರೋಧಿಸಿ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ವತಿಯಿಂದ ಮಾ.24 ರಂದು ನಗರದ ಫ್ರೀಡ್‌ಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ತಿಳಿಸಿದರು.



ವಸಂತನಗರದ ಜಸ್ಮಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ. 24ರಂದು ನಡೆಯಲಿರುವ ಈ ಸಮಾವೇಶ ರಾಜ್ಯ ರಾಜಕೀಯ ಹಾಗೂ ಸಾಮಾಜಿಕ ವಲಯದಲ್ಲಿ ಗಮನ ಸೆಳೆಯುವ ಸಾಧ್ಯತೆ ಇದ್ದು, ರಾಜ್ಯದ ವಿವಿಧ ಭಾಗಗಳಿಂದ 1 ಲಕ್ಷ ಜನ ಸೇರುವ ಸಾಧ್ಯತೆ ಇದೆ ಎಂದರು. ಭೋವಿ, ಬಂಜಾರ, ಕೊರಮ, ಕೊರಚ, ಸೂಕ್ಷ್ಮ, ಅತಿಸೂಕ್ಷ್ಮ ಹಾಗೂ ಅಲೆಮಾರಿಗಳ 59 ಜಾತಿಗಳಿಗೆ ಅನ್ಯಾಯವಾಗುತ್ತಿದ್ದು, ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕ. ಆಯೋಗವೇ ಸಲ್ಲಿಸಿರುವ ವರದಿಯಲ್ಲಿಯೇ ಈ ಸಮುದಾಯಗಳು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ತೀವ್ರ ಹಿಂದುಳಿದಿವೆ ಎಂದು 26 ಕೋಷ್ಟಕಗಳಲ್ಲಿ 19ರಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೂ, ಸರ್ಕಾರವು ಒಳಮೀಸಲಾತಿ ರೂಪಿಸುವಾಗ ಈ ಅಂಶಗಳನ್ನು ಪರಿಗಣಿಸಿಲ್ಲ ಎಂದರು.

ಮಾ. 27ರಂದು ಒಳಮೀಸಲಾತಿ ಕುರಿತ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿರುವ ಹಿನ್ನೆಲೆಯಲ್ಲಿ, ಸರ್ಕಾರವು ಈ ಸಭೆಯಲ್ಲಿ ಸಮಗ್ರ ಚರ್ಚೆ ನಡೆಸಿ ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳಬೇಕು. ಸದ್ಯ ಸರ್ಕಾರ ಭರ್ತಿ ಮಾಡಲು ಉದ್ದೇಶಿಸಿರುವ 56 ಸಾವಿರ ಹುದ್ದೆಗಳನ್ನು ಯಾವುದೇ ಒಳಮೀಸಲಾತಿ ಜಾರಿಗೊಳಿಸದೆ ಭರ್ತಿ ಮಾಡಬಾರದು. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಮಾನ ಅವಕಾಶಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಒತ್ತಾಯಿಸಲು ಈ ಪ್ರತಿಭಟನಾ ಸಮಾವೇಶವನ್ನು ಆಯೋಜಿಸಲಾಗಿದೆ ಎಂದರು.

ಮೀಸಲಾತಿ ಒಕ್ಕೂಟದ ಅಧ್ಯಕ್ಷ ಡಾ. ಎಚ್. ರವಿ ಮಾಕಳಿ, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಧ್ಯಕ್ಷ ರಾಘವೇಂದ್ರ ನಾಯಕ್, ಕಾರ್ಯಾಧ್ಯಕ್ಷ ಅನಂತ ನಾಯಕ್, ಉಪಾಧ್ಯಕ್ಷ ಆದರ್ಶ ಯಲ್ಲಪ್ಪ, ರವಿ ಪೂಜಾರ ಇದ್ದರು.

ಅವೈಜ್ಞಾನಿಕ ರೋಸ್ಟರ್

ಸರ್ಕಾರ ರೂಪಿಸಿರುವ ಪ್ರವರ್ಗ ಅ, ಆ, ಇ ವಿಭಾಗೀಕರಣವೂ ಜನಸಂಖ್ಯಾ ಅನುಪಾತಕ್ಕೆ ಅನುಗುಣವಾಗಿಲ್ಲ. ವಿಶೇಷವಾಗಿ ರೋಸ್ಟರ್ ವ್ಯವಸ್ಥೆ ಅವೈಜ್ಞಾನಿಕವಾಗಿದೆ. ಹಿಂದಿನ ಸರ್ಕಾರದಲ್ಲಿ 560 ಹುದ್ದೆಗಳ ನೇಮಕಾತಿಯಲ್ಲಿ ಒಂದು ಪ್ರವರ್ಗಕ್ಕೆ ಬಹುಪಾಲು ಹುದ್ದೆಗಳು ನೀಡಲಾಗಿದ್ದು, ಪ್ರವರ್ಗ ಇಗೆ ಅತಿ ಕಡಿಮೆ ಅವಕಾಶ ದೊರೆತಿದೆ. ಹೊಸ ರೋಸ್ಟರ್‌ನಲ್ಲಿ ಪ್ರವರ್ಗ ಇಗೆ 15ನೇ ಸ್ಥಾನ ನೀಡಿರುವುದರಿಂದ, ಈ ಸಮುದಾಯಗಳಿಗೆ ಅವಕಾಶ ಸಿಗುವಷ್ಟರಲ್ಲಿ ತಲೆಮಾರುಗಳು ಕಳೆದು ಹೋಗುವ ಪರಿಸ್ಥಿತಿ ಉಂಟಾಗುತ್ತದೆ. ಇದು ಸಮುದಾಯಗಳನ್ನು ಉದ್ದೇಶಪೂರ್ವಕವಾಗಿ ಹಿಂದುಳಿಸುವ ಪ್ರಯತ್ನ ಎಂದರು.

ಸರ್ಕಾರಿ ಉದ್ಯೋಗಗಳ ನೇಮಕಾತಿ ಚರ್ಚೆ | ನೇಮಕಾತಿ ಕ್ಯಾಲೆಂಡರ್ ರಚನೆಗೆ ಸರ್ಕಾರ ಸೂಚನೆ

ಮುಂದಿನ 5 ವರ್ಷಗಳಲ್ಲಿ 86,398 ನೌಕರರ ನಿವೃತ್ತಿ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ಸರ್ಕಾರಿ ಉದ್ಯೋಗಗಳ ನೇಮಕಾತಿಯ ಕುರಿತು ರಾಜ್ಯದಲ್ಲಿ ಬಹು ಚರ್ಚೆ ನಡೆಯುತ್ತಿದ್ದು, ಲಕ್ಷಾಂತರ ಉದ್ಯೋಗಗಳು ಖಾಲಿ ಇದ್ದರೂ ಕೂಡಾ ಒಂದಲ್ಲ ಒಂದು ಕಾರಣಕ್ಕೆ ನೇಮಕಾತಿ ಮುಂದೂಡಲಾಗುತ್ತಿದೆ. ಇಗಾಗಲೇ ಸುಮಾರು 2.84 ಲಕ್ಷ ಉದ್ಯೋಗ ಖಾಲಿ ಇದ್ದು, ಇದರ ಜತೆಗೆ ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ 86,398 ನೌಕರರು ನಿವೃತ್ತರಾಗಲಿದ್ದಾರೆ.

ಇತ್ತೀಚೆಗೆ ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟದಿಂದ ಉದ್ಯೋಗ ನೇಮಕಾತಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಮತ್ತು ಕೆಪಿಸಿಎಸ್‌ಯ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಮುಂದಿನ 5 ವರ್ಷಗಳ ನೇಮಕಾತಿಯ ಕ್ಯಾಲೆಂಡರ್ ರಚಿಸಬೇಕೆಂದು ಸರ್ಕಾರ ಸೂಚನೆ ನೀಡಿದೆ. ಈ ಭಾರಿ ಸಂಖ್ಯೆಯ ನಿವೃತ್ತಿಯು ಉದ್ಯೋಗಕಾಂಕ್ಷಿಗಳಿಗೆ ಶುಕ್ರದಸೆ ಎನಿಸಿದರೂ ಕೂಡಾ ಇಷ್ಟು ದೊಡ್ಡ ಪ್ರಮಾಣದ ನಿವೃತ್ತಿ ಸರ್ಕಾರಕ್ಕೆ ಹೊರೆಯಾಗುವುದಂತು ನಿಜ.

2023 ರಿಂದ 2025ರ ನಡುವೆ ರಾಜ್ಯ ಸರ್ಕಾರ 8,157 ಹುದ್ದೆಗಳನ್ನು ಯಶಸ್ವಿಯಾಗಿ ಭರ್ತಿ ಮಾಡಿದೆ. ಇನ್ನೂ 3,081 ಹುದ್ದೆಗಳಿಗೆ ನೇಮಕಾತಿ ಪ್ರಗತಿಯಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದು, ಪ್ರಸ್ತುತ ಖಾಲಿ ಇರುವ ಉದ್ಯೋಗಗಳನ್ನು ಸರ್ಕಾರ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಳ್ಳದಿದ್ದರೆ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗಲಿದೆ. ಇನ್ನೂ ದೊಡ್ಡ ಪ್ರಮಾಣದ ನಿವೃತ್ತಿಯಿಂದ ಅವರಿಗೆ ನೀಡಬೇಕಾದ ಪಿಂಚಣಿ ಹಣವನ್ನು ಹೊಂದಿಸುವುದು ಸರ್ಕಾರಕ್ಕೆ ಸವಾಲಾಗಿದೆ.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸುವ ಸಂಬಂಧ 9 ತಿಂಗಳ ಕಾಲ ನೇಮಕಾತಿ ಸ್ಥಗಿತಗೊಂಡಿತ್ತು, ನೇಮಕಾತಿ ವಿಳಂಬದ ಬಗ್ಗೆ ಉದ್ಯೋಗಾಕಾಂಕ್ಷಿಗಳಿಂದ ಭಾರಿ ಪ್ರತಿಭಟನೆಗಳು ನಡೆದಿದ್ದರಿಂದ ರಾಜ್ಯ ಸರ್ಕಾರ ಫೆಬ್ರವರಿ 27 ರಂದು ನೇರ ನೇಮಕಾತಿಯ ಮೂಲಕ 56,432 ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಿತು. ಎಸ್‌ಸಿಗೆ ಶೇ. 15, ಎಸ್‌ಟಿಗೆ ಶೇ. 3 ಮತ್ತು ಒಬಿಸಿಗೆ ಶೇ. 32 ರಷ್ಟು ಮೀಸಲಾತಿ ಅನ್ವಯ ಶೇ.50 ರಷ್ಟು ಮೀಸಲಾತಿಯ ಆಧಾರದ ಮೇಲೆ ಭರ್ತಿಗೆ ಘೋಷಿಸಿದ್ದರೂ ಹಲವು ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸಿದ್ದು, ಮಾ.27ರಂದು ನಡೆಯುವ ಸಂಪುಟ ಸಭೆಯ ಬಳಿಕ ಒಳ ಮೀಸಲಾತಿ ಬಗ್ಗೆ ಸರ್ಕಾರ ನಿರ್ಧಾರದ ನಂತರ ನೇಮಕಾತಿಯಲ್ಲಿ ಮೀಸಲಾತಿ ಕುರಿತು ಸ್ಪಷ್ಟತೆ ಸಿಗುವ ಸಾಧ್ಯತೆ ಇದೆ.

ಸರ್ಕಾರಕ್ಕೆ ಆರ್ಥಿಕ ಹೊರೆ

2026-27ನೇ ಆರ್ಥಿಕ ವರ್ಷದಲ್ಲಿ, ಸರ್ಕಾರವು ಸಂಬಳ ಮತ್ತು ಪಿಂಚಣಿಗಳಿಗಾಗಿ 1.32 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡುವ ನಿರೀಕ್ಷೆಯಿದೆ. ಇದು 2023-24ರಲ್ಲಿ ಸಂಬಳ ಮತ್ತು ಪಿಂಚಣಿಗಳನ್ನು ಪಾವತಿಸಲು ಸರ್ಕಾರ ಖರ್ಚು ಮಾಡಿದ 96,166 ಕೋಟಿ ರೂ.ಗಳಿಗಿಂತ ಶೇ.38ರಷ್ಟು ಹೆಚ್ಚಳವಾಗಲಿದೆ. 2029-30ರ ವೇಳೆಗೆ ಸಂಬಳ ಮತ್ತು ಪಿಂಚಣಿಗಳ ಮೇಲಿನ ಖರ್ಚು 1.65 ಲಕ್ಷ ಕೋಟಿ ರೂ.ಗಳಿಗೆ ಏರುವ ನಿರೀಕ್ಷೆಯಿದೆ.

ಖಾಲಿ ಇರುವ ಉದ್ಯೋಗಗಳು

ಗ್ರೂಪ್ ಎ	ಗ್ರೂಪ್ ಬಿ	ಗ್ರೂಪ್ ಸಿ	ಗ್ರೂಪ್ ಡಿ	ಒಟ್ಟು
16,171	1,72,190	1,72,190	79,340	2,84,881

ನಿವೃತ್ತಿಯಾಗುವ ನೌಕರರ ವಿವರ

2026	16,513
2027	16,800
2028	17,726
2029	18,100
2030	17,259

ಕಾಶಿಗೆ ಹೊರಟಿದ್ದ ಪ್ರಯಾಣಿಕರ ವಾಹನಕ್ಕೆ ಲಾರಿ ಡಿಕ್ಕಿ

ಸ್ಥಳದಲ್ಲೇ ಮೂವರ ಸಾವು

ದೇವನಹಳ್ಳಿ: ಕಾಶಿಯಾತ್ರೆಗೆ ಹೊರಟಿದ್ದ ಸ್ತ್ರೀಶಕ್ತಿ ಸಂಘದ ಕಾರ್ಯಕರ್ತರಿದ್ದ ವಾಹನಕ್ಕೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟು, ಕೆಲವರಿಗೆ ಗಾಯವಾಗಿರುವ ಘಟನೆ ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ರಾಣಿ ಕ್ರಾಸ್ ಬಳಿ ಸಂಭವಿಸಿದೆ.



ತಿಪಟೂರು ತಾಲೂಕಿನ ಜಯಮ್ಮ (65), ಯಶೋಧಮ್ಮ (60), ಗಂಗಾ (40) ಎಂಬುವರು ಮೃತಪಟ್ಟವರು. ಇನ್ನುಳಿದವರಿಗೆ ಸಣ್ಣಪುಟ್ಟ ಗಾಯವಾಗಿದ್ದು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ತಿಪಟೂರು ತಾಲೂಕಿನ ಸ್ತ್ರೀಶಕ್ತಿ ಸಂಘಟನೆಯಿಂದ 15 ದಿನಗಳ ಕಾಲ ಕಾಶಿ ಸೇರಿದಂತೆ ವಿವಿಧ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲು ಸಿದ್ಧತೆ ನಡೆಸಿದ್ದರು. ಸ್ತ್ರೀಶಕ್ತಿ ಸಂಘಟನೆಯ ಕಾರ್ಯಕರ್ತರಲ್ಲಿ 12 ಜನರ ತಂಡ ಕಾಶಿ ಯಾತ್ರೆಗೆ ಹೊರಟ್ಟಿದ್ದರು. ಭಾನುವಾರ ಬೆಳಗ್ಗೆ 6 ಗಂಟೆ ಸಮಯದಲ್ಲಿ ತಿಪಟೂರಿನಿಂದ ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರುವಾಗ, ಸರ್ವೀಸ್ ರಸ್ತೆಯಲ್ಲಿ ತಿರುವು ಪಡೆಯುವ ವೇಳೆ, ಎಡಬದಿಯಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ, ಟಿಟಿ ವಾಹನ ಸಂಪೂರ್ಣವಾಗಿ ಜಖಂಗೊಂಡಿದೆ.

ವಾಹನದಲ್ಲಿದ್ದ ಮೂವರು ಸ್ತ್ರೀ ಶಕ್ತಿ ಸಂಘಟನೆಯ ಕಾರ್ಯಕರ್ತರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಉಳಿದ ಗಾಯಾಳುಗಳನ್ನು ದೇವನಹಳ್ಳಿಯ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅಪಘಾತದ ನಂತರ ಲಾರಿಯನ್ನು ಬಿಟ್ಟು, ಚಾಲಕ ಪರಾರಿಯಾಗಿದ್ದಾನೆ. ಮೃತದೇಹವನ್ನು ತಿಪಟೂರಿಗೆ ರವಾನೆ ಮಾಡಲಾಗಿದೆ. ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಂಪಾದಕೀಯ

ಶಾಂತಿಯ ಸಮಾಜಕ್ಕೆ ಅರಿವೇ ಗುರು

ಸಮಾಜ ಸ್ವಾತಂತ್ರ್ಯಪೂರ್ವದ ಚಿಂತನೆಯೊಂದನ್ನು ನಿರ್ಲಕ್ಷಿಸಿದೆ ಎಂಬ ಮಾತೊಂದನ್ನು ಇತ್ತೀಚೆಗೆ ಚಿಂತಕರೊಬ್ಬರು ಆಡಿದ್ದರು. ಸಾಮಾನ್ಯವಾಗಿ ಸ್ವಾತಂತ್ರ್ಯಪೂರ್ವದ ಚಿಂತನೆ ಎಂದರೆ ವಸಾಹತುಶಾಹಿ ಎಂದೇ ಭಾವಿಸಲಾಗುತ್ತದೆ. ಆದರೆ ಸ್ವಾತಂತ್ರ್ಯಪೂರ್ವ ಎಂದರೆ ಒಂದು ಕಾಲಘಟ್ಟವೂ ಹೌದು. ಪೂರ್ವದ ಪಾಠಗಳನ್ನು ಮರೆಯಲೇಬೇಕು ಎನ್ನುವಂತಿಲ್ಲ. ಅಲ್ಲದೆ ಸ್ವಾತಂತ್ರ್ಯಾನಂತರದ ಹಲವಾರು ಘಟನೆಗಳಿಗೆ ಪೂರ್ವದ ಪಾಠ ಪರಿಹಾರವಾಗಬಲ್ಲದು. ಆದ್ದರಿಂದ ಸ್ವಾತಂತ್ರ್ಯಪೂರ್ವ ಎಂದರೆ ಕೇವಲ ವಸಾಹತುಪ್ರಜ್ಞೆಯಲ್ಲ.

ಇಂದಿಗೂ ಸಮಾಜದಲ್ಲಿ ಮತೀಯ ಸಾಮರಸ್ಯ ಎಂಬುದು ಮರೀಚಿಕೆ. ಎಲ್ಲೆಲ್ಲೂ ಅಸಹನೆ, ಸಂದೇಹ. ಕೆಲವು ದಿನಗಳ ಹಿಂದೆಯಷ್ಟೇ ಹಿಂದುಗಳ ಯುಗಾದಿ ಮತ್ತು ಮುಸಲ್ಮಾನರ ರಂಜಾನ್ ಹಬ್ಬ ಜೊತೆಜೊತೆಯಾಗಿ ಬಂತು. ಸದ್ಭಾವನೆ ಮತ್ತು ಪರಸ್ಪರ ಸಹೋದರತ್ವದ ದೃಷ್ಟಿಯಿಂದ ಇದು ಸಮಾಜದಲ್ಲಿ ಚೇತೋಹಾರಿ ವಾತಾವರಣವನ್ನು ನಿರ್ಮಿಸಬೇಕಿತ್ತು. ಆದರೆ ರಾಜ್ಯದ ಹಲವಾರು ಕಡೆಗಳಲ್ಲಿ ಕಾನೂನು ಸುವ್ಯವಸ್ಥೆಯ ಕಾರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ವಾತಾವರಣ ಸೃಷ್ಟಿಯಾಯಿತು. ಗಲಭೆ ನಡೆಯಬಹುದೆಂದು ಶಾಂತಿಸಭೆಗಳನ್ನು ನಡೆಸಲಾಯಿತು. ಇವೆಲ್ಲವನ್ನೂ ಏಕಮುಖದಿಂದ ಅವಲೋಕಿಸಿದರೆ ಸಾಮಾನ್ಯ ಘಟನೆ ಎನಿಸಬಹುದು.

ಆದರೆ ಸ್ವಾತಂತ್ರ್ಯ ಬಂದು ಏಳುವರೆ ದಶಕಗಳಾದರೂ ದೇಶದಲ್ಲಿ ಇಂಥ ಸ್ಥಿತಿ ಇದೆ ಎನ್ನುವುದು ಯೋಚಿಸತಕ್ಕ ಸಂಗತಿ. ಅದರಲ್ಲೂ ಸಂವಿಧಾನ ಹೇಳುವ ಸಮಾನತೆ ಮತ್ತು ಸೌಹಾರ್ದತೆಗಳು ಸಮಾಜದಲ್ಲಿ ಯಾವ ಪರಿಯಲ್ಲಿ ನೆಲೆಸಿದೆ ಎನ್ನುವುದಕ್ಕೆ ಇದು ಸಾಕ್ಷಿಯೂ ಹೌದು. ಎರಡು ಸಮುದಾಯದ ಹಬ್ಬಗಳನ್ನು ಜೊತೆಯಲ್ಲಿ, ಸಂತೋಷದಿಂದ ಆಚರಿಸಲು ಯಾಕೆ ಸಾಧ್ಯವಾಗುತ್ತಿಲ್ಲ ಎನ್ನುವುದನ್ನು ಗಂಭೀರವಾಗಿ ಚಿಂತಿಸಬೇಕಿದೆ. ನಾನಾ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಅವು ಶಾಂತಿಗೆ ಭಂಗ ತರುವ ಮಟ್ಟಕ್ಕೆ ಹೋಗುತ್ತದೆ ಎಂದರೆ ಸಂವಿಧಾನ ಕರ್ತೃಗಳ ಆಶಯ ಸಂಪೂರ್ಣ ಈಡೇರಲಿಲ್ಲ ಎಂದೇ ಅರ್ಥ. ಮುಸಲ್ಮಾನರ ಮೆರವಣಿಗೆಯನ್ನು ಇತರ ಮತೀಯರು ಸಂದೇಹದಿಂದ ಯಾಕೆ ನೋಡುತ್ತಾರೆ ಎನ್ನುವುದನ್ನು ಆ ಸಮುದಾಯದ ಮುಖಂಡರು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹಾಗಾದರೆ ಅದನ್ನು ಸಮಾಜದ ತಪ್ಪು ಎನ್ನಬಹುದೇ ಎಂದರೆ ಅದೂ ಸಾಧ್ಯವಿಲ್ಲ. ಈ ಹಿಂದೆ ಎಲ್ಲೆಲ್ಲಿ ಗಣೇಶ ಮೆರವಣಿಗೆಯ ಮೇಲೆ ಕಲ್ಲೆಸೆತ ಮತ್ತು ಇತರ ಶಾಂತಿಭಂಗದ ಪ್ರಯತ್ನಗಳು ನಡೆದವೋ ಅಲ್ಲೆಲ್ಲಾ ಮುಸಲ್ಮಾನರ ಮೆರವಣಿಗೆಯನ್ನು ಸಮಾಜ ಸಂದೇಹದಿಂದಲೇ ನೋಡುತ್ತದೆ.

ಎಲ್ಲರಿಗೂ ತಮ್ಮ ಮತಗಳನ್ನು ಆಚರಿಸಲು ಪೂರ್ಣ ಸ್ವಾತಂತ್ರ್ಯವಿದೆ. ಆದರೆ ಸಂಶಯ ಮತ್ತು ಭಯ ಆ ಸ್ವಾತಂತ್ರ್ಯವನ್ನು ಅನುಭವಿಸಲು ಅಡ್ಡಿಯಾಗುತ್ತಿದೆ. ಎಲ್ಲಾ ಮತಗಳಲ್ಲಿ ಹಬ್ಬಗಳೆಂದರೆ ನಾನಾ ಕಾರಣಗಳಿಂದ ವ್ಯಕ್ತಿಯ ಉನ್ನತಿಯ ಮಾರ್ಗಗಳು. ಆದರೆ ಅಂಥ ಸುಸಂದರ್ಭದಲ್ಲೂ ಹುನ್ನಾರಕ್ಕೆ ಹೊಂಚುಹಾಕುವ ಮನಸ್ಸುಗಳು ಇಂದಿಗೂ ಇದೆ ಎನ್ನುವುದು ಖೇದಕರ. ಸ್ವಾತಂತ್ರ್ಯಪೂರ್ವದಲ್ಲಿ ಇಂಥ ಭಾವನೆಗಳಿಂದಲೇ ಗಲಭೆಗಳು ನಡೆಯುತ್ತಿದ್ದವು ಮತ್ತು ಅವು ಮುಂದೆ ದೇಶವಿಭಜನೆಯವರೆಗೂ ತಲುಪಿತು ಎನ್ನುವುದನ್ನು ಸಮಾಜ ಮರೆಯಬಾರದು. ತುಷ್ಟೀಕರಣ ರಾಜಕೀಯಕ್ಕೆ ಬಲಿಯಾಗುವ ಸಮಾಜ ಮತೀಯ ಸಾಮರಸ್ಯವನ್ನು ಕೆಡಿಸುತ್ತದೆ ಎನ್ನುವುದನ್ನು ಸಮಾಜ ಅರಿಯಬೇಕು. ಅದರಲ್ಲೂ ಅಲ್ಪಸಂಖ್ಯಾತ ಎನಿಸಿಕೊಂಡವರು ಮುಖ್ಯವಾಗಿ ಅರಿಯಬೇಕು. ಆಗಲೇ ಸಮಾಜ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ.

ಜೇಮ್ಸ್ ಹ್ಯಾರಿಸನ್ ಎಂಬ ಮಹಾನ್ ರಕ್ತದಾನಿ, ನಿಜವಾದ ಹೀರೋ

ಜೇಮ್ಸ್ ಹ್ಯಾರಿಸನ್ 1173 ಬಾರಿ ರಕ್ತದಾನ ಮಾಡಿ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾರೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ರಕ್ತದಾನ ಶ್ರೇಷ್ಠ ದಾನ ಎಂಬ ಮಾತನ್ನು ಆಗಾಗ ಕೇಳುತ್ತಲೇ ಇರುತ್ತೇವೆ. ಒಂದು ಜೀವ ಉಳಿಸಲು ನಮ್ಮ ರಕ್ತವನ್ನು ದಾನ ಮಾಡುವುದು ಯಜ್ಞಯಾಗ ಹೋಮ ಮಾಡಿದ್ದಕ್ಕಿಂತಲೂ ಶ್ರೇಷ್ಠ ಕಾರ್ಯ ಎಂದು ವೇದಿಕೆಗಳ ಮೇಲಿನಿಂದ ಆಗೊಮ್ಮೆ ಈಗೊಮ್ಮೆ ಭಾಷಣವನ್ನು ಮಾಡಿರುತ್ತೇವೆ. ದೇಶದಾದ್ಯಂತ ಹಲವಾರು ಖಾಸಗಿ ಸಂಸ್ಥೆಗಳು 'ಬ್ಲಡ್‌ಬ್ಯಾಂಕ್'ಗಳನ್ನು ಈ ಹಿನ್ನೆಲೆಯಲ್ಲಿ ಸ್ಥಾಪಿಸಿ ವಿವಿಧ ಬಗೆಯ ರಕ್ತ ಮಾದರಿಗಳನ್ನು, ಪ್ಲಾಸ್ಮಾ, ಪ್ಲೇಟ್‌ಲೆಟ್‌ಗಳನ್ನು ಶೇಖರಿಸಿ, ಕೆಡದಂತೆ ರಕ್ಷಿಸಿಡುವ ಸಂಗತಿ ಎಲ್ಲರಿಗೂ ತಿಳಿದಿರುವಂತಹುದೇ.

ಹಿಂದೆಲ್ಲ ರಕ್ತದಾನ ಮಹಾಪಾಪ ಎಂದೇ ಹೇಳಲಾಗುತ್ತಿತ್ತು. ಅಗತ್ಯವಿರುವವರಿಗೆ ರಕ್ತ ನೀಡಿದರೆ ರಕ್ತ ನೀಡಿದವರ ಆರೋಗ್ಯ ಕ್ಷೀಣಿಸಿ, ಅವರ ಆಯುಸ್ಸು ಕುಸಿಯುತ್ತದೆಂಬ ಮೂಢನಂಬಿಕೆಯನ್ನು ಯಾರೋ ಬಿತ್ತಿ ಬಿಟ್ಟಿದ್ದರು. ಹಾಗಾಗಿ ರಕ್ತದಾನ ಮಾಡಲು ಯಾರೂ ಅಷ್ಟಾಗಿ ಮುಂದೆ ಬರುತ್ತಿರಲಿಲ್ಲ. ರಕ್ತದಾನ ಮಾಡಬಲ್ಲ ಆರೋಗ್ಯವಂತ ವ್ಯಕ್ತಿಗಳು ಕೂಡ ಏನಾದರೊಂದು ನೆಪ ಹೇಳಿ ಜಾರಿಕೊಳ್ಳುತ್ತಿದ್ದರು. ಮೂಢನಂಬಿಕೆಯ 'ಪ್ರಭಾವ' ಅಷ್ಟರಮಟ್ಟಿಗೆ ಹರಡಿತ್ತು.

ಆದರೆ ವಿಜ್ಞಾನ ಬೆಳೆದಂತೆಲ್ಲ, ಜನರು ಹೆಚ್ಚು ವಿದ್ಯಾವಂತರಾದಂತೆಲ್ಲ, ವೈದ್ಯ ಪದವೀಧರರ ಸಂಖ್ಯೆ ಹೆಚ್ಚಿದಂತೆಲ್ಲ ಜನಮಾನಸದಲ್ಲಿ ಹುದುಗಿದ್ದ ಈ ಮೌಢ್ಯವನ್ನು ಕ್ರಮೇಣ ಕಳಚಿಹಾಕಲು ಸಾಧ್ಯವಾಯಿತು. ಸಣ್ಣ ಸಣ್ಣ ಊರುಗಳಲ್ಲೂ ಆರೋಗ್ಯವಂತ ಯುವಕ-ಯುವತಿಯರು ರಕ್ತದಾನ ಮಾಡಲು ಧೈರ್ಯವಾಗಿ ಮುಂದೆ ಬರತೊಡಗಿದರು. ಸೆಲೆಬ್ರಿಟಿಗಳ ಸ್ಮರಣಾರ್ಥ ರಕ್ತದಾನ ಮಾಡುವ ಹೊಸಬಗೆಯ 'ಸಂಸ್ಕೃತಿ'ಗೂ ಚಾಲನೆ ದೊರಕಿತು. ಹೀಗಾಗಿ ಈಗ ರಕ್ತದಾನವೆಂದರೆ ಹೆದರಿಕೊಳ್ಳುವವರ ಸಂಖ್ಯೆ ಮೊದಲಿಗಿಂತ ಸಾಕಷ್ಟು ಕಡಿಮೆಯಾಗಿದೆ. ಅಲ್ಲೊಬ್ಬರು ಇಲ್ಲೊಬ್ಬರು ಈಗಲೂ ಹೆದರಿ ಹಿಂದೆ ಸರಿಯುವವರೂ ಇಲ್ಲದೇ ಇಲ್ಲ.

ನಮ್ಮ ದೇಶದಲ್ಲಿ ಅತಿ ಹೆಚ್ಚು ರಕ್ತದಾನ ಮಾಡಿದವರ ಸಾಲಿನಲ್ಲಿ ಮೊದಲ ಸ್ಥಾನದಲ್ಲಿ ಶೋಭಿಸುವವರು ಹರಿಯಾಣದ ಡಾ. ಸುರೇಶ್ ಕುಮಾರ್ ಸೈನಿ. ಪ್ಲೇಟ್‌ಲೆಟ್ ಸೇರಿದಂತೆ ಅವರು ಒಟ್ಟು 223 ಬಾರಿ ರಕ್ತದಾನ ಮಾಡಿ ಸಾವಿರಾರು ರೋಗಿಗಳನ್ನು ಬದುಕಿಸಿದ್ದಾರೆ. ಚಂಡೀಗಢದ ರಾಜನ್ ರೈಖಿ ಕೂಡ 222ಕ್ಕೂ ಅಧಿಕ ಬಾರಿ ರಕ್ತದಾನ ಮಾಡಿರುವವರ ಕ್ಲಬ್‌ಗೆ ಸೇರಿದ್ದಾರೆ. ಇನ್ನು ಬೆಂಗಳೂರಿನ ಮಧುರ ಅಶೋಕ್ ಕುಮಾರು 117 ಬಾರಿ, ಮಹಾರಾಷ್ಟ್ರದ ವಿಶ್ವಜಿತ್ ಕಾಶೀದ್ 185 ಬಾರಿ ರಕ್ತದಾನ ಮಾಡಿದ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಕರ್ನಾಟಕದ ಆದಿಕೇಶವ ಪ್ರಕಾಶ ಶಾಸ್ತ್ರಿ ಓ-ನೆಗೆಟಿವ್ (o negative) ಎಂಬ ಅಪರೂಪದ ಗುಂಪಿನ ರಕ್ತವನ್ನು ಹಲವಾರು ಬಾರಿ ದಾನ ಮಾಡಿ ಪ್ರಶಂಸೆಗೆ ಭಾಜನರಾಗಿದ್ದಾರೆ.

ದೆಹಲಿಯ ರೋಟರಿ ಬ್ಲಡ್ ಬ್ಯಾಂಕ್ (ಆರ್‌ಬಿಬಿ) ಅತಿ ದೊಡ್ಡ ರಕ್ತ ಸಂಗ್ರಹ ಕೇಂದ್ರವಾಗಿದ್ದು, ಸುರಕ್ಷತೆ ಹಾಗೂ ವಿಶ್ವಾಸಾರ್ಹತೆಗೆ ಪಾತ್ರವಾಗಿದೆ. ರೆಡ್‌ಕ್ರಾಸ್ ಸೊಸೈಟಿ (ಐಆರ್‌ಸಿಎಸ್) ದೇಶಾದ್ಯಂತ ಒಂದು ನೂರಕ್ಕೂ ಹೆಚ್ಚು ರಕ್ತ ಕೇಂದ್ರಗಳೊಂದಿಗೆ ಸುಸಜ್ಜಿತ ಬ್ಲಡ್‌ಬ್ಯಾಕ್ ಎನಿಸಿಕೊಂಡಿದೆ. ಬೆಂಗಳೂರಿನ ರೋಟರಿ-ಟಿಟಿಕೆ ಬ್ಲಡ್ ಬ್ಯಾಂಕ್ (ಬಿಎಂಎಸ್‌ಟಿ) ಇದುವರೆಗೆ ವಾರ್ಷಿಕವಾಗಿ 90 ಸಹಸ್ರ ರೋಗಿಗಳಿಗೆ ರಕ್ತ ನೀಡಿದ ಹೆಗ್ಗಳಿಕೆ ಹೊಂದಿದೆ. ಬೆಂಗಳೂರಿನ ಗವಿಪುರಂನಲ್ಲಿರುವ ಸಂಘ ಪರಿವಾರದ ರಾಷ್ಟ್ರೋತ್ಥಾನ ರಕ್ತನಿಧಿ (ರಾಷ್ಟ್ರೋತ್ಥಾನ ಬ್ಲಡ್ ಬ್ಯಾಂಕ್) ಕೂಡ ಗುಣಮಟ್ಟದ ವಿಶ್ವಾಸಾರ್ಹ, ಸುರಕ್ಷತೆಯ ರಕ್ತ, ಪ್ಲಾಸ್ಮಾ, ಪ್ಲೇಟ್‌ಲೆಟ್ ಸಂಗ್ರಹದ ಪ್ರಮುಖ ಕೇಂದ್ರವೆನಿಸಿ ಸಾವಿರಾರು ಮಂದಿ ರಕ್ತದ ಅಗತ್ಯವಿರುವ ರೋಗಿಗಳ ಸಂಜೀವಿನಿ ಎಂದು ಖ್ಯಾತವಾಗಿದೆ.

ಆದರೆ ಇವೆಲ್ಲ ಸಂಗತಿಗಳಿಗಿಂತ ಅಚ್ಚರಿ ಹುಟ್ಟಿಸುವ, ಬೆರಗಾಗುವ ಮಹಾನ್ ರಕ್ತದಾನಿಯೊಬ್ಬನಿದ್ದ. ಆತ ಕಳೆದ 2025ರ ಫೆ. 17ರಂದು ಇಹಲೋಕ ತ್ಯಜಿಸಿದ. ಆತ ರಕ್ತದಾನ ಮಾಡಿದ್ದು ನೂರಲ್ಲ, ಇನ್ನೂರಲ್ಲ, ಐನೂರು ಬಾರಿಯೂ ಅಲ್ಲ. ಬರೋಬ್ಬರಿ 1173 ಬಾರಿ ರಕ್ತದಾನ ಮಾಡಿ ಇಡೀ ಜಗತ್ತಿಗೇ ಯಾರೂ ಸದ್ಯಕ್ಕೆ ಮುರಿಯಲಾಗದ ದಾಖಲೆ ಬರೆದಿದ್ದಾನೆ. ಆತ ಇನ್ಯಾರೂ ಅಲ್ಲ, ಆಸ್ಟ್ರೇಲಿಯಾದ ನ್ಯೂಸೌತ್‌ವೇಲ್ಸ್‌ನ ಜೇಮ್ಸ್ ಹ್ಯಾರಿಸನ್ ಎಂಬ ವ್ಯಕ್ತಿ. ಆತ 1173 ಬಾರಿ ರಕ್ತದಾನ ಮಾಡಿದ್ದು ಉತ್ಪ್ರೇಕ್ಷೆಯ ಸಂಗತಿಯಲ್ಲ, ಆದರೆ ವಾಸ್ತವ. ಅದಕ್ಕೆ ಅಧಿಕೃತ ವೈದ್ಯಕೀಯ ದಾಖಲೆಗಳೇ ಇವೆ.

1936ರಲ್ಲಿ ಜನಿಸಿದ ಜೇಮ್ಸ್ ಹ್ಯಾರಿಸನ್‌ಗೆ ವಯಸ್ಸು 14 ಆಗಿದ್ದಾಗ ಜೀವ ಹಿಂಡುವ ರೋಗವೊಂದಕ್ಕೆ ಆಸ್ಪತ್ರೆಗೆ ಸೇರಬೇಕಾಯ್ತು. ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ ಆತನ ಶ್ವಾಸಕೋಶದ ಒಂದು ಭಾಗವನ್ನೇ ತೆಗೆದುಹಾಕಿದ್ದರು. ಅನಸ್ತೇಶಿಯಾದ ಪ್ರಭಾವ ಕಡಿಮೆಯಾಗಿ ಆಸ್ಪತ್ರೆಯ ಹಾಸಿಗೆಯಲ್ಲಿ ಹ್ಯಾರಿಸನ್ ಕಣ್ತೆರೆದು ನೋಡಿದಾಗ ಆತನ ಎದೆಯ ಸುತ್ತ 100 ಹೊಲಿಗೆಗಳನ್ನು ಹಾಕಲಾಗಿತ್ತು. ಆತನ ಜೀವವುಳಿಸಲು 13 ಯೂನಿಟ್ ರಕ್ತದ ಅಗತ್ಯವಿತ್ತು. ಯಾರು ಯಾರೋ ಅಪರಿಚಿತರು (ಹ್ಯಾರಿಸನ್‌ಗೆ ಅವರಾರೆಂದು ಗೊತ್ತೇ ಇರಲಿಲ್ಲ) ಆ ರಕ್ತವನ್ನು ಮಾನವೀಯ ನೆಲೆಯಲ್ಲಿ ಆತನಿಗೆ ದಾನ ಮಾಡಿದ್ದರು. ಅವರೆಲ್ಲ ಹೀಗೆ ರಕ್ತದಾನ ಮಾಡಿದ್ದರಿಂದಲೇ ನೀನು ಈಗ ಜೀವಂತವಾಗಿದ್ದೀಯಾ ಎಂದು ಪಕ್ಕದಲ್ಲಿ ಶುಶ್ರೂಷೆ ಮಾಡುತ್ತಿದ್ದ ಹ್ಯಾರಿಸನ್‌ನ ತಂದೆ ರೆಗ್ ಹೇಳಿದಾಗ, ಹ್ಯಾರಿಸನ್ ಮನದಲ್ಲಿ ನೂರಾರು ಭಾವನೆಗಳು ಹಾದುಹೋದವು. ಆಗಲೇ ಆತ ಒಂದು ನಿರ್ಧಾರಕ್ಕೆ ತಲುಪಿದ್ದ. ನನಗೆ ಪರಿಚಯವಿಲ್ಲದವರು ನನ್ನನ್ನುಳಿಸಲು ರಕ್ತದಾನ ಮಾಡಿದ್ದಾರೆ. ಹಾಗಾಗಿ ನಾನು ಕೂಡ ಜೀವನಪೂರ್ತಿ ಇತರರನ್ನು ಬದುಕಿಸುವುದಕ್ಕಾಗಿ ರಕ್ತದಾನ ಮಾಡುವೆ. ಇದೇ ಹ್ಯಾರಿಸನ್‌ನ ಆ ನಿರ್ಧಾರವಾಗಿತ್ತು.





ಆದರೆ ಆಗಿನ್ನೂ ಆತನಿಗೆ 14 ವರ್ಷದ ಹರೆಯ. ಆಗ ಆತ ರಕ್ತ ನೀಡುವಂತಿರಲಿಲ್ಲ. ನಾಲ್ಕು ವರ್ಷದ ಬಳಿಕ (1954) ರಕ್ತದಾನ ಮಾಡುವುದಕ್ಕೆ ಅರ್ಹತಾ ವಯಸ್ಸು ಪ್ರಾಪ್ತವಾದ ಮೇಲೆ ಹ್ಯಾರಿಸನ್ ರಕ್ತದಾನ ಕೇಂದ್ರಕ್ಕೆ ತಾನೊಬ್ಬನೇ ನಡೆದುಹೋದ. ಕುರ್ಚಿಯೊಂದರಲ್ಲಿ ಕುಳಿತ. ಮೇಲೆ ತಿರುಗುತ್ತಿರುವ ಫ್ಯಾನ್, ಇನ್ನೊಂದೆಡೆ ಸೂಜಿ ಚುಚ್ಚಲು ಸಿದ್ಧಳಾಗಿ ನಿಂತ ನರ್ಸ್. ಒಮ್ಮೆ ಆತನಿಗೆ ಗಾಬರಿಯಾಯಿತು. ಗಾಬರಿಯಾಗಿದ್ದು ರಕ್ತದಾನಕ್ಕೆ ಹೆದರಿ ಅಲ್ಲ. ಆತ ಹೆದರಿದ್ದು ನರ್ಸ್ ಹಿಡಿದಿದ್ದ ಆ ಸೂಜಿಗೆ (ಸಿರಿಂಜ್)! ಚಿಕ್ಕಂದಿನಿಂದ ಆತನಿಗೆ ಸೂಜಿಯೆಂದರೆ ಇನ್ನಿಲ್ಲದ ಭಯ. ಎದೆಯ ಶಸ್ತ್ರಚಿಕಿತ್ಸೆಗೊಳಗಾದಾಗ ನೂರು ಕಡೆ ಸೂಜಿ ಚುಚ್ಚಿ ಹೊಲಿಗೆ ಹಾಕಿದ್ದರು. ನೂರು ಹೊಲಿಗೆ ನೋಡಿಯೇ ಗಾಬರಿಯಾದ ದೃಶ್ಯ ಇನ್ನೂ ಮಾಸಿರಲಿಲ್ಲ. ಆದರೆ ತಾನು ದೃಢನಿರ್ಧಾರ ಮಾಡಿರುವೆ. ಆದರಿಂದ ಹಿಂದೆ ಸರಿಯುವುದು ತರವಲ್ಲ ಎಂದು ಮನಸ್ಸು ಹೇಳಿತು. ಸೂಜಿ ಹಾಗೂ ನರ್ಸ್ ಕಡೆ ನೋಡದೆ, ಮೇಲೆ ತಿರುಗುತ್ತಿರುವ ಫ್ಯಾನ್ ನೋಡುತ್ತ 'ನನ್ನ ರಕ್ತ ತೆಗೆಯಬಹುದು' ಎಂದ. ಸೂಜಿಗೆ ಕುರುಡಾಗಿ, ನೋವಿಗೆ ಕಿವುಡಾಗಿ ಕುಳಿತ.

ಈ ಪ್ರಕ್ರಿಯೆ ಮುಂದೆ ಎರಡು ವಾರಕ್ಕೊಮ್ಮೆ ನಡೆಯುತ್ತಾ ಹೋಯಿತು. ಪ್ರತಿ ಬಾರಿ ರಕ್ತ ತೆಗೆಯುವಾಗಲೂ ಸೂಜಿ ಮತ್ತು ನರ್ಸ್ ಕಡೆಗೆ ದೃಷ್ಟಿ ಹಾಯಿಸುತ್ತಲೇ ಇರಲಿಲ್ಲ. ಹೀಗೇ ಕೆಲವು ವಾರಗಳ ಬಳಿಕ, ಸಂಗ್ರಹವಾದ ಆತನ ರಕ್ತವನ್ನು ವಿಶ್ಲೇಷಿಸಿದಾಗ ಅದರಲ್ಲಿ ವಿಸ್ಮಯಕಾರಿ, ಅಪರೂಪದ ಪ್ರತಿನಿರೋಧಕ (antibody) ಇರುವುದು ವೈದ್ಯರಿಗೆ ಅಚ್ಚರಿ ಹುಟ್ಟಿಸಿತು. ಆಗ ಆಸ್ಟ್ರೇಲಿಯಾದ್ಯಂತ ಹರಡಿದ್ದ RH ಎಂಬ ಭಯಾನಕ ಕಾಯಿಲೆಯನ್ನು ನಿಯಂತ್ರಿಸುವ ತಾಕತ್ತು ಆ ಪ್ರತಿನಿರೋಧಕಕ್ಕೆ ಇತ್ತು.

ವೈದ್ಯರ ಈ ವಿನೂತನ ಸಂಶೋಧನೆಗೆ ಮೊದಲು, ಆಸ್ಟ್ರೇಲಿಯಾದ ಸಾವಿರಾರು ಶಿಶುಗಳು RH ಖಾಯಿಲೆಯಿಂದ ಜನಿಸಿದ ಕೆಲವೇ ಕ್ಷಣದಲ್ಲಿ ಸಾವನ್ನಪ್ಪುತ್ತಿದ್ದವು. ಕೆಲವು ಮಕ್ಕಳಿಗೆ ಮಿದುಳಿನ ಆಘಾತ, ಕೆಲವು ಮಕ್ಕಳು ಅವಧಿಗೆ ಮುನ್ನವೇ ಜನಿಸಿ ಮರಣ- ಇದಕ್ಕೆಲ್ಲ ಜೇಮ್ಸ್ ಹ್ಯಾರಿಸನ್‌ನ ರಕ್ತವು ಸಂಜೀವಿನಿ ರೂಪದ ಪರಿಹಾರವಾಗಿತ್ತು. ಹ್ಯಾರಿಸನ್ ರಕ್ತದಾನಕ್ಕಾಗಿ ಮೀಸಲಿಡುತ್ತಿದ್ದ ಅವಧಿ 20 ನಿಮಿಷ. ಆದರೆ ಬದಲು 90 ನಿಮಿಷ ನೀಡಬಹುದೇ ಎಂದು ವೈದ್ಯರು ಕೇಳಿದಾಗ ಹ್ಯಾರಿಸನ್ ಕೂಡಲೇ ಒಪ್ಪಿದ. ಆ ಅವಧಿಯಲ್ಲಿ ಆತನ ರಕ್ತದಲ್ಲಿರುವ ಪ್ಲಾಸ್ಮಾವನ್ನು ವೈದ್ಯರು ಸಂಗ್ರಹಿಸುತ್ತಿದ್ದರು. ಅದನ್ನು ಮರಣಶಯ್ಯೆಯಲ್ಲಿರುವ ಶಿಶುಗಳಿಗೆ ನೀಡಿದಾಗ ಅದ್ಭುತ ಪವಾಡವೆಂಬಂತೆ ಅವೆಲ್ಲ ಬದುಕುಳಿದವು. ಈ ಸಂಗತಿ ಗೊತ್ತಾದಾಗ ಹ್ಯಾರಿಸನ್‌ಗೆ ಆದ ಆನಂದ ಅಷ್ಟಿಷ್ಟಲ್ಲ. ತಪ್ಪದೇ ತನಗೆ 81 ವರ್ಷ ಆಗುವವರೆಗೂ ರಕ್ತ, ಪ್ಲಾಸ್ಮಾ ದಾನ ನೀಡುತ್ತಲೇ ಹೋದ.

2018ರಲ್ಲಿ ಹ್ಯಾರಿಸನ್‌ಗೆ ಬರೋಬ್ಬರಿ 81 ವರ್ಷ. ಈ ಬಾರಿ ಇಳಿವಯಸ್ಸಿನ ಕಾರಣದಿಂದಾಗಿ ರಕ್ತದಾನ ಮಾಡಲು ಆಸ್ಟ್ರೇಲಿಯಾದ ಕಾನೂನಿನ ಅನುಮತಿ ಬೇಕಿತ್ತು. ಅದನ್ನು ಪಡೆದು ಕೊನೆಯ ಬಾರಿ ಹ್ಯಾರಿಸನ್ ರಕ್ತದಾನಕ್ಕೆ ಮುಂದಾದ. ಆತನ ಸುತ್ತಲೂ, ಹ್ಯಾರಿಸನ್‌ನ ರಕ್ತ ಪಡೆದು ಬದುಕಿದ್ದ ಮುದ್ದುಮಕ್ಕಳನ್ನು ಎತ್ತಿಕೊಂಡ ನೂರಾರು ತಾಯಂದಿರು. ಅವರೆಲ್ಲರ ಕಣ್ಣಂಚಿನಲ್ಲಿ ಅಶ್ರುಧಾರೆ. ತಮ್ಮ ಮಕ್ಕಳನ್ನು ರಕ್ತ ನೀಡಿ ಬದುಕಿಸಿದ ನಿಜವಾದ 'ಹೀರೋ' ಕೊನೆಯ ಬಾರಿ ರಕ್ತದಾನ ಮಾಡುವುದನ್ನು ನೋಡಲು ಅವರೆಲ್ಲ ಅಲ್ಲಿ ನೆರೆದಿದ್ದರು. ಕಳೆದ 64 ವರ್ಷಗಳಿಂದ ಒಟ್ಟು 1173 ಬಾರಿ ರಕ್ತದಾನ ಮಾಡಿದ್ದ. ಅದರಿಂದಾಗಿ 2.4 ದಶಲಕ್ಷ ಶಿಶುಗಳು ಆಸ್ಟ್ರೇಲಿಯಾದಲ್ಲಿ ಬದುಕುಳಿದಿದ್ದವು.

"ನೀನೊಬ್ಬ ನಿಜವಾದ ಹೀರೋ. ನಮಗೆಲ್ಲ ನೀನೇ ದೇವರು" ಎಂದು ಆ ತಾಯಂದಿರು ಕಣ್ತುಂಬಿ ಹೇಳಿದರೆ, ಹ್ಯಾರಿಸನ್ ಎಲ್ಲೋ ನೋಡುತ್ತ 'ನೋಡಿ, ನಾನು ಒಂದು ಸುರಕ್ಷಿತ ಕೋಣೆಯಲ್ಲಿ ಕುಳಿತು ರಕ್ತದಾನ ಮಾಡುತ್ತೇನೆ. ಅನಂತರ ನರ್ಸ್ ಕುಡಿಯಲು ಕಾಫಿ ಮತ್ತು ತಿನ್ನಲು ಬಿಸ್ಕೆಟ್ ಕೊಡುತ್ತಾರೆ. ಬಳಿಕ ಮೇಲೆದ್ದು ಮನೆಗೆ ಹೋಗುತ್ತೇನೆ. ನನಗ್ಯಾವ ತೊಂದರೆಯೂ ಇಲ್ಲ. ನನ್ನ ಕೊಡುಗೆ ಏನೂ ಇಲ್ಲ'ಎಂದು ತಣ್ಣಗೆ ಹೇಳುತ್ತಾ ಮನೆಯತ್ತ ನಡೆದೇಬಿಟ್ಟಿದ್ದ.

ಆಸ್ಟ್ರೇಲಿಯಾ ಸರ್ಕಾರ ಆತನ ಈ ಮಹಾನ್ ಸೇವೆಯನ್ನು ಪರಿಗಣಿಸಿ ದೇಶದ ಅತ್ಯುನ್ನತ 'ಮೆಡಲ್ ಆಫ್ ದಿ ಆರ್ಡರ್ ಆಫ್ ಆಸ್ಟ್ರೇಲಿಯಾ' ನಾಗರಿಕ ಪ್ರಶಸ್ತಿಯನ್ನು ನೀಡಿತ್ತು. ಹ್ಯಾರಿಸನ್ ತನ್ನ 88ನೇ ವಯಸ್ಸಿನಲ್ಲಿ ನೆಮ್ಮದಿಯಿಂದ ನಿದ್ದೆಮಾಡುತ್ತಿರುವಾಗಲೇ ಕಳೆದ 2025ರ ಫೆ. 17ರಂದು ಈ ಲೋಕಕ್ಕೆ ವಿದಾಯ ಹೇಳಿದ. ಪತ್ನಿ ಬಾರ್ಬರಾ ಲಿಂಡ್‌ಬೆಕ್ 2005ರಲ್ಲೇ ಸಾವಿಗೀಡಾಗಿದ್ದಳು. ಒಬ್ಬಳೇ ಮಗಳು ಟ್ರೇಸಿ ಮೆಲ್ಲೋಶಿಪ್. ತಮಾಷೆಯೆಂದರೆ, ಟ್ರೇಸಿಯ ಪುಟ್ಟ ಮಗು ಬದುಕುಳಿದಿದ್ದು ಕೂಡ ತಾತ ಹ್ಯಾರಿಸನ್‌ನ ರಕ್ತದಾನದಿಂದಲೇ!

ಅತಿ ಶ್ರೀಮಂತರನ್ನು, ಸಿನಿಮಾಗಳಲ್ಲಿ ನಟಿಸುವ ನಾಯಕ ನಾಯಕಿಯರನ್ನು, ಇನ್ಯಾರೋ ತರಕಲಾಂಡಿ ರಾಜಕೀಯ ಮುಖಂಡರನ್ನು ತಮ್ಮ 'ಹೀರೋ'ಗಳೆಂದು ಹಲವರು ಭ್ರಮಿಸಿ ಆರಾಧಿಸುತ್ತಾರೆ. ಹಾಲಿನ ಅಭಿಷೇಕ ಮಾಡುತ್ತಾರೆ. ಆದರೆ ಲಕ್ಷಾಂತರ ಮಕ್ಕಳಿಗೆ ತನ್ನ ರಕ್ತದಾನದ ಮೂಲಕ ಜೀವದಾನ ಮಾಡಿದ ಜೇಮ್ಸ್ ಹ್ಯಾರಿಸನ್ ಮುಂದೆ ಇವರೆಲ್ಲ ಅದೆಂಥ ಹೀರೋಗಳು?

ಹರೆಯದವರ ಸವಾಲುಗಳು

ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಜೀವನವೇ ಸವಾಲುಗಳ ಸರವಳಿ. ಅದಕ್ಕೆ ಪರಿಹಾರ ಏನು ಎಂಬ ಪ್ರಶ್ನೆಗೆ, ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಿ ನಿಭಾಯಿಸಿಕೊಂಡು ಮುನ್ನಡೆಯುವುದೇ ಜೀವನ. ಸವಾಲುಗಳಿಲ್ಲದ ಜೀವನ ನೀರಸವಾಗುತ್ತದೆ. ವ್ಯಕ್ತಿಯು ಜನಿಸಿದಾಗಿನಿಂದ ಅಂತ್ಯದವರೆಗೆ ಸವಾಲುಗಳಿರುತ್ತವೆ. ಜನಿಸಿದ ಮಗು ಮೈಲುಗಲ್ಲುಗಳನ್ನು ಸಾಧಿಸುವುದೂ ಸವಾಲುಗಳೇ. ಜನಿಸಿದ ಮೂರು ತಿಂಗಳಿಗೆ ಕವುಚಿ ಹಾಕಿಕೊಳ್ಳುವುದು ಮಗುವಿಗೆ ಒಂದು ಸವಾಲು. ಹಾಗೆ ಕವುಚಿಕೊಳ್ಳುವಾಗ ಮಗು ಪ್ರಯತ್ನಿಸಲೇಬೇಕು. ಮಗುಚಿಕೊಳ್ಳುವಾಗ ತನ್ನ ದೇಹಕ್ಕೆ ಪೆಟ್ಟಾಗದಿದ್ದ ಹಾಗೆ ಎಚ್ಚರಿಕೆ ವಹಿಸಬೇಕು. ನಿಂತುಕೊಳ್ಳುವ ಮೊದಲು ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಅದಿಲ್ಲದಿದ್ದಲ್ಲಿ ಕೆಳಗೆ ಬಿದ್ದು ಶರೀರಕ್ಕೆ ಗಾಯವಾಗುತ್ತದೆ. ಹೀಗೆ ಬೀಳದಂತೆ, ಎಡವದಂತೆ ನಡೆಯುವುದು, ಮಾತನಾಡಲು ಕಲಿಯುವುದು ಇವೂ ಸವಾಲುಗಳೇ. ಮಗು ಸವಾಲುಗಳನ್ನು ಎದುರಿಸಿ, ಅವುಗಳನ್ನು ನಿಭಾಯಿಸಿಕೊಂಡು ಯಶಸ್ವಿಯಾಗಿ ಮೈಲುಗಲ್ಲುಗಳನ್ನು ದಾಟಿದಾಗ ಮಗುವಿಗೆ ತಾನೇನೋ ಸಾಧನೆ ಮಾಡಿದ್ದೇನೆ ಎಂಬ ವಿಶ್ವಾಸ ಉಂಟಾಗುತ್ತದೆ. ಆತ್ಮವಿಶ್ವಾಸದಿಂದ ಒಂದೊಂದೇ ಮೆಟ್ಟಿಲುಗಳನ್ನು ಏರುತ್ತದೆ. ಇದಕ್ಕೆ ಆವಶ್ಯವಿರುವುದು ಪೋಷಕರ ಪ್ರೀತಿಯ ಮಾತುಗಳು, ಪ್ರೋತ್ಸಾಹ ಮತ್ತು ಸಕಾರಾತ್ಮಕ ಮಾರ್ಗದರ್ಶನ.

ಮೇಲೆ ತಿಳಿಸಿದಂತೆ ಜೀವನವೇ ಸವಾಲುಗಳ ಸರಪಣಿ. ಹರೆಯದವರಲ್ಲಿ ಎದುರಾಗುವ ಸವಾಲುಗಳದ್ದೇ ಒಂದು ವಿಶೇಷ. ಹರೆಯವು ಸಂಕ್ರಮಣ ಕಾಲ. ಅತ್ತ ಬಾಲ್ಯವನ್ನು ತೊರೆದು, ಇತ್ತ ಸ್ವಾತಂತ್ರ್ಯವನ್ನು ಸಾಧಿಸದೇ ಇರುವ ಒಂದು ತ್ರಿಶಂಕು ಸ್ವರ್ಗ. ಹರೆಯದಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ನಿಭಾಯಿಸಿದರೆ, "ತನ್ನತನ"ವನ್ನು ಕಂಡುಕೊಂಡು, ಸಾಧನೆಯತ್ತ ದಾಪುಗಾಲಿಡಬಹುದು. ಸವಾಲುಗಳನ್ನು ಎದುರಿಸಲಾಗದೇ ಆತ್ಮಸ್ಥೈರ್ಯ ಕಳೆದುಕೊಂಡು, ಹರೆಯದ ಮನಸ್ಸು ಗೊಂದಲದ ಗೂಡಾದರೆ ಸಾಧನೆಯಲ್ಲಿ ಹಿನ್ನಡೆಯಾಗುತ್ತದೆ. ಇಂಥವರ ಭವಿಷ್ಯ ಡೋಲಾಯಮಾನವಾಗುತ್ತದೆ. ಇನ್ನೊಂದು ಅಂಶವನ್ನು ಓದುಗರು ಗಮನಿಸಬೇಕು. ಹರೆಯದಲ್ಲಿ ಎದುರಾಗುವ ಸವಾಲುಗಳು ಮತ್ತು ಒತ್ತಡಗಳು ಒಂದೇ ಎಂದು ಹೇಳುವವರಿದ್ದಾರೆ. ಸವಾಲುಗಳು ಹರೆಯದ ಪ್ರತಿಯೊಬ್ಬ ವ್ಯಕ್ತಿಗೂ ಎದುರಾಗುತ್ತವೆ. ಆದರೆ ಒತ್ತಡಗಳು ಕೆಲವರಿಗೆ ಎದುರಾಗದೇ ಇರಬಹುದು. ಹಾಗಾಗಿ ಒತ್ತಡಗಳನ್ನು ಮತ್ತು ಸವಾಲುಗಳು ವಿಭಿನ್ನವಾದವು ಎನ್ನುವುದು ನನ್ನ ಅಭಿಪ್ರಾಯ.

ಹರೆಯದವರ ಸವಾಲುಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದು ವ್ಯಕ್ತಿಯಲ್ಲಿ ಉಂಟಾಗುವ ಸಮಗ್ರ ಬದಲಾವಣೆಗಳಿಗೆ ಸಂಬಂಧಿಸಿದ ವೈಯಕ್ತಿಕ ಸವಾಲುಗಳು. ಎರಡನೆಯದು ಮನೋವಿಕಾಸದಿಂದ ಉಂಟಾಗುವ ಮಾನಸಿಕ ಸವಾಲುಗಳು. ಮೂರನೆಯದು ಸಾಮಾಜಿಕ ಸವಾಲುಗಳು. ನಾಲ್ಕನೆಯದು ಭಾವನಾತ್ಮಕವಾಗಿ ಎದುರಾಗುವ ಸವಾಲುಗಳು. ಉದಾಹರಣೆಗಳ ಮೂಲಕ ಇವುಗಳನ್ನು ತಿಳಿಯೋಣ.

ಹದಿನಾಲ್ಕು ವರ್ಷ ವಯಸ್ಸಿನ ರಾಹುಲ್ ಒಂಭತ್ತನೇ ತರಗತಿಯ ವಿದ್ಯಾರ್ಥಿ. ಶರೀರದಲ್ಲಿ ಎತ್ತರವಾಗಿ ಬೆಳೆದ. ಎಲ್ಲರೂ ಇದೇನೋ ರಾಹುಲ್ ಇಷ್ಟು ಎತ್ತರವಾಗಿದೀಯ. ನಿನ್ನನ್ನು ನೋಡಿದರೆ ದೊಡ್ಡವರ ಹಾಗೆ ಕಾಣುತ್ತೀಯಾ? ಎಂದು ಅವನ ಸಂಬಂಧಿಕರು ಹೇಳಿದ್ದನ್ನು ಕೇಳಿದ ರಾಹುಲ್ ಮನಸ್ಸಿಗೆ ಇರುಸುಮುರುಸಾಯಿತು. ಅದೇ ವಯಸ್ಸಿನ ತನ್ನ ಸಹಪಾಠಿ ಸುನಿಲ್ ಸ್ವಲ್ಪ ಕುಳ್ಳನಾಗಿದ್ದ. ಅರೇ ಇತರರಿಗಾಗದ್ದು ತನಗೇಕೆ ಹೀಗಾಗಿದೆ? ಇದು ಅಸಹಜವೇ ಎಂಬ ಗೊಂದಲ ರಾಹುಲ್‌ನಿಗೆ ಉಂಟಾಯಿತು. ಇದಕ್ಕೆ ಪರಿಹಾರವೇನು? ಎಂದು ಯೋಚಿಸಿದ. ಏನಾದರಾಗಲೀ ತಾಯಿಯನ್ನು ಕೇಳುವುದು ಒಳ್ಳೆಯದು ಎಂದು ಭಾವಿಸಿ, ತಾಯಿಯ ಹತ್ತಿರ ಹೋದ. ತಾಯಿಯನ್ನು ಕೇಳಿದಾಗ, ತಾಯಿ "ಮಗನೇ ಈಗ ನೀನು ಹದಿನಾಲ್ಕು ವರ್ಷದವನು. ದೇಹದಲ್ಲಿ ಹಲವು ಬದಲಾವಣೆಗಳಾಗುತ್ತವೆ. ಅವುಗಳಲ್ಲಿ ಇದೂ ಒಂದು. ಕೆಲವರಿಗೆ ಈ ಬದಲಾವಣೆಗಳು ಒಂದೆರಡು ವರ್ಷ ಬೇಗ ಆಗಬಹುದು. ಕೆಲವರಿಗೆ ತಡವಾಗಿ ಆಗುತ್ತದೆ. ಅದಕ್ಕಾಗಿ ಆತಂಕಪಡಬೇಡ" ಎಂದು ಹೇಳಿದರು. ರಾಹುಲ್‌ಗೆ ಸಮಾಧಾನವಾಯಿತು. ಹೀಗೆ ಸಂದೇಹಗಳಿಂದ ಹರೆಯದ ಮನಸ್ಸಿಗೆ ಆತಂಕ ಉಂಟಾದಾಗ ಆತಂಕ ಪಡದೇ ಪೋಷಕರ ಹತ್ತಿರ ಹಂಚಿಕೊಂಡರೆ ಅದನ್ನು ಎದುರಿಸುವುದು ಸುಲಭಸಾಧ್ಯ.

ಹದಿನಾರು ವರ್ಷದ ಶೈಲಾ ಮೊದಲನೇ ಪಿಯುಸಿ ವಿದ್ಯಾರ್ಥಿನಿ. ಮನೋವಿಕಾಸದಿಂದ ಶೈಲಾಳಿಗೆ ಏನೇನೋ ಯೋಚನೆಗಳು ಉಂಟಾಗಲು ಪ್ರಾರಂಭವಾಯಿತು. ಅವುಗಳಲ್ಲಿ ಮುಖ್ಯವಾದದ್ದು ತಾನು ಏನನ್ನು ಓದಬೇಕು? ತಾನು ಯಾರಂತಾಗಬೇಕು? ಯಾವ ವೃತ್ತಿಯನ್ನು ಆರಿಸಿಕೊಳ್ಳಬೇಕು? ಸಮಾಜದಲ್ಲಿ ತನ್ನ ಸ್ಥಾನ ಎಲ್ಲಿ? ತನಗೆ ಗೌರವವೆಲ್ಲಿ ದೊರಕುತ್ತದೆ? ಎಂಬ "ತನ್ನತನ" ವನ್ನು ಕಾಣುವ ಹಂಬಲ. ಇದಕ್ಕೆ 'ತನ್ನತನ' ಎನ್ನುತ್ತಾರೆ. 'ತನ್ನತನ'ವನ್ನು ಬೆಳೆಸಿಕೊಳ್ಳುವುದು ಒಂದು ಸವಾಲು. ಇದರಿಂದ ಶೈಲಾಳ ಮನಸ್ಸು ತನಗೆ ಯಾಕೆ ಹೀಗೆ ಈ ವಿಧದ ಯೋಚನೆಗಳು ಬರುತ್ತಿವೆ. ಅದಕ್ಕೆ ಪರಿಹಾರ ಏನು ಎಂದು ಕೇಳಲು, ತಾಯಿಯ ಹತ್ತಿರ ಹೋದಳು. ತಾಯಿಯು ಮಗಳ ಸಂದೇಹಗಳನ್ನು ಆಲಿಸಿ, ಶೈಲಾಳ ತಂದೆಯನ್ನು ಕರೆದರು. ಅಪ್ಪ ಅಮ್ಮ ಇಬ್ಬರೂ ಕೂತು ಶೈಲಾಳಿಗೆ ಯಾಕೆ ಹೀಗಾಗುತ್ತಿದೆ, ಅದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ, ಅದರಿಂದ ಏನು ಪ್ರಯೋಜನ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿದರು. ಶೈಲಾಗೆ ತನ್ನಲ್ಲಿ ಆತ್ಮವಿಶ್ವಾಸ ಉಂಟಾಯಿತು. "ತನ್ನತನ"ವು ಮನಸ್ಸಿನಲ್ಲಿ ಬೇರೂರಿ, ಆತ್ಮವಿಶ್ವಾಸದಿಂದ ಮುನ್ನಡೆಯಲು ಪ್ರಾರಂಭಿಸಿದಳು.

ದೀಪು ಹತ್ತನೇ ತರಗತಿಯಲ್ಲಿ ಪಾಸಾಗಿ ಪಿಯುಸಿಯನ್ನು ಸೇರಿದನು. ಪಿಯುಸಿಯಲ್ಲಿ ಎಲ್ಲವೂ ಹೊಸದು. ಅವುಗಳಲ್ಲಿ ಮುಖ್ಯವಾದದ್ದು ಗೆಳೆಯರೊಂದಿಗಿನ ಸಂಬಂಧ. ಪಿಯುಸಿ ಸೇರಿ ಒಂದು ವಾರದಲ್ಲಿ ಎರಡು ಮೂರು ಜನ ಗೆಳೆಯರಾದರು. ದೀಪುವಿಗೂ ಒಳ್ಳೆಯ ಗೆಳೆಯರು ಸಿಕ್ಕಿದರಲ್ಲಾ ಎಂದು ಸಂತೋಷವಾಯಿತು. ವಾರಗಳು ಕಳೆದ ಹಾಗೆ ಅವರು ತರಗತಿ ತಪ್ಪಿಸಿ ಅಲ್ಲಿ ಇಲ್ಲಿ ಹೋಗುತ್ತಿದ್ದುದನ್ನು ಕಂಡನು. ಅವರನ್ನು ವಿಚಾರಿಸಿದಾಗ, "ಏ ಬಾರೋ ನೀನೂ ಸ್ವಲ್ಪ ದಿನ ಮಜಾ ಮಾಡುವಿಯಂತೆ, ನಂತರ ಓದಿದರಾಯಿತು" ಎಂದು ಹೇಳಿದಾಗ ದೀಪುವಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಆ ಕ್ಷಣವೇ ಅವರನ್ನು ತೊರೆದು ಬೇರೆಯವರ ಸ್ನೇಹ ಮಾಡಿದರೆ ಒಳ್ಳೆಯದು ಎನಿಸಿತು. ಹಾಗೆ ಮಾಡಿದರೆ ಹೊಸಬರು ಹೇಗಿರುತ್ತಾರೆ ಎಂಬುದರ ಗೊಂದಲ ಉಂಟಾಯಿತು. ಮನೆಗೆ ಬಂದು ತಾಯಿಯ ಹತ್ತಿರ ತನ್ನ ಕಷ್ಟ ಹೇಳಿಕೊಂಡನು. ತಾಯಿ ಮಗನನ್ನು ಕೂರಿಸಿಕೊಂಡು ಗಾಬರಿಯಾಗಬೇಡ, ಹೀಗಾಗುವುದು ಸಹಜ. ಸ್ವಲ್ಪ ದಿನ ಯಾರು ಚೆನ್ನಾಗಿ ಓದುತ್ತಾರೆ, ಯಾರು ಕ್ಲಾಸಿಗೆ ಸರಿಯಾಗಿ ಬರುತ್ತಾರೆ ಎಂಬುದನ್ನು ಗಮನಿಸುತ್ತಿರು. ಓದುವುದರಲ್ಲಿ ಯಾರು ಮುಂದೆ? ಯಾರು ಕ್ಲಾಸಿನ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ? ಎಂಬುದನ್ನು ಗಮನಿಸು. ಅಂಥವರ ಗೆಳೆತನ ಒಳ್ಳೆಯದು. ನಿನಗೂ ಅದರಿಂದ ಒಳ್ಳೆಯದಾಗುತ್ತದೆ ಎಂದರು. ದೀಪು ತಾಯಿ ಹೇಳಿದ ಹಾಗೆ ಸಮಾಧಾನದಿಂದ ಸಹಪಾಠಿಗಳ ಚಲನವಲನಗಳನ್ನು ಗಮನಿಸಿ, ಯಾರು ತನ್ನ ಹಾಗೆ ಓದಿ ಮುಂದೆ ಬರಬೇಕೆಂಬ ಗುರಿ ಹೊಂದಿದ್ದಾರೆ. ಯಾರು ಹಲವಾರು ಕೌಶಲಗಳನ್ನು ಹೊಂದಿದ್ದಾರೆ ಎಂಬುದನ್ನು ಗಮನಿಸಿ ಅಂಥವರ ಜೊತೆಗೂಡಿ ಓದಲನುವಾದ. ಮುಂದೆ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿ ಉತ್ತೀರ್ಣನಾದ.

ನರರಸಧೂತಗಳ ಸ್ರವಿಸುವಿಕೆಯಿಂದ ಹರೆಯದಲ್ಲಿ ಭಾವನೆಗಳು ಏರುಪೇರಾಗುತ್ತವೆ. ಒಂದರಲ್ಲಿ ಯಶಸ್ವಿಯಾದರೆ ಆಕಾಶಕ್ಕೇರುತ್ತಾರೆ. ಮತ್ತೊಂದರಲ್ಲಿ ವಿಫಲರಾದರೆ ಪಾತಾಳಕ್ಕಿಳಿದು ಧೈರ್ಯಗುಂದುತ್ತಾರೆ. ಇದು ರಸದೂತಗಳ ಸ್ರವಿಸುವಿಕೆಯಿಂದ ಭಾವನೆಗಳಲ್ಲಿ ಆಗುವ ಏರುಪೇರುಗಳು. ಇದನ್ನು ತಡೆದು, ಸಮಚಿತ್ತವನ್ನು ಸಾಧಿಸಲು ಪ್ರಯತ್ನಿಸಬೇಕಾಗುತ್ತದೆ. ಇದಕ್ಕೆ ಆವಶ್ಯವಿರುವುದು ಹವ್ಯಾಸಗಳು. ಆಟ, ಸಂಗೀತ, ನೃತ್ಯ, ನಾಟಕ, ಒಳ್ಳೆಯ ಪುಸ್ತಕಗಳನ್ನು ಓದುವುದು, ಹೂದೋಟ ಬೆಳೆಸುವುದು, ಮುಂತಾದವು ಹವ್ಯಾಸಗಳೆನಿಸಿಕೊಳ್ಳುತ್ತವೆ. ಹವ್ಯಾಸಗಳು, ಪಠ್ಯೇತರ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಸೋಲು ಗೆಲುವುಗಳ ಅನುಭವವಾಗುತ್ತದೆ. ಸಮಾಜದಲ್ಲಿ ಬೆರೆತಾಗ, ಕೆಲವರು ಹೊಗಳುತ್ತಾರೆ. ಕೆಲವರು ತೆಗಳುತ್ತಾರೆ. ಅವನ್ನು ಸಹಿಸಿಕೊಂಡು ಸಮತೋಲನ ಭಾವನೆಗಳನ್ನು ಸಾಧಿಸಿ ಮುನ್ನಡೆಯಲು ದಾರಿ ಸುಗಮವಾಗುತ್ತದೆ.

ಮೇಲಿನ ಸವಾಲುಗಳೊಂದಿಗೆ ವಿಮರ್ಶಾತ್ಮಕ ಮತ್ತು ಸೃಜನಶೀಲ ಚಿಂತನೆ, ಪರಿಣಾಮಕಾರಿ ಸಂವಹನ, ಮಾನವೀಯ ಸಂಬಂಧ ಮತ್ತು ಭವಿಷ್ಯದಲ್ಲಿ ಎದುರಾಗುವ ಸವಾಲುಗಳನ್ನು ಹರೆಯದಲ್ಲಿ ಕಲಿಯಬೇಕಾಗುತ್ತದೆ. ಜೀವನದ ಮೌಲ್ಯಗಳು, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದು ಒಂದು ಹರೆಯದ ಸವಾಲು.

ಹೀಗೆ ಹರೆಯದ ಸವಾಲುಗಳನ್ನು ಎದುರಿಸಲು ಆತ್ಮಸ್ಥೈರ್ಯ, ಸಕಾರಾತ್ಮಕ ಚಿಂತನೆ, ಪೋಷಕ, ಉಪಾಧ್ಯಾಯರ ಸಕಾರಾತ್ಮಕ ಮಾರ್ಗದರ್ಶನ ಮತ್ತು ಬಾಲ್ಯದಲ್ಲಿ ಪೋಷಕರು ಕಲಿಸಿದ ಜೀವನ ಕೌಶಲಗಳು ಪೂರಕ ಎಂಬುದನ್ನು ನೆನಪಿಡಬೇಕು.

ಈ ಕಾಲ ಹೇಗೆಲ್ಲ ಬದಲಾಗಿದೆಯಲ್ಲ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಕಾಲವನ್ನು ತಡೆಯೋರು ಯಾರೂ ಇಲ್ಲ..' ಎಂಬ ಹಾಡೇ ಇದೆ. ಹೌದು ಸ್ವಾಮಿ, ಕಾಲವನ್ನಷ್ಟೇ ಅಲ್ಲ, ಆ ಕಾಲಕ್ಕೆ ತಕ್ಕಂತೆ ಆಗುವ ಬದಲಾವಣೆಗಳನ್ನೂ ತಡೆಯೋರು ಯಾರೂ ಇಲ್ಲ ಎಂದರೂ ಸರಿಯೇ. 'ಬದಲಾವಣೆ ಜಗದ ನಿಯಮ' ಎಂಬೆಲ್ಲಾ ಮಾತುಗಳಿದ್ದರೂ ಕೆಲವರು ಮಾತ್ರ ಬದಲಾವಣೆಯಲ್ಲಿ ಬದನೇಕಾಯಿ ಅಂಥದ್ದೇನಿದೆ ಎಂದು ನಿರ್ಲಕ್ಷಿಸುತ್ತಾರೆ. ಏನೇ ಹೇಳಿ ಹೀಗೆ ಚೇಂಜ್ ಆಗುವುದೆಂದರೆ ಅಥವಾ ಯಾವುದಾದರೂ ಒಂದು ಬಗೆಯ ಚೇಂಜ್ ಕಾಣಿಸಿಕೊಳ್ಳುವುದೆಂದರೆ ಅದು 'ಚಿಲ್ಲರೆ' ವಿಷಯವಂತೂ ಅಲ್ಲವೇ ಅಲ್ಲ ಎಂದೇ ಹೇಳಬಹುದಾಗಿದೆ. ಆದ್ದರಿಂದ ಅವುಗಳಿಗೆ 'ಚಿಲ್' ಆಗಿ ಹೊಂದಿಕೊಳ್ಳುವವರು ಬಹುತೇಕರು. ನಮಗೆ ಬೇಕೋ ಬೇಡವೋ ಕೆಲವೊಂದು ಸಂಗತಿಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಹೋಗುತ್ತವೆ. ಜನರ ಆಸಕ್ತಿ, ಆಯ್ಕೆ, ನಿಲುವು, ಮನೋಧೋರಣೆ ಹಾಗೂ ಜೀವನಕ್ರಮಗಳ ಮೇಲೆ ಈ ನಿಟ್ಟಿನ ಬದಲಾವಣೆಗಳು ತಮ್ಮದೇ ಆದ ಪರಿಣಾಮವನ್ನು ಉಂಟುಮಾಡಿವೆ ಎಂದು ಹೇಳಬಹುದಾಗಿದೆ. ನಾವೂ ಇಂಥ ಬದಲಾವಣೆಗೆ ಸಾಕ್ಷಿಯೋ, ಮೂಕ ಸಾಕ್ಷಿಯೋ ಆದವರೇ. ಹಾಗಂಥ ಇವುಗಳನ್ನು ಸಕಾರಾತ್ಮಕ ಬದಲಾವಣೆಯೋ, ನಕರಾತ್ಮಕ ಬದಲಾವಣೆಯೋ ಷರಾ ಬರೆಯುವುದು ಕಷ್ಟ. ಸುಮ್ಮನೆ ಒಮ್ಮೆ ಆಲೋಚಿಸಿದರೂ ಇಂಥ ಅಸಂಖ್ಯಾತ ಬದಲಾವಣೆಗಳನ್ನು ಪಟ್ಟಿ ಮಾಡಬಹುದು. ಆ ಪೈಕಿ ನಮ್ಮ ನಿಮ್ಮ ನಿತ್ಯ ಜೀವನಕ್ಕೆ ತೀರಾ ಹತ್ತಿರವೆನಿಸುವ ಕೆಲವು ಬದಲಾವಣೆಗಳನ್ನು ಈ ಮೂಲಕ ಗಮನಿಸೋಣವೇ?

- ಸ್ನಾನ ಎಂದಾಕ್ಷಣ ಮೊದಲಿಗೆ ನೆನಪಿಗೆ ಬರುವುದೇ ಸೋಪ್. ಸಾಬೂನು, ಸ್ನಾನ ಮಾಡುವವರ ಪಾಲಿಗೆ ಒಂಥರಾ ಬೂನ್(ವರ) ಇದ್ದಂತೆಯೇ ಸರಿ. ಹಾಗೆಯೇ ಆಪಾದಮಸ್ತಕ ಸಾಬೂನು ಹಚ್ಚಿಕೊಂಡು ಸ್ನಾನ ಮಾಡಲಾಗುತ್ತಿತ್ತು. ಸ್ನಾನದ ಕೋಣೆಯಲ್ಲಿ ಸಾಬೂನೇ ರಾಜನಂತೆ ಮೆರೆಯುತ್ತಿತ್ತು. ಈಗ ಅಲ್ಲಿ ಶ್ಯಾಂಪೂ, ಫೇಸ್‌ವಾಶ್, ವಿವಿಧ ಬಗೆಯ ಜೆಲ್, ಕಂಡೀಷನರ್ ಹೀಗೆ ಇನ್ನೂ ಏನೇನೋ ತುಂಬಿ ತುಳುಕುತ್ತವೆ. 'ದೇಹವೊಂದೇ ಆದರೆ ಹಚ್ಚುವ ಕ್ರೀಮ್/ಸೋಪ್‌ಗಳು ಹಲವು' ಎಂಬಂತಾಗಿದೆ. ಸ್ನಾನದ ಕೊಠಡಿಯೂ ಕನ್ಫ್ಯೂಸಿಂಗ್ ಜಾಗವಾಗಿ ಮಾರ್ಪಾಡಾಗುವಲ್ಲಿ ಇದರ ಪಾತ್ರವೂ ಇದೆ. ಯಾವ ಕ್ರೀಮ್ ಬಳಸಲಿ, ಯಾವ ಸೋಪ್ ಹಚ್ಚಲಿ ಎಂದು ಹೊಸಬರಿಗೆ ಗೊಂದಲವಾಗದೇ ಇರಲಿಕ್ಕಿಲ್ಲ.
- ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆದುಕೊಳ್ಳುವುದು ಕಾಲಾನುಕಾಲದಿಂದಲೂ ಪ್ರಚಲಿತದಲ್ಲಿರುವ ಒಂದು ಸಂಸ್ಕಾರಯುತ ಕ್ರಿಯೆ. ಅದೊಂಥರ ಅವರೆಡೆಗೆ ಭಯ, ಭಕ್ತಿ ಹಾಗೂ ಗೌರವವನ್ನು ತೋರಿಸುವ ಒಂದು ಕ್ರಮವಾಗಿತ್ತು. ಆದರೆ ಈಗ ಕಾಲ ಬದಲಾಗಿದೆ ಹಾಗಾಗಿ ಕಾಲಿಗೆ ಬೀಳುವುದೂ ಕಡಿಮೆಯಾಗಿದೆ. ಅಂದರೆ ಕಾಲಿಗೆ ಬೀಳುವ ಬದಲಿಗೆ ಹಿರಿಯರ ಜೊತೆಗೊಂದು ಸೆಲ್ಫಿ ತೆಗೆಸಿಕೊಂಡರೆ ಅದುವೇ ಈ ಕಾಲದವರು ಆಶೀರ್ವಾದ ಪಡೆದುಕೊಂಡಂತೆ! ಸೆಲ್ಫಿಗೆ ನಕ್ಕರೆ ಆಶೀರ್ವಾದ ಟ್ರಾನ್ಸಫರ್ ಆದಂತೆಯೇ ಸರಿ.
- ಪರೀಕ್ಷಾ ಕೊಠಡಿಯಿಂದ ಹೊರಬರುವಾಗ ಬಹುತೇಕರ ಮನಸ್ಸಿನಲ್ಲಿ ಒಂದು ಬಗೆಯ ಚಡಪಡಿಕೆ ಇರುತ್ತದೆ. ಪ್ರಶ್ನೆಗಳು, ಬರೆದ ಉತ್ತರ, ಸರಿ ತಪ್ಪಿನ ಕುತೂಹಲ, ಸಿಗಬಹುದಾದ ಅಂಕಗಳು ಇನ್ನಿತ್ಯಾದಿ ಅಂಶಗಳು ಮನಸ್ಸಿನಲ್ಲಿ ಓಡುತ್ತಿರುವುದೇ ಆ ಕಸಿವಿಸಿಗೆ ಕಾರಣ. ಆದ್ದರಿಂದ ಪರೀಕ್ಷಾ ಹಾಲ್‌ನಿಂದ ಹೊರಬಂದವರೇ ಪ್ರಶ್ನೆಪತ್ರಿಕೆ, ಪುಸ್ತಕ, ನೋಟ್ಸ್ ಇತ್ಯಾದಿಗಳನ್ನು ತೆಗೆದು ತಾಳೆ ಹಾಕುವ ಧಾವಂತದಲ್ಲಿರುತ್ತಾರೆ. ಈಗಲೂ ಪರೀಕ್ಷಾ ಕೊಠಡಿಗಳಿಂದ ಹೊರ ಬರುವವರ ಎದೆಬಡಿತ ಹೆಚ್ಚಿರುತ್ತದೆ. ಅವರೂ ಬ್ಯಾಗ್‌ಗೆ ಕೈಹಾಕಿ ತಡಕಾಡಿ ಮೊಬೈಲ್‌ನ್ನು ಹೊರತೆಗದು ಒಂದೇ ಸಮನೇ ನೋಡಲಾರಂಭಿಸುತ್ತಾರೆ. ಎಷ್ಟು ಕಾಲ್ ಬಂದಿದೆ, ವಾಟ್ಸಾಪ್‌ಲ್ಲಿ ಯಾರೆಲ್ಲಾ ಮೆಸೇಜ್ ಮಾಡಿದ್ದಾರೆ, ಫೇಸ್‌ಬುಕ್ ನೋಟಿಫಿಕೇಷನ್ ಏನೇನು ಬಂದಿದೆ ಎಂದು ಹುಡುಕಲಾರಂಭಿಸುತ್ತಾರೆ.
- ಎಲ್ಲೇ ಹೋದರೂ ವೀಕ್ಷಣೆಯ ಅಥವಾ ನೋಡುವಿಕೆಯ ನೇತೃತ್ವವನ್ನು ಸಾಮಾನ್ಯವಾಗಿ ನಮ್ಮ ನೇತ್ರಗಳು ವಹಿಸಿಕೊಳ್ಳುತ್ತಿದ್ದವು. ಎಲ್ಲವೂ ಕಣ್ಣ ಕನ್ನಡಿಯಲ್ಲಿ ಪ್ರತಿಫಲನಗೊಂಡು, ಆ ಪೈಕಿ ಕೆಲವಷ್ಟೇ ಕ್ಯಾಮೆರಾ ಕಣ್ಣಲ್ಲಿ ಪ್ರತಿಬಿಂಬಿತವಾಗುತ್ತಿದ್ದವು. ಬದಲಾದ ಸನ್ನಿವೇಶದಲ್ಲಿ ಪ್ರತಿಯೊಂದು ಕ್ಯಾಮೆರಾದಲ್ಲಿ ಸೆರೆಯಾಗಿ ಎಲ್ಲೋ ಕೆಲವೊಂದಷ್ಟನ್ನು ಮಾತ್ರ ಕಣ್ಣಿನಿಂದ ವೀಕ್ಷಿಸುವಂತಾಗಿದೆ. ಏನೋ ಅದ್ಭುತವಾದುದನ್ನು ನೋಡುವಾಗ, ತಮ್ಮ ತಮ್ಮ ಚಿಕ್ಕ ಮಕ್ಕಳನ್ನು ಎತ್ತಿಹಿಡಿದು ತೋರಿಸುವ ಬದಲಿಗೆ ತಮ್ಮಲ್ಲಿರುವ ಮೊಬೈಲ್ ಕ್ಯಾಮೆರಾಗಳನ್ನು ಎತ್ತಿಹಿಡಿದು ರೆಕಾರ್ಡ್ ಮಾಡಿಕೊಳ್ಳುವಲ್ಲಿ ವ್ಯಸ್ತರಾಗುವವರೇ ಹೆಚ್ಚು. ವಿಪರ್ಯಾಸ ಏನೆಂದರೆ ಹಾಗೆ ರೆಕಾರ್ಡ್ ಆಗಿ ಸಂಗ್ರಹವಾದ ಬಹುಪಾಲು ಫೋಟೊ, ವೀಡಿಯೋಗಳನ್ನು ಹೆಚ್ಚಿನವರು ತಿರುಗಾ ನೋಡುವುದೇ ಇಲ್ಲ.
- ಸಣ್ಣ ಸಣ್ಣ ಗುಂಪುಗಳಲ್ಲಿ ಹರಟೆ ಹೊಡೆಯುವ ಅಭ್ಯಾಸ ಯಾವಾಗಿನಿಂದಲೂ ಇರುವಂಥದ್ದು. ಚಹಾದಂಗಡಿಯ ಮುಂದೆ, ಅರಳಿ ಕಟ್ಟೆಯ ಮೇಲೆ, ಇಂಥ ಗುಂಪುಗಳು ಸಾಮಾನ್ಯವಾಗಿ ಕಂಡುಬರುತ್ತವೆ ಈಗಲೂ ಹಾಗೆಯೇ ಗುಂಪುಗಳೇನೋ ಇವೆ. ಆದರೆ ಅವುಗಳ ಸ್ವರೂಪ ಮಾತ್ರ ಬದಲಾಗಿದೆ. ಆ ಬಗೆಯ ಗುಂಪುಗಳಿಗಿಂತಲೂ ಫೇಸ್‌ಬುಕ್, ವಾಟ್ಸಾಪ್‌ನ ಇ-ಗುಂಪುಗಳು ಅಂದರೆ ಗ್ರೂಪ್‌ಗಳೇ ಕಂಡುಬರುತ್ತವೆ. ಅಲ್ಲೂ ಅದೇ ವೈಖರಿಯ ಚರ್ಚೆಗಳು ನಡೆಯುತ್ತವೆ. ಈ ಗುಂಪು(ಗ್ರೂಪ್)ಗಳ ಪ್ರಭಾವ ಎಷ್ಟರ ಮಟ್ಟಿಗೆ ಹೆಚ್ಚಿದೆಯೆಂದರೆ ಎಲ್ಲರೂ ಒಂದಿಲ್ಲೊಂದು ಸಂದರ್ಭದಲ್ಲಿ 'ಗುಂಪಿನಲ್ಲಿ(ಗ್ರೂಪ್‌ನಲ್ಲಿ) ಗೋವಿಂದ ಆಗಿಯೇ ಇರುತ್ತಾರೆ. ಊರಿಗೆ ಬಂದವರು ಈ ಬಗೆ ಬಗೆಯ ಗ್ರೂಪ್‌ಗಳಿಗೆ ಬರದೇ ಇರಲಾರರು.
- ಮನೆಗೆ ಬಂದ ಅತಿಥಿಗಳನ್ನು ಚಹಾ, ತಿಂಡಿ, ಪಾನೀಯ ನೀಡಿ ಉಪಚರಿಸುವ ಅತಿಥಿ ಸತ್ಕಾರ ಭಾವ ನಮ್ಮ ನೆತ್ತರಲ್ಲೇ ಇದೆ ಅಂತಾರೆ. ಅದೊಂಥರ ಬಂದವರನ್ನು ವಿಚಾರಿಸಿಕೊಳ್ಳುವ ರೀತಿಯೇ ಆಗಿದೆ. ಈಗಲೂ ವಿಚಾರಿಸಿಕೊಳ್ಳುವ ಕ್ರಮ ಇದೆ. ಆದರೆ ಈ ದಿನಗಳಲ್ಲಿ ಮೇಲೆ ತಿಳಿಸಿದವುಗಳ ಜೊತೆಗೆ ಅವರ ಮೊಬೈಲ್‌ಗೆ ಸೂಕ್ತ ಚಾರ್ಜರ್ ನೀಡುವುದು, ಚಾರ್ಜ್ ಮಾಡಿಕೊಳ್ಳಲು ಪಾಯಿಂಟ್ ಎಲ್ಲಿದೆ ಎಂದು ತೋರಿಸುವುದೂ ಸೇರಿದೆ. ಮನುಷ್ಯರು ರಿಚಾರ್ಜ್ ಆಗುವುದಕ್ಕಿಂತಲೂ ಮೊಬೈಲ್ ರಿಚಾರ್ಜ್ ಆಗುವುದೇ ಈಗಿನವರ ಆದ್ಯತೆಯಾಗಿದೆಯೆಂದರೆ ಅತಿಶಯವೇನಲ್ಲ.
- ಮನೆ ಹುಡುಕೋದು ತುಂಬಾ ಕಷ್ಟದ ಕೆಲ. ಹಾಗಾಗಿ ಸೂಕ್ತವಾದ ಮನೆಯನ್ನು ಆರಿಸಿಕೊಳ್ಳಲು ಮನೆಯ ಅಂದ-ಚೆಂದ, ಗಾಳಿ-ಬೆಳಕು, ರೂಮ್‌ಗಳ ಸಂಖ್ಯೆ, ನೀರಿನ ಲಭ್ಯತೆ ಇತ್ಯಾದಿಗಳನ್ನು ಪರಿಗಣಿಸಲಾಗುತ್ತಿತ್ತು. ಈಗಲೂ ಅದನ್ನೆಲ್ಲಾ ನೋಡುತ್ತಾರೆ. ಅವುಗಳ ಜೊತೆಗೆ ನೆಟ್‌ವರ್ಕ್ ಲಭ್ಯತೆಯ ಬಗ್ಗೆ ಮೊದಲು ತಿಳಿದುಕೊಳ್ಳುತ್ತಾರೆ. ಯಾವ ನೆಟ್‌ವರ್ಕ್ ಸಿಕ್ಕೀತು, ಎಷ್ಟು ವೇಗ ಇತ್ಯಾದಿಗಳನ್ನೂ ಪರಿಶೀಲಿಸಲಾಗುತ್ತದೆ. ನಗರಗಳಲ್ಲಿ ಈ ಸಾಧ್ಯತೆ ಸ್ವಲ್ಪ ಕಡಿಮೆಯಾದರೂ ಹಳ್ಳಿಗಳಲ್ಲಂತೂ ಇದು ಬಲುಮುಖ್ಯ! ನೆಟ್‌ವರ್ಕ್ ಇರುವ ಜಾಗದ ನೆಟ್‌ವರ್ತ್ ಎಲ್ಲಾ ರೀತಿಯಲ್ಲೂ ಹೆಚ್ಚೇ.
- ಜನರ ವರ್ತನೆ, ಮೂಡ್, ಗುಣಾವಗುಣಗಳ ಬಗ್ಗೆ ತಿಳಿದುಕೊಳ್ಳಲು ಅಕ್ಕಪಕ್ಕದವರು, ಸ್ನೇಹಿತರು, ಬಂಧುಗಳಲ್ಲಿ ವಿಚಾರಿಸಬೇಕಿತ್ತು. ಇಂದಿನ ಕಾಲಕ್ಕೆ ಅದೇನೂ ಅನಿವಾರ್ಯವಲ್ಲ. ಬೇರೆ ಆಯ್ಕೆಯಾಗಿ ಅವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿಕೊಳ್ಳುವ ಸ್ಟೇಟಸ್, ಪೋಸ್ಟ್, ಶೇರ್ ಇತ್ಯಾದಿಗಳ ಆಧಾರದಲ್ಲಿ ಒಂದು ಮಟ್ಟಿಗೆ ಎಲ್ಲವನ್ನೂ ಊಹಿಸಲು ಸಾಧ್ಯವಿದೆ. ಹಾಗೆಯೇ ಹಿಂದಿನ ಕಾಲದಂತೆ ಅವರ ರೂಮು, ಪೆಟ್ಟಿಗೆ, ಬ್ಯಾಗುಗಳನ್ನು ಹುಡುಕುವ ಬದಲಿಗೆ ಈ ಖಾತೆಗಳಲ್ಲಿ ಸ್ವಲ್ಪ ಜಾಲಾಡಿದರೆ ಎಲ್ಲ ಮಾಹಿತಿಯೂ ಅನಾಯಾಸವಾಗಿ ದೊರಕುತ್ತದೆ. ಸೋಷಿಯಲ್ ಮೀಡಿಯಾ ಅಕೌಂಟ್ ಕೇವಲ ಅಕೌಂಟ್ ಅಲ್ಲ, ಅದು ಬದುಕಿನ ಎಲ್ಲಾ ಲೆಕ್ಕಚಾರಗಳನ್ನೂ ಹೀಗೆ ತನ್ನೊಳಗೆ ಅಡಗಿಸಿಕೊಂಡಿರುವ ಮೂಲಕ ಬದುಕಿನ ಅಕೌಂಟ್ ಆಗಿ ಬದಲಾಗಿದೆ.
- ಅಪ್ಪ - ಅಮ್ಮ ಕೆಲಸ ಮಾಡುವುದು, ಅವರ ಮಕ್ಕಳು ಸಣ್ಣ ಪುಟ್ಟ ಸಹಾಯ ಮಾಡುವುದು ಒಂದು ಚೆಂದನೆಯ ಆಪ್ತ ಪ್ರಕ್ರಿಯೆ. ಅದರಿಂದ ಅವರಿಗೆ ಕೆಲಸದ ಅನುಭವ, ಹಿಡಿತ ದೊರಕುತ್ತದೆ ಹಾಗೂ ತಂದೆ ತಾಯಿಯರ ಶ್ರಮವೂ ಅರಿವಾಗುತ್ತದೆ. ಈಗಲಾದರೆ ಹಾಗಲ್ಲ, ಜೊತೆಯಲ್ಲಿ ಕೆಲಸ ಮಾಡುವ ಬದಲಿಗೆ ಅದನ್ನು ವೀಡಿಯೋ ರೆಕಾರ್ಡ್ ಮಾಡುತ್ತಾ ಎಲ್ಲರಿಗೂ ಅಲ್ಲಿ ಆಗುವ ಕೆಲಸದ ಕಾಮೆಂಟ್ರಿ ಹೇಳಿ, ಕೆಲಸ ಮಾಡುತ್ತಿರುವ ತಂದೆ ತಾಯಂದಿರಿಂದಲೂ ಹಲೋ ಹೇಳಿಸಿ ಅದನ್ನೆಲ್ಲಾ ಸಾಮಾಜಿಕ ಜಾಲತಾಣಗಳಿಗೇರಿಸಿ ಲೈಕುಗಳ ಲೆಕ್ಕ ಹಾಕುವುದರಲ್ಲಿ ಮುಳುಗಿಹೋಗುತ್ತಾರೆ! ಅಷ್ಟಕ್ಕೆ ಸೀಮಿತವಾಗಿಲ್ಲ. ಮೊನಿಟೈಸೇಷನ್ ಆದರೆ, ಅಲ್ಲೂ ದುಡಿಮೆಯ ಅವಕಾಶ ಇರುವುದರಿಂದ ಅದಕ್ಕೂ ಹೆತ್ತವರು ಬೆಂಬಲ ನೀಡುವುದನ್ನು ಕಾಣಬಹುದು.

ಓವರ್‌ಡೋಸ್: ಏನೇ ಬದಲಾದರೂ ಗೋಡೆ ಮೇಲೆ ಉಗುಳುವುದು ಮಾತ್ರ ಬದಲಾಗಲೇ ಇಲ್ಲ. ಆಗೆಲ್ಲಾ ಸಿಕ್ಕ ಸಿಕ್ಕ ಕಟ್ಟಡದ ಗೋಡೆಗಳ ಮೇಲೆ ಉಗುಳುತ್ತಿದ್ದರು ಆದರೆ ಈಗ ಅದಕ್ಕಿಂತಲೂ ಹೆಚ್ಚಾಗಿ ಕಂಡ ಕಂಡ ಫೇಸ್‌ಬುಕ್ ಗೋಡೆ(ವಾಲ್) ಮೇಲೆ ಉಗುಳುತ್ತಾರೆ.

ಕಿರುಸುದ್ದಿ

ಕುಂಟಲ್ಪಾಡಿ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸುವಂತೆ ಒತ್ತಾಯ

ಕಾರ್ಕಳ: ಕಾರ್ಕಳ ಪುರಸಭೆಯ ಕುಂಟಲ್ಪಾಡಿ ಪ್ರದೇಶದಲ್ಲಿ ಏಳು ದಿನಗಳಿಂದ ಜನರಿಗೆ ನೀರು ಇಲ್ಲದೆ ಸಮಸ್ಯೆಯಾಗಿದ್ದು ಸ್ಥಳೀಯರು ಮಾನ್ಯ ಶಾಸಕರಾದ ವಿ. ಸುನೀಲ್ ಕುಮಾರ್ ಅವರ ಕಚೇರಿಗೆ ತೆರಳಿ ನೀರಿನ ಸಮಸ್ಯೆಯನ್ನು ಹೇಳಿಕೊಂಡಾಗ ತಕ್ಷಣವೇ ಪುರಸಭೆಯ ಮುಖ್ಯ ಅಧಿಕಾರಿಗಳಿಗೆ ಫೋನಾಯಿಸಿ ಆ ಪ್ರದೇಶಕ್ಕೆ ಕೂಡಲೇ ನೀರು ನೀಡುವಂತೆ ಸ್ಪಂದಿಸಬೇಕು ಎಂದು ಮಾಜಿ ಪುರಸಭಾ ಸದಸ್ಯರಾದ ಸುನೀಲ್ ಕೋಟ್ಯಾನ್, ಪ್ರಕಾಶ್ ರಾವ್ ರವರ ನೇತೃತ್ವದಲ್ಲಿ ಸ್ಥಳೀಯರು ಸೇರಿ ಪುರಸಭೆಯ ಮುಖ್ಯ ಅಧಿಕಾರಿಗಳಿಗೆ ಮನವಿಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ರಾಜೇಶ್ ಕೋಟ್ಯಾನ್, ಅಮರ್ ಶೆಟ್ಟಿಗಾರ್, ಶೇಖರ್, ಕಾರ್ತಿಕ್, ಶಾಂತ ಪೂಜಾರ್ತಿ, ವಿನೋದ್ ದೇವಾಡಿಗ, ಬೇಬಿ ಪೂಜಾರ್ತಿ, ನಾಗೇಶ್ ರಾವ್ ಮೊದಲಾದವರು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಗೆ ಕೊಡುಗೆ ಹಸ್ತಾಂತರ ಕಾರ್ಯಕ್ರಮ

ಹೆಬ್ರಿ: ಇಲ್ಲಿನ ಚಾರ ವಂಡಾರಬೆಟ್ಟು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ದಾನಿಯು ಕೊಡುಗೆಯಾಗಿ ನೀಡಿದ ಸಮವಸ್ತ್ರದ ಉಡುಪನ್ನು ಶುಕ್ರವಾರ ಶಾಲೆಯಲ್ಲಿ ಹಸ್ತಾಂತರಿಸಲಾಯಿತು. ಉದ್ಯಮಿ ವಾದಿರಾಜ ಶೆಟ್ಟಿಯವರ ಅರವತ್ತನೇ ವರ್ಷದ ಹುಟ್ಟುಹಬ್ಬದ ಸವಿ ನೆನಪಿಗಾಗಿ ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡಲಾಗಿದೆ. ಶಾಲಾ ಎಸ್‌ಡಿಎಂಸಿ ಹಾಗೂ ಸಭೆಯ ಅಧ್ಯಕ್ಷ ಪ್ರತಿಮಾಗೆ ವಾದಿರಾಜ ಶೆಟ್ಟಿ ಉಡುಪುಗಳನ್ನು ಹಸ್ತಾಂತರಿಸಿದರು. ನಂತರ ಮಾತನಾಡಿದ ಅವರು, ನಾನು ಕಲಿತ ಈ ಶಾಲೆಯು ಈ ಹಿಂದೆ ವಿದ್ಯಾರ್ಥಿಗಳಿಲ್ಲದೆ ಮುಚ್ಚುವ ಸಂದರ್ಭ ಬಂದಾಗ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕೊಡುಗೆಯನ್ನು ನೀಡುತ್ತಾ ಬಂದೆ. ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡು ಸಂತೋಷವಾಯಿತು ಎಂದರು. ಮಾಜಿ ಎಸ್‌ಡಿಎಂಸಿ ಅಧ್ಯಕ್ಷೆ ಗೀತಾ ನಾಯ್ಕ್ ಉಪಸ್ಥಿತರಿದ್ದರು. ಶಾಲಾ ಹಳೆ ವಿದ್ಯಾರ್ಥಿಗಳ ಅಧ್ಯಕ್ಷ ನಾಗೇಂದ್ರ, ಮಂದಾರ ಶೆಟ್ಟಿ, ಶಾಲಾ ಮುಖ್ಯ ಶಿಕ್ಷಕ ಸತೀಶ್ಚಂದ್ರ ಬಾಬು ಸ್ವಾಗತಿಸಿದರು. ಅತಿಥಿ ಶಿಕ್ಷಕಿ ಸ್ವಾತಿ ನಿರೂಪಿಸಿ, ಚಂದ್ರಿಕಾ ವಂದಿಸಿದರು. ಅತಿಥಿ ಶಿಕ್ಷಕಿ ರಾಧಿಕಾ, ವೈಷ್ಣವಿ ಸಹಕರಿಸಿದರು.

ಮೊಬೈಲ್ ಬ್ಯಾಟರಿ ಸ್ಫೋಟ: ಕಾಲಿಗೆ ಗಾಯ

ಸುಬ್ರಹ್ಮಣ್ಯ: ಕಲ್ಮಕಾರಿನ ವ್ಯಕ್ತಿಯೊಬ್ಬರ ವಿವೋ ಮೊಬೈಲ್ ಬ್ಯಾಟರಿ ಒಡೆದು ಗಾಯಗೊಂಡ ಘಟನೆ ಭಾನುವಾರ ನಡೆದಿದೆ. ವರ್ಷದ ಹಿಂದೆ ಖರೀದಿಸಿದ್ದ ಮೊಬೈಲ್‌ನ್ನು ತನ್ನ ಪ್ಯಾಂಟ್‌ನ ಕಿಸೆಯೊಳಗೆ ಹಾಕಿಕೊಂಡಿದ್ದರು. ಮೊಬೈಲ್ ಒಮ್ಮೆಲೆ ಒಡೆದು ಮೊಬೈಲ್ ಕರಟಿದೆ. ಮೊಬೈಲ್‌ನ ಬ್ಯಾಟರಿಯ ಭಾಗ ಸಂಪೂರ್ಣ ಕಪ್ಪಾಗಿದ್ದು ಹೊಗೆ ಬಂದಿದೆ. ಶಬ್ದವೂ ಬಂದಿದೆ. ಕಾಲಿಗೂ ಗಾಯವಾವಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಭಾಸ್ಕರ ಶೆಟ್ಟಿ, ನಿಸರ್ಗಗುತ್ತು, ನೀರೆ, ವಯಾ ಬೈಲೂರು, ಕಾರ್ಕಳ (ತಾ).
2. ಲಲಿತಾ ಮತ್ತು ಆನಂದ ಪೂಜಾರಿ, ಸರ್ವೆದೋಲ, ಕಾಣಿಯೂರು ರಸ್ತೆ, ಪುತ್ತೂರು (ತಾ).
3. ಸತ್ಯವಾನ್ ಆಳ್ವ, ಶೆಡ್ಡೆಗುಡ್ಡೆ ಮನೆ, ಮೂಡುಶೆಡ್ಡೆ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
4. ಬಾಳ ದಿ। ಗಜೇಂದ್ರ ಶೆಟ್ರ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಶೇಖರ ಶೆಟ್ಟಿ ಮತ್ತು ಸಹೋದರರು, 'ಕಲ್ಪ ವೃಕ್ಷ', ಪೆರ್ಮುದೆ, ಸೋಮನಾಥ ಧಾಮ, ಪೆರ್ಮುದೆ ವಯಾ ಬಜಪೆ.
6. ಏತಮೊಗರು ಕಂದಾವರ ಹತ್ತು ಸಮಸ್ತರು.
7. ಪ್ರದ್ಯುಮ್ನ ರಾವ್, ಶಿಬರೂರು, ಹೆರಿಟೇಜ್ ವಸತಿ ಸಮುಚ್ಚಯ, ಕುದುಮಲಚ್ಚಿಲ್, ಗುತ್ತಕಾಡು ರಸ್ತೆ, ಕಿನ್ನಿಗೋಳಿ.

ಶ್ರೀ ಧರ್ಮಸ್ಥಳ ಮೇಳ
ತೀರ್ಥಹಳ್ಳಿ ಸಂಕದಹೊಳೆಯಲ್ಲಿ
ಶ್ರೀ ಶಿವರಾಮ ಶೆಟ್ಟಿ ಮತ್ತು ಮನೆಯವರು
ಕೊಂಡ್ಲುಕೊಪ್ಪ, ಸಂಕದಹೊಳೆ

ಶ್ರೀ ಸಾಲಿಗ್ರಾಮ ಮೇಳ
ಸಾಲಿಗ್ರಾಮ ದೇವಸ್ಥಾನದ ಬಳಿ ಬಯಲಾಟ
ರಾಜಾ ಯಯಾತಿ- ಕನಕಾಂಗಿ ಕಲ್ಯಾಣ

ಶ್ರೀ ಪೆರ್ಡೂರು ಮೇಳ
ನಾಳೆ: ಬಂಕಿಕೊಡ್ಲದಲ್ಲಿ- ಪ್ರಳಯ ಪಂಚಾಗ್ನಿ

ಶ್ರೀ ಹನುಮಗಿರಿ ಮೇಳ
ಬೆಂಗಳೂರಿನಲ್ಲಿ

ಶ್ರೀ ಪಾವಂಜೆ ಮೇಳ
ಗಂಗೊಳ್ಳಿಯ ಮ್ಯಾಂಗನೀಸ್ ರಸ್ತೆಯಲ್ಲಿ
ಛಾಯಾನಂದನ



ಇತ್ತೀಚೆಗೆ ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಳದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಜಯ ಸಾಧಿಸಿದ ಕಾರ್ಕಡ ತಾರಾನಾಥ ಹೊಳ್ಳರನ್ನು ಕಲ್ಕೂರ ಪ್ರತಿಷ್ಠಾನದ ಅಧ್ಯಕ್ಷ ಎಸ್. ಪ್ರದೀಪ ಕುಮಾರ ನೇತೃತ್ವದಲ್ಲಿ ಮಂಗಳೂರಿನ ಶ್ರೀ ಶರವು ಮಹಾಗಣಪತಿ ದೇವಳದಲ್ಲಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ರಾಘವೇಂದ್ರ ಶಾಸ್ತ್ರಿ, ಮಲ್ಲಿಕಾ ಹೊಳ್ಳ, ಜನಾರ್ದನ ಹಂದೆ, ಡಾ. ಪ್ರಭಾಕರ ಜೋಷಿ, ನಿತ್ಯಾನಂದ ಕಾರಂತ, ಚಂದ್ರಶೇಖರ ಮಯ್ಯ, ಶರವು ಗಣೇಶ್ ಉಪಸ್ಥಿತರಿದ್ದರು.

ನಿವೇದಿತಾ ಶಿಶು ಮಂದಿರದ 39ನೇ ವಾರ್ಷಿಕೋತ್ಸವ
ಶಿಶುಮಂದಿರದಲ್ಲಿ ಸಂಸ್ಕಾರದ ಶಿಕ್ಷಣ

ಕುಂದಾಪುರ: ಮಕ್ಕಳು ಬೆಳೆಯುತ್ತಿದ್ದ ಹಾಗೆ ಭಾವನಾತ್ಮಕ ಸಂಬಂಧಗಳಿಂದ ದೂರವಾಗುತ್ತಾ ಹೋಗುತ್ತಾರೆ. ಶಾಲೆಗಳಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಅನೇಕ ಶಾಲೆಗಳು ಬಹಳಷ್ಟು ಪ್ರಚಾರ ಮಾಡುತ್ತಿದ್ದು, ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರಯುತ ಶಿಕ್ಷಣವನ್ನು ನೀಡುತ್ತೇವೆ, ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸಿ ಈ ದೇಶಕ್ಕೆ ನೀಡುವ ಶಿಕ್ಷಣ ಶಾಲೆಗಳಲ್ಲಿ ನೀಡುತ್ತೇವೆ ಎಂದು ಯಾವುದೇ ಶಾಲೆಗಳು ಪ್ರಚಾರ ಮಾಡುತ್ತಿಲ್ಲ. ಆದರೆ ಶಿಶು ಮಂದಿರದಲ್ಲಿ ಮಕ್ಕಳಿಗೆ ಬಾಲ್ಯದಲ್ಲಿ ನೀಡಬೇಕಾದ ಸಂಸ್ಕೃತಿ, ಸಂಸ್ಕಾರದ ಶಿಕ್ಷಣವನ್ನು ನೀಡುವ ಮೂಲಕ, ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಬೆಳೆಸುತ್ತಿದೆ ಎಂದು ಉಡುಪಿ 2ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಸಿಬ್ಬಂದಿ ನಾಗರಾಜ ಖಾರ್ವಿ ಹೇಳಿದರು.

ಗಂಗೊಳ್ಳಿಯ ಶ್ರೀ ವೀರ ವಿಠಲ ಸಭಾಭವನದಲ್ಲಿ ಶನಿವಾರ ಜರಗಿದ ಸೇವಾ ಸಂಗಮ ನಿವೇದಿತಾ ಶಿಶು ಮಂದಿರದ 39ನೇ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಂದಾಪುರ ಸೇವಾ ಸಂಗಮ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಸುಬ್ರಹ್ಮಣ್ಯ ಹೊಳ್ಳ ಬೌದ್ಧಿಕ್ ನೀಡಿದರು. ಗಂಗೊಳ್ಳಿ ಸ.ವಿ. ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿ ದೀಪಾ ನಾಗರಾಜ ಖಾರ್ವಿ ಬಹುಮಾನ ವಿತರಿಸಿದರು. ಶಿಶು ಮಂದಿರದ ಸದಸ್ಯರಾದ ಸವಿತಾ ಯು.ದೇವಾಡಿಗ, ಶ್ರೀನಿವಾಸ ಎಂ., ಉಷಾ ಪಿ.ಮಡಿವಾಳ, ವಿಜಯಶ್ರೀ ವಿ.ಆಚಾರ್ಯ, ವಸಂತಿ ಎನ್.ಖಾರ್ವಿ, ಸಹಾಯಕಿ ನಾಗರತ್ನ ಉಪಸ್ಥಿತರಿದ್ದರು.

ಶಿಶು ಮಂದಿರದ ಅಧ್ಯಕ್ಷ ಬಿ.ರಾಘವೇಂದ್ರ ಪೈ ಸ್ವಾಗತಿಸಿದರು. ಸಂಚಾಲಕ ಡಾ.ಕಾಶೀನಾಥ ಪೈ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಮಾತಾಜಿ ಪ್ರೇಮಾ ವರದಿ ವಾಚಿಸಿದರು. ಮಾಜಿ ಅಧ್ಯಕ್ಷ ಬಿ.ಲಕ್ಷ್ಮೀಕಾಂತ ಮಡಿವಾಳ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಅಶ್ವಿತಾ ಜಿ. ಪೈ ವಂದಿಸಿದರು.

» ಶಿಶು ಮಂದಿರದಲ್ಲಿ ಮಕ್ಕಳಿಗೆ ಬಾಲ್ಯದಲ್ಲಿ ನೀಡಬೇಕಾದ ಸಂಸ್ಕೃತಿ, ಸಂಸ್ಕಾರದ ಶಿಕ್ಷಣವನ್ನು ನೀಡುವ ಮೂಲಕ, ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಬೆಳೆಸುತ್ತಿದೆ

ಪುರಾತನ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮುಂದಾದ ಊರವರು
ಚಕ್ರಾ ನದಿಯಲ್ಲಿ 'ಆಂಜನೇಯ' ಕೆತ್ತನೆ ಪತ್ತೆ

ಕುಂದಾಪುರ: ಆಜ್ರಿ ಗ್ರಾ.ಪಂ. ವ್ಯಾಪ್ತಿಯ ಬಾಂಡ್ಯದ ಚಕ್ರಾ ನದಿಯ ತಟದಲ್ಲಿರುವ ಪುರಾತನ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಜೀರ್ಣೋದ್ಧಾರ ಸಲುವಾಗಿ ಇತ್ತೀಚೆಗೆ ಆರೂಢ ಚಿಂತನಾ ಪ್ರಶ್ನೆ ಇಡಲಾಗಿತ್ತು. ಈ ವೇಳೆ ಅಲ್ಲಿಯೇ ಸಮೀಪದಲ್ಲಿ ಹರಿಯುವ ಚಕ್ರಾ ನದಿಯಲ್ಲಿ ಆಂಜನೇಯನ ಕೆತ್ತನೆಯಿರುವ ಬಂಡೆಯೊಂದು ಪತ್ತೆಯಾಗಿದ್ದು ಅದರ ಹಿಂದೆ ಹತ್ತಾರು ಕಥೆಗಳಿರುವುದು ಬೆಳಕಿಗೆ ಬಂದಿದೆ.

ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನ ಗೌಡ ಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ್ದು ನೂರಾರು ವರ್ಷಗಳ ಕಾಲ ಪೂಜೆ ನಡೆಯುತ್ತಿತ್ತು. ಈ ನಡುವೆ ಕೆಲವು ವರ್ಷದ ಬಳಿಕ ದೇವಸ್ಥಾನ ಜೀರ್ಣಾವಸ್ಥೆ ತಲುಪಿತು. ನಂಬಿದ ಕುಟುಂಬದವರು ಬೇರೆಡೆ ವಲಸೆ ಹೋಗಿದ್ದರು. ಆದಾಗಿ ಕೆಲವು ವರ್ಷಗಳಿಂದ ಮತ್ತೆ ಪೂಜೆಗಳು ನಡೆಯುತ್ತಿದೆ.

ಈಗ ಮತ್ತೆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಊರವರು ಮುಂದಾಗಿದ್ದು ಊರಿನ ಪ್ರಮುಖರಾದ ಬಾಂಡ್ಯ ಸುಭಾಷ್ಚಂದ್ರ ಶೆಟ್ಟಿ ಅವರ ನೇತೃತ್ವದಲ್ಲಿ ಹಾಲಾಡಿಯ ಜೋತಿಷಿ, ಪಂಚಾಂಗಕರ್ತರು ಕಟ್ಟುವಟ್ಟು ವಾಸುದೇವ ಜೋಯಿಸರಿಂದ ಆರೂಢ ಪ್ರಶ್ನೆ ನಡೆಸುವುದಾಗಿ ತೀರ್ಮಾನಿಸಲಾಯಿತು. ಆರೂಢ ಪ್ರಶ್ನೆ ವೇಳೆ ಕೆಲವೊಂದು ಅಚ್ಚರಿಯ ಸಂಗತಿಗಳು ಬೆಳಕಿಗೆ ಬಂದವು. ಶ್ರೀ ವೆಂಕಟರಮಣ ದೇವಸ್ಥಾನದ ಜತೆಗೆ ಇದೇ ದೇಗುಲದ ಪಕ್ಕದಲ್ಲೇ ಸನ್ಯಾಸಿಯೊಬ್ಬರ ಸಮಾಧಿಯಿದೆ. ಅವರೇ ಈ ದೇವರಿಗೆ ಪೂಜೆ ಮಾಡುತ್ತಿದ್ದರು. ಮಾತ್ರವಲ್ಲದೆ, ಆ ಸನ್ಯಾಸಿಯ ಸಮಾಧಿ ಎದುರೇ ಚಕ್ರಾ ನದಿಯಲ್ಲಿಯೇ ಆಂಜನೇಯನ ಕೆತ್ತನೆ ಇರುವ ಬಂಡೆಯೊಂದು ಇರುವ ಬಗ್ಗೆಯೂ ಪ್ರಶ್ನೆಯಲ್ಲಿ ಗೋಚರವಾಗಿದೆ. ಊರವರೆಲ್ಲರು ಹುಡುಕಾಟ ನಡೆಸಿದಾಗ ಈ ಬಂಡೆ ಪತ್ತೆಯಾಗಿದೆ. ಅದಕ್ಕೂ ಈ ಸನ್ಯಾಸಿಯೇ ಪೂಜೆ ಮಾಡುತ್ತಿದ್ದರು ಅನ್ನುವ ವಿಚಾರ ಬೆಳಕಿಗೆ ಬಂದಿದೆ.

ಇನ್ನೊಂದು ಅಚ್ಚರಿಯ ಸಂಗತಿ ಎಂದರೆ ಆಂಜನೇಯ ಬಂಡೆ ಸಿಕ್ಕ ಸುತ್ತಮುತ್ತ ಪ್ರದೇಶಗಳಲ್ಲಿ ಆಂಜನೇಯ ದೇವಸ್ಥಾನವೇ ಇಲ್ಲ. ಬಾಂಡ್ಯ ಗ್ರಾಮದಲ್ಲಿ ಮನೆಗಿಂತ ಹೆಚ್ಚು ದೇವರು, ದೈವಗಳ ಬೀಡು ಇದೆ. ಇತಿಹಾಸ ನೋಡಿದರೆ ಈ ಪ್ರದೇಶ ಜೈನರ ಆಳ್ವಿಕೆಯಲ್ಲಿತ್ತು. ಹಾಗಾಗಿ ಇಲ್ಲಿ ವಿಭಿನ್ನ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮ ಒಟ್ಟಾಗಿ ಬೆರೆತು ಒಂದು ವಿಶಿಷ್ಟ ಪರಂಪರೆ ನಿರ್ಮಿಸಿದೆ.

ನಿತ್ಯ ದನದ ಅಪ್ರದಕ್ಷಿಣೆ

ಬಾಂಡ್ಯದ ಈ ಶ್ರೀ ಲಕ್ಷ್ಮೀವೆಂಕಟರಮಣ ದೇವಸ್ಥಾನವು ಈಗ ಜೀರ್ಣಾವಸ್ಥೆಯಲ್ಲಿದ್ದರೂ, ಪ್ರಕೃತಿ ಸಹಜ ಸೊಬಗಿನ ನಡುವೆ ಇದ್ದು ದಟ್ಟಕಾನನದ ನಡುವೆ ವಿಶೇಷ ಅನುಭೂತಿಯನ್ನು ನೀಡುವ ಧಾರ್ಮಿಕ, ಶ್ರದ್ಧಾ ಕೇಂದ್ರದಂತಿದೆ. ಪ್ರತಿ ದಿನ ಈ ದೇವಸ್ಥಾನದ ಬಾಗಿಲು ತೆರೆದ ಕೂಡಲೇ, ಎರಡು ಹಸುಗಳು ದೇವರ ಮುಂದೆ ಬರುತ್ತವೆ. ಒಂದು ಹಸು ಶಾಂತವಾಗಿ ದೇವರನ್ನು ನೋಡುತ್ತಾ ನಿಂತರೆ, ಮತ್ತೊಂದು ಹಸು ದೇವಸ್ಥಾನಕ್ಕೆ ಅಪ್ರದಕ್ಷಿಣೆ ಹಾಕುತ್ತದೆಯಂತೆ. ಕೆಲವೊಮ್ಮೆ ಆ ಹಸು ಮೂರೂ ಬಾರಿ ಕೂಡ ಅಪ್ರದಕ್ಷಿಣೆ ಹಾಕುತ್ತಿದೆಯಂತೆ. ಅಪ್ರದಕ್ಷಿಣೆ ಮುಗಿದ ಅನಂತರ, ಹಸುಗಳು ದೇವರ ಮುಂದೆ ನಿಂತೇ ಇರುತ್ತವೆ. ಅರ್ಚಕರು ಪ್ರಸಾದ ಕೊಟ್ಟ ಅನಂತರವೇ ಅಲ್ಲಿಂದ ತೆರಳುತ್ತವೆ. ಇದು ಸುಮಾರು ವರ್ಷಗಳಿಂದ ನಡೆದುಕೊಂಡು ಬಂದಿದೆ ಎನ್ನುವುದಾಗಿ ಸ್ಥಳೀಯರಾದ ಮಂಜುನಾಥ ಕೆಳಬಾಂಡ್ಯ ಹೇಳುತ್ತಾರೆ.



ನದಿಯಲ್ಲಿ ಪತ್ತೆಯಾದ ಬಂಡೆ ಮತ್ತು ದೇಗುಲದ ಪಕ್ಕದಲ್ಲಿರುವ ಸನ್ಯಾಸಿಯ ಸಮಾಧಿ

ಊರವರ ಸಹಕಾರದಿಂದ ದೇಗುಲ ಅಭಿವೃದ್ಧಿ

ದೇವಸ್ಥಾನ ಸಂಪೂರ್ಣ ಜೀರ್ಣಾವಸ್ಥೆ ತಲುಪಿದ್ದು, ಪೂಜೆ ಮಾಡೋದು ಕಷ್ಟಕರ ಎನ್ನುವ ಸಂಗತಿ ಪುರೋಹಿತರು ತಿಳಿಸಿದರು. ಅದಕ್ಕಾಗಿ ಆರೋಢ ಪ್ರಶ್ನೆ ಕೇಳುವ ನಿರ್ಧಾರಕ್ಕೆ ಬರಲಾಯಿತು. ದೇವಸ್ಥಾನ ಜಿಎಸ್‌ಬಿ ಸಮಾಜಕ್ಕೆ ಸೇರಿದ್ದು, ಆಂಜನೇಯ ಬಂಡೆ ಇರುವ, ಸನ್ಯಾಸಿ ಸಮಾಧಿ ಮಾಹಿತಿ ಸಿಕ್ಕಿತು. ಅದರಂತೆ ಹುಡುಕಿದಾಗ ಆಂಜನೇಯ ಬಂಡೆ ಹಾಗೂ ಸನ್ಯಾಸಿ ಸಮಾಧಿ ಚಕ್ರಾ ನದಿ ದಂಡೆಯಲ್ಲಿ ಪತ್ತೆಯಾಗಿದೆ. ಹಾಗೆ ದೇವಸ್ಥಾನದ ಮೂಲದವರು ಅಭಿವೃದ್ಧಿಗೆ ಕೈ ಜೋಡಿಸುವ ಭರವಸೆ ನೀಡಿದ್ದಾರೆ. ದೇವರ ಇಚ್ಛೆಯಂತೆ ಊರವರೆಲ್ಲರ ಸಹಕಾರದಿಂದ ಅಭಿವೃದ್ಧಿಪಡಿಸುವ ಚಿಂತನೆಯಿದೆ

■ ಬಾಂಡ್ಯ ಸುಭಾಷ್ಚಂದ್ರ ಶೆಟ್ಟಿ, ಊರ ಪ್ರಮುಖರು

ವಿಶೇಷ ಆಂಜನೇಯನ ಕೆತ್ತನೆ

ಪ್ರಾಚೀನ ವೆಂಕಟರಮಣ ಮಠ ಆರಂಭದ ಆಗಿದ್ದು ಒಬ್ಬ ಸನ್ಯಾಸಿಯಿಂದ. ಬಂಡೆ ಮೇಲೆ ಕೂತು ಸನ್ಯಾಸಿ ಮಾಡಿದ ತಪಸ್ಸಿನ ಫಲವಾಗಿ ಮೂಡಿ ಬಂದಿದ್ದು ಆಂಜನೇಯನ ಮೂರ್ತಿ. ಪ್ರಶ್ನೆ ಇಟ್ಟಾಗ ಸಮಾಧಿ, ಆಂಜನೇಯನ ಮೂರ್ತಿ ಇರುವುದು ಬೆಳಕಿಗೆ ಬಂತು. ಕುಟೀರವೊಂದರ ಅಡಿಪಾಯ ಕೂಡ ಪತ್ತೆಯಾಗಿದೆ. ಬಂಡೆ ಆಚಿಜನೇಯನಿಂದ ಬಾಂಡ್ಯ ಆಗಿರಬಹುದೇ ಅನ್ನುವ ಪ್ರಶ್ನೆಯೂ ಇದೆ

■ ತಟ್ಟುವಟ್ಟು ವಾಸುದೇವ ಜೋಯಿಸರು, ಹಾಲಾಡಿ ಪಂಚಾಂಗಕರ್ತರು, ಜೋತಿಷಿ.

'ನಮ್ಮವರು' ವಿಪ್ರ ಕೂಟದಿಂದ ಯುಗಾದಿ ಆಚರಣೆ
ಗಾಯನ ಭಗವದ್ಗೀತೆ ಪಾರಾಯಣ



ಮಂಗಳೂರು: ನಮ್ಮವರು ವಿಪ್ರಕೂಟ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಕುಟುಂಬದೊಂದಿಗೆ ಜೊತೆಗೂಡಿ, ಶಿಕಾರಿಪುರ ಕೃಷ್ಣಮೂರ್ತಿ ಮಾರ್ಗದರ್ಶನದಲ್ಲಿ ವಿಷ್ಣುಸಹಸ್ರನಾಮ ಪಠಣದೊಂದಿಗೆ, ಪುಷ್ಪಾರ್ಚನೆ ಸಹಿತ ಯುಗಾದಿಯ ಮಹಾಪೂಜೆಯನ್ನು ಮಂಗಳೂರಿನ ಕರಂಗಲ್ಪಾಡಿಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾಂಗಣದಲ್ಲಿ ಭಾನುವಾರ ಶ್ರದ್ಧಾ, ಭಕ್ತಿ ಪೂರ್ವಕದಿಂದ ಆಚರಿಸಲಾಯಿತು.

ಮಹಾಪೂಜೆಯ ನಂತರ ಶಿಕಾರಿಪುರ ಕೃಷ್ಣಮೂರ್ತಿಯವರು ಪಂಚಾಂಗ ಶ್ರವಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು ಮತ್ತು ಪಂಚಾಂಗ ನೋಡುವ ಮತ್ತು ಓದುವ ಕ್ರಮವನ್ನು ಸವಿವರವಾಗಿ ತಿಳಿಸಿಕೊಟ್ಟರು.

» ಶಿಕಾರಿಪುರ ಕೃಷ್ಣಮೂರ್ತಿಯವರಿಂದ ಪಂಚಾಂಗ ಶ್ರವಣ

» ಶ್ರೀಶ ಸೊಸೈಟಿಯಿಂದ ಪಂಚಾಂಗ ಉಚಿತ ವಿತರಣೆ

ಶ್ರೀಗೌರಿ ಯುಗಾದಿಯ ಸಂದೇಶ ತಿಳಿಸಿದರು. ಸ್ಪಂದನಾ ವೆಂಕಟೇಶ್ ಪ್ರಸಾದ್‌ರಿಂದ ಗಾಯನ ಮತ್ತು ಶ್ರೀಲಕ್ಷ್ಮಿ, ಶ್ರೀಗೌರಿ, ಮತ್ತು ಧಾತ್ರಿ ಮಾಧವರವರಿಂದ ಭಗವದ್ಗೀತೆ ಅಧ್ಯಾಯ 16 ರನ್ನು ಪಠಿಸಲಾಯಿತು.

ಶ್ರೀಶ ಕೋ ಆಪರೇಟಿವ್ ಸೊಸೈಟಿಯವತಿಯಿಂದ ಕುಟುಂಬಕ್ಕೆ ಒಂದರಂತೆ ಪಂಚಾಂಗವನ್ನು ಉಚಿತವಾಗಿ ಸೊಸೈಟಿಯ ಅಧ್ಯಕ್ಷರು ಮತ್ತು ನಮ್ಮವರು ಸಂಘದ ಉಪಾಧ್ಯಕ್ಷರಾದ ಗುರುರಾಜ್ ಎಂ. ಎಸ್. ವಿತರಿಸಿದರು.

ಸಂಘದ ಅಧ್ಯಕ್ಷ ಸಂಜಯ್ ಕಾರಂತ್ ಸ್ವಾಗತಿಸಿ, ಮುಂದೆ ಸಂಘದಿಂದ ನಡೆಸುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮವನ್ನು ಸಂಘದ ಖಜಾಂಚಿಯಾದ ವೆಂಕಟೇಶ್ ಪ್ರಸಾದ್ ನಿರೂಪಿಸಿದರು, ಕಾರ್ಯದರ್ಶಿ ಎಂ ಎಸ್ ಮಾಧವ ಶಿವಮೊಗ್ಗ ವಂದನೆ ಸಲ್ಲಿಸಿದರು.

ಸಂಘದ ಉಪಾಧ್ಯಕ್ಷರಾದ ಸಂಜನಾ ಮೂರ್ತಿ, ಸಹ ಕಾರ್ಯದರ್ಶಿಗಳಾದ ನೇತ್ರಾ ಕುಮಾರ್, ಅನಿಲ್ ಶಾಸ್ತ್ರಿ, ಶ್ರೀಧರ ಹಾಗೂ ಹಿರಿಯ ಸದಸ್ಯರಾದ ಡಾ. ಶ್ರೀನಿವಾಸ್, ಡಾ. ಮುರಳೀಧರ್ ಉಪಸ್ಥಿತರಿದ್ದರು.

ಮೇ 24ರಂದು ಬಪ್ಪನಾಡಿನಲ್ಲಿ 'ಅಪ್ಪೆ ಬೇರ್‌ದ ತುಳುನಾಡ್'
ರಾಷ್ಟ್ರೀಯ ತುಳು ವಿಚಾರಗೋಷ್ಠಿ

ಮುಲ್ಕಿ: ತುಳುನಾಡಿನ ನಾಗರೀಕತೆಯ ವೈಭವವನ್ನು ಪ್ರತಿಬಿಂಬಿಸುವ 'ಅಪ್ಪೆ ಬೇರ್‌ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿಯನ್ನು ಮೇ 24ರಂದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದ ಸಭಾಭವನದಲ್ಲಿ ನಡೆಯಲಿದೆ ಎಂದು ಮುಲ್ಕಿ ತುಳುವ ಮಹಾಸಭೆ ಇಂಟರ್‌ನ್ಯಾಷನಲ್‌ನ ಅಧ್ಯಕ್ಷೆ ಭಾನುಮತಿ ಶೆಟ್ಟಿ ಕಕ್ವಗುತ್ತು ಹೇಳಿದರು.

ಅವರು ಪುನರೂರು ಟೂರಿಸ್ಟ್ ಹೋಮ್ ಸಭಾಂಗಣದಲ್ಲಿ ನಡೆದ ಮುಲ್ಕಿ ತುಳುವ ಮಹಾಸಭೆ ಇಂಟರ್ ನ್ಯಾಷನಲ್ ಸ್ವಾಗತ ಸಮಿತಿ ಸಭೆಯಲ್ಲಿ ಮಾತನಾಡಿ, ಕಾರ್ಯಕ್ರಮವನ್ನು ಮುಲ್ಕಿ ತುಳುವ ಮಹಾಸಭೆ ಇಂಟರ್‌ನ್ಯಾಷನಲ್ ಆಯೋಜಿಸುತ್ತಿದ್ದು, ಮುಲ್ಕಿ ಬಂಟ್ಸ್ ಸಂಘ, ಬಿಲ್ಲವ ಸಂಘ–ಮಹಿಳಾ ಮಂಡಳಿ, ಲಯನ್ಸ್ ಕ್ಲಬ್ ಮುಲ್ಕಿ, ರೋಟರಿ ಇಂಟರ್‌ನ್ಯಾಷನಲ್ ಸಹಯೋಗ ನೀಡುತ್ತಿದ್ದು, ತುಳು ಅಭಿಮಾನಿಗಳು, ಸಂಘಟನೆಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಹಕರಿಸಿ ಯಶಸ್ವಿಗೊಳಿಸಲು ವಿನಂತಿಸಿದರು

ಕಾರ್ಯಕ್ರಮಗಳ ರೂಪರೇಷೆಯ ಬಗ್ಗೆ ತುಳುವರ್ಲ್ಡ್ ಫೌಂಡೇಶನ್, ನಿರ್ದೇಶಕ ಡಾ. ರಾಜೇಶ್ ಆಳ್ವ, ಮಂಗಳೂರಿನ ತುಳುವ ಮಹಾಸಭೆಯ ಪ್ರಧಾನ ಸಂಚಾಲಕ ಅರವಿಂದ ಬೆಳ್ಚಡ ಮತ್ತು ತುಳುವರ್ಲ್ಡ್ ಫೌಂಡೇಶನ್‌ನ ಕಾರ್ಯದರ್ಶಿ ಹರಿಪ್ರಸಾದ್ ರೈ ಜಿ.ಕೆ. ಉಪಸ್ಥಿತರಿದ್ದು, ಕಾರ್ಯಕ್ರಮದ ಸಂಘಟನೆ, ವ್ಯಾಪ್ತಿ ಮತ್ತು ಯಶಸ್ಸಿಗೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನ ನೀಡಿದರು.



ಸಭೆಯಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗಾಗಿ ಸೂಕ್ತ ಸಲಹೆಗಳನ್ನು ನೀಡಿದರು.

ತಾಯಿ ಮೂಲ ಸಂಸ್ಕೃತಿಯ ತುಳುನಾಡಿನ ಆಚಾರ–ವಿಚಾರಗಳನ್ನು ಉಳಿಸಿ ಬೆಳೆಸುವುದು ಇಂದಿನ ಕಾಲಘಟ್ಟದಲ್ಲಿ ಅತ್ಯಂತ ಅನಿವಾರ್ಯವಾಗಿದೆ. ಇಂತಹ ಅದ್ಭುತ ಪೂರ್ವಜರ ಪರಂಪರೆಯನ್ನು ಸಂರಕ್ಷಿಸಿ ಸುಸ್ಥಿತಿಯಲ್ಲಿ ಉಳಿಸುವುದು ನಮ್ಮ ಪ್ರತಿಯೊಬ್ಬರ ಪವಿತ್ರ ಕರ್ತವ್ಯವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪರಸ್ಪರ ನಂಬಿಕೆಗಳು ಕುಂದುತ್ತಿದ್ದು, ದೈವ ನಂಬಿಕೆಯೂ ನಿಧಾನವಾಗಿ ಕಡಿಮೆಯಾಗುತ್ತಿರುವ ಸಂದರ್ಭದಲ್ಲೇ, ಈ ರೀತಿಯ ಸಾಂಸ್ಕೃತಿಕ ಹಾಗೂ ಆತ್ಮೀಯ ಕಾರ್ಯಕ್ರಮಗಳು ಸಮಾಜದಲ್ಲಿ ಹೊಸ ಚೈತನ್ಯವನ್ನು ಮೂಡಿಸಬಲ್ಲವು. 'ಅಪ್ಪೆ ಬೇರ್‌ದ ತುಳುನಾಡ್' ಕಾರ್ಯಕ್ರಮವು ತುಳುನಾಡಿನ ಸಂಸ್ಕೃತಿ, ಪರಂಪರೆ ಮತ್ತು ದೈವ ಭಕ್ತಿಯನ್ನು ಪುನರುಜ್ಜೀವನಗೊಳಿಸುವ ದಿಕ್ಕಿನಲ್ಲಿ ಮಹತ್ವದ ಸಂಚಲನವನ್ನು ಸೃಷ್ಟಿಸಲಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಸಭೆಯಲ್ಲಿ ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಶೆಟ್ಟಿ, ಸರೋಜಿನಿ ಸುವರ್ಣ ಪ್ರಧಾನ ಸಂಚಾಲಕ ಸುನಿಲ್ ಆಳ್ವ,ಪ್ರಧಾನ ಕಾರ್ಯದರ್ಶಿ ಗೀತಾ ಗಣೇಶ್ ಯಾಗಿ, ಕಾರ್ಯದರ್ಶಿ ಅಮೂಲ್ಯ ಕಟೀಲ್, ಖಜಾಂಚಿ ಲತಾ ಶೇಖರ್ ಮತ್ತು ಸದಸ್ಯರಾದ ಪ್ರಶಾಂತ್ ಶೆಟ್ಟಿ, ಶಶಿಕಲಾ ಯದೀಶ್ ಅಮೀನ್, ವಕೀಲ ರವೀಶ್ ಕಾಮತ್, ದಿನೇಶ್ ಕೊಲ್ನಾಡು, ಪಟ್ಲ ಫೌಂಡೇಶನ್ ಸಂಚಾಲಕಿ ಚಂದ್ರಕಲಾ ಉತ್ತಮ್ ಸಿಂಗ್ ಸಭೆಯಲ್ಲಿ ಉಪಸ್ಥಿತರಿದ್ದರು.

ಅರ್ಹ ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ ವಿತರಣೆ

ಕಾರ್ಕಳ: ಭುವನೇಂದ್ರ ಕಾಲೇಜಿನಲ್ಲಿ, ಆಡಳಿತ ಮಂಡಳಿ ಕೊಡಮಾಡುವ ಮೆರಿಟ್ ಹಾಗೂ ಅರ್ಹ ಬಡ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವು ನೆರವೇರಿತು.

ಮುಖ್ಯ ಅತಿಥಿ ಮಾಹೆ ಮಣಿಪಾಲದ ಸಿಇಒ ಡಾ. ಆನಂದ್ ವೇಣುಗೋಪಾಲ್ ಮಾತನಾಡಿ, ನಮ್ಮ ಹಿರಿಯ ತಲೆಮಾರಿನ ವಿದ್ಯಾರ್ಥಿ ವೃಂದ ತಾವು ಕಲಿತ ವಿದ್ಯೆಯ ಸಾರ್ಥಕತೆಗಾಗಿ ಒಮ್ಮನಸ್ಸಿನಿಂದ ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದಾರೆ. ಅರ್ಹ ಹಾಗೂ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಅಂತ ಕೊಡುವ ಅವರ ಪ್ರೀತಿಯ ಹಿಂದೆ ಕಾಲೇಜಿನ ಮೇಲಿಟ್ಟಿರುವ ಅಪಾರ ಕಾಳಜಿಯನ್ನು ಗುರುತಿಸಬಹುದು. ಅವರ ಆಕಾಂಕ್ಷೆಗಳು ಈಡೇರಿ, ಬದುಕಿನಲ್ಲಿ ಸುಭದ್ರವಾಗಿ ನಿಂತು ಈ ಹಣವನ್ನು ಹಂಚುತ್ತಿದ್ದಾರೆ. ಇವೆಲ್ಲವೂ ನಿಮಗೆ ಮಾದರಿ. ನೀವೂ ಸಹ ಇದೇ ರೀತಿ ನಿಮ್ಮ ಬದುಕಿನಲ್ಲೂ ಮುಂದೆ ಬಂದು ನಿಮ್ಮ ನಂತರದ ತಲೆಮಾರಿನ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವಂತೆ ಬೆಳೆಯಬೇಕು. ಕಾಲೇಜು ಕೊಡುವ ಈ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು.

ಮತ್ತೋರ್ವ ಮುಖ್ಯ ಅತಿಥಿ ಸಿಎ ಕೆ. ಕಮಲಾಕ್ಷ ಕಾಮತ್ ಮಾತನಾಡಿ, ವಿದ್ಯೆಗಿಂತ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ. ಅದಕ್ಕಿಂತಲೂ ಮನುಷ್ಯತ್ವವನ್ನು ಹೊಂದಬೇಕಾದುದು ಪ್ರತಿಯೊಬ್ಬ ವಿದ್ಯಾರ್ಥಿಯ ಮನೋಭಾವವಾಗಬೇಕು. ಮಾನವತೆ ಬತ್ತಿ ಹೋದರೆ ಮನುಷ್ಯ ಸೋತಂತೆ. ಪ್ರಾಮಾಣಿಕತೆ ಮತ್ತು ಒಳ್ಳೆಯತನ ನಮ್ಮ ಬದುಕಿನ ಮಂತ್ರವಾಗಬೇಕು. ಬದುಕಿನಲ್ಲಿ ಯಾವತ್ತೂ ಭಯ, ಆತಂಕ, ಕೋಪ, ಇಟ್ಟುಕೊಳ್ಳದೆ ಧನಾತ್ಮಕ ಮನೋಭಾವದಿಂದ ಇರಬೇಕು. ಶಿಕ್ಷಣವು ಶಿಕ್ಷಕರನ್ನು ಪ್ರೀತಿಸುವ, ಪೂಜಿಸುವ, ಆರಾಧಿಸುವ, ಬಾಗುವ ರೀತಿಯಲ್ಲಿರಬೇಕು. ಅಂತಹ ಶಿಕ್ಷಣಕ್ಕೆ ಯಾವಾಗಲೂ ಮಹತ್ವ ಇರುತ್ತದೆ. ಎಲ್ಲ ವಿದ್ಯಾರ್ಥಿಗಳು ಕಾಲೇಜನ್ನು ಪ್ರೀತಿಸುವ ಮೂಲಕ ಸದಾ ನೆನಪಿಟ್ಟುಕೊಳ್ಳಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ, ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಸಿಎ ಶಿವಾನಂದ ಪೈ ಮಾತನಾಡಿ, ವಿದ್ಯಾರ್ಥಿಗಳ ಓದು ಮತ್ತು ಶಿಕ್ಷಣಕ್ಕೆ ಅನುಕೂಲವಾಗುವುದಕ್ಕೆ ತಂತ್ರಜ್ಞಾನವು ಅಗತ್ಯವಾಗಿ ಬೇಕೇ ಬೇಕು. ಅವುಗಳ ಕೊರತೆಯಾಗದಂತೆ ನೋಡಿಕೊಳ್ಳುವುದು ಶಿಕ್ಷಣ ಕೊಡುವ ಸಂಸ್ಥೆಗಳ ಜವಾಬ್ದಾರಿಯಾಗಿದೆ. ಅದನ್ನು ಸಮರ್ಥವಾಗಿ ಕಾಲೇಜು ನಿರ್ವಹಿಸುತ್ತಿದೆ. ಭುವನೇಂದ್ರ ಕಾಲೇಜಿನಲ್ಲಿ ಆಧುನಿಕ ಶಿಕ್ಷಣದಂತೆ ಆಧ್ಯಾತ್ಮಿಕ ಶಿಕ್ಷಣಕ್ಕೂ ಒತ್ತು ನೀಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಮಾನಸಿಕ ಪ್ರಬುದ್ಧತೆಗೆ ಕೊರತೆಯಾಗದಂತೆ ನಮ್ಮ ಸಂಸ್ಥೆ ಸಾಗುತ್ತಾ ಬಂದಿದೆ ಎಂದರು.

» ನೀವೂ ಸಹ ಇದೇ ರೀತಿ ನಿಮ್ಮ ಬದುಕಿನಲ್ಲೂ ಮುಂದೆ ಬಂದು ನಿಮ್ಮ ನಂತರದ ತಲೆಮಾರಿನ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವಂತೆ ಬೆಳೆಯಬೇಕು

» ವಿದ್ಯೆಗಿಂತ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ. ಅದಕ್ಕಿಂತಲೂ ಮನುಷ್ಯತ್ವವನ್ನು ಹೊಂದಬೇಕಾದುದು ಪ್ರತಿಯೊಬ್ಬ ವಿದ್ಯಾರ್ಥಿಯ ಮನೋಭಾವವಾಗಬೇಕು.

ಕಾಲೇಜಿನ ಹಳೆ ವಿದ್ಯಾರ್ಥಿ ಹಾಗೂ ದಾನಿಯಾದ ರಮೇಶ್ ಪ್ರಭು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾಹೆ ಮಣಿಪಾಲದ ಉಪಕುಲಪತಿ ಆಗಿರುವ ಡಾ. ಶರತ್ ಕುಮಾರ್ ರಾವ್ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಡಾ. ಮಂಜುನಾಥ ಎ. ಕೋಟ್ಯಾನ್ ಸ್ವಾಗತಿಸಿ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ರಮೇಶ್ ಎಸ್. ಸಿ. ವಂದಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಡಾ. ಈಶ್ವರ ಭಟ್ ಕಾರ್ಯಕ್ರಮ ನಿರೂಪಿಸಿದರು.

ಬೀಟೆ ಮರ ಅಕ್ರಮ ಸಾಗಾಟ ಪತ್ತೆ: ನಾಲ್ವರು ಪರಾರಿ

ಮಡಿಕೇರಿ: ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 10 ಲಕ್ಷ ರೂ. ಮೌಲ್ಯದ ಬೀಟೆ ನಾಟಾಗಳನ್ನು ಹಾಗೂ ವಾಹನಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ವೀರಾಜಪೇಟೆ ತಾಲೂಕಿನ ಕದನೂರು ಗ್ರಾಮದ ನವೀನ್ ಸೋಮಣ್ಣ ಅವರಿಗೆ ಸೇರಿದ ಕಾಫಿ ತೋಟದಲ್ಲಿ ಅಕ್ರಮವಾಗಿ ಬೀಟೆ ಮರಗಳನ್ನು ಕಡಿದು ಸಾಗಾಟ ಮಾಡುತ್ತಿರುವುದಾಗಿ ದೊರೆತ ಖಚಿತ ಮಾಹಿತಿಯ ಮೇರೆಗೆ ಅರಣ್ಯಾಧಿಕಾರಿಗಳು ದಿಢೀರ್ ದಾಳಿ ನಡೆಸಿದರು. ಈ ವೇಳೆ 7.108 ಘನ ಮೀಟರ್ ಪ್ರಮಾಣದ ಬೀಟೆ ನಾಟಾ ಪತ್ತೆಯಾಗಿದ್ದು, ಅವುಗಳನ್ನು ಸಾಗಾಟ ಮಾಡುತ್ತಿದ್ದ ಲಾರಿ, ಒಂದು ಸ್ಕೂಟಿ ಮತ್ತು ಒಂದು ಬೈಕ್‌ನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತೋಟದ ಮಾಲಕ ನವೀನ್ ಸೋಮಣ್ಣ, ನಾಪೋಕ್ಲುವಿನ ಹನೀಫ್, ಅಬ್ಬಾಸ್ ಹಾಗೂ ಲಾರಿ ಚಾಲಕ ಅವಿನಾಶ್ ಸ್ಥಳದಿಂದ ಪರಾರಿಯಾಗಿದ್ದು, ಆರೋಪಿಗಳ ಪತ್ತೆಗೆ ಅರಣ್ಯ ಇಲಾಖೆ ಬಲೆ ಬೀಸಿದೆ.

ಡಿ.ಎಫ್.ಓ. ಜಗನ್ನಾಥ್ ಅವರ ಮಾರ್ಗದರ್ಶನದಲ್ಲಿ ಆರ್.ಎಫ್.ಓ. ಶಿವರಾಮ್, ಡಿ.ಆರ್.ಎಫ್.ಓ. ರಾಘವ, ಶ್ರೀನಿವಾಸ್, ಲೋಕೇಶ್ ಹಾಗೂ ಅರಣ್ಯ ಇಲಾಖೆಯ ವಾಹನ ಚಾಲಕರಾದ ಅಶೋಕ್, ನಂದೀಶ್ ಮತ್ತು ಸಿಬ್ಬಂದಿಗಳಾದ ಹರೀಶ್, ಮಹೇಶ್, ಸುರೇಶ್, ಮುರುಘ, ಅನಿಲ್, ಮೊಣ್ಣಪ್ಪ, ಹರ್ಷಿತ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸಲ್ಲಿಕೆಯಾದ ಪ್ರಕರಣಗಳು 90 ದಿನಗಳಲ್ಲಿ ವಿಲೇವಾರಿ: ನ್ಯಾ.ಟಿ.ಜಿ. ಶಿವಶಂಕರೇಗೌಡ

ಗ್ರಾಹಕರ ಹಿತರಕ್ಷಣೆಗೆ ಆಯೋಗ ಹಲವು ಕ್ರಮ

ಮಡಿಕೇರಿ: ಗ್ರಾಹಕರು ಮೋಸ, ವಂಚನೆಗೆ ಒಳಗಾಗುವುದು ತಪ್ಪಿಸುವಲ್ಲಿ ರಾಜ್ಯಾದ್ಯಂತ ಗ್ರಾಹಕರ ಕಾಯ್ದೆಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಲ್ಲಿಕೆಯಾಗುವ ಪ್ರಕರಣಗಳನ್ನು 90 ದಿನಗಳಲ್ಲಿ ವಿಲೇವಾರಿ ಮಾಡಲು ಆಯೋಗ ಶ್ರಮಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ನ್ಯಾಯ ವಾದಿಗಳ ಸಂಘದ ಸಂಯುಕ್ತಾ ಶ್ರಯದಲ್ಲಿ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ನವೀಕರಣ ಕಟ್ಟಡವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಗ್ರಾಹಕರಾಗಿದ್ದು, ವಂಚನೆಗೆ ಅಥವಾ ಮೋಸಕ್ಕೆ ತುತ್ತಾದರೆ, ಪರಿಹಾರ ಒದಗಿಸುವಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಕ್ರಮವಹಿಸಲಿದೆ ಎಂದು ಅವರು ಹೇಳಿದರು.

ಗ್ರಾಹಕರಿಗೆ ಸರಿಯಾದ ಸೇವೆ ಒದಗಿಸಬೇಕೆಂಬುದು ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಕಚೇರಿಗೆ ಬೇಕಾದ ಎಲ್ಲಾ ರೀತಿಯ ಮೂಲ ಸೌಲಭ್ಯವನ್ನು ಕಲ್ಪಿಸಲು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮುಂದಾಗಿದೆ ಎಂದು ಟಿ.ಜಿ.ಶಿವಶಂಕರೇಗೌಡ ಅವರು ವಿವರಿಸಿದರು.



ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಲ್ಲಿಕೆಯಾಗುವ ಪ್ರಕರಣಗಳನ್ನು 90 ದಿನಗಳಲ್ಲಿ ವಿಲೇವಾರಿ ಮಾಡಲು ಆಯೋಗ ಶ್ರಮಿಸುತ್ತಿದೆ. ಗ್ರಾಹಕರ ವ್ಯಾಜ್ಯಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ತೀರ್ಪು ನೀಡಲು ಆಯೋಗ ಕ್ರಮವಹಿಸಿದೆ ಎಂದು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರು ನುಡಿದರು.

ವಕೀಲರಿಗೆ ಮಾಹಿತಿ: ಗ್ರಾಹಕರ ಹಿತರಕ್ಷಣಾ ಕಾಯ್ದೆ ಬಗ್ಗೆ ವಕೀಲರಿಗೆ ಮಾಹಿತಿ ನೀಡಿ ರಾಜ್ಯಾದ್ಯಾಂತ ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಗ್ರಾಹಕರ ಆಯೋಗ ಮತ್ತು ನ್ಯಾಯಾಂಗ ಸಮನ್ವಯತೆಯಿಂದ ಕೆಲಸ ಮಾಡಲಾಗುತ್ತದೆ. ಆ ನಿಟ್ಟಿನಲ್ಲಿ ಎಲ್ಲಾ ಹಂತದ ನ್ಯಾಯಾಲಯಗಳ ಹಾಗೂ ವಕೀಲರ ಸಂಘದ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ಸರಕಾರಕ್ಕೆ ಪ್ರಸ್ತಾವನೆ

ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ 18 ಕೋಟಿ ಇದ್ದು, ಇದರಲ್ಲಿ 5 ಕೋಟಿ ರೂ.ವನ್ನು ವಿವಿಧ ಅಭಿವೃದ್ಧಿ ಕಾಮಗಾರಿ ಸೇರಿದಂತೆ ಜಾಗೃತಿ ಅಭಿಯಾನಕ್ಕೆ ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ಗ್ರಾಹಕರ ಹಿತರಕ್ಷಣಾ ಸಮಿತಿ ಸಭೆಯನ್ನು ಮೂರು ತಿಂಗಳಿಗೊಮ್ಮೆ ನಡೆಸಿ ಗ್ರಾಹಕರ ಹಕ್ಕುಗಳ ಕಾಯ್ದೆಯನ್ನು ಸಂರಕ್ಷಿಸುವಲ್ಲಿ ಮುಂದಾಗಬೇಕು ಎಂದು ಅವರು ಸಲಹೆ ಮಾಡಿದರು.

ರಸ್ತೆ ಅಪಘಾತಗಳು, ಆಸ್ಪತ್ರೆಗಳು, ವ್ಯಾಪಾರ-ವಹಿವಾಟು ಮತ್ತಿತರ ಕಡೆಗಳಲ್ಲಿ ಗ್ರಾಹಕರಿಗೆ ಆಗುವ ಮೋಸ, ವಂಚನೆ ತಪ್ಪಿಸುವಲ್ಲಿ ತಾವು ನೀಡಿರುವ ತೀರ್ಪಿನ ವಿವಿಧ ಪ್ರಕರಣ ಸಂಬಂಧ ಸ್ವಾರಸ್ಯಕರವಾಗಿ ಶಿವಶಂಕರೇಗೌಡ ಅವರು ವಿವರಿಸಿದರು.

ಗ್ರಾಹಕರ ಪರಿಹಾರ ವೇದಿಕೆಯ ಸದಸ್ಯೆ ಗೌರಮ್ಮಣಿ ಅವರು ಮಾತನಾಡಿ, ಗ್ರಾಹಕರ ಆಯೋಗವು ಗ್ರಾಹಕರ ಹಿತರಕ್ಷಣೆಗಾಗಿ ಕೆಲಸ ಮಾಡುತ್ತಿದ್ದು, ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಶ್ರಮಿಸುತ್ತಿದೆ. ಗ್ರಾಹಕರಿಗೆ ನ್ಯಾಯ ಒದಗಿಸುವಲ್ಲಿ ಮುಂದಾಗಲಾಗಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಹೊಸಮನಿ ಪುಂಡಲಿಕ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸಿ.ಟಿ.ಜೋಸೆಫ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಡಾ.ಸಿ.ರೇಣುಕಾಂಬ ಮಾತನಾಡಿದರು.

ಆಹಾರ ಇಲಾಖೆ ಉಪ ನಿರ್ದೇಶಕ ಎಂ.ಭೀಮರಾಯ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಕೆ.ಟಿ.ಪ್ರಭು, ಕುಶಾಲನಗರ ವಕೀಲರ ಸಂಘದ ಅಧ್ಯಕ್ಷ ನಾಗೇಂದ್ರ ಬಾಬು, ನ್ಯಾಯಾಧೀಶರು, ನ್ಯಾಯಾವಾದಿಗಳು ಇತರರು ಇದ್ದರು. ಮಹಾಲಿಂಗಸ್ವಾಮಿ ಪ್ರಾರ್ಥಿಸಿದರೆ, ಡಾ.ಸಿ.ರೇಣುಕಾಂಬ ಸ್ವಾಗತಿಸಿದರು. ಕಾನೂನು ಸೇವಾ ಪ್ರಾಧಿಕಾರದ ಆಡಳಿತ ಸಹಾಯಕ ಬಿ.ಎಸ್.ಜಯಪ್ಪ ನಿರೂಪಿಸಿ, ವಂದಿಸಿದರು.

ಲೆಮಿನಾದಲ್ಲಿ ಮಾದಕ ವ್ಯಸನ ಅರಿವು ಕುರಿತ ಕಾರ್ಯಾಗಾರ



ಮಂಗಳೂರು: ಮಾದಕ ವ್ಯಸನದಿಂದಾಗುವ ಅನಾಹುತಗಳ ಕುರಿತಂತೆ ಜಾಗೃತಿ ಮೂಡಿಸುವ ಕಾಯಾಗಾರ ಶನಿವಾರ ಬೈಕಂಪಾಡಿ ಕೈಗಾರಿಕಾ ವಲಯದಲ್ಲಿರುವ ಲೆಮಿನಾ ಸಸ್ಪೆನ್ಷನ್ ಪ್ರಾಡಕ್ಟ್ಸ್ ಲಿಮಿಟೆಡ್ ಕಂಪೆನಿಯಲ್ಲಿ ನಡೆಯಿತು.

ಸಂಸ್ಥೆಯ ಕಾರ್ಮಿಕರು ಹಾಗೂ ಇತರೆ ಉದ್ಯೋಗಿಗಳು ಭಾಗವಹಿಸಿದ್ದರು. ಕಾರ್ಮಿಕ ಇಲಾಖೆಯ ಅಧಿಕಾರಿ ಶ್ರೀ ಕುಮಾರ್ ಮತ್ತು ಸೀನಿಯರ್ ಇನ್‌ಸ್ಪೆಕ್ಟರ್ ರಾಜಶೇಖರ ರೆಡ್ಡಿ ಅವರು ಮಾದಕ ವ್ಯಸನಗಳಿಂದ ಮುಕ್ತಗೊಳಿಸುವ ಮಾಹಿತಿ ಮತ್ತು ಅರಿವು ಕಾರ್ಯಾಗಾರ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಲೆಮಿನಾ ಸಂಸ್ಥೆಯ ಜನರಲ್ ಮ್ಯಾನೇಜರ್ ಸುಧಾಕರ ಶೆಟ್ಟಿ, ಲೆಮಿನಾ ಸಂಸ್ಥೆಯ ಅಧಿಕಾರಿ ಸಿಎ ಕಿರಣ್ ಜಿ ಶೇಟ್ ಉಪಸ್ಥಿತರಿದ್ದರು.

ರಸ್ತೆ ದುರಸ್ತಿಗೈದ ಸ್ಥಳೀಯರು!



ಬೆಳ್ತಂಗಡಿ: ಸೋಮಂತಡ್ಕ-ಮಜಲು ರಸ್ತೆಯಲ್ಲಿ ಸ್ಥಳೀಯರು ಸೇರಿ ಭಾನುವಾರ ಶ್ರಮದಾನ ಕಾರ್ಯಕ್ರಮ ನಡೆಸಿದರು.

ಮುಂಡಾಜೆ ಗ್ರಾಮದ ಮಜಲು ರಸ್ತೆ ರಾಜ್ಯ ಹೆದ್ದಾರಿಗೆ ತಾಗಿಕೊಂಡಿರುವ ಸುಮಾರು ಒಂದೂವರೆ ಕಿ.ಮೀ. ಉದ್ದದ ರಸ್ತೆಗೆ ಡಾಮರೀಕರಣವಾಗಿ ಎರಡು ದಶಕಗಳಿಗೂ ಹೆಚ್ಚು ಕಾಲವಾಗಿದೆ. ನಂತರದ ಒಂದೆರಡು ವರ್ಷದಲ್ಲಿ ಈ ರಸ್ತೆ ಹದಗೆಡುತ್ತಾ ಬಂದು ಕಳೆದ 10-15 ವರ್ಷಗಳಿಂದ ಪೂರ್ತಿ ಕಳಪೆಯಾಗಿ ಜನ ಸಂಚಾರಕ್ಕೆ ಕಷ್ಟ ಸಾಧ್ಯವಾಗಿದೆ. ಈ ರಸ್ತೆಯ ನಿರ್ವಹಣೆಯನ್ನು ನಡೆಸುವಲ್ಲಿಯೂ ಸ್ಥಳೀಯ ಪಂಚಾಯತ್ ಯಾವುದೇ ಆಸಕ್ತಿ ತೋರುತ್ತಿಲ್ಲ.

ಮಳೆಗಾಲದಲ್ಲಂತೂ ಈ ರಸ್ತೆಯಲ್ಲಿ ನಡೆದಾಡುವುದು, ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳಲ್ಲಿ ತಿರುಗಾಡುವುದು ಒಂದು ದೊಡ್ಡ ಸಾಹಸವಾಗಿದೆ.

ಈ ರಸ್ತೆ ರಿಪೇರಿಗೆ ಜನ ಪ್ರತಿನಿಧಿಗಳು ನೀಡಿದ ಭರವಸೆಗಳು ಭರವಸೆಯಾಗಿಯೇ ಮುಂದುವರಿದು ಯಾವುದೇ ಕಾಮಗಾರಿ ಮಾಡಲಾಗಿಲ್ಲ.

ಚರಂಡಿ ರಿಪೇರಿ ಹಾಗೂ ಒಂದಷ್ಟು ಡಾಮರೀಕರಣವನ್ನು ಮಾಡಿದರೆ ದೊಡ್ಡ ಉಪಕಾರವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ಬೇಡಿಕೊಳ್ಳುವ ಸ್ಥಿತಿ ಬಂದಿರುವುದು ನಮ್ಮೆಲ್ಲರ ದೌರ್ಭಾಗ್ಯ. ಗ್ರಾಮಸ್ಥರೇ ಡಾಮರೀಕರಣ ಮಾಡಲು ಸಾಧ್ಯವಿಲ್ಲದ ಕಾರಣ ಮತ್ತೆ ಮತ್ತೆ ಮನವಿಗಳನ್ನು ಸಲ್ಲಿಸುತ್ತಿದ್ದೇವೆ. ಈ ರಸ್ತೆಗೆ ಕಾಯಕಲ್ಪ ವಾಗದಿರುವುದು ನಮ್ಮೆಲ್ಲರ ದೌರ್ಭಾಗ್ಯವೇ ಸರಿ. ಮುಂದಾದರೂ ಸಂಬಂಧಪಟ್ಟ ವ್ಯವಸ್ಥೆ ರಸ್ತೆ ನಿರ್ಮಾಣದ ಮೂಲಕ ಸಾರ್ವಜನಿಕರಿಗೆ ಆಗುವ ಅನಾನುಕೂಲವನ್ನು ದೂರ ಮಾಡಲಿ ಎಂಬುದು ನಮ್ಮ ಬೇಡಿಕೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಮೂರ್ನಾಡಿನಲ್ಲಿ ಕ್ಯಾನ್ಸರ್ ನಿರೋಧಕ ಲಸಿಕೆ ವಿತರಣೆ

ಮಡಿಕೇರಿ: ರೋಟರಿ ಮಡಿಕೇರಿ ವತಿಯಿಂದ ಮೂರ್ನಾಡು ಎಜುಕೇಷನ್ ಟ್ರಸ್ಟ್ ವಿದ್ಯಾ ಸಂಸ್ಥೆಯ ಪ್ರೌಢ ಶಾಲಾ ವಿದ್ಯಾರ್ಥಿನಿಯರಿಗೆ ಗರ್ಭಕಂಠದ ಕ್ಯಾನ್ಸರ್ ನಿರೋಧಕ ಲಸಿಕೆ ವಿತರಿಸಲಾಯಿತು.

ವಿದ್ಯಾ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಲಸಿಕೆ ವಿತರಣಾ ಕಾರ್ಯಕ್ರಮದಲ್ಲಿ 13 ವಿದ್ಯಾರ್ಥಿಗಳು ಲಸಿಕೆ ಪಡೆದುಕೊಂಡರು.

ಲಸಿಕೆ ನೀಡಿ ಮಾತನಾಡಿದ ಸ್ತ್ರೀರೋಗ ತಜ್ಞೆ ಡಾ.ಸುಮಂಗಲಿ ಅವರು, ಇತ್ತೀಚಿನ ದಿನಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಮಹಿಳೆಯರನ್ನು ಕಾಡುತ್ತಿದ್ದು, ಜಾಗೃತಿ ಅಗತ್ಯ. 9 ರಿಂದ 14 ವಯಸ್ಸಿನ ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ನೀಡಲಾಗುತ್ತಿದೆ. ಈ ರೋಗದ ಬಗ್ಗೆ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಅರಿವು ಮೂಡಿಸುವ ಅನಿವಾರ್ಯತೆ ಇದೆ ಎಂದರು.

ನಿರಂತರ ಜಾಗೃತಿ

ಕಳೆದ ವರ್ಷ ರೋಟರಿ ವತಿಯಿಂದ 51 ವಿದ್ಯಾರ್ಥಿನಿಯರಿಗೆ ಹೆಚ್‌ಪಿವಿ ಲಸಿಕೆ ನೀಡಲಾಗಿತ್ತು. ಈ ಬಾರಿ 250 ವಿದ್ಯಾರ್ಥಿನಿಯರ ಗುರಿ ಹೊಂದಲಾಗಿತ್ತಾದರೂ 13 ವಿದ್ಯಾರ್ಥಿನಿಯರು ಸ್ವಯಂ ಇಚ್ಛೆಯಿಂದ ಲಸಿಕೆ ಪಡೆದುಕೊಂಡಿದ್ದಾರೆ.



ಸರಕಾರದಿಂದ ಲಸಿಕೆ ನೀಡುವ ಯೋಜನೆಯ ಮೂಲಕ ಲಸಿಕೆ ಪಡೆದುಕೊಳ್ಳುವ ಇಂಗಿತವನ್ನು ಇತರ ವಿದ್ಯಾರ್ಥಿಗಳು ವ್ಯಕ್ತಪಡಿಸಿದರು.

ಗರ್ಭಕಂಠದ ಕ್ಯಾನ್ಸರ್ ಬಗ್ಗೆ ರೋಟರಿ ಸಂಸ್ಥೆ ನಿರಂತರವಾಗಿ ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸುತ್ತಿದೆ. ಲಸಿಕೆ ವಿತರಣಾ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಇತ್ತೀಚೆಗೆ ಮೂರ್ನಾಡು ಎಜುಕೇಷನ್ ಟ್ರಸ್ಟ್ ವಿದ್ಯಾ ಸಂಸ್ಥೆಯಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಹೆಚ್‌ಪಿವಿ ಲಸಿಕೆ ಕುರಿತು ಡಾ.ಸುಮಂಗಲಿ ಅವರು ವಿದ್ಯಾರ್ಥಿನಿಯರಲ್ಲಿ ಅರಿವು ಮೂಡಿಸಿದ್ದರು.

ರೋಟರಿ ಮಡಿಕೇರಿ ಅಧ್ಯಕ್ಷೆ ಲಲಿತಾ ರಾಘವನ್, ಸಮುದಾಯ ಸೇವಾ ವಿಭಾಗದ ನಿರ್ದೇಶಕ ಸುದಯ್ ನಾಣಯ್ಯ, ಮಲ್ಲಿಗೆ ಪೈ, ಡಾ.ಸುಮಂಗಲಿ ಅವರ ನೇತೃತ್ವದಲ್ಲಿ ಆರೋಗ್ಯ ಸಿಬ್ಬಂದಿಗಳು, ವಿದ್ಯಾ ಸಂಸ್ಥೆಯ ಪ್ರಾಂಶುಪಾಲರು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸ್ಥಳೀಯ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಕೂಡಾ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ ಪಡೆದರು.

ಅಕ್ಷರ ಸಂತ ಹರೇಕಳ ಹಾಜಬ್ಬಗೆ ಯಕ್ಷಮಿತ್ರರ ಸನ್ಮಾನದ ಗೌರವ



ಕೋಟ: ಅಕ್ಷರ ಸಂತ ಹರೇಕಳ ಹಾಜಬ್ಬರಿಗೆ ಯಕ್ಷಮಿತ್ರರು ನೀಡಿದ ಸನ್ಮಾನಅರ್ಥಪೂರ್ಣ ಎಂದು ಪಾಂಡೇಶ್ವರ ರಕ್ತೇಶ್ವರಿ ದೇಗುಲದ ಧರ್ಮದರ್ಶಿ ಕೆ.ವಿ ರಮೇಶ್ ರಾವ್ ಹೇಳಿದರು.

ಶನಿವಾರ ಸಾಸ್ತಾನದ ಪಾಂಡೇಶ್ವರ ಯಡಬೆಟ್ಟು ಯಕ್ಷಮಿತ್ರರು ಆಯೋಜಿಸಿದ ಪಂಚಮ ವರ್ಷದ ಯಕ್ಷಗಾನ ಕಾರ್ಯಕ್ರಮದಲ್ಲಿ ಪದ್ಮಶ್ರೀ ಹರೇಕಳ ಹಾಜಬ್ಬರನ್ನು ಗೌರವಿಸಿ ಮಾತನಾಡಿ ಅಕ್ಷರ ದೇಗುಲವನ್ನು ಕಟ್ಟಿ ಸಮಾಜಕ್ಕೆ ತನ್ನನ್ನು ಸಮರ್ಪಿಸಿಕೊಂಡ ಹಾಜಬ್ಬ ಎನ್ನುವ ನಿಸ್ವಾರ್ಥ ಸೇವಾರ್ಥಿ ತನ್ನ ಸರ್ವಸ್ವವನ್ನೂ ಈ ಸಮಾಜಕ್ಕೆ ಧಾರೆ ಎರೆದಿದ್ದಾರೆ, ಇದು ಯಕ್ಷ ಮಿತ್ರರ ಹೆಸರನ್ನು ಇಮ್ಮಡಿಗೊಳಿಸಿದೆ ಎಂದರು.

ಈ ಸಂದರ್ಭದಲ್ಲಿ ಅಕ್ಷರ ಸಂತ ಪದ್ಮಶ್ರೀ ಹರೇಕಳ ಹಾಜಬ್ಬರಿಗೆ ಯಕ್ಷಮಿತ್ರ ಗೌರವ ಸನ್ಮಾನ ನೀಡಲಾಯಿತು.

ಸಭೆಯಲ್ಲಿ ಪಾಂಡೇಶ್ವರ ಕಳಿಬೈಲು ಶ್ರೀ ಕ್ಷೇತ್ರದ ಧರ್ಮದರ್ಶಿ ಅಭಿಜಿತ್ ಪಾಂಡೇಶ್ವರ, ಸಾಸ್ತಾನ ಗೋಳಿಗರಡಿ ದೈವಸ್ಥಾನದ ಪಾತ್ರಿ ಶಂಕರ್ ಪೂಜಾರಿ,ಯಕ್ಷ ಮಿತ್ರರ ಬಳಗದ ಕರಿಯ ದೇವಾಡಿಗ,ಅಣ್ಣಯ್ಯ ದೇವಾಡಿಗ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮೊದಲು ಸಾಸ್ತಾನ ಗೋಳಿಗರಡಿ ದೈವಸ್ಥಾನದಿಂದ ಆದ್ದೂರಿಯ ಚಂಡೆ,ಕೀಲು ಕುದುರೆ , ಕುಣಿತ ಭಜನೆಯೊಂದಿಗೆ ಮೆರವಣಿಗೆ ಮೂಲಕ ದೇವರ ಪಟ್ಟಿಗೆಯನ್ನು ಕಾರ್ಯಕ್ರಮ ನಡೆಯುವ ಸ್ಥಳದವರೆಗೆ ಕರೆತರಲಾಯಿತು. ಶ್ರೀ ಆದು ಧೂಮಾವತಿ ಶ್ರೀದೇವಿ ಬೈದೇತಿ ಯಕ್ಷಗಾನ ಮಂಡಳಿ ಮೂಲಸ್ಥಾನ ಗೆಜ್ಜೆಗಿರಿ ಇವರಿಂದ ಶ್ರೀ ಕ್ಷೇತ್ರ ಗೆಜ್ಜೆಗಿರಿ ಕ್ಷೇತ್ರ ಮಹಾತ್ಮೆ ಯಕ್ಷಗಾನ ಪ್ರದರ್ಶನಗೊಂಡಿತು. ಕಾರ್ಯಕ್ರಮವನ್ನು ಶ್ರೀಶಾ ಪಾಂಡೇಶ್ವರ ನಿರೂಪಿಸಿದರು. ನಾಗೇಶ್ ಯಡಬೆಟ್ಟು ಸಹಕರಿಸಿದರು.

ಯಕ್ಷ ಗುರು ದಶಾವತಾರಿ ಸೂರಿಕುಮೇರು ಕೆ.ಗೋವಿಂದ ಭಟ್ಟರಿಗೆ ನುಡಿನಮನ

ಶ್ರೀ ಶಕ್ತಿ ಆಂಜನೇಯ ಮಂತ್ರಾಲಯದಲ್ಲಿ ತಾಳಮದ್ದಳೆ

ಮಂಗಳೂರು: ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘ ಬೊಳುವಾರು ಪುತ್ತೂರು ಇದರ ಪಾಕ್ಷಿಕ ತಾಳಮದ್ದಳೆ ದೇವಿದಾಸ ವಿರಚಿತ 'ಪಾರ್ಥ ಸಾರಥ್ಯ' ಎಂಬ ಆಖ್ಯಾನದೊಂದಿಗೆ ಬೊಳುವಾರು ಶ್ರೀ ಶಕ್ತಿ ಆಂಜನೇಯ ಮಂತ್ರಾಲಯದಲ್ಲಿ ಶನಿವಾರ ನಡೆಯಿತು.

ಹಿಮ್ಮೇಳದಲ್ಲಿ ಭಾಗವತರಾಗಿ ಲಕ್ಷ್ಮೀ ನಾರಾಯಣ ಭಟ್ ಬಟ್ಯಮೂಲೆ, ಆನಂದ ಸವಣೂರು, ಚೆಂಡೆ ಮದ್ದಳೆಗಳಲ್ಲಿ ಶರಣ್ಯ ನೆತ್ತರಕೆರೆ, ಸಮರ್ಥ ವಿಷ್ಣು ಕಡಂಬಳಿಕೆ ಸಹಕರಿಸಿದರು. ಮುಮ್ಮೇಳದಲ್ಲಿ ಭಾಸ್ಕರ ಬಾರ್ಯ ಮತ್ತು ಕಿಶೋರಿ ದುಗ್ಗಪ್ಪ ನಡುಗಲ್ಲು, (ಶ್ರೀಕೃಷ್ಣ), ಗುಂಡ್ಯಡ್ಕ ಈಶ್ವರ ಭಟ್ (ದುರ್ಯೋಧನ), ಗುಡಪ್ಪ ಬಲ್ಯ (ಬಲರಾಮ), ಪ್ರೇಮಲತಾ ರಾವ್ ಮತ್ತು ಅಚ್ಯುತ ಪಾಂಗಣ್ಣಾಯ (ಅರ್ಜುನ) ಸಹಕರಿಸಿದರು.

ಸಂಘದ ಅಧ್ಯಕ್ಷ ಭಾಸ್ಕರ ಬಾರ್ಯ ಸ್ವಾಗತಿಸಿ, ವಂದಿಸಿದರು.

ಕಾರ್ಯಕ್ರಮದ ನಂತರ, ಇತ್ತೀಚೆಗೆ ಅಸ್ತಂಗತರಾದ ಯಕ್ಷ ಗುರು ದಶಾವತಾರಿ ಸೂರಿಕುಮೇರು ಕೆ.ಗೋವಿಂದ ಭಟ್ಟರಿಗೆ ಸಂಘದ ಹಿರಿಯ ಕಲಾವಿದ ಗುಂಡ್ಯಡ್ಕ ಈಶ್ವರ ಭಟ್ ನುಡಿ ನಮನ ಸಲ್ಲಿಸಿದರು. ಕಡಂಬಳಿಕೆ ಸತ್ಯನಾರಾಯಣ ಕೇಕುಣ್ಣಾಯ ಪ್ರಾಯೋಜಿಸಿದರು. ಸಂಘದ ಗೌರವ ಕಾರ್ಯದರ್ಶಿ ರಂಗನಾಥ ರಾವ್ ಮತ್ತು ನಗರಸಭೆಯ ಮಾಜಿ ಉಪಾಧ್ಯಕ್ಷೆ ವಿದ್ಯಾಗೌರಿ ಉಪಸ್ಥಿತರಿದ್ದರು.



ಮಾ.26: ನಡ್ಡಂತಿಲ್ಲಾಯ ನಾಗಬನದಲ್ಲಿ ಪುನಃ ಪ್ರತಿಷ್ಠಾ ವರ್ಧಂತಿ

ಮಂಗಳೂರು: ಜಗದ್ಗುರು ಶ್ರೀ ಮಧ್ವಾಚಾರ್ಯ ಕುಟುಂಬಿಕರು ಆರಾಧಿಸಿಕೊಂಡು ಬಂದಿರುವ ಉಡುಪಿ ಕುಂಜಿಬೆಟ್ಟು ಶಿವಳ್ಳಿಗ್ರಾಮದ ಸಗ್ರಿ ಚಕ್ರತೀರ್ಥದಲ್ಲಿನ ನಡ್ಡಂತಿಲ್ಲಾಯ ನಾಗಬನದಲ್ಲಿ ಮಾ. 26ರಂದು ಪುನಃ ಪ್ರತಿಷ್ಠಾ ವರ್ಧಂತಿ ಜರಗಲಿರುವುದು ಎಂದು ಕಲ್ಲೂರ ಪ್ರತಿಷ್ಠಾನದ ಅಧ್ಯಕ್ಷ ಎಸ್.ಪ್ರದೀಪ ಕುಮಾರ ಕಲ್ಕೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಡುಪಿ ಅಷ್ಟ ಮಠಾಧೀಶರುಗಳ ಆಶೀರ್ವಾದಗಳೊಂದಿಗೆ ಶ್ರೀ ಪಾಡಿಗಾರು ಶ್ರೀನಿವಾಸ ತಂತ್ರಿಗಳು ಮತ್ತು ಶ್ರೀ ಗೋಪಾಲಕೃಷ್ಣ ಸಾಮಗರ ನೇತೃತ್ವದಲ್ಲಿ ಆಶ್ಲೇಷಾ ಬಲಿ, ಅಶ್ವಥ ಪೂಜೆ, ಪರಿವಾರ ದೈವಗಳಿಗೆ ಪನಿವಾರ ಸೇವೆ ಸಹಿತವಾಗಿ ಪುನಃ ಪ್ರತಿಷ್ಠಾ ವರ್ಧಂತಿ ಸಮಾರಂಭ ನಡೆಯಲಿದೆ.

ಬೆಳಿಗ್ಗೆ ಗಣಹೋಮದಿಂದ ಮೊದಲ್ಗೊಂಡು, ಆಶ್ಲೇಷಾ ಬಲಿ, ಅಶ್ವಥ ಪೂಜೆ, ಮಧ್ಯಾಹ್ನ ಮಹಾಪೂಜೆಯ ಬಳಿಕ ಸಗ್ರಿ ಶ್ರೀ ವಾಸುಕೀ ಸುಬ್ರಹ್ಮಣ್ಯ ದೇವಸ್ಥಾನದ ಸಭಾಂಗಣದಲ್ಲಿ ಸಾರ್ವಜನಿಕ ಅನ್ನಸಂತರ್ಪಣೆ ನಡೆಯಲಿರುವುದು. ಮಾ. 25 ಬುಧವಾರ ಸಂಜೆ ಅಷ್ಟ ಮಠಗಳ ಯತಿವರೇಣ್ಯರ ಉಪಸ್ಥಿತಿಯಲ್ಲಿ 'ವಸಂತ ಪೂಜೆ ' ಹಾಗೂ ಬಳಿಕ ಪಾನಕ ಸೇವೆ ನಡೆಯಲಿದೆ ಎಂದು ಕಲ್ಕೂರ ತಿಳಿಸಿದ್ದಾರೆ.

ಗಂಗೊಳ್ಳಿಯಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟ 'ಜಿ.ಜಿ.ಪಿ.ಎಲ್'



ಕುಂದಾಪುರ: ಹರಿಓಂ ಗಂಗೊಳ್ಳಿ ಇದರ ಆಶ್ರಯದಲ್ಲಿ ಎಂ.ಜಿ. ಜಗನ್ನಾಥ ಪೈ, ಪೈ ಗ್ರೂಪ್ ಆಫ್ ಹೊಟೇಲ್ಸ್ ಬೆಂಗಳೂರು ಮತ್ತು ಜಿ.ವಿವೇಕಾನಂದ ನಾಯಕ್ ದುಬೈ ಪ್ರಾಯೋಜಕತ್ವದಲ್ಲಿ ಗಂಗೊಳ್ಳಿಯ ಎಸ್.ವಿ. ಹಿರಿಯ ಪ್ರಾಥಮಿಕ ಶಾಲೆಯ ವಠಾರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಜಿ.ಎಸ್.ಬಿ. ಸಮಾಜ ಬಾಂಧವರ ಸತತ 7ನೇ ವರ್ಷದ 30 ಗಜಗಳ ಲೀಗ್ ಮಾದರಿಯ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾಟ 'ಜಿ.ಜಿ.ಪಿ.ಎಲ್-2026' ವನ್ನು ನೇರಳಕಟ್ಟೆಯ ಉದ್ಯಮಿ ಎನ್.ರಾಜೇಶ ನಾಯಕ್ ಅವರು ಉದ್ಘಾಟಿಸಿ ಶುಭ ಹಾರೈಸಿದರು.

ಹೋಟೆಲ್ ಉದ್ಯಮಿ ಎನ್.ನರಸಿಂಹ ಕಿಣಿ ಶುಭಾಂಶಸನೆಗೈದರು. ಕೆನರಾ ಬ್ಯಾಂಕಿನ ನಿವೃತ್ತ ಉದ್ಯೋಗಿ ಎನ್.ಉಮೇಶ ಕಾಮತ್ ಗಂಗೊಳ್ಳಿ, ಉದ್ಯಮಿ ಬಿ.ಗಣೇಶ ಪಡಿಯಾರ್, ಹರಿಓಂ ಗಂಗೊಳ್ಳಿಯ ವಿವೇಕ ಮಲ್ಯ ಉಪಸ್ಥಿತರಿದ್ದರು. ಒಟ್ಟು 5 ತಂಡಗಳು ಲೀಗ್ ಮಾದರಿಯಲ್ಲಿ ಪ್ರಶಸ್ತಿಯಾಗಿ ಸೆಣಸಾಡಲಿದೆ. ಜಿ.ಸುದರ್ಶನ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು.

ವೇಶ್ಯಾವಾಟಿಕೆ: ಇಬ್ಬರ ಬಂಧನ

ಮಡಿಕೇರಿ: ಕುಶಾಲನಗರದ ಮುಳ್ಳುಸೋಗೆಯ ಮನೆಯೊಂದರಲ್ಲಿ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಇಬ್ಬರನ್ನು ಬಂಧಿಸಿರುವ ಪೊಲೀಸರು, ಇಬ್ಬರು ಸಂತ್ರಸ್ತೆಯರನ್ನು ರಕ್ಷಿಸಿದ್ದಾರೆ.

ಕುಶಾಲನಗರ ಟೌನ್ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬುಧವಾರ ರಾತ್ರಿ ಮುಳ್ಳುಸೋಗೆಯ ಮನೆಯೊಂದರಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ಅಡ್ಡೆಗೆ ದಾಳಿ ನಡೆಸಿದ್ದಾರೆ. ಈ ಸಂದರ್ಭ ಮೈಸೂರು ಮತ್ತು ಸೋಮವಾರಪೇಟೆಯ ಇಬ್ಬರು ಯುವತಿಯರನ್ನು ಬಳಸಿ ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿರುವುದು ಬೆಳಕಿಗೆ ಬಂದಿದ್ದು, ಯುವತಿಯರನ್ನು ರಕ್ಷಿಸಿ ಮಡಿಕೇರಿಯ ಮಹಿಳಾ ಸಾಂತ್ವನ ಕೇಂದ್ರಕ್ಕೆ ದಾಖಲಿಸಿದ್ದಾರೆ. ಸ್ಥಳದಲ್ಲಿದ್ದ ಕೆಲವರು ಪರಾರಿಯಾಗಿದ್ದು, ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಪರಾರಿಯಾದವರ ಪತ್ತೆಗೆ ಶೋಧ ಮುಂದುವರೆದಿದೆ.

ಕುಶಾಲನಗರ ಟೌನ್ ಪೊಲೀಸ್ ಇನ್ಸ್‌ಪೆಕ್ಟರ್ ಪ್ರದೀಪ್ ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶಿವಣ್ಣ, ಗೀತಾ, ಸಿಬ್ಬಂದಿಗಳಾದ ಶಿವರಾಜು, ಜಾವಿದ್, ಬಸವರಾಜ್, ಗಾಯತ್ರಿ, ಜಯಶ್ರೀ ಮತ್ತಿತರರು ಪಾಲ್ಗೊಂಡಿದ್ದರು.

ಮುದ್ರಾಡಿ ಸುಬ್ಬಣ್ಣಕಟ್ಟೆ ಸೇವಾಸಂಗಮ ಶಿಶುಮಂದಿರದ ರಜತಮಹೋತ್ಸವ

ಮಾತೆಯರ, ಪುರುಷರ, ವಿದ್ಯಾರ್ಥಿಗಳ ಕ್ರೀಡಾಕೂಟ

ಹೆಬ್ರಿ: ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢರಾಗಲು ಕ್ರೀಡೆಗಳು ಅತಿ ಅವಶ್ಯಕ. ನಮ್ಮ ಜೀವನ ಒತ್ತಡದ ಗೂಡಾಗಿದೆ. ಕ್ರೀಡೆಗಳು ನಮ್ಮ ಆತ್ಮ ಸ್ಥೈರ್ಯವನ್ನು, ದೈಹಿಕ ಕ್ಷಮತೆಯನ್ನು ಹೆಚ್ಚಿಸಿ ಆರೋಗ್ಯವನ್ನು ಕಾಪಾಡುತ್ತದೆ ಸೇವಾ ಸಂಗಮ ಶಿಶು ಮಂದಿರದ ಗೌರವಾಧ್ಯಕ್ಷರಾದ ನಿವೃತ್ತ ಶಿಕ್ಷಕ ಗಣಪತಿ ಪೈ ಹೇಳಿದರು.

ಅವರು ಮುದ್ರಾಡಿ ಸುಬ್ಬಣ್ಣಕಟ್ಟೆ ಸೇವಾಸಂಗಮ ಶಿಶುಮಂದಿರದ ರಜತಮಹೋತ್ಸವ ಅಂಗವಾಗಿ ನಡೆದ ಮಾತೆಯರ, ಪುರುಷರ ಹಾಗೂ ಹಳೆ ವಿದ್ಯಾರ್ಥಿಗಳ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಸೋಲು, ಗೆಲುವಿನ ಬಗ್ಗೆ ಚಿಂತಿಸದೆ ಖುಷಿಯಿಂದ ಆಟೋಟಸ್ಪರ್ಧೆಗಳಲ್ಲಿ ಪಾಲ್ಗೊಳ್ಳಿ. ರಜತಮಹೋತ್ಸವ ಆಚರಣೆಯನ್ನು ನಡೆಸಲಿರುವ ಶಿಶುಮಂದಿರದಲ್ಲಿ ಆಟೋಟ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಎಲ್ಲರನ್ನೂ ಒಂದುಗೂಡಿಸುವ ಪ್ರಯತ್ನ ಮಾಡುತ್ತಿರುವುದು ಉತ್ತಮ ಕಾರ್ಯ ಎಂದರು.

ಹೆಬ್ರಿ ಸಿಟಿ ಅಲಯನ್ಸ್ ಕ್ಲಬ್ ಅಧ್ಯಕ್ಷೆ ಸುನೀತಾ ಹೆಬ್ಬಾರ್, ರಜತ ಮಹೋತ್ಸವ ಸಮಿತಿ ಗೌರವ ಸಲಹೆಗಾರರಾದ ಸಂತೋಷ್ ಕುಮಾರ್ ಶೆಟ್ಟಿ ಪಾಲ್ಗೊಂಡು ಶುಭ ಹಾರೈಸಿದರು. ಶಿಶು ಮಂದಿರದ ವ್ಯವಸ್ಥಾಪಕಿ ಶಿಲ್ಪಾ ಎಸ್. ನಾಯಕ್ ಅಧ್ಯಕ್ಷತೆ ವಹಿಸಿದ್ದರು.



ಸಮಿತಿಯ ಉಪಾಧ್ಯಕ್ಷೆ ಸುಲತಾ ಗಂಗಾಧರ ಹೆಗ್ಡೆ, ಸಮಿತಿ ಜೊತೆ ಕಾರ್ಯದರ್ಶಿ ಅನುಶ್ರೀ ಮಲ್ಯ, ಮಾತಾಜಿ ಸುಮತಿ, ವ್ಯವಸ್ಥಾಪನ ಸಮಿತಿ ಹಾಗೂ ರಜತಮಹೋತ್ಸವ ಸಮಿತಿ ಪದಾಧಿಕಾರಿಗಳು, ಮಾತೆಯರು, ಬಾಲಗೋಕುಲ ಮಕ್ಕಳು ಉಪಸ್ಥಿತರಿದ್ದರು.

ಶಿಶುಮಂದಿರದ ಸಂಚಾಲಕರಾದ ಶ್ರೀಧರ ನಾಯಕ್ ಸ್ವಾಗತಿಸಿದರು. ಬಲ್ಲಾಡಿ ಚಂದ್ರಶೇಖರ ಭಟ್ ಕಾರ್ಯಕ್ರಮ ನಿರೂಪಿಸಿ, ಸಮಿತಿ ಜತೆ ಕಾರ್ಯದರ್ಶಿ ಅಶ್ವಿನಿ ಶೆಟ್ಟಿಗಾರ್ ವಂದಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-47) ಡ್ರಾ ಮಾರ್ಚ್ 22ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
ME 227808 (PALAKKAD)
Consolation Prize Rs.5,000/-
MA 227808 MB 227808 MC 227808 MD 227808
MF 227808 MG 227808 MH 227808 MJ 227808
MK 227808 ML 227808 MM 227808
2nd Prize Rs.25,00,000/- [25 Lakhs]
MG 864813 (CHITTUR)
3rd Prize Rs.5,00,000/- [5 Lakhs]
MJ 802192 (KASARAGOD)

FOR THE TICKETS ENDING WITH THE FOLLOWING NUMBERS

4th Prize Rs.5,000/-
0503 0902 1249 2562 3122 3308 3801 4398 4426 4688
4718 6318 6720 6836 7139 7347 8414 8670 9149
5th Prize Rs.2,000/-
0383 0544 1052 1082 3509 6809
6th Prize Rs.1,000/-
0477 0596 0703 1033 1208 2041 2333 2509 2817 3422
3721 3903 4354 4786 5324 5541 7234 7237 7311 7778
7819 7860 8433 9211 9344
7th Prize Rs.500/-
0005 0320 0457 0610 0786 1090 1113 1164 1368 1555
1682 2114 2119 2246 2292 2493 2498 2771 2802 2804
2827 2911 3128 3293 3299 3502 3606 3647 3838 3943
4013 4039 4629 4734 5021 5141 5257 5578 5589 5598
5675 5679 5763 5965 5988 6055 6182 6269 6333 6434
6470 6562 6566 6626 6695 7051 7074 7380 7428 7450
7490 7515 7574 7613 7755 7763 7767 7807 7982 8318
8495 8514 8813 8829 9479 9837
8th Prize Rs.200/-
0034 0187 0196 0361 0387 0423 0440 0655 0777 0791
1066 1196 1343 1657 2053 2137 2250 2344 2500 2506
2514 2723 2937 3013 3426 3500 3541 3556 3605 3607
3620 3740 3761 3794 3882 3959 3983 4001 4056 4066
4222 4502 4607 4649 5019 5240 5250 5385 5868 5894
5967 6094 6153 6386 6454 6538 6776 6808 7263 7297
7363 7438 7492 7544 7610 7719 7782 8053 8097 8148
8163 8349 8534 8563 8653 8680 8686 8764 8825 9114
9148 9237 9259 9442 9556 9563 9628 9667 9688 9893
9953 9967
9th Prize Rs.100/-
0010 0024 0084 0119 0123 0264 0408 0547 0577 0595
0601 0630 0684 0995 1016 1024 1087 1134 1205 1244
1266 1289 1627 1798 1800 1865 1907 1998 2014 2062
2099 2165 2172 2267 2390 2450 2559 2568 2692 2699
2926 2987 3050 3053 3072 3226 3243 3255 3289 3304
3363 3377 3381 3396 3425 3460 3465 3549 3595 3616
3662 3726 3732 3776 3781 4093 4146 4200 4329 4339
4633 4634 4709 4717 4821 4930 4958 5007 5089 5105
5109 5157 5219 5291 5332 5358 5509 5606 5608 5618
5735 5998 6047 6076 6200 6238 6248 6412 6417 6490
6648 6697 6706 6711 6810 7045 7110 7153 7181 7277
7278 7308 7373 7407 7429 7470 7485 7537 7560 7583
7685 7722 7872 7889 7894 7907 8107 8146 8193 8281
8336 8470 8522 8559 8560 8658 8886 8888 8896 8948
9049 9112 9128 9272 9307 9343 9538 9732 9818 9896

ಸಮಾಜಕ್ಕಾಗಿ ಶ್ರಮಿಸಿದ ಸ್ವಾಮಿ ಶ್ರದ್ಧಾನಂದ

ಬೆಂಗಳೂರು: ಸ್ವಾಮಿ ಶ್ರದ್ಧಾನಂದರು ತಮ್ಮನ್ನು ತಾವು ಒಬ್ಬ ಸಾಧಕ ಎಂದು ಕರೆದುಕೊಳ್ಳದೆ, ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸುವ ಒಬ್ಬ ಸಾಮಾನ್ಯ ಪಥಿಕ ಎಂದು ಗುರುತಿಸಿಕೊಂಡಿದ್ದರು ಎಂದು ಸಂಸ್ಕೃತ ವಿದ್ವಾಂಸ ಡಾ.ಉಮೇಶ್ ಹೆಗಡೆ ತಿಳಿಸಿದರು.

ಮಿಥಿಕ್ ಸೊಸೈಟಿಯು ಆಯೋಜಿಸಿದ್ದ ಎಚ್.ಕೆ.ವೀರಣ್ಣ ಗೌಡ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕಲ್ಯಾಣ ಮಾರ್ಗದ ಪಥಿಕ ಸ್ವಾಮಿ ಶ್ರದ್ಧಾನಂದ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, 1857ರಲ್ಲಿ ಪಂಜಾಬಿನ ಜಲಂಧರ್‌ನಲ್ಲಿ ಜನಿಸಿದ ಇವರ ಮೊದಲ ಹೆಸರು ಮುನ್ಶಿರಾಮ. ಆರಂಭಿಕ ಜೀವನದಲ್ಲಿ ಕೆಲವು ಕೆಟ್ಟ ಚಟಗಳಿಗೆ ದಾಸರಾಗಿದ್ದ ಇವರು, ಸ್ವಾಮಿ ದಯಾನಂದ ಸರಸ್ವತಿಗಳ ಪ್ರಭಾವದಿಂದ ಸಂಪೂರ್ಣವಾಗಿ ಪರಿವರ್ತನೆಗೊಂಡು ವೈದಿಕ ಧರ್ಮದ ಪ್ರಚಾರಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು ಎಂದರು. ಮೆಕಾಲೆ ಶಿಕ್ಷಣ ಪದ್ಧತಿಗೆ ಪರ್ಯಾಯವಾಗಿ ಇವರು ಗುರು ಕುಲ ಶಿಕ್ಷಣ ಪದ್ಧತಿಯನ್ನು ಪ್ರತಿಪಾದಿಸಿದರು ಮತ್ತು ಹರಿದ್ವಾರದಲ್ಲಿ ಪ್ರಸಿದ್ಧ ಕಾಂಗಡಿ ಗುರುಕುಲವನ್ನು ಸ್ಥಾಪಿಸಿದರು. ಸ್ತ್ರೀ ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಿದ್ದ ಇವರು ಆರ್ಯ ಕನ್ಯಾ ಗುರುಕುಲ ಗಳನ್ನು ಆರಂಭಿಸಿದರು. ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಇವರು, ವೇದಗಳು ಜನ್ಮದ ಆಧಾರದ ಮೇಲೆ ಜಾತಿಯನ್ನು ಹೇಳದೆ, ಗುಣ ಮತ್ತು ಕರ್ಮದ ಆಧಾರದ ಮೇಲೆ ವರ್ಣ ವ್ಯವಸ್ಥೆಯನ್ನು ಹೇಳುತ್ತವೆ ಎಂದು ಪ್ರತಿಪಾದಿಸಿದರು ಎಂದರು.



ಗಾಂಧಿಗೆ ಮಹಾತ್ಮ ಬಿರುದು ನೀಡಿದವರು

ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದ್ದ ಸ್ವಾಮಿ ಶ್ರದ್ಧಾನಂದರು ಗಾಂಧೀಜಿಯವರ ನಿಕಟವರ್ತಿಯಾಗಿದ್ದರು ಮತ್ತು ಗಾಂಧೀಜಿಯವರಿಗೆ ಮಹಾತ್ಮ ಎಂಬ ಬಿರುದನ್ನು ನೀಡಿದವರಲ್ಲಿ ಪ್ರಮುಖರು. 1926ರಲ್ಲಿ ತಮ್ಮ ತತ್ವಗಳಿಗಾಗಿ ಪ್ರಾಣತ್ಯಾಗ ಮಾಡಿದ ಇವರ ಜೀವನ ಇಂದಿಗೂ ಆದರ್ಶಪ್ರಾಯವಾಗಿದೆ ಎಂದು ಡಾ.ಉಮೇಶ್ ಹೆಗಡೆ ಅಭಿಪ್ರಾಯಪಟ್ಟರು.

ಭೂತಾರಾಧನೆ ಜೀವಂತ ಪರಂಪರೆ

ತುಳುನಾಡಿನ ವಿಶಿಷ್ಟ ಪರಂಪರೆಯಾದ ಭೂತಾರಾಧನೆಯ ಕುರಿತು ಸುದೀರ್ಘ ಸಂಶೋಧನೆ ನಡೆಸಿರುವ ಸಂಶೋಧಕಿ ಡಾ.ಲಕ್ಷ್ಮಿ ಜಿ. ಅವರು ಭೂತಾರಾಧನೆ: 1 ವಿಶ್ಲೇಷಣಾತ್ಮಕ ನೋಟ ಎಂಬ ವಿಷಯದ ಕುರಿತು ಮಾತನಾಡಿ, ಭೂತ ಎಂಬ ಪದಕ್ಕೆ ಪಾಶ್ಚಿಮಾತ್ಯರು ನೀಡಿದ ದೆವ್ವ ಎಂಬ ಅರ್ಥ ತಪ್ಪು ಎಂದು ತಿಳಿಸಿದರು. ಸಂಸ್ಕೃತದಲ್ಲಿ ಪೂತ ಎಂದರೆ ಪವಿತ್ರವಾದುದು ಎಂದರ್ಥ. ದೈವಗಳು ಸಮಾಜವನ್ನು ಕಾಯುವ ದಿವ್ಯ ಶಕ್ತಿಗಳಾಗಿವೆ. ಸಮಾಜದಲ್ಲಿ ಅಸಾಮಾನ್ಯ ಸಾಹಸ ಮಾಡಿದವರು, ಅನ್ಯಾಯದ ವಿರುದ್ಧ ಹೋರಾಡಿ ವೀರಮರಣ ಅಪ್ಪಿದವರು ಅಥವಾ ದುರಂತಕ್ಕೀಡಾದವರು ಮಾಯೆಯಾಗಿ ದೈವತ್ವವನ್ನು ಪಡೆಯುತ್ತಾರೆ.
ಈ ಆರಾಧನಾ ಪದ್ಧತಿಯು ಅತ್ಯಂತ ಸಮನ್ವಯ ಕಾರಿಯಾಗಿದ್ದು, ಇದರಲ್ಲಿ ಕೇವಲ ಹಿಂದೂಗಳಲ್ಲದೆ ಮುಸ್ಲಿಂ ವ್ಯಕ್ತಿತ್ವಗಳು (ಉದಾಹರಣೆಗೆ ಆಲಿ ಭೂತ) ಮತ್ತು ಚೀನೀ ಮೂಲದ ಶಕ್ತಿಗಳೂ ದೈವಗಳಾಗಿ ಆರಾಧಿಸಲ್ಪಡುತ್ತಿವೆ. ಭೂತಾರಾಧನೆಯು ಕೇವಲ ಒಂದು ಆಚರಣೆಯಲ್ಲ, ಅದು ಸಮಾಜದಲ್ಲಿ ನ್ಯಾಯವನ್ನು ಕಾಪಾಡುವ ಮತ್ತು ಜನರ ನಂಬಿಕೆಯನ್ನು ಎತ್ತಿಹಿಡಿಯುವ ಒಂದು ಜೀವಂತ ಪರಂಪರೆಯಾಗಿದೆ ಎಂದರು.

ತಪಾಸಣೆ



ಧೀ ಆಸ್ಪತ್ರೆ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಂಟಿ ಆಶ್ರಯದಲ್ಲಿ ಬನಶಂಕರಿಯ ಗಾಯತ್ರಿ ಭವನದಲ್ಲಿ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ರಘುನಾಥ್ ಚಾಲನೆ ನೀಡಿದರು. ಧೀ ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥೆ ಮಂಜುಳಾ ದೇವಿ ಸೇರಿದಂತೆ ನಾಗರಿಕರಿದ್ದರು.

ಕಿರುಸುದ್ದಿ

ಮಾರಕಾಸ್ತ್ರದಿಂದ ಆಟೋ ಚಾಲಕನ ಹತ್ಯೆ

ಬೆಂಗಳೂರು: ಆಟೋ ಚಾಲಕನ್ನು ಮಾರಕಾಸ್ತ್ರದಿಂದ ಹತ್ಯೆ ಮಾಡಿರುವ ಘಟನೆ ಭಾನುವಾರ ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಆಟೋ ಚಾಲಕ ಕಿರಣ್(25) ಹತ್ಯೆಯಾದ ಯುವಕನಾಗಿದ್ದು, ಭಾನುವಾರ ಮುಂಜಾನೆ 4:30ರ ಸುಮಾರಿಗೆ ಮತ್ತೊಂದು ಆಟೋದಲ್ಲಿ ಬಂದ ಆರೋಪಿಗಳು, ಟಿ.ಸಿ.ಪಾಳ್ಯ ಮುಖ್ಯ ರಸ್ತೆಯಲ್ಲಿ ಕಿರಣ್ ಮೇಲೆ ಏಕಾಏಕಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ತಲೆಗೆ ಗಂಭೀರವಾಗಿ ಪೆಟ್ಟು ಬಿದ್ದು ಕಿರಣ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಈ ಘಟನಾ ಸ್ಥಳಕ್ಕೆ ರಾಮಮೂರ್ತಿನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ 2 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿನ್ನಾಭರಣ ಕಳವು : ಆರೋಪಿ ಬಂಧನ

ಬೆಂಗಳೂರು: ದ್ವಿಚಕ್ರ ವಾಹನ ಹಾಗೂ ಚಿನ್ನಾಭರಣಗಳನ್ನು ಕಳವು ಮಾಡುತ್ತಿದ್ದ ಆರೋಪಿ ಹಾಗೂ ಕಳವು ಮಾಲು ಸ್ವೀಕರಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಜೆಸಿ ನಗರ ಠಾಣೆ ಪೊಲೀಸರು ಬಂಧಿಸಿ 6.5 ಲಕ್ಷ ಮೌಲ್ಯದ 2 ದ್ವಿಚಕ್ರ ವಾಹನ, 40 ಗ್ರಾಂ ಚಿನ್ನದ ಗಟ್ಟಿಯನ್ನು ವಶಪಡಿಸಿಕೊಂಡಿದ್ದಾರೆ. ಗೋವಿಂದರಪುರ ಉಮರ್ ನಗರದಲ್ಲಿ ಅನುಮಾನಾಸ್ಪದವಾಗಿ ನಿಂತಿದ್ದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆರೋಪಿಯೂ ದ್ವಿಚಕ್ರ ವಾಹನ ಕಳವು ಮಾಡಿಕೊಂಡು ಬಂದಿರುವುದಾಗಿ ತಿಳಿಸಿದ್ದಾನೆ. ಸುದೀರ್ಘ ವಿಚಾರಣೆ ಮಾಡಿದಾಗ ದ್ವಿಚಕ್ರ ವಾಹನ ಕಳವು ಮಾಡಲಾಗಿ ಅದರ ಡಿಕ್ಕಿಯಲ್ಲಿದ್ದ ಸುಮಾರು 40 ಗ್ರಾಂ ಚಿನ್ನಾಭರಣ ತನ್ನ ದೂರದ ಸಂಬಂಧಿ ಮೂಲಕ ಮಾರಾಟ ಮಾಡಿಸಿರುವುದಾಗಿ ಹೇಳಿದ್ದಾನೆ. ಚಿನ್ನಾಭರಣ ಮಾರಾಟ ಮಾಡಿದ ದೂರದ ಸಂಬಂಧಿ ಯನ್ನೂ ಸಹ ಪೊಲೀಸರು ವಶಕ್ಕೆ ಪಡೆದುಕೊಂಡು ಎರಡು ಜ್ಯೂವೆಲರಿ ಮಾಡಿದ ಅಂಗಡಿಯಲ್ಲಿ ಮಾರಾಟ ಮಾಡಿದ್ದ ಆಭರಣಗಳನ್ನು ಜಪ್ತಿ ಮಾಡಿದ್ದಾರೆ.

ಗೂಡ್ಸ್ ವಾಹನ ಡಿಕ್ಕಿ: ಮೂವರ ಸಾವು

ಬೆಂಗಳೂರು: ರಸ್ತೆ ಬದಿಯಲ್ಲಿ ಕೆಟ್ಟು ನಿಂತಿದ್ದ ವಾಹನವೊಂದಕ್ಕೆ ಗೂಡ್ಸ್ ವಾಹನ ಢಿಕ್ಕಿಯಾಗಿ ಮೂವರು ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಠಾಣಾ ವ್ಯಾಪ್ತಿಯ ಮೇಡಹಳ್ಳಿ ಮೇಲ್ಸೇತುವೆ ಬಳಿ ನಡೆದಿದೆ. ಗೂಡ್ಸ್ ವಾಹನದಲ್ಲಿದ್ದ ಮಣಿಕಂಠ(32), ಸುರೇಶ್(29), ಶ್ರೀನಿವಾಸ್(40) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಕೋಲಾರದಿಂದ ಬೆಂಗಳೂರಿಗೆ ಆಲೂಗಡ್ಡೆ ತುಂಬಿಸಿಕೊಂಡು ಬರ್ತಿದ್ದ ಕ್ಯಾಂಟರ್ ವಾಹನ ಮೇಡಹಳ್ಳಿ ಮೇಲ್ಸೇತುವೆ ಮೇಲೆ ಕೆಟ್ಟು ನಿಂತಿತ್ತು. ರಸ್ತೆ ಬದಿ ಕ್ಯಾಂಟರ್ ನಿಲ್ಲಿಸಿ ಚಾಲಕ ಟೈಯರ್ ಬದಲಿಸುತ್ತಿದ್ದ. ಇದೇ ವೇಳೆ ನಿಂತಿದ್ದ ಕ್ಯಾಂಟರ್‌ಗೆ ಹಿಂದೆಯಿಂದ ಗೂಡ್ಸ್ ವಾಹನ ಢಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

94 ಗ್ರಾಂ ಗಾಂಜಾ ವಶ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಬಂಧಿಸಿರುವ ರಾಮಮೂರ್ತಿನಗರ ಠಾಣೆ ಪೊಲೀಸರು 52 ಸಾವಿರ ರೂ. ಮೌಲ್ಯದ 14 ಗ್ರಾಂ ಎಂಡಿಎಂಎ ಮಾತ್ರೆ ಹಾಗೂ 94 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ಇತ್ತೀಚೆಗೆ ಕೆಆರ್‌ಪುರ ರೈಲ್ವೆ ನಿಲ್ದಾಣದ ಸಮೀಪ ಪೊಲೀಸದ ದಾಳಿ ಮಾಡಿ ಆರೋಪಿಯನ್ನು ಬಂಧಿಸಿದ್ದಾರೆ. ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಜಿಬಿಎ ವ್ಯಾಪ್ತಿಯ ಐದು ಮಹಾನಗರ ಪಾಲಿಕೆ ಚುನಾವಣೆ | ಬಿವೈವಿ ನೇತೃತ್ವದಲ್ಲಿ ತಂಡ ರಚನೆ

ಬಿಜೆಪಿಯಿಂದ ಉಸ್ತುವಾರಿಗಳ ನಿಯೋಜನೆ

ಬೆಂಗಳೂರು: ಮುಂಬರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ದ ಪಾಲಿಕೆಗಳ ಚುನಾವಣೆಗೆ ಬಿಜೆಪಿ ರಾಜ್ಯ ತಂಡ, ಪ್ರತೀ ಪಾಲಿಕೆಗಳಿಗೆ ತಂಡ ಹಾಗೂ ಜಿಬಿಎಗೆ ಒಳಪಡುವ ವಿಧಾನಸಭಾ ಕ್ಷೇತ್ರಗಳಿಗೆ ಉಸ್ತುವಾರಿಗಳನ್ನಾಗಿ ಮುಖಂಡರನ್ನು ನಿಯೋಜಿಸಲಾಗಿದೆ.

ರಾಜ್ಯ ತಂಡದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಕೇಂದ್ರ ಸಚಿವರಾದ ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಶಾಸಕರಾದ ಎಸ್. ಸುರೇಶ್ ಕುಮಾರ್, ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಂಸದರಾದ ಪಿ.ಸಿ. ಮೋಹನ್, ಡಾ. ಸಿ.ಎನ್. ಮಂಜುನಾಥ, ತೇಜಸ್ವಿ ಸೂರ್ಯ, ಡಾ. ಕೆ. ಸುಧಾಕರ್ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಸ್. ನಂದೀಶ್ ರೆಡ್ಡಿ ಅವರಿದ್ದಾರೆ.



ಬೆಂಗಳೂರು ಪೂರ್ವ ಪಾಲಿಕೆಯ ತಂಡದಲ್ಲಿ ಶಾಸಕರಾದ ಬೈರತಿ ಬಸವರಾಜ್, ಮಂಜುಳಾ ಅರವಿಂದ ಲಿಂಬಾವಳಿ, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಎಸ್. ನಂದೀಶ್ ರೆಡ್ಡಿ; ಉತ್ತರ ಪಾಲಿಕೆಯ ತಂಡದಲ್ಲಿ ಶಾಸಕರಾದ ಎಸ್.ಆರ್. ವಿಶ್ವನಾಥ್, ಎಸ್. ಮುನಿರಾಜು ದಾಸರಹಳ್ಳಿ, ರಾಜ್ಯ ಕಾರ್ಯದರ್ಶಿ ತಮ್ಮೇಶ್ ಗೌಡ, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಇದ್ದಾರೆ.

ಬೆಂಗಳೂರು ಪಶ್ಚಿಮ ಪಾಲಿಕೆಯ ತಂಡದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ, ಶಾಸಕರಾದ ಎಸ್. ಸುರೇಶ್ ಕುಮಾರ್, ಡಾ. ಸಿ.ಎನ್. ಅಶ್ವತ್ಥನಾರಾಯಣ, ಗೋಪಾಲಯ್ಯ, ಮುನಿರತ್ನ, ರವಿ ಸುಬ್ರಹ್ಮಣ್ಯ, ಮುನಿರಾಜು ದಾಸರಹಳ್ಳಿ, ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಅವರಿದ್ದಾರೆ.

ಬೆಂಗಳೂರು ದಕ್ಷಿಣ ಪಾಲಿಕೆಯ ತಂಡದಲ್ಲಿ ಶಾಸಕರಾದ ಸತೀಶ್ ರೆಡ್ಡಿ, ಎಂ. ಕೃಷ್ಣಪ್ಪ, ಸಿ.ಕೆ. ರಾಮಮೂರ್ತಿ, ರಾಜ್ಯಕಾರ್ಯಕಾರಿಣಿ ವಿಶೇಷ ಆಹ್ವಾನಿತೆ ಪೂರ್ಣಿಮಾ ಪ್ರಕಾಶ್; ಕೇಂದ್ರ ಪಾಲಿಕೆಯ ತಂಡದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, ಶಾಸಕರಾದ ಎಸ್. ರಘು, ಸಿ.ಕೆ. ರಾಮ ಮೂರ್ತಿ, ಉದಯ ಬಿ. ಗರುಡಾಚಾರ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಮತ್ತು ಮಹಿಳಾ ಮೋರ್ಚಾ ಮಾಜಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸರೋಜಿನಿ ಭಾರದ್ವಾಜ್ ಇದ್ದಾರೆ.

ವಿಧಾನಸಭಾ ಕ್ಷೇತ್ರವಾರು ಮುಖಂಡರ ನೇಮಕ


ಯಲಹಂಕ - ಎಸ್.ಆರ್. ವಿಶ್ವನಾಥ್, ಕೆ.ಆರ್. ಪುರಂ ಬೈರತಿ ಬಸವರಾಜ್, ಆರ್‌ಆರ್ ನಗರ ಮುನಿರತ್ನ, ದಾಸರಹಳ್ಳಿ ಎಸ್. ಮುನಿರಾಜು, ಮಹಾಲಕ್ಷ್ಮಿ ಲೇಔಟ್ ಗೋಪಾಲಯ್ಯ, ಮಲ್ಲೇಶ್ವರ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಿ.ವಿ. ರಾಮನ್ ನಗರ ಎಸ್. ರಘು, ರಾಜಾಜಿನಗರ ಎಸ್. ಸುರೇಶ್ ಕುಮಾರ್, ಚಿಕ್ಕಪೇಟೆ ಉದಯ ಗರುಡಾಚಾರ್, ಬಸವನಗುಡಿ ರವಿ ಸುಬ್ರಹ್ಮಣ್ಯ.ಪದ್ಮನಾಭನಗರ ಆರ್. ಅಶೋಕ, ಜಯನಗರ ಸಿ.ಕೆ. ರಾಮಮೂರ್ತಿ, ಮಹದೇವಪುರ ಮಂಜುಳಾ ಅರವಿಂದ ಲಿಂಬಾವಳಿ, ಬೊಮ್ಮನಹಳ್ಳಿ ಸತೀಶ್ ರೆಡ್ಡಿ, ಬೆಂಗಳೂರು ದಕ್ಷಿಣ ಎಂ. ಕೃಷ್ಣಪ್ಪ, ಬ್ಯಾಟರಾಯನಪುರ ಎಂ.ಟಿ.ಬಿ, ನಾಗರಾಜ್, ಯಶವಂತಪುರ ಎಂ.ಡಿ. ಲಕ್ಷ್ಮೀನಾರಾಯಣ, ಹೆಬ್ಬಾಳ ಎಸ್. ಕೇಶವಪ್ರಸಾದ್. ಪುಲಕೇಶಿನಗರ ಅಖಂಡ ಶ್ರೀನಿವಾಸಮೂರ್ತಿ, ಸರ್ವಜ್ಞನಗರ ಧೀರಜ್ ಮುನಿರಾಜು, ಶಿವಾಜಿ ನಗರ ತುಳಸಿ ಮುನಿರಾಜು ಗೌಡ, ಶಾಂತಿನಗರ ಡಿ.ಎಸ್. ಅರುಣ್, ಗಾಂಧಿನಗರ ಮಾಜಿ ಜಿಲ್ಲಾಧ್ಯಕ್ಷ ನಾರಾಯಣ ಗೌಡ, ಗೋವಿಂದರಾಜನಗರ ಕೆ.ಎಸ್. ನವೀನ್, ವಿಜಯನಗರ ಸುರೇಶ್‌ಗೌಡ ತುಮಕೂರು, ಚಾಮರಾಜಪೇಟೆ ಮಾಜಿ ಜಿಲ್ಲಾಧ್ಯಕ್ಷ ಜಿ. ಮಂಜುನಾಥ್ ಮತ್ತು ಬಿಟಿಎಂ ಲೇಔಟ್ ಎಚ್.ಎಸ್. ಗೋಪಿನಾಥ ರೆಡ್ಡಿ ಅವರನ್ನು ಉಸ್ತುವಾರಿಗಳಾಗಿ ನಿಯೋಜಿಸಲಾಗಿದೆ.

ಯುಎನ್-40 ಮ್ಯೂಸಿಕ್ ಫೆಸ್ಟಿವಲ್ ಸಮಾಪ್ತಿ

ಬೆಂಗಳೂರು: ನೈಸ್ ಗ್ರೌಂಡ್ಸ್‌ನಲ್ಲಿ ಆಯೋಜಿಸಲಾಗಿದ್ದ ಯುಎನ್-40 ಮ್ಯೂಸಿಕ್ ಫೆಸಿವಲ್‌ನ ಮೊದಲ ಆವೃತ್ತಿ ಭರ್ಜರಿಯಾಗಿ ಸಮಾಪ್ತಿಗೊಂಡಿತು.



ಎರಡು ದಿನಗಳ ಕಾಲ ನಡೆದ ಈ ಉತ್ಸವದಲ್ಲಿ ಸುಮಾರು 18ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ಸಂಗೀತ, ಹಾಸ್ಯ, ಆಹಾರ ಹಾಗೂ ವಿವಿಧ ಮನರಂಜನಾ ಚಟುವಟಿಕೆಯನ್ನು ಆನಂದಿಸಿದರು. ಸಾರೆಗಾಮ ಲೈವ್ ವತಿಯಿಂದ ಕೇವಲ ಸಂಗೀತ ಕಾರ್ಯಕ್ರಮವಷ್ಟೇ ಅಲ್ಲದೆ, ವೇದಿಕೆಯಾಚೆಯೂ ವಿಶೇಷ ಅನುಭವ ನೀಡುವ ಉದ್ದೇಶದಿಂದ ಈ ಉತ್ಸವವನ್ನು ರೂಪಿಸಲಾಗಿತ್ತು. ಲೈವ್ ಕಲಾವಿದರ ಪ್ರದರ್ಶನಗಳು, ಕ್ರಿಯೇಟರ್‌ಗಳ ಹಾಸ್ಯ ಕಾರ್ಯಕ್ರಮಗಳು, ಪ್ರೀ-ಗೇಮ್ ಪಾರ್ಟಿಯೊಂದಿಗೆ ಕಳೆಗಟ್ಟಿದ ಬಿಯರ್ ಗಾರ್ಡನ್, ಕ್ರಿಯೇಟರ್‌ಗಳ ಪ್ರದರ್ಶನಗಳು, ಇಂಟರಾಕ್ಟಿವ್ ಆಟಗಳು, ಗೇಮಿಂಗ್ ಝೋನ್‌ಗಳು ಮತ್ತು ಆಯ್ದ ಆಹಾರ ಮಳಿಗೆಗಳು ಸೇರಿ ಪ್ರತಿಯೊಂದು ವಿಭಿನ್ನ ಅನುಭವ ನೀಡುವಂತಿತ್ತು.



ಹರಿವು ಬುಕ್ಸ್‌ನಲ್ಲಿ ಸಂತೋಷಕುಮಾರ ಮೆಹೆಂದಳೆ ಅವರ ವಿಕ್ರಮಾದಿತ್ಯ ವಾತಾಪಿ ಭಾಗ-2 ಪುಸ್ತಕ ಕುರಿತಂತೆ ಸಂವಾದ ಮತ್ತು ಸಹಿ ಕಾರ್ಯಕ್ರಮ ನಡೆಯಿತು.

ಪರಮ್ ವಿಹಾರ-10 ಕಾರ್ಯಕ್ರಮ

ಬೆಂಗಳೂರು: ಪರಮ್ ಫೌಂಡೇಷನ್ ಆಯೋಜಿಸಲಾಗಿದ್ದ ಪರಮ್ ವಿಹಾರ-10 ಕಾರ್ಯಕ್ರಮ ಶಾಸ್ತ್ರೀಯ ಸಂಗೀತ ಮತ್ತು ನೃತ್ಯವು ಸೇರಿದ್ದ ಕಲಾಪ್ರೇಮಿಗಳ ಮನಗೆಲ್ಲುವಲ್ಲಿ ಯಶಸ್ವಿಯಾಯಿತು.



ಜಯನಗರದಲ್ಲಿರುವ ಪಟ್ಟಾಭಿರಾಮ ಸೇವಾ ಮಂಡಳಿಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಂಜುನಾಥ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯು ಸಭಿಕರನ್ನು ಮಂತ್ರಮುಗ್ಧಗೊಳಿಸಿತು. ಗಾಯನದ ನಂತರ ನಡೆದ ಶ್ರೀನಿಧಿ ರಾಮಸ್ವಾಮಿ ಅವರ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನವು ಸಭೆಯ ಕಣ್ಮಣಿಯಾಯಿತು. ಪರಮ್‌ನಿಂದ 10ನೇ ಆವೃತ್ತಿ ಕಾರ್ಯಕ್ರಮ. ಪರಮ್ ಫೌಂಡೇಶನ್‌ನ ಈ 10ನೇ ಆವೃತ್ತಿಯು ಹೊಸ ತಲೆಮಾರಿನ ಕಲಾವಿದರ ಪ್ರತಿಭೆಯನ್ನು ಅನಾವರಣಗೊಳಿಸುವಲ್ಲಿ ದೊಡ್ಡ ಯಶಸ್ಸು ಕಂಡಿದೆ. ಸಂಜೆ 6 ಗಂಟೆಯಿಂದ ಆರಂಭವಾದ ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ನಾನಾ ಭಾಗಗಳಿಂದ ಬಂದಿದ್ದ ಸಂಗೀತ ಮತ್ತು ನೃತ್ಯ ಆಸಕ್ತರು ಕಲಾವಿದರನ್ನು ಹುರಿದುಂಬಿಸಿದರು.

ಕಾರು ಡ್ರಿಫ್ಟಿಂಗ್ ಪ್ರಕರಣ: ಪೊಲೀಸ್ ನೋಟಿಸ್

ಬೆಂಗಳೂರು: ನಗರದ ಅನಿಲ್ ಕುಂಬ್ಳೆ ವೃತ್ತದ ಬಳಿ ಐಷಾರಾಮಿ ಕಾರು ಡ್ರಿಫ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಲ್ಯಾಂಬೊರ್ಗಿನಿ ಕಾರನ್ನು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.ಕೋಟ್ಯಂತರ ರೂ. ಬೆಲೆ ಬಾಳುವ ಐಷರಾಮಿ ಲ್ಯಾಂಬೊ ರ್ಗಿನಿ ಕಾರು ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಅವರಿಗೆ ಸೇರಿದೆ ಎಂಬ ಶಂಕೆ ಪೊಲೀಸರಲ್ಲಿ ವ್ಯಕ್ತವಾಗಿದೆ. ಅತ್ಯಂತ ಜನನಿಬಿಡ ಹಾಗೂ ವಾಹನ ದಟ್ಟಣೆ ಇರುವ ನಡು ರಸ್ತೆಯಲ್ಲಿ ಕಾರು ಡ್ರಿಫ್ಟಿಂಗ್ ಮಾಡಿದ್ದು ಯಾರು ಎನ್ನುವ ಬಗ್ಗೆ ತನಿಖೆ ನಡೆಯುತ್ತಿದೆ. ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಕಾರು ಡ್ರಿಫ್ಟಿಂಗ್ ಮಾಡಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಇದೇ ಕಾರಣಕ್ಕೆ ರಿಕ್ಕಿ ರೈಗೆ ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಪರಿಶೀಲಿಸಲು ಆರ್‌ಟಿಓಗೆ ಪೊಲೀಸರು ಪತ್ರ ಬರೆದಿದ್ದಾರೆ.

ಬಾಲ ಪ್ರತಿಭೆ ವಿಯಾನ್ಶ್ ದೇಶಪಾಂಡೆಗೆ ಪ್ರಶಸ್ತಿ

ಬೆಂಗಳೂರು: ಬಾಲ ಪ್ರತಿಭೆ ವಿಯಾನ್ಶ್ ದೇಶಪಾಂಡೆ ತನ್ನ ಅಸಾಧಾರಣ ಸಾಧನೆಗಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ನೀಡಲಾಗುವ ಪ್ರತಿಷ್ಠಿತ ಹೊಯ್ಸಳ ಪ್ರಶಸ್ತಿಯನ್ನು ಪಡೆದಿದ್ದಾರೆ.

ಅಸಾಧಾರಣ ಸಾಧನೆಗಾಗಿ ಬಾಲಕರಿಗೆ ಹೊಯ್ಸಳ ಪ್ರಶಸ್ತಿ ಹಾಗೂ ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು ಅವನು ತನ್ನ ಎರಡು ವಿಶ್ವ ದಾಖಲೆಗಳ ಆಧಾರದ ಮೇಲೆ ಪಡೆದಿದ್ದಾನೆ. ಕೇವಲ 1 ನಿಮಿಷದಲ್ಲಿ ಅತಿ ಹೆಚ್ಚು ಶ್ಲೋಕಗಳನ್ನು ಪಠಿಸುವುದು ಹಾಗೂ 1ರಿಂದ 10ರವರೆಗಿನ ಗುಣಾಕಾರ ಪಟ್ಟಿಗಳನ್ನು 2 ನಿಮಿಷ 43 ಸೆಕೆಂಡ್‌ಗಳಲ್ಲಿ ಹೇಳಿದ್ದಾನೆ. ಕೇವಲ 5 ವರ್ಷ 8 ತಿಂಗಳ ವಯಸ್ಸಿನಲ್ಲಿ ಸಾಧಿಸಿದ್ದಾನೆ.



ಪ್ರಶಸ್ತಿಯು ಪ್ರಮಾಣಪತ್ರ ಹಾಗೂ ರೂ.10 ಸಾವಿರ ನಗದು ಬಹುಮಾನ ಒಳಗೊಂಡಿದೆ. ಪ್ರತಿ ವರ್ಷ ಸುಮಾರು 5ರಿಂದ 18ವರ್ಷದೊಳಗಿನ ಸುಮಾರು 20 ಮಕ್ಕಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಗಾಗಿ ತಂದೆ ಹರ್ಷ ದೇಶಪಾಂಡೆ, ತಾಯಿ ಶೀತಲ್ ದೇಶಪಾಂಡೆ ಸೇರಿದಂತೆ ದೇಶಪಾಂಡೆ ಕುಟುಂಬದವರು ಸಂತಸ ವ್ಯಕ್ತಪಡಿಸಿದ್ದಾರೆ.

ಜೀವನ್ಮುಖಿ ಸುರೇಶ್, ಕೆ.ಆರ್.ಪೇಟೆ ಶಿವರಾಜ್‌ಗೆ ಹಸಿರು ಸಿರಿ ಪ್ರಶಸ್ತಿ

ಬೆಂಗಳೂರು: ಹಸಿರುಭೂಮಿ ಸಾಂಸ್ಕೃತಿಕ ಟ್ರಸ್ಟ್ ನೀಡುತ್ತಿರುವ ಹಸಿರು ಸಿರಿ ಪ್ರಶಸ್ತಿ ಪುರಸ್ಕಾರಕ್ಕೆ ರಾಜ್ಯ ಮಟ್ಟದ ಮೂರು ಮಂದಿ ಗಣ್ಯ ಸಾಧಕರು ಆಯ್ಕೆಯಾಗಿದ್ದಾರೆ. ಪ್ರಸಿದ್ಧ ಸಾಹಿತಿ ಹಾಗೂ ಅಂಕಣಕಾರಾದ ಎಸ್. ದಿವಾಕರ್ , ಸಂಘಟಕ ಹಾಗೂ ಪತ್ರಕರ್ತರಾದ ಜೀವನ್ಮುಖಿ ಸುರೇಶ್, ಚಲನಚಿತ್ರ ಹಾಸ್ಯ ನಟರಾದ ಶಿವರಾಜ್ ಕೆ.ಆರ್. ಪೇಟೆ ರವರು 2026ರ ಹಸಿರು ಸಿರಿ ಪ್ರಶಸ್ತಿ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ಸಮಾರಂಭ ಮಾ.29ರಂದು ಭಾನುವಾರ ಸಂಜೆ 4-00 ಗಂಟೆಗೆ ನಗರದ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಲಿದೆ. ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಉದ್ಘಾಟನೆ ಮಾಡುವರು. ಪ್ರಸಿದ್ಧ ಸಾಹಿತಿ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುವರು. ಪೊಲೀಸ್ ಉಪ ಮಹಾನಿರೀಕ್ಷಕರಾದ ಡಾ.ಎ.ಎನ್. ಪ್ರಕಾಶ್‌ಗೌಡ ಐಪಿಎಸ್ ಅಧ್ಯಕ್ಷತೆ ವಹಿಸುವರು.





ಚಾಲಕಿಯರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ

ಹೊಸ ಆಟೋ ಖರೀದಿಗೆ ಹತ್ತು ಲಕ್ಷ ನೆರವು

ಬೆಂಗಳೂರು: ನನ್ನ ಕಡೆಯಿಂದಲೇ ಹತ್ತು ಆಟೋ ಚಾಲಕಿಯರಿಗೆ ಹೊಸ ಆಟೋ ಖರೀದಿ ಮಾಡಲು ಹತ್ತು ಲಕ್ಷ ರೂ. ಒದಗಿಸುತ್ತೇನೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಭರವಸೆ ನೀಡಿದರು.



ಬಿ ಪ್ಯಾಕ್, ಸಿಜಿಐ ಹಾಗೂ ನಮ್ಮ ಸಾರಥಿ ಟ್ರಸ್ಟ್ ಜಂಟಿಯಾಗಿ ಭಾನುವಾರ ಕೊಂಡಜ್ಜಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಆಟೋ ಚಾಲಕಿಯರಿಗೆ ಆಟೋ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಪ್ಯಾಕ್ ವತಿಯಿಂದ ಸುಮಾರು 300ಕ್ಕೂ ಅಧಿಕ ಮಹಿಳೆಯರಿಗೆ ಆಟೋ ತರಬೇತಿ ನೀಡಿ, ಪರವಾನಿಗೆ ನೀಡಿದ್ದಾರೆ. ಅವರಲ್ಲಿ ವಿವಿಧ ಧಾನಿಗಳ ಸಹಾಯದಿಂದ ಪ್ರಸ್ತುತ 45 ಆಟೋ ಚಾಲಕಿಯರಿಗೆ ಆಟೋ ನೀಡಲಾಗಿದೆಂದರು.

ನನ್ನ ಕಡೆಯಿಂದಲೇ ಹತ್ತು ಆಟೋ ಚಾಲಕಿಯರಿಗೆ ಹೊಸ ಆಟೋ ಖರೀದಿ ಮಾಡಲು ಹತ್ತು ಲಕ್ಷ ರೂ.ಒದಗಿಸುತ್ತೇನೆ. ಹೀಗೆ ಎಲ್ಲರೂ ಕೈಜೋಡಿಸಿದರೆ ಎಲ್ಲಾ ಆಟೋ ಚಾಲಕಿಯರು ಸ್ವಾವಲಂಭಿಯಾಗಿ ಬದುಕಬಹುದಾಗಿದೆ ಎಂದು ಹೇಳಿದರು. ಆಟೋಗಳಿಗೆ ಬೇಕಾಗುವ ಚಾರ್ಜಿಂಗ್ ಪಾಯಿಂಟ್ಸ್‌ಗಳನ್ನು ಗುರುತಿಸಿ ಕೊಡಿ, ಸಾರಿಗೆ ಇಲಾಖೆಯಿಂದಲೇ ಚಾರ್ಜಿಂಗ್ ಪಾಯಿಂಟ್‌ಗಳನ್ನು ಹಾಕಿ ಕೊಡಲಾಗುವುದು. ಜತೆಗೆ ಆಟೋ ಚಾಲಕಿಯರಿಗೆ ಮನೆ ಒದಗಿಸಲು ಬೆಂಗಳೂರಿನಲ್ಲಿ ಜಾಗವಿಲ್ಲ, ಬೆಂಗಳೂರಿನ ಹೊರ ವಲಯದಲ್ಲಿ ಜಾಗವಿದ್ದು, ಹಾಗಾಗಿ ವಸತಿಗಾಗಿ ಅರ್ಜಿಯನ್ನು ಹಾಕಿ, ಈ ಬಗ್ಗೆ ವಸತಿ ಸಚಿವ ಜಮೀರ್ ಅಹಮ್ಮದ್ ಬಳಿ ನಾನು ಮಾತನಾಡುತ್ತೇನೆ ಎಂದು ಭರವಸೆ ನೀಡಿದರು. ಪ್ರಸ್ತುತ ಮಹಿಳೆಯರು ರಾಜಕೀಯ ಕ್ಷೇತ್ರವನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆ ಮೂಲಕ ಗಂಡಸರಷ್ಟೇ ಸಮಾನ ರೀತಿಯಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು. ನಮ್ಮ ಸಾರಥಿ ಟ್ರಸ್ಟ್ ಅಧ್ಯಕ್ಷ ಸಂಪತ್ ಕುಮಾರ್ ಮಾತನಾಡಿ, ಆಟೋ ಚಾಲಕಿಯರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ, ನಗರದ ವಿವಿಧ ಕಡೆಯಲ್ಲಿ ಮನೆ ನಿರ್ಮಿಸುವಂತೆ ಹಾಗೂ ಚಾರ್ಜಿಂಗ್ ಪಾಯಿಂಟ್ಸ್ ವ್ಯವಸ್ಥೆ ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಬಿ ಪ್ಯಾಕ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೇವತಿ ಅಶೋಕ್, ಸಿಜಿಐ ಪಾಲುದಾರ ಸುಧೀರ್ ಶರ್ಮ ಮುಂತಾದವರು ಉಪಸ್ಥಿತರಿದ್ದರು.

ರೀಸನ್ ಪಾಯ್ಸನ್ಸ್ ಫ್ಯಾಶನ್ ಪುಸ್ತಕ ಲೋಕಾರ್ಪಣೆ

ನೈಜ ಘಟನಾವಳಿಯ ಆತ್ಮಕಥನ

ಬೆಂಗಳೂರು: ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡಿದ ಅಧಿಕಾರಿಗಳು ಆಸಕ್ತಿದಾಯಕ ಸಾಹಿತ್ಯ ರಚಿಸಿ ಗಮನ ಸೆಳೆದಿದೆ. ಇದು ಸಾಹಿತ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆಯಾಗಿದೆ ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ತಿಳಿಸಿದರು.

ಚಿತ್ರಕಲಾ ಪರಿಷತ್‌ನಲ್ಲಿ ಅಭಿರುಚಿ ಪ್ರಕಾಶನ ಮತ್ತು ಕಾಡುಮಲ್ಲೇಶ್ವರ ಗೆಳೆಯರ ಬಳಗದಿಂದ ನಿವೃತ್ತ ಐಜಿಪಿ ಚಂದ್ರಶೇಖರ್ ಅವರ ಆತ್ಮಕಥೆ ರೀಸನ್ ಪಾಯ್ಸನ್ಸ್ ಫ್ಯಾಶನ್ ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಅಧಿಕಾರಿಗಳಾಗಿ ಸಾಹಿತ್ಯ ರಚಿಸಿದ ಸಾಲಿಗೆ ಸಿ. ಚಂದ್ರಶೇಖರ್ ಸೇರ್ಪಡೆಯಾಗುತ್ತಾರೆ. ಈ ಕೃತಿ ಅತ್ಯಂತ ಆಸಕ್ತಿದಾಯಕವಾಗಿದೆ. ಇವರ ಬರವಣಿಗೆಯಲ್ಲಿ ಸಾಹಿತ್ಯದ ಬೆಳಕಿದೆ ಎಂದರು.



ನಿವೃತ್ತ ಐಜಿಪಿ ಸಿ.ಚಂದ್ರಶೇಖರ್ ಮಾತನಾಡಿ, ಇದು ನನ್ನ ಜೀವನದ ಕಥೆ ಅನ್ನುವ ಬದಲು ನಾನು ನೋಡಿದ ವ್ಯಕ್ತಿಗಳು, ಸಮಾಜದಲ್ಲಿ ನಡೆದ ನೈಜ ಘಟನೆಗಳು. ರೈತ ಸಂಘಟನೆ ಹೋರಾಟದ ವಿಷಯಗಳನ್ನು ಒಳಗೊಂಡಿದೆ. ಇದು ತಮ್ಮ ನಾಲ್ಕನೇ ಪುಸ್ತಕವಾಗಿದೆ. 1974ರಲ್ಲಿ ಭೂ ಕಾಯಿದೆ ಬಂದಾಗ ರೈತರ ಬೇಡಿಕೆಗಳಿಗೆ ಸರ್ಕಾರ ಹೇಗೆ ಸ್ಪಂದಿಸಿತು ಎಂಬುದು ಹಾಗೂ ಪೊಲೀಸ್ ಅಧಿಕಾರಿಯಾಗಿ ಯಾವ ರೀತಿಯಲ್ಲಿ ಮಧ್ಯಸ್ಥಿಕೆ ವಹಿಸಿದೆ ಎನ್ನುವ ವಿವರಗಳು ಇದರಲ್ಲಿವೆ ಎಂದರು.

ರೈತ ಹೋರಾಟಗಾರರಾದ ನಂಜುಂಡಸ್ವಾಮಿ, ಎಚ್.ಎಸ್.ರುದ್ರಪ್ಪ, ಸುಂದರೇಶ್, ಕಡಿದಾಳು ಶಾಮಣ್ಣ ಅವರ ಜತೆಯಲ್ಲಿ ಉತ್ತಮ ಒಡನಾಟದಿಂದ ರೈತ ಚಳುವಳಿ, ರೈತರ ಸಮಸ್ಯೆಗಳು ಅರ್ಥವಾಯಿತು. ರಾಜ್ಯದ ಎಲ್ಲ ರೈತರ ಸಮಸ್ಯೆಗಳು ಒಂದೇ ಆಗಿರುವುದಿಲ್ಲ. ಇಂದಿನ ಯುವ ಸಮಾಜ ನಮಗಿಂತ ಡೊಡ್ಡವರು ಹಾಗೂ ಸಾಧನೆ ಮಾಡಿರುವ ವ್ಯಕ್ತಿಗಳ ಆದರ್ಶಗಳನ್ನು ಮೈಗೂಡಿಸಿ ಕೊಳ್ಳಬೇಕು ಎಂದು ಹೇಳಿದರು. ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ, ಪ್ರಕಾಶಕ ಅಭಿರುಚಿ ಗಣೇಶ್, ಸುಚಿತ ನಾಗೇಶ್ ಇತರರಿದ್ದರು.

ಸಾಧಕಿಯರಿಗೆ ಪ್ರಶಸ್ತಿ ಪ್ರದಾನ

ಬೈಂದೂರು: ಜೆಸಿಐ ಉಪ್ಪುಂದ ಸುಪ್ರೀಂ ಘಟಕದ ವತಿಯಿಂದ, ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಶಿರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಸಾಧಕಿಯರಿಗೆ ಗೌರವಾರ್ಪಣೆ ನಡೆಯಿತು. ಘಟಕದ ಅಧ್ಯಕ್ಷ ರವಿರಾಜ್ ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ಲೇಡಿ ಕೊರ್ಡಿನೇಟರ್ ಗೀತಾ ಶೆಟ್ಟಿ ಅವರ ಸಾರಥ್ಯದಲ್ಲಿ ಹಲವಾರು ಸಮಾಜಮುಖಿ ಹಾಗೂ ಶೈಕ್ಷಣಿಕವಾಗಿ ಸೇವೆಸಲ್ಲಿಸಿ, ರಾಜ್ಯಪ್ರಶಸ್ತಿ ಪುರಸ್ಕೃತರಾದ ಹಡವಿನಕೋಣೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿ ನಯನಾ ಶೆಟ್ಟಿ ಮತ್ತು ಜೆಸಿಐ ವಲಯಾಧಿಕಾರಿ ಜ್ಯೋತಿ ಜಯರಾಮ್ ಶೆಟ್ಟಿ ಇವರಿಗೆ ಮಹಿಳಾ ಸಾಧಕಿ ಪ್ರಶಸ್ತಿ ಪ್ರದಾನಿಸಿಗೌರವಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕರು, ಜೆಸಿಐ ಘಟಕದ ಸದಸ್ಯರುಗಳು, ಹಳೆ ವಿದ್ಯಾರ್ಥಿ ಸಂಘ, ಎಸ್‌ಡಿಎಂಸಿ ಸದಸ್ಯರು ಇದ್ದರು.

ಕಿರುಸುದ್ದಿ

ಇಂದಿನಿಂದ ಪೇರಾಲ್ ಕ್ಷೇತ್ರದಲ್ಲಿ ಭಂಡಾರ ಕೊಟ್ಯಾದ ಪುನರ್ ಪ್ರತಿಷ್ಠಾ ಮಹೋತ್ಸವ

ಕಾಸರಗೋಡು: ಮೊಗ್ರಾಲ್ ಗ್ರಾಮದ ಪೇರಾಲ್ ಗುಂಡದಮೂಲೆ ಶ್ರೀ ಪೂಮಾಣಿ ಕಿನ್ನಿಮಾಣಿ ಕ್ಷೇತ್ರದಲ್ಲಿ ಭಂಡಾರ ಕೊಟ್ಯಾದ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಮಹೋತ್ಸವವು ಮಾ.23ರಿಂದ 25ರ ವರೆಗೆ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ಅವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಲಿದೆ.

ಮಾ.23ರಂದು ಸಂಜೆ 3.30ಕ್ಕೆ ಕಣ್ಣೂರು ರಕ್ತೇಶ್ವರಿ ಕ್ಷೇತ್ರದಿಂದ ಹೊರೆಕಾಣಿಕೆ ಮೆರವಣಿಗೆ ಆರಂಭವಾಗಲಿದ್ದು, ಕ್ಷೇತ್ರಕ್ಕೆ ಆಗಮಿಸಿದ ತಂತ್ರಿವರ್ಯರಿಗೆ ಪೂರ್ಣಕುಂಭ ಸ್ವಾಗತ ನೀಡುವ ಮೂಲಕ ಮಹೋತ್ಸವಕ್ಕೆ ಚಾಲನೆ, ಬಳಿಕ ವಿವಿಧ ವೈದಿಕ ಕಾರ್ಯಕ್ರಮಗಳು ಜರಗಲಿವೆ.

ಮಾ.25ರಂದು ಬೆಳಗ್ಗೆ 10.30ಕ್ಕೆ ಪುನರ್ ಪ್ರತಿಷ್ಠಾ ಕಾರ್ಯಕ್ರಮ ನೆರವೇರಲಿದ್ದು, ಬಳಿಕ ವಿವಿಧ ಗಣ್ಯರ ಸಮ್ಮುಖದಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ಈ ಸಂದರ್ಭದಲ್ಲಿ ಕ್ಷೇತ್ರದ ತಂತ್ರಿಗಳಾದ ಉಳಿಯತ್ತಾಯ ವಿಷ್ಣು ಆಸ್ರ ಅವರನ್ನು ಸನ್ಮಾನಿಸಲಾಗುವುದು.

ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ

ಕಾಸರಗೋಡು: ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣ್ಣೂರು ಅಬ್ದುಲ್ಲ ಮಾಸ್ತರ್ ಅವರು ಕಾಸರಗೋಡು ಜಿಲ್ಲಾಧಿಕಾರಿ ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ಎರಡು ಸೆಟ್ ನಾಮಪತ್ರಗಳನ್ನು ಸಲ್ಲಿಸಿದರು. ನಾಮಪತ್ರ ಸಮರ್ಪಿಸಿದ ನಂತರ ಮಾತನಾಡಿದ ಅವರು, ಮಂಜೇಶ್ವರ ಕ್ಷೇತ್ರದಲ್ಲಿ ಮುಸ್ಲಿಂಲೀಗ್ ಅಭ್ಯರ್ಥಿ ಎ.ಕೆ.ಎಂ.ಅಶ್ರಫ್ ವಿರುದ್ಧ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ತಿಳಿಸಿದರು. 2019ರ ಮಂಜೇಶ್ವರ ವಿಧಾನಸಭಾ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆಯ ಸಂದರ್ಭ ಮುಸ್ಲಿಂಲೀಗ್ ನಾಯಕರ ಭರವಸೆಗಳ ಆಧಾರದ ಮೇಲೆ ತನ್ನ ನಾಮಪತ್ರ ಹಿಂಪಡೆಯಲಾಗಿತ್ತು. ಆದರೆ ಬೇಡಿಕೆಗಳನ್ನು ಈಡೇರಿಸದ ಹಿನ್ನೆಲೆಯಲ್ಲಿ ಈ ಬಾರಿ ನಾಮಪತ್ರ ಸಲ್ಲಿಸುವುದಾಗಿ ಅವರು ಹೇಳಿದರು.

ಇಂದು ದೇವರ ದಾಸಿಮಯ್ಯ ಜಯಂತಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃ ತಿ ಇಲಾಖೆ ಹಾಗೂ ವಿಶ್ವವಿದ್ಯಾನಿಲಯ ಕಾಲೇಜು ಹಂಪನಕಟ್ಟೆ ಇವರ ಸಹಕಾರದೊಂದಿಗೆ ದೇವರ ದಾಸಿಮಯ್ಯ ಜಯಂತಿ ಮಾ. 23 ರಂದು ನಗರದ ಹಂಪನಕಟ್ಟೆ ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾ ಭವನದಲ್ಲಿ ಆಯೋಜಿಸಲಾಗಿದೆ. ವಿಧಾನ ಸಭೆ ಸ್ಪೀಕರ್ ಯು.ಟಿ ಖಾದರ್ ಉಪಸ್ಥಿತಿಯಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಿ.ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಲಿದ್ದಾರೆ. ಉಡುಪಿ ಶ್ರೀ ಪೂರ್ಣಪ್ರಜ್ಞ ಸಂಧ್ಯಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಪ್ರಜ್ಞಾ ಮಾರ್ಪಳ್ಳಿ ಜಯಂತಿ ಸಂದೇಶವನ್ನು ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃ ತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಉಡುಪಿಯಲ್ಲಿ


ಬೆಳಗ್ಗೆ 10 ಗಂಟೆಗೆ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲಿನಲ್ಲಿ ದೇವರ ದಾಸಿಮಯ್ಯ ಜಯಂತಿ ನಡೆಯಲಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಆರ್. ಹೆಬ್ಬಾಳ್ಕರ್ ಉದ್ಘಾಟಿಸಲಿದ್ದು, ಶಾಸಕ ಯಶ್‌ಪಾಲ್ ಸುವರ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಬಿ.ವೈ. ರಾಘವೇಂದ್ರ, ಶಾಸಕರಾದ ವಿ. ಸುನಿಲ್ ಕುಮಾರ್, ಗುರುರಾಜ್ ಶೆಟ್ಟಿ ಗಂಟಿಹೊಳೆ, ಎ. ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರ್ಮೆ ಸುರೇಶ್ ಶೆಟ್ಟಿ, ವಿಧಾನಪರಿಷತ್ ಶಾಸಕರಾದ ಎಸ್.ಎಲ್. ಭೋಜೇಗೌಡ, ಮಂಜುನಾಥ್ ಭಂಡಾರಿ, ಡಾ. ಧನಂಜಯ ಸರ್ಜಿ ಹಾಗೂ ಕಿಶೋರ್ ಕುಮಾರ್ ಪುತ್ತೂರು, ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ.ಗಫೂರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಉಡುಪಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ದ.ಕ. ಜಿಲ್ಲಾ ಪದ್ಮಶಾಲಿ ಮಹಾಸಭಾ ಉಡುಪಿ ಅಧ್ಯಕ್ಷ ರವಿ ಶೆಟ್ಟಿಗಾರ್, ಹಾಗೂ ಮತ್ತಿತರರು ಭಾಗವಹಿಸಲಿದ್ದು, ಉಡುಪಿಯ ಶೋಭಾ ಹರಿಪ್ರಸಾದ್ ಉಪನ್ಯಾಸ ನೀಡಲಿದ್ದಾರೆ.

ಓಮಿನಿ ಕಾರು ಡಿಕ್ಕಿ: ರಿಕ್ಷಾ ಚಾಲಕ ಗಾಯ

ಹೆಬ್ರಿ : ಆಟೋ ರಿಕ್ಷಾಕ್ಕೆ ಓಮಿನಿ ಕಾರು ಡಿಕ್ಕಿಯಾಗಿ ರಿಕ್ಷಾ ಚಾಲಕ ಗಾಯಗೊಂಡಿರುವ ಘಟನೆ ಹೆಬ್ರಿಯಲ್ಲಿ ನಡೆದಿದೆ. ಗುಂಡು ನಾಯ್ಕ ಎಂಬವರು ತನ್ನ ಆಟೋದಲ್ಲಿ ಹೆಬ್ರಿಯಿಂದ ಸೀತಾನದಿ ಕಡೆಗೆ ಹೋಗುತ್ತಿದ್ದಾಗ ಕೈಕಂಬ ಜಂಕ್ಷನ್ ಬಳಿ ಬಚ್ಚಪ್ಪ ಕಡೆಯಿಂದ ಬಂದ ಓಮಿನಿ ಕಾರು ರಿಕ್ಷಾದ ಹಿಂಬದಿಗೆ ಡಿಕ್ಕಿಯಾಗಿದೆ. ಅಪಘಾತದ ಪರಿಣಾಮ ಚಾಲಕ ರಸ್ತೆಗೆ ಬಿದ್ದು ಗಾಯಗೊಂಡಿದ್ದು, ಹೆಬ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಅಮ್ಮಕ್ಕ



ನಾಪೋಕ್ಲು: ಮುತ್ತಾರುಮುಡಿ ಗ್ರಾಮದ ಪಾರೆಮಜಲು ದಿ. ನಾಣಯ್ಯ ಅವರ ಪತ್ನಿ ಅಮ್ಮಕ್ಕ (90) ಭಾನುವಾರ ದೈವಾಧೀನರಾದರು. ಮೃತರ ಅಂತ್ಯಕ್ರಿಯೆ ಸೋಮವಾರ ಮುತ್ತಾರುಮುಡಿ ಗ್ರಾಮದಲ್ಲಿ ನಡೆಯಲಿದೆ. ಮೃತರು ಐದು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಜಯರಾಜ್ ಕುಮಾರ್



ಮಂಗಳೂರು: ಕೃಷಿ ಋಷಿ ಬಿರುದಾಂಕಿತ ಮಿಜಾರ್ ಹೊಸಮನೆ ದಿವಂಗತ ಜೀವಂಧರ ಕುಮಾರ್ ಅವರ ದ್ವಿತೀಯ ಪುತ್ರ ಜಯ ರಾಜ್ ಕುಮಾರ್ ಅವರು ಅಲ್ಪಕಾಲದ ಅನಾರೋಗ್ಯದಿಂದ ಚೆನ್ನೈನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನ ಹೊಂದಿದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.



ಹೆಜಮಾಡಿ ಶಿವನಗರ ಟೋಲ್ ಬಳಿ ಟ್ರಾನ್ಸ್ ಪಾರ್ಮರ್ ಕಂಬದಿಂದ ಸಿಡಿದ ಬೆಂಕಿ ಕಿಡಿ ಒಣಗಿದ ಹುಲ್ಲಿಗೆ ತಗಲಿ ಹತ್ತಿರದಲ್ಲಿದ್ದ ಟೈರ್ ಪಂಚರ್ ಅಂಗಡಿಯಲ್ಲಿದ್ದ ಎಲ್ಲಾ ಉಪಕರಣ ಬೆಂಕಿಗಾಹುತಿಯಾಗಿದೆ. ತಕ್ಷಣ ಮೂಲ್ಕಿ ನಗರ ಪಂಚಾಯತ್‌ನ ಟಾಂಕರ್ ನೀರಿನಿಂದ ಬೆಂಕಿ ಸ್ಥಳೀಯರ ಸಹಕಾರದೊಂದಿಗೆ ಬೆಂಕಿ ನಂದಿಸಲಾಯಿತು. ಭಾನುವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಘಟನೆ ನಡೆದಿದ್ದು ಅಗ್ನಿಶಾಮಕ ದಳ ಸ್ಥಳಕ್ಕಾಗಮಿಸಿ ಬೆಂಕಿಯನ್ನು ತಹಬಂದಿಗೆ ತಂದರು.

ಬಡಾನಿಡಿಯೂರು ಅಕ್ರಮ ರೆಸಾರ್ಟ್ ವಿವಾದ: ಮುಖ್ಯ ಕಾರ್ಯದರ್ಶಿಗೆ ಶಾಸಕ ಯಶ್‌ಪಾಲ್ ಪತ್ರ

ಉಡುಪಿ: ಬಡಾನಿಡಿಯೂರು ಗ್ರಾಮದ ಸರ್ವೇ ನಂಬರ್ 118/2ಎ1ಎ3 ಮತ್ತು 118/2ಬಿ ವ್ಯಾಪ್ತಿಯ 0.90 ಎಕರೆ ಜಾಗದಲ್ಲಿ ಉದ್ಯಾನವನ ಮತ್ತು ಬಯಲು ವಲಯವನ್ನು ನಿಯಮ ಬಾಹಿರವಾಗಿ ವಾಣಿಜ್ಯ ವಲಯಕ್ಕೆ ಬದಲಾಯಿಸಿ ಅಕ್ರಮ ರೆಸಾರ್ಟ್ ನಿರ್ಮಿಸಲು ನಕಲಿ ದಾಖಲೆಗಳ ಮೂಲಕ ಪ್ರಯತ್ನಿಸಲಾಗುತ್ತಿದೆ ಎಂದು ಆರೋಪಿಸಿ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರಿಗೆ ದೂರು ಸಲ್ಲಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಪ್ರತಿಭಟನೆಯ ಬೆದರಿಕೆ ಒಡ್ಡಿ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿರುವುದು ನ್ಯಾಯಾಂಗ ಉಲ್ಲಂಘನೆ ಮತ್ತು ದುರುದ್ದೇಶದ ತಂತ್ರಗಾರಿಕೆಯಾಗಿದೆ ಎಂದು ಅವರು ಪತ್ರದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಗ್ರಾಮ ಪಂಚಾಯತ್ ಮತ್ತು ತನಿಖಾ ಸಮಿತಿಯ ವರದಿಯಂತೆ ಕೇವಲ 4.6 ಮೀಟರ್ ರಸ್ತೆ ಸಂಪರ್ಕವಿರುವ ಜಾಗಕ್ಕೆ 12 ಮೀಟರ್ (40 ಅಡಿ) ಅಗಲದ ರಸ್ತೆಯಿದೆ ಎಂದು ಸುಳ್ಳು ಮಾಹಿತಿ ನೀಡಿ ಭೂ ಬದಲಾವಣೆ ಪಡೆಯಲಾಗಿದೆ ಎಂದು ಶಾಸಕರು ವಿವರಿಸಿದ್ದಾರೆ. ಈ ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇಲೆ ನಗರಾಭಿವೃದ್ಧಿ ಪ್ರಾಧಿಕಾರದ ಅಂದಿನ ಆಯುಕ್ತ ಮಹೇಶ್ಚಂದ್ರ ಅವರನ್ನು ಸರ್ಕಾರ ಈಗಾಗಲೇ ಅಮಾನತುಗೊಳಿಸಿದೆ. ಅಲ್ಲದೆ, ನಕಲಿ ನಕ್ಷೆ ಲಗತ್ತಿಸಿರುವುದು ತಹಶೀಲ್ದಾರರ ವರದಿಯಲ್ಲೂ ಸಾಬೀತಾಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಸ್ತುತ ಈ ವಿವಾದದ ಕುರಿತು ಕರ್ನಾಟಕ ಲೋಕಾಯುಕ್ತದಲ್ಲಿ ವಿಚಾರಣೆ ನಡೆಯುತ್ತಿದ್ದು, ಕರಾವಳಿ ಯುವಕ ಮಂಡಲದ ವತಿಯಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಕೂಡ ದಾಖಲಾಗಿದ್ದು ವಿಚಾರಣೆ ಪ್ರಗತಿಯಲ್ಲಿದೆ. ಇಂತಹ ಸಂದರ್ಭದಲ್ಲಿ ಪ್ರತಿಭಟನೆಯ ಮೂಲಕ ಅಧಿಕಾರಿಗಳ ಆತ್ಮಸ್ಥೈರ್ಯ ಕುಗ್ಗಿಸಿ ವಿಕವಿನ್ಯಾಸ ನಕ್ಷೆ ಪಡೆಯಲು ಅರ್ಜಿದಾರರು ಮುಂದಾಗಿರುವುದು ಸರಿಯಲ್ಲ ಎಂದು ಸುವರ್ಣ ತಿಳಿಸಿದ್ದಾರೆ. ಈ ಎಲ್ಲಾ ವಿಷಯಗಳ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕ್ರಮ ಕೈಗೊಳ್ಳುವಂತೆ ಶಾಸಕರು ಮುಖ್ಯ ಕಾರ್ಯದರ್ಶಿಗಳನ್ನು ಕೋರಿದ್ದಾರೆ.

ಸಾನಿಧ್ಯ ಶಾಲೆಯಲ್ಲಿ ಡೌನ್ ಸಿಂಡ್ರೋಮ್ ಮಕ್ಕಳ ಹಬ್ಬ



ಮಂಗಳೂರು: ವಿಶ್ವಡೌನ್ ಸಿಂಡ್ರೋಮ್ ದಿನಾಚರಣೆ ಪ್ರಯುಕ್ತ ಮಂಗಳೂರಿನ ಶಕ್ತಿನಗರದಲ್ಲಿರುವ ಸಾನಿಧ್ಯ ವಸತಿಯುತ ಶಾಲೆಯಲ್ಲಿ ಡೌನ್ ಸಿಂಡ್ರೋಮ್ ಮಕ್ಕಳಿಗಾಗಿ ಹಮ್ಮಿಕೊಳ್ಳಲಾದ ಬೋಚಿ ಚಾಂಪಿಯನ್ ಶಿಪ್ – 2026' ಕ್ರೀಡಾಕೂಟವನ್ನು ಎಂ.ಸಿ.ಸಿ. ಬ್ಯಾಂಕ್ ಚೇರ್‌ಮ್ಯಾನ್ ಅನಿಲ್ ಲೋಬೋ ಉದ್ಘಾಟಿಸಿದರು.

ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಮಣಿಪಾಲ ಆಸರೆ ವಸತಿ ಶಾಲೆಯ ಸಂಸ್ಥಾಪಕ ಜಯ ವಿಠಲ್ ಹಾಗೂ ಅವರ ಪತ್ನಿ ವಿಜಯಲಕ್ಷ್ಮೀ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನ ವಿತರಿಸಿದರು.ದಕ್ಷಿಣಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಯ ಸುಮಾರು 15 ಶಾಲೆಗಳ ತಂಡಗಳು ಬೋಚಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಪುರುಷರ ವಿಭಾಗದ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಸಾನಿಧ್ಯ ವಿಶೇಷ ಶಾಲೆ ಶಕ್ತಿನಗರ, ಬೆಥನಿ ಜೀವನಜ್ಯೋತಿ ಮಾರ್ದಲ ಹಾಗೂ ಅದಮ್ಯಚೇತನ ವಿಶೇಷ ಶಾಲೆ ಮಂಗಳೂರು ಪಡೆದುಕೊಂಡಿತು.

ಮಹಿಳೆಯರ ವಿಭಾಗದ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಮಾನಸರಿಹಾ ಬಿಲಿಟೇಶನ್ ಸೆಂಟರ್ ಉಡುಪಿ, ಲಯನ್ಸ್ ವಿಶೇಷ ಶಾಲೆ ಸುರತ್ಕಲ್ ಹಾಗೂ ವಿಜೇತ ವಿಶೇಷ ಶಾಲೆ ಉಡುಪಿ ಪಡೆದುಕೊಂಡಿತು.

ಬಹುಮಾನವು, ನಗದು, ಟ್ರೋಫಿ ಹಾಗೂ ಪ್ರಮಾಣ ಪತ್ರವನ್ನು ಒಳಗೊಂಡಿತ್ತು.ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಸ್ಮರಣಿಕೆಯನ್ನು ನೀಡಲಾಯಿತು. ಒಟ್ಟು ನೂರಕ್ಕೂ ಮಿಕ್ಕಿ ಡೌನ್ ಸಿಂಡ್ರೋಮ್ ಮಕ್ಕಳು ಹಾಗೂ ಅವರ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಳ ಪುನರ್ ನಿರ್ಮಾಣ

ಬ್ರಹ್ಮಕಲಶ ಲೋಗೋ ಬಿಡುಗಡೆ



ಪಡುಬಿದ್ರಿ: ಸುಮಾರು 30 ಕೋಟಿ ರೂ.ವೆಚ್ಚದಲ್ಲಿ ಪುನರ್‌ನಿರ್ಮಾಣಗೊಳ್ಳುತ್ತಿರುವ ಪಡುಬಿದ್ರಿ ಗ್ರಾಮ ದೇವಸ್ಥಾನ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯವು ಸಮರೋಪಾದಿಯಲ್ಲಿ ನಡೆಯುತ್ತಿದೆ. ಈಗಾಗಲೇ ನಿರ್ಧರಿಸಿದಂತೆ ಏ. 23ರಿಂದ ಮೇ 4ರವರೆಗೆ ಪುನರ್ ಪ್ರತಿಷ್ಠೆ ಹಾಗೂ ವೈಭವದ ಬ್ರಹ್ಮಕಲಶೋತ್ಸವವು ಜರಗಲಿದೆ. ಭಗವದ್ಭಕ್ತರು ಸ್ವಯಂಪ್ರೇರಿತರಾಗಿ ಸಿದ್ಧರಾಗಬೇಕು ಎಂದು ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ, ಎಮ್ ಆರ್‌ಜಿ ಗ್ರೂಪ್ಸ್ ಸಿಎಮ್‌ಡಿ ಡಾ.ಕೆ.ಪ್ರಕಾಶ್ ಶೆಟ್ಟಿ ಮನವಿ ಮಾಡಿದ್ದಾರೆ.

ಅವರು ಭಾನುವಾರ ಪಡುಬಿದ್ರಿ ಶ್ರೀ ಲಕ್ಷ್ಮೀ ನಾರಾಯಣ ದೇವಳದ ಸಭಾಂಗಣದಲ್ಲಿ ಪಡುಬಿದ್ರಿ ಗ್ರಾಮ ದೇವಳದ ಜೀರ್ಣೋದ್ಧಾರ ಮತ್ತು ಬ್ರಹ್ಮಕಲಶೋತ್ಸವ ಸಮಿತಿಗಳ ಜಂಟಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬ್ರಹ್ಮಕಲಶೋತ್ಸವ ಅವಿಸ್ಮರಣೀಯಗೊಳಿಸಲು 20 ಸಮಿತಿಗಳನ್ನು ರಚಿಸಲಾಗಿದೆ. ಸರ್ವರೂ ಸ್ವಯಂಸೇವೆಗೆ ಸಿದ್ಧರಾಗಿರಬೇಕು. ಮಾ.30ಕ್ಕೆ ಮತ್ತೆ ಸಮಿತಿ ಸಭೆ ನಡೆಯಲಿದ್ದು ಅಂತಿಮ ಸ್ಪರ್ಶ ನೀಡಲಾಗುವುದು ಎಂದವರು ಹೇಳಿದರು.

ಲೋಗೋ ಬಿಡುಗಡೆ

ಸಮಾರಂಭದಲ್ಲಿ ಡಾ.ಕೆ.ಪ್ರಕಾಶ್ ಶೆಟ್ಟಿ ಮತ್ತು ಸಮಿತಿಯ ಗೌರವಾಧ್ಯಕ್ಷ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಬ್ರಹ್ಮ ಕಲಶೋತ್ಸವದ ಲೋಗೋ ಬಿಡುಗಡೆಗೊಳಿಸಿದರು.

ಹೊರೆಕಾಣಿಕೆ ಮೆರವಣಿಗೆ ಸಮಿತಿಯ ಸಂಚಾಲಕರಾಗಿ ನೇಮಕಗೊಂಡ ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ ಎ.26ರಂದು ನಡೆಯಲಿರುವ ಹೊರೆ ಕಾಣಿಕೆ ಮೆರವಣಿಗೆಯ ಮಾಹಿತಿಯನ್ನು ನೀಡಿದರು.

> **ಸಂಘಟಿತ ಪ್ರಯತ್ನ ಹಾಗೂ ಅಸಾಮಾನ್ಯ ನಾಯಕತ್ವದಿಂದ ಶ್ರೀ ದೇವಳ ಅದ್ಭುತವಾಗಿ ನಿರ್ಮಾಣಗೊಂಡಿದೆ. ಇದರಲ್ಲಿ ಭಾಗವಹಿಸುವುದೇ ನಮ್ಮೆಲ್ಲರ ಸೌಭಾಗ್ಯ. ಶ್ರೀ ದೇವಳದ ಸರ್ವ ಕಾರ್ಯಗಳಿಗೆ ಸಹಕಾರ ನೀಡಲು ಬದ್ಧನಿದ್ದೇನೆ.**
> ■ ಗುರ್ಮೆ ಸುರೇಶ್ ಶೆಟ್ಟಿ

ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ ನೂತನ ಸಮಿತಿಯ ವಿವರ ಸಭೆಯಲ್ಲಿ ಮಂಡಿಸಿದರು. ಸಾಂಸ್ಕೃ ತಿಕ ಸಮಿತಿಯ ನಟರಾಜ್ ಪಿ.ಎಸ್. ಬ್ರಹ್ಮಕಲಶೋತ್ಸವದ ಸಾಂಸ್ಕೃ ತಿಕ ಕಾರ್ಯಕ್ರಮಗಳು ಮತ್ತದರ ಪ್ರಾಯೋಕತ್ವದ ಸಮಗ್ರ ಮಾಹಿತಿ ನೀಡಿದರು.

ಶ್ರೀ ದೇವಳದ ಅನುವಂಶಿಕ ಮೊಕ್ತೇಸರರುಗಳಾದ ರತ್ನಾಕರರಾಜ್ ಅರಸು ಕಿನ್ನಿಕ್ಕ ಬಲ್ಲಾಳರು, ಪಡುಬಿದ್ರಿ ಪೇಟೆಮನೆ ಭವಾನಿಶಂಕರ್ ಹೆಗ್ಡೆ, ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾದ ಕೊರ್ನಾಯ ಪದ್ಮನಾಭ ರಾವ್, ಕಾರ್ಯನಿರ್ವಹಣಾಧಿಕಾರಿ ರಾಜಗೋಪಾಲ ಉಪಾಧ್ಯಾಯ, ಅರ್ಚಕ ಗುರುರಾಜ ಭಟ್ ಎರ್ಮಾಳು, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಪಿ.ರವೀಂದ್ರನಾಥ ಜಿ.ಹೆಗ್ಡೆ, ಪ್ರಧಾನ ಕಾರ್ಯದರ್ಶಿ ಪಿ.ಆರ್ .ನಾವಡ, ಕಾರ್ಯದರ್ಶಿಗಳಾದ ಶ್ರೀನಾಥ್ ಹೆಗ್ಡೆ ಮತ್ತು ವೈ.ಸುಕುಮಾರ್ ಉಪಸ್ಥಿತರಿದ್ದರು.

ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ನವೀನ್‌ಚಂದ್ರ ಜೆ.ಶೆಟ್ಟಿ ಸ್ವಾಗತಿಸಿದರು. ಪಿ. ಶ್ರೀಧರ ಆಚಾರ್ ಕಾರ್ಯಕ್ರಮ ನಿರ್ವಹಿಸಿದರು. ವೈ.ಸುಕುಮಾರ್ ವಂದಿಸಿದರು.

ಕಾಸರಗೋಡು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧ: ಅಶ್ವಿನಿ ಭರವಸೆ



ಕಾಸರಗೋಡು: ಈ ಬಾರಿಯ ವಿಧಾನಸಭಾ ಚುನಾವಣೆಯು ನಮಗೆ ಅಗ್ನಿ ಪರೀಕ್ಷೆಯಾಗಿದೆ ಮತ್ತು ಇದು ನಮಗೆ ಅಭಿಮಾನದ ಹೋರಾಟವಾಗಿದೆ ಎಂದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.

ಚುನಾವಣಾ ಪ್ರಚಾರಾರ್ಥ ಕೂಡ್ಲು ರಾಮದಾಸ ನಗರದ ಕೆ.ಜಿ.ಮಾರಾರ್ ಭವನದ ಬಿಜೆಪಿ ಮಧೂರು ಪಂಚಾಯತ್ ಸಮಿತಿ ಕಾರ್ಯಾಲಯದಲ್ಲಿ ಭಾನುವಾರ ಜರಗಿದ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.


ವಿಧಾನಸಭಾ ಚುನಾವಣೆಯಲ್ಲಿ ಕಾಸರಗೋಡು ಕ್ಷೇತ್ರದಿಂದ ನಾನು ಗೆದ್ದರೆ ಕಾಸರಗೋಡಿನ ಸಮಗ್ರ ಅಭಿವೃದ್ಧಿ ಉಂಟಾಗಲಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ನನ್ನನ್ನು ಗೆಲ್ಲಿಸಲು ನೀವು ಅವಿರತ ಯತ್ನ ನಡೆಸಬೇಕೆಂದು ಅವರು ಕಾರ್ಯಕರ್ತರಿಗೆ ಕರೆ ನೀಡಿದರು.

ಬಿಜೆಪಿ ಅಭ್ಯರ್ಥಿಯಾದ ನಾನು ಕಾಸರಗೋಡಿನಿಂದ ಗೆಲ್ಲುವುದು ಖಚಿತ. ಆದ್ದರಿಂದ ನನ್ನ ಯಶಸ್ಸಿಗೆ ನೀವು ಈಗಲೇ ಕಾರ್ಯಕ್ಷೇತ್ರಕ್ಕೆ ದುಮುಕಿ ಕಾರ್ಯೋನ್ಮುಖರಾಗಬೇಕೆಂದು ಅವರು ಹೇಳಿದರು.

ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ಮಾಜಿ ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಗೋಪಾಲಕೃಷ್ಣ , ಬಿಜೆಪಿ ಕಾಸರಗೋಡು ಮಂಡಲಾಧ್ಯಕ್ಷ ಕೆ.ಗುರುಪ್ರಸಾದ್ ಪ್ರಭು, ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಪ್ರಮೀಳಾ ಮಜಲ್, ಕಾಸರಗೋಡು ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಕಾಸರಗೋಡು ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀಧರ ಕೂಡ್ಲು , ಮಧೂರು ಪೂರ್ವ ವಲಯ ಸಮಿತಿ ಅಧ್ಯಕ್ಷ ಮಹೇಶ್ ಮಧೂರು ಉಪಸ್ಥಿತರಿದ್ದರು.

ಶಾಸಕ ಎ.ಎಸ್.ಪೊನ್ನಣ್ಣ ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಸಭೆ

ಸಾರ್ವಜನಿಕರಿಂದ 85ಕ್ಕೂ ಹೆಚ್ಚು ಅರ್ಜಿ



ಭಾಗಮಂಡಲ: ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ಅಧ್ಯಕ್ಷತೆಯಲ್ಲಿ ಭಾಗಮಂಡಲದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಸಾರ್ವಜನಿಕರಿಂದ 85ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು.

ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 15, ಗ್ರಾಮೀಣಾಭಿವೃದ್ಧಿ 7, ಪಂಚಾಯತ್ ರಾಜ್ ಸಂಬಂಧಿಸಿದಂತೆ 10, ಸೆಸ್ಕ್ 3, ಆಹಾರ 3, ರಸ್ತೆ ಹಾಗೂ ವಿವಿಧ ಇಲಾಖೆಗಳ 46 ಸೇರಿದಂತೆ ಒಟ್ಟು 85 ಅರ್ಜಿಗಳು ಸಲ್ಲಿಕೆಯಾದವು.

ಪ್ರತಿಯೊಬ್ಬ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಶಾಸಕರು, ಸ್ಥಳದಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಅರ್ಜಿ ಪರಿಶೀಲಿಸಿ ಒಂದು ವಾರದಲ್ಲಿ ಬಗೆಹರಿಸಬೇಕೆಂದು ಸೂಚಿಸಿದರು.. ಸಾರ್ವಜನಿಕರ ಅಹವಾಲುಗಳಿಗೆ ಕೂಡಲೇ ಸ್ಪಂದಿಸಬೇಕು; ವಿಳಂಬ ಮಾಡಬಾರದು ಎಂದು ಎ.ಎಸ್ .ಪೊನ್ನಣ್ಣ ಅವರು ತಾಕೀತು ಮಾಡಿದರು.

ಸಭೆಯ ಆರಂಭದಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆಯನ್ನು ಕಚೇರಿ ಹಂತ ದಲ್ಲಿಯೇ ಪರಿಹರಿಸುವಂತಾಗಬೇಕು ಎಂದು ಸಲಹೆ ನೀಡಿದರಲ್ಲದೆ, ಕಾನೂನು ಬದ್ಧವಾಗಿ ಸಮಸ್ಯೆಗಳನ್ನು ತೀರ್ಮಾನಿಸಿ, ಬಗೆಹರಿಸಬೇಕು. ಯಾರನ್ನೂ ಕೂಡಾ ಸತಾಯಿಸಬಾರದು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿ ವಿಧಾನಸಭಾ ಕ್ಷೇತ್ರವಾರು ಜನಸ್ಪಂದನಾ ಕಾರ್ಯಕ್ರಮ ಆಯೋಜಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಜನರ ಮನೆ ಬಾಗಿಲಿಗೆ ಸರ್ಕಾರದ ಸೌಲಭ್ಯ ತಲುಪಿಸಲು ಸರ್ಕಾರ ಪ್ರಯತ್ನಿಸಿದೆ. ಆ ದಿಸೆಯಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೆ ಸ್ಪಂದಿಸಬೇಕು ಎಂದು ಶಾಸಕರು ಕಿವಿಮಾತು ಹೇಳಿದರು.

ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ನೆರವಂಡ ಉಮೇಶ್, ಪ್ರಮುಖರಾದ ಬಾಲಚಂದ್ರ ನಾಯರ್, ತಹಶೀಲ್ದಾರರಾದ ಶ್ರೀಧರ, ತಾ.ಪಂ.ಇಒ ಶೇಖರ್ ಇತರರು ಇದ್ದರು.

ಸುಮಾರು 36 ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ತಮ್ಮ ಇಲಾಖೆ ಸಂಬಂಧಿಸಿದ ಸಾರ್ವಜನಿಕರ ಅಹವಾಲಿಗೆ ಸ್ಪಂದಿಸಿದರು.

ಉಜಿರೆ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಕಾಲೇಜು ಪದವಿ ಪ್ರದಾನ ಸಮಾರಂಭ

ವ್ಯಸನಮುಕ್ತ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಯತ್ನ



ಉಜಿರೆ: ದೇಹ ಮತ್ತು ಮನಸ್ಸಿನ ಆರೋಗ್ಯ ರಕ್ಷಣೆಗೆ ಯೋಗಾಭ್ಯಾಸ ಮತ್ತು ಪ್ರಕೃತಿಚಿಕಿತ್ಸಾ ಪದ್ಧತಿ ಅತ್ಯಂತ ಪರಿಣಾಮಕಾರಿಯಾಗಿದ್ದು ಪಾರಂಪರಿಕ ಪದ್ಧತಿಯ ಬಗ್ಗೆ ಜನರಲ್ಲಿ ಅರಿವು, ಜಾಗೃತಿ ಮೂಡಿಸಿ ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಲಾಗುವುದು ಎಂದು ಉಪಕುಲಪತಿ ಡಾ. ಭಗವಾನ್ ಬಿ.ಸಿ. ಹೇಳಿದರು.

ಅವರು ಭಾನುವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದದಲ್ಲಿ ಉಜಿರೆಯ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗವಿಜ್ಞಾನಗಳ ಕಾಲೇಜಿನ ಮೂವತ್ತೊಂದನೆ ವರ್ಷದ ಪದವಿ ಪ್ರದಾನ ಸಮಾರಂಭದಲ್ಲಿ ಘಟಿಕೋತ್ಸವ ಭಾಷಣ ಮಾಡಿ ನೂತನ ಪದವೀಧರರಿಗೆ ಶುಭ ಹಾರೈಸಿದರು.

ಪ್ರಕೃತಿಯಿಂದ ವಿಮುಖವಾದ ಆಧುನಿಕ ಜೀವನಶೈಲಿ, ಆಹಾರ ಸೇವನಾ ಕ್ರಮ, ಬೀಡಿ, ಸಿಗರೇಟು ಸೇವನೆ, ಮದ್ಯಪಾನ ಮೊದಲಾದ ದುಶ್ಚಟಗಳಿಗೆ ಬಲಿಯಾಗುವುದು ಇತ್ಯಾದಿ ಕಾರಣಗಳಿಂದ ಯುವಜನತೆ ದಾರಿತಪ್ಪುತ್ತಿದ್ದಾರೆ. ಹೆಚ್ಚಾಗಿ ಯುವತಿಯರು ಕೂಡಾ ದುಶ್ಚಟಗಳಿಗೆ ಬಲಿಯಾಗಿ ಆರೋಗ್ಯಭಾಗ್ಯ ಕಳೆದುಕೊಳ್ಳುತ್ತಿರುವುದು ಖೇದಕರವಾಗಿದೆ. ಪ್ರಾಚೀನ ಕಾಲದಿಂದಲೂ ಪ್ರಶಾಂತ ಪ್ರಕೃತಿಯ ಮಡಿಲಲ್ಲಿ ಯೋಗಾಭ್ಯಾಸ, ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ಮೊದಲಾದವುಗಳ ಮೂಲಕ ಆರೋಗ್ಯಭಾಗ್ಯ ಕಾಪಾಡಿಕೊಳ್ಳುತ್ತಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿ ಪ್ರಕೃತಿಚಿಕಿತ್ಸಾ ಪದ್ಧತಿಯನ್ನು ಜನಪ್ರಿಯಗೊಳಿಸಲಾಗುವುದು. ಇದಕ್ಕಾಗಿ ಬೆಂಗಳೂರಿನಲ್ಲಿ ಸದ್ಯದಲ್ಲಿಯೇ 60 ಎಕ್ರೆ ಪ್ರದೇಶದಲ್ಲಿ ಸಂಶೋಧನಾಕೇಂದ್ರವನ್ನು ಪ್ರಾರಂಭಿಸಲಾಗುವುದು. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ. ಮೂಲಕ ಯೋಗಾಭ್ಯಾಸ ಮತ್ತು ಪ್ರಕೃತಿಚಿಕಿತ್ಸಾ ಪದ್ಧತಿ ಪ್ರಚಾರಕ್ಕೆ ಒತ್ತು ನೀಡಲಾಗುವುದು.

> **ನೂತನ ಪದವೀಧರರು ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸಿ ಮಾನವೀಯತೆ, ದಯೆ, ಅನುಕಂಪ ಮತ್ತು ಪ್ರೀತಿಯಿಂದ ರೋಗಿಗಳ ಸೇವೆ ಮಾಡಬೇಕು. ಜೊತೆಗೆ ಹೆಚ್ಚಿನ ಅಧ್ಯಯನ, ಸಂಶೋಧನೆಯೊಂದಿಗೆ ಜ್ಞಾನಕ್ಷಿತಿಜವನ್ನೂ ವಿಸ್ತರಿಸಿಕೊಳ್ಳಬೇಕು.**
> ■ ಡಾ. ಭಗವಾನ್ ಬಿ.ಸಿ.

ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ಸುಜಾತ ಕೆ.ಜೆ. ನೂತನ ಪದವೀಧರರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಥಮವಾಗಿ ಡಾಕ್ಟರೇಟ್ ಪದವಿ ಪಡೆದ ಕಾಲೇಜಿನ ಉಪನ್ಯಾಸಕಿ ಡಾ. ಗೀತಾ ಬಿ. ಶೆಟ್ಟಿ ಅವರನ್ನು ಗೌರವಿಸಲಾಯಿತು.

ಅಧ್ಯಕ್ಷತೆ ವಹಿಸಿದ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ. ಹರ್ಷೇಂದ್ರ ಕುಮಾರ್ ಮಾತನಾಡಿ, ಪ್ರಕೃತಿಚಿಕಿತ್ಸಾ ಆಸ್ಪತ್ರೆ ಬೆಳೆದು ಬಂದ ಹಾದಿ ಹಾಗೂ ಉತ್ತಮ ಸೇವೆ ಬಗ್ಗೆ ಪ್ರಾಂಶುಪಾಲರು ಹಾಗೂ ವೈದ್ಯರನ್ನು ಅಭಿನಂದಿಸಿದರು.

ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಪ್ರೊ. ಎಸ್. ಸತೀಶ್ಚಂದ್ರ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ. ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಶಾಂತಿವನ ಪ್ರಕೃತಿಚಿಕಿತ್ಸಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಶಿವಪ್ರಸಾದ್ ಕೆ. ಧನ್ಯವಾದವಿತ್ತರು. ಡಾ. ರಿಷಿಕಾ ಮತ್ತು ಕಾವ್ಯ ಎಂ. ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ಕರ್‍ರನ್ ಬದಲಿಗೆ ಶಣಕ

ಮುಂಬೈ: ಸಂಜು ಸ್ಯಾಮ್ಸನ್ ಬದಲಿಗೆ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಟ್ರೇಡ್ ಆಗಿದ್ದ ಇಂಗ್ಲೆಂಡ್ ಆಲ್ ರೌಂಡರ್ ಸ್ಯಾಮ್ ಕರ್‍ರನ್ ಬದಲಿಗೆ ದಾಸುನ್ ಶಣಕ ಅವರನ್ನು ರಾಜಸ್ಥಾನ ರಾಯಲ್ಸ್ ಆಯ್ಕೆ ಮಾಡಿಕೊಂಡಿದೆ. ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಕ್ಕೆ ಆಯ್ಕೆಯಾಗಿದ್ದ ಶ್ರೀಲಂಕಾ ಬ್ಯಾಟರ್ ದಾಸುನ್ ಶಣಕ ಭಾರತದತ್ತ ತಿರುಗಿದ್ದಾರೆ. ಐಪಿಎಲ್ ಹರಾಜಿಗೂ ಮುನ್ನ ಸಂಜು ಸ್ಯಾಮ್ಸನ್ ಚೆನ್ನೈಗೆ ಟ್ರೇಡ್ ಆಗಿದ್ದರು. ಬದಲಿಗೆ ಚೆನ್ನೈ ತಂಡದಿಂದ ರವೀಂದ್ರ ಜಡೇಜಾ ಮತ್ತು ಸ್ಯಾಮ್ ಕರ್‍ರನ್ ಅವರನ್ನು ಆಯ್ಕೆ ಮಾಡಲಾಗಿತ್ತು. ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ತಂಡದ ಭಾಗವಾಗಿದ್ದ ಸ್ಯಾಮ್ ಕರ್‍ರನ್ ಗಾಯದಿಂದ ಬಳಲುತ್ತಿದ್ದರು. ಪರಿಣಾಮ ಐಪಿಎಲ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ದಾಸುನ್ ಶಣಕ ಅವರನ್ನು ಫ್ರಾಂಚೈಸಿ ಸಹಿ ಮಾಡಿಕೊಂಡಿದೆ. ಈ ಬಗ್ಗೆ ಅಧಿಕೃತವಾಗಿ ತಿಳಿಸಲಾಗಿದೆ.

ಈಜು: ಸಜನ್ ಪ್ರಕಾಶ್‌ಗೆ ಚಿನ್ನ



ಹೊಸದಿಲ್ಲಿ: ಭಾರತದ ಈಜುಗಾರ ಸಜನ್ ಪ್ರಕಾಶ್ ಸಿಂಗಾಪುರ್ ನ್ಯಾಷನಲ್ ಏಜ್ ಗ್ರೂಪ್ ಈಜು ಚಾಂಪಿಯನ್‌ಶಿಪ್‌ನಲ್ಲಿ ಶಕ್ತಿಶಾಲಿ ಪ್ರದರ್ಶನ ನೀಡಿ ಪುರುಷರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದರು. ಫೈನಲ್‌ನಲ್ಲಿ ಸಜನ ಪ್ರಕಾಶ್ 1:57.09 ಸೆಕೆಂಡ್ ಸಮಯ ದಾಖಲಿಸಿ ಎರಡನೇ ಸ್ಥಾನ ಪಡೆದರು. ಚೈನೀಸ್ ತೈಪೆಯ ಕ್ವಾನ್ ಹಂಗ್ ವಾಂಗ್ 1:56.18 ಸಮಯದೊಂದಿಗೆ ಚಿನ್ನದ ಪದಕ ಗೆದ್ದರು. ಇದರೊಂದಿಗೆ ಸಜನ ಪ್ರಕಾಶ್ ಕಾಮನ್‌ವೆಲ್ತ್ ಕ್ರೀಡಾಕೂಟ ಅರ್ಹತಾ ಮಾನದಂಡವನ್ನೂ ತಲುಪಿದರು. ಈ ಸ್ಪರ್ಧೆಗೆ ನಿಗದಿಪಡಿಸಿದ್ದ 1:57.12 ಸಮಯಕ್ಕಿಂತ ಕಡಿಮೆ ಅವಧಿಯಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಎರಡು ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಸಜನ್ ಪ್ರಕಾಶ್, ಟೋಕಿಯೊ 2020 ಒಲಿಂಪಿಕ್ ್ಗೆ ಎ' ಮಾನದಂಡದ ಮೂಲಕ ಅರ್ಹತೆ ಪಡೆದ ಮೊದಲ ಭಾರತೀಯ ಈಜುಗಾರರಾಗಿದ್ದಾರೆ. ಅವರು ದಕ್ಷಿಣ ಏಷ್ಯನ್ ಕ್ರೀಡಾಕೂಟಗಳಲ್ಲಿ ಹಲವು ಬಾರಿ ಪದಕ ವಿಜೇತರಾಗಿದ್ದು, 200 ಮೀಟರ್ ಬಟರ್‌ಫ್ಲೈ ವಿಭಾಗದಲ್ಲಿ 1:56.38 ರಾಷ್ಟ್ರೀಯ ದಾಖಲೆಯನ್ನು ತಮ್ಮ ಹೆಸರಿನಲ್ಲಿ ಹೊಂದಿದ್ದಾರೆ.

ದೇಶಿ ಕ್ರಿಕೆಟಿಗರ ಮೇಲೆ ಜನರ ಚಿತ್ತ | ಕಿರಿಯ ಆಟಗಾರರ ಮೇಲೆ ನಿರೀಕ್ಷೆ | ಎಲ್ಲಾ ತಂಡಗಳ ಕಠಿಣ ಅಭ್ಯಾಸ

ಐಪಿಎಲ್‌ನಲ್ಲಿ ಯುವಕರದ್ದೇ ದರ್ಬಾರ್!





ಮುಂಬೈ: ಕ್ರಿಕೆಟ್ ಹಬ್ಬ, ಜಗತ್ತಿನ ಅತಿದೊಡ್ಡ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಒಂದಾದ, ಅತಿ ಶ್ರೀಮಂತ ಫ್ರಾಂಚೈಸಿ ಕ್ರಿಕೆಟ್ ಕೂಟ ಐಪಿಎಲ್‌ಗೆ ಭರ್ಜರಿ ಸಿದ್ಧತೆಗಳು ನಡೆಯುತ್ತಿವೆ. ಶನಿವಾರದಂದು ಬೆಂಗಳೂರಿನ ಚಿನ್ನಸ್ವಾಮಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡದ ನಡುವೆ ಉದ್ಘಾಟನಾ ಪಂದ್ಯ ನಡೆಯಲಿದೆ. ಪಂದ್ಯಾವಳಿಗೆ ದಿನಗಣನೆ ಶುರುವಾದಂತೆ ಭಾರತಾದ್ಯಂತ ಐಪಿಎಲ್ ಭರಾಟೆ ಪಸರಿಸಿದೆ. ಈ ಮಧ್ಯೆ ಇದೇ ಬಾರಿ ಆಯ್ಕೆಯಾಗಿರುವ ಮತ್ತು ಕಳೆದ ಸೀಸನ್‌ಗಳಿಂದಲೂ ಅವಕಾಶಕ್ಕಾಗಿ ಕಾಯುತ್ತಿರುವ ಯುವ ಕ್ರಿಕೆಟಿಗರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ಎಲ್ಲಾ ತಂಡಗಳು ತಮ್ಮ ತಮ್ಮ ಅಭ್ಯಾಸದಲ್ಲಿ ನಿರತರಾಗಿದ್ದಾರೆ. ಮೈದಾನಗಳು ಐಪಿಎಲ್ ಪಂದ್ಯಗಳಿಗಾಗಿ ಸಜ್ಜುಗೊಳ್ಳುತ್ತಿವೆ. ಇದೇ ವೇಳೆ ತಂಡಗಳು, ಕೋಚ್‌ಗಳು ಮತ್ತು ವಿವಿಧ ಸಂಬಂಧಪಟ್ಟ ಜನರು ಲೆಕ್ಕಾಚಾರಗಳನ್ನು ಮಾಡುತ್ತಿದ್ದಾರೆ. ಗಾಯದ ನಿವಾರಣೆ, ಬದಲಿ ಆಟಗಾರರ ಆಯ್ಕೆ, ಹೊಸ ಸ್ಟ್ರಾಟರ್ಜಿಗಳನ್ನು ಮಾಡತೊಡಗಿದ್ದಾರೆ.

ಮೊದಲಿನಿಂದಲೂ ಐಪಿಎಲ್‌ನಲ್ಲಿ ವಿದೇಶಿ ಆಟಗಾರರು ಭರ್ಜರಿ ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ. ಮೊದಲ ಶತಕ, ಮೊದಲ ಹ್ಯಾಟ್ರಿಕ್ ಮತ್ತು ಮೊದಲ ಇನ್ನೂರು ದಾಟುವಲ್ಲಿ ವಿದೇಶಿ ಆಟಗಾರರು ಮುಂದಿದ್ದರು. ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಕ್ಕಂತೆ ಅವರೂ ಕೂಡ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿಲ್ಲ. ಮಾಡಿದ್ದರೂ ವಿದೇಶಿ ಆಟಗಾರರಷ್ಟು ಗಮನ ಸೆಳೆಯಲಾಗುವುದಿಲ್ಲ. ಆದರೆ ಇತ್ತೀಚಿನ ಐಪಿಎಲ್‌ನಲ್ಲಿ ದೇಶಿ ಯುವಕರದ್ದೇ ದರ್ಬಾರ್ ನಡೆದಿದೆ. ಕಳೆದ ಸೀಸನ್‌ಗಳಲ್ಲಿ ದೇಶಿ ಕ್ರಿಕೆಟಿಗರೆ ಹೆಚ್ಚು ಗಮನ ಸೆಳೆದಿದ್ದಾರೆ. ಈ ಬಾರಿಯೂ ಕೂಡ ಪ್ರಮುಖ ಆಟಗಾರರು ಗಮನ ಸೆಳೆಯಲು ಸಿದ್ಧರಾಗಿದ್ದಾರೆ.

ಹರಾಜಿನಲ್ಲೇ ಕಮಾಲ್

ರಣಜಿ, ವಿಜಯ್ ಹಜಾರೆ ಸೇರಿದಂತೆ ಪ್ರಮುಖ ದೇಶಿ ಕ್ರಿಕೆಟ್‌ನಲ್ಲಿ ಭರ್ಜರಿ ಪ್ರದರ್ಶನ ನೀಡಿರುವ ಭಾರತದ ದೇಶಿ ಕ್ರಿಕೆಟಿಗರಿಗೆ ಈ ಬಾರಿ ಐಪಿಎಲ್‌ನಲ್ಲಿ ಅವಕಾಶ ನೀಡಲಾಗಿದೆ. ಡಿಸೆಂಬರ್‌ನಲ್ಲಿ ನಡೆದಿದ್ದ ಹರಾಜಿನಲ್ಲಿ ದೇಶಿ ಕ್ರಿಕೆಟಿಗರದ್ದೇ ಹವಾ ಎದ್ದಿತ್ತು. ದೊಡ್ಡ ದೊಡ್ಡ ಪರ್ಸ್‌ಗಳೊಂದಿಗೆ ಹರಾಜಿಗಿಳಿದಿದ್ದ ಚೆನ್ನೈ ಅಂತಹ ಫ್ರಾಂಚೈಸಿಗಳು ದೇಶಿ ಆಟಗಾರರ ಮೇಲೆ ಹೆಚ್ಚಿನ ಖರ್ಚು ಮಾಡಿತ್ತು. ಪ್ರಶಾಂತ್ ವೀರ್, ಕಾರ್ತಿಕ್ ಶರ್ಮ ಅಂತಹ ದೇಶಿ ಆಟಗಾರರು ದೊಡ್ಡ ಮೊತ್ತಕ್ಕೆ ಬಿಕರಿಯಾದರೆ, ಜಿಮ್ಮಿ ಸ್ಮಿತ, ಡೇವಿಡ್ ಕಾನ್ವೇ ಅಂತಹ ಪ್ರಮುಖ ಆಟಗಾರರು ಅನ್ ಸೋಲ್ಡ್ ಆಗಿ ಉಳಿದಿರು. ಇನ್ನುಳಿದಂತೆ ರಣಜಿ ಪಂದ್ಯಾವಳಿಯ ಸರಣಿ ಶ್ರೇಷ್ಠ ಆಟಗಾರ ಆಕಿಬ್ ನಬಿ ಕೂಡ ಹೆಚ್ಚಿನ ಮೊತ್ತ ಪಡೆದಿದ್ದರು.

ವಿದೇಶಿಯರು ಅಲಭ್ಯ, ಅವಕಾಶ ಖಚಿತ?

ಗಾಯದ ಕಾರಣದಿಂದಾಗಿ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಹೈದರಾಬಾದ್‌ನ ಪ್ಯಾಟ್ ಕಮ್ಮಿನ್ಸ್, ಆರ್‌ಸಿಬಿಯ ಹ್ಯಾಜೆಲ್ವುಡ್, ಕೆಕೆಆರ್ ತಂಡದ ರಾಣಾ ಸೇರಿದಂತೆ ಪ್ರಮುಖ ಆಟಗಾರರು ಅಲಭ್ಯರಾಗಿದ್ದಾರೆ. ಈ ಮಧ್ಯೆ ದೇಶಿ ಕ್ರಿಕೆಟಿಗರಿಗೆ ಹೆಚ್ಚಿನ ಅವಕಾಶ ಸಿಗುವ ಸಾಧ್ಯತೆಗಳಿವೆ. ಪ್ರತಿಯೊಂದು ಫ್ರಾಂಚೈಸಿಯೂ ಹೆಚ್ಚಿನ ದೇಶಿ ಆಟಗಾರರನ್ನು ಆಯ್ಕೆ ಮಾಡಿಕೊಂಡಿವೆ. ಹೀಗಿರುವಾಗ ವಿದೇಶಿ ಆಟಗಾರರ ಮೇಲಿದ್ದ ಅವಲಂಬನೆ ಕಮ್ಮಿಯಾಗಿದೆ. ವಿದೇಶಿ ಆಟಗಾರರ ಅಲಭ್ಯತೆ ದೇಶಿ ಕ್ರಿಕೆಟಿಗರಿಗೆ ಅವಕಾಶ ಸಿಗುವ ಸಾಧ್ಯತೆ ಹೆಚ್ಚಿಸಿದೆ. ಪ್ರತಿಯೊಂದು ತಂಡದಲ್ಲೂ ಗಾಯದ ಚಿಂತೆಗಳಿವೆ. ಕೆಲವು ಆಟಗಾರರು ಪಂದ್ಯಾವಳಿಯಿಂದಲೇ ಹೊರನಡೆದಿದ್ದಾರೆ.

ಯಾರ ಮೇಲೆ ಜನರ ಗಮನ?

ಕಳೆದ ಐಪಿಎಲ್‌ನಿಂದಲೂ ಹಲವು ದೇಶಿ ಕ್ರಿಕೆಟಿಗರು ಭಾರೀ ಗಮನ ಸೆಳೆದಿದ್ದಾರೆ. ಮುಖ್ಯವಾಗಿ ಅಂಡರ್-19 ತಂಡದ ಪ್ರಮುಖ ಆಟಗಾರರು ಕೇಂದ್ರ ಬಿಂದುವಾಗಿದ್ದಾರೆ. ಭಾರತ ತಂಡಕ್ಕೆ ಆಯ್ಕೆಯಾಗಬೇಕಾದರೆ ಐಪಿಎಲ್ ಪ್ರಮುಖ ಪಾತ್ರ ವಹಿಸಲಿದೆ. ಹೀಗಿರುವಾಗ ಪಂದ್ಯಾವಳಿಯಲ್ಲಿ ಎಲ್ಲರ ಕಣ್ಣುಗಳೂ ಕೆಲವು ದೇಶಿ ಕ್ರಿಕೆಟಿಗರ ಮೇಲೆ ನೆಟ್ಟಿರಲಿವೆ.

1 ವೈಭವ್ ಸೂರ್ಯವಂಶಿ

15 ವರ್ಷದ ಕ್ರಿಕೆಟಿಗ ವೈಭವ್ ಕಳೆದ ಐಪಿಎಲ್‌ನಲ್ಲೇ ದೊಡ್ಡ ದಾಖಲೆ ಮಾಡಿದ್ದರು. ಅಂಡರ್-19 ವಿಶ್ವಕಪ್‌ನಲ್ಲೂ ಅದೇ ಪ್ರದರ್ಶನ ನೀಡಿ ಗಮನ ಸೆಳೆದಿರುವ ಅವರು ಆರ್‌ಆರ್ ತಂಡದಲ್ಲೇ ಇದ್ದಾರೆ.

2 ಆಯುಷ್ ಮಾಥ್ರೆ

ಅಂಡರ್-19 ವಿಶ್ವಕಪ್ ಗೆದ್ದ ತಂಡದ ನಾಯಕ ಆಯುಷ್ ಮಾಥ್ರೆ ಮೇಲೆ ಎಲ್ಲರ ಕಣ್ಣು ನೆಟ್ಟಿರಲಿದೆ. ಕಳೆದ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಗಮನ ಸೆಳೆದಿದ್ದರು. ಚೆನ್ನೈ ತಂಡದ ಆರಂಭಿಕರಾಗಿ ಕಣಕ್ಕಿಳಿಯಲಿದ್ದಾರೆ.

3 ಕಾರ್ತಿಕ್ ಶರ್ಮ

ಅತ್ಯಂತ ದುಬಾರಿ ಅನ್‌ಕ್ಯಾಪ್ಡ್ ಆಟಗಾರ ಅನ್ನಿಸಿಕೊಂಡಿರುವ ಕಾರ್ತಿಕ್ ಶರ್ಮ ಮಿಂಚಲು ಸಿದ್ಧರಾಗಿದ್ದಾರೆ. ರಾಜಸ್ಥಾನ ಮೂಲದ ಈ ಕ್ರಿಕೆಟಿಗನಿಗೆ ಚೆನ್ನೈ ಸೂಪರ್ ಕಿಂಗ್ಸ್ 14.25 ಕೋಟಿ ಕೊಟ್ಟು ಖರೀದಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಬಿರುಸಿನ ಬ್ಯಾಟಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ.



4 ವಿಹಾನ್ ಮಲ್ಹೋತ್ರಾ

ಆರ್‌ಸಿಬಿ ತಂಡಕ್ಕೆ ಆಯ್ಕೆಯಾಗಿರುವ ಭಾರತ ಅಂಡರ್-19 ತಂಡದ ಪ್ರಮುಖ ಆಟಗಾರ ವಿಹಾನ್ ಮಲ್ಹೋತ್ರಾ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಖರೀದಿಸಿದೆ. ಮುಖ್ಯವಾಗಿ ವಿಶ್ವಕಪ್‌ನಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಅವರು, ದಾಖಲೆಗಳನ್ನೂ ಮಾಡಿದ್ದಾರೆ. ಬೆಂಗಳೂರು ತಂಡದಲ್ಲಿ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿ ಕಾಣಿಸಿಕೊಳ್ಳಲಿದ್ದಾರೆ.

5 ಪ್ರಶಾಂತ್ ವೀರ್

14.25 ಕೋಟಿ ರೂ.ಗೆ ಚೆನ್ನೈ ತಂಡದ ಪಾಲಾಗಿರುವ ಪ್ರಶಾಂತ್ ವೀರ್ ಕೂಡ ಈ ಬಾರಿ ಗಮನ ಸೆಳೆಯಲು ಸಿದ್ಧರಾಗಿದ್ದಾರೆ. ತಮ್ಮ ಸ್ಫೋಟಕ ಬ್ಯಾಟಿಂಗ್‌ಗಾಗಿ ಖ್ಯಾತರಾದ ಇವರು, ಗಮನ ಸೆಳೆಯಬಲ್ಲ ಯುವಕರ ಪಟ್ಟಿಯಲ್ಲಿದ್ದಾರೆ.

6 ಆಕಿಬ್ ನಬಿ

ಜಮ್ಮು-ಕಾಶ್ಮೀರದ ಆಕಿಬ್ ನಬಿ ದಾರ್ ದೇಶಿ ಕ್ರಿಕೆಟ್‌ನಲ್ಲಿ ಭಾರೀ ಗಮನ ಸೆಳೆದ ಆಟಗಾರ. ತಮ್ಮ ಬೌಲಿಂಗ್ ಮೂಲಕ ಜಮ್ಮು-ಕಾಶ್ಮೀರ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿರುವ ಅವರು, ದಿಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿಯಲಿದ್ದಾರೆ.

ಇನ್ನುಳಿದಂತೆ ಪ್ರಿಯಾನ್ಸ್ ಆರ್ಯ, ವಂಶ ಭೇದಿ, ಮಂಗೇಶ್ ಯಾದವ್, ಸಮೀರ್ ರಿಜ್ವಿ ಸೇರಿದಂತೆ ವಿವಿಧ ಆಟಗಾರರು ಕೂಡ ಗಮನ ಸೆಳೆಯುವುದಕ್ಕೆ ಸಿದ್ಧರಾಗಿದ್ದಾರೆ.

ಮೂರು ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳಿಂದ ಪರಿಶೀಲನೆ

ಒತ್ತುವರಿ ತಡೆಗೆ ಬೀಟ್ ವ್ಯವಸ್ಥೆ

ನಂದಿನಿ ಎನ್.

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ ಭೂಮಿ ಒತ್ತುವರಿ ಗಂಭೀರ ಸಮಸ್ಯೆಯಾಗಿದ್ದು, ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಅತಿಕ್ರಮಣವಾಗಿದೆ. ಇದನ್ನು ತಡೆಯಲು ಸರ್ಕಾರ ಬೀಟ್ ವ್ಯವಸ್ಥೆ ಜಾರಿಗೊಳಿಸಿದ್ದು, ಪ್ರತಿ 3 ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ 15 ದಿನಗಳಲ್ಲಿ ಒತ್ತುವರಿ ತೆರವುಗೊಳಿಸುವುದು ಕಡ್ಡಾಯವಾಗಿದೆ. ಅಕ್ರಮ-ಸಕ್ರಮ ಯೋಜನೆ ಹಾಗೂ ಬಗರ್ ಹುಕುಂ ಸಾಗುವಳಿ ಮೂಲಕವೂ ಭೂಮಿ ಸಕ್ರಮಗೊಳಿಸಲು ಅವಕಾಶವಿದೆ.

ಮೂರು ವರ್ಷಗಳಲ್ಲಿ ಸುಮಾರು 79 ಸಾವಿರಕ್ಕೂ ಹೆಚ್ಚು ಎಕರೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಳ್ಳಲಾಗಿದ್ದು, ಸುಮಾರು 37,156 ಎಕರೆ ಸರ್ಕಾರಿ ಜಮೀನನ್ನು ಒತ್ತುವರಿಯಿಂದ ತೆರವುಗೊಳಿಸಲಾಗಿದೆ. 3 ವರ್ಷಗಳಲ್ಲಿ ಒತ್ತುವರಿಯಾದ ಸರ್ಕಾರಿ ಭೂಮಿಯಲ್ಲಿ ಸ್ವತಃ ಕಂದಾಯ ಸಚಿವರೇ ಉಸ್ತುವಾರಿ ಆಗಿರುವ ಹಾಸನ ಜಿಲ್ಲೆಯದ್ದೆ ಸಿಂಹಪಾಲಿದೆ. ಅಂದರೆ ಸುಮಾರು 31,565 ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಇದರಲ್ಲಿ ಶೇ.11ರಷ್ಟು ಮಾತ್ರ ಅಂದರೆ 3323 ಎಕರೆ ಜಮೀನು ತೆರವುಗೊಳಿಸಲಾಗಿದೆ.

ಇನ್ನು ಒತ್ತುವರಿಯಲ್ಲಿ ಎರಡನೆ ಸ್ಥಾನದಲ್ಲಿ ಕಲಬುರಗಿ ಇದ್ದು, ಸುಮಾರು 9,891 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆ. ಇದರಲ್ಲಿ 7,909 ಎಕರೆ ತೆರವುಗೊಳಿಸಲಾಗಿದೆ. ಕೋಲಾರದಲ್ಲಿ 9,479 ಎಕರೆ ಒತ್ತುವರಿ ಯಾಗಿದ್ದು, ಮೂರನೇ ಸ್ಥಾನದಲ್ಲಿದೆ. 5,989 ಎಕರೆ ಜಮೀನು ತೆರವುಗೊಳಿಸಲಾಗಿದೆ. ಅದರಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 7,213 ಎಕರೆ ಒತ್ತುವರಿಯಾಗಿದ್ದರೆ, ದಾವಣಗೆರೆಯಲ್ಲಿ 6,465 ಎಕರೆ ಒತ್ತುವರಿಯಾಗಿದೆ.



ಒತ್ತುವರಿ ತೆರವು ಮಾಡಿ ಸರ್ಕಾರದ ವಶಕ್ಕೆ ಪಡೆದ ಜಮೀನುಗಳು ಪುನಃ ಒತ್ತುವರಿಯಾಗದಂತೆ ಸಂರಕ್ಷಣಾ ಕ್ರಮ ಅಂದರೆ ಸಂದರ್ಭಾನುಸಾರ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟು, ಪುನಃ ಒತ್ತುವರಿಯಾಗದಂತೆ ತಂತಿ ಬೇಲಿ ಹಾಕಿಸಬೇಕು. ಸುತ್ತಲೂ ಕಂದಕ ನಿರ್ಮಿಸುವುದು ಅಥವಾ ನಾಮ ಫಲಕ ಹಾಕಿಸಬೇಕು.

■ **ಕೃಷ್ಣ ಬೈರೇಗೌಡ, ಕಂದಾಯ ಸಚಿವ**

ನಕಲಿ ದಾಖಲೆಗಳಿದ್ದರೆ ಕ್ರಿಮಿನಲ್ ಮೊಕದ್ದಮೆ

ನಕಲಿ ದಾಖಲೆಗಳ ಆಧಾರದ ಮೇಲೆ ಭೂ ಕಬಳಿಕೆಯಾಗಿದೆಯೆಂದು ಬಂದಿರುವ ದೂರು ಅಥವಾ ಸ್ವತಃ ಗಮನಿಸಿರುವ ಪ್ರಕರಣಗಳನ್ನು ತೀರ್ಮಾನಿಸಲು ನಿರ್ದಿಷ್ಟ ಕಾಲಮಿತಿ ನಿಗದಿಪಡಿಸುವುದು, ಪ್ರಕರಣಗಳನ್ನು ಪ್ರತ್ಯೇಕವಾಗಿ ಪರಾರ್ಮಿಸಬೇಕು. ನಕಲಿ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸರ್ಕಾರಿ ಅಧಿಕಾರಿ/ಸಿಬ್ಬಂದಿ ಶಾಮೀಲಾಗಿರುವ ಬಗ್ಗೆ ಕಂಡು ಬಂದರೆ ತ್ವರಿತ ಸೇವೆಯಿಂದ ಅಮಾನತ್ತಿನಲ್ಲಿಡುವುದು. ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಟ್ಟಿರುವುದು ಸಾಬೀತು ಆದಲ್ಲಿ ತಕ್ಷಣವೇ ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದು. ನ್ಯಾಯಾಲಯ ತಡೆಯಾಜ್ಞೆ ಜಾರಿಯಲ್ಲಿದ್ದರೆ, ತಡೆಯಾಜ್ಞೆ ತೆರವು ಮಾಡಿಸಲು ತಕ್ಷಣವೇ ಕ್ರಮ ಜರುಗಿಸಿ ತ್ವರಿತ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳುವುದು. ಸರ್ಕಾರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ನ್ಯಾಯಾಲಯ ಪ್ರಕರಣ ಗಳನ್ನು ಪರಿಣಾಮಕಾರಿಯಾಗಿ ಕ್ಷೇತ್ರ ಮಟ್ಟದ ಅಧಿಕಾರಿಗಳು ನಿರ್ವಹಿಸುವುದನ್ನು ಖಚಿತಪಡಿಸಿ ಕೊಳ್ಳುವುದು.

ಒತ್ತುವರಿ ತೆರವಿಗೆ ಸರ್ಕಾರದ ಕ್ರಮ: ಜಿಲ್ಲಾಧಿಕಾರಿಗಳು ಒತ್ತುವರಿ ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳು ಹಾಗೂ ಸ್ವೀಕೃತವಾಗಿರುವ ದೂರುಗಳನ್ನು ಇನ್ನು 15 ದಿನಗಳ ಅವಧಿಯೊಳಗೆ ಸಂಪೂರ್ಣವಾಗಿ ಪರಾಮರ್ಶಿಸುವುದು. ನಗರ ಪ್ರದೇಶ/ ವಾಣಿಜ್ಯ/ಕೈಗಾರಿಕೆ/ ಇನ್ನಿತರ ಉದ್ದಿಮೆಗಳಿಗೆ ಅನಧಿಕೃತವಾಗಿ ಸರ್ಕಾರಿ ಜಮೀನು ಬಳಸಿರುವ ಒತ್ತುವರಿ ಪ್ರಕರಣಗಳನ್ನು ಅತಿ ಗಂಭೀರ ಎಂದು ಪರಿಗಣಿಸಿ ಒತ್ತುವರಿದಾರರ ವಿರುದ್ಧ ಕಾನೂನು ಕ್ರಮಗಳನ್ನು ಜರುಗಿಸುವ ಅಧಿಕಾರ ನೀಡಲಾಗಿದೆ. ಕಾಲಮಿತಿಯಲ್ಲಿ ಕ್ರಮ ಜರುಗಿಸದೇ ಇರುವುದು, ನಿರ್ಲಕ್ಷತನ ತೋರಿಸುವುದು, ವಿಳಂಬ ನೀತಿ ಅನುಸರಿಸುವುದು, ಒತ್ತುವರಿ ತೆರವುಗೊಳಿಸಲು ವಿಫಲರಾದ ಅಧಿಕಾರಿ, ಸಿಬ್ಬಂದಿಯನ್ನು ಗುರುತಿಸಿ ಕಲಂ 192ಎ/192ಬಿ ಅನ್ವಯ ತಪ್ಪದೇ ಕ್ರಮ ಜರುಗಿಸುವುದು. ಸದರಿ ಒತ್ತುವರಿ ತೆರವುಗೊಳಿಸಲು ಪರ್ಯಾಯ ವ್ಯವಸ್ಥೆ ಮಾಡುವುದು.

ಯುದ್ಧದ ಬೆನ್ನಲ್ಲೇ ಪಿಸಿಬಿಗೆ ಭಾರೀ ಹಿನ್ನಡೆ | ಎರಡೇ ಕ್ರೀಡಾಂಗಣದಲ್ಲಿ ಪಂದ್ಯ

ಪ್ರೇಕ್ಷಕರಿಲ್ಲದೆ ಪಾಕಿಸ್ತಾನ ಸೂಪರ್ ಲೀಗ್!

ಲಾಹೋರ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಯ ಪಾಕಿಸ್ತಾನ ಸೂಪರ್ ಲೀಗ್ ಪಂದ್ಯಾವಳಿ ತತ್ತರಿಸಿದ್ದು, ಭಾರೀ ಹಿನ್ನಡೆ ಅನುಭವಿಸಿದೆ. ಐಸಿಸಿ ಟೂರ್ನಿಗಳಲ್ಲಿ ಕೆಟ್ಟ ಪ್ರದರ್ಶನ ನೀಡಿ ಆರ್ಥಿಕವಾಗಿ ಮತ್ತು ಐಸಿಸಿ ಕ್ಷೇತ್ರದಲ್ಲಿ ತೀರಾ ಕುಗ್ಗಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಪಂದ್ಯಾವಳಿಯನ್ನು ಪ್ರೇಕ್ಷಕರಿಲ್ಲದೆ ನಡೆಸುವುದಕ್ಕೆ ಮುಂದಾಗಿದೆ.

ಗಲ್ಫ್ ದೇಶಗಳಲ್ಲಿ ನಡೆಯುತ್ತಿರುವ ಯುದ್ಧಕ್ಕೆ ತುತ್ತಾದವರಲ್ಲಿ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆ ಕೂಡ ಎಂಬುದಕ್ಕೆ ಆಟಗಾರರ ಅಲಭ್ಯತೆಯೇ ಸಾಕ್ಷಿ. ಹಲವಾರು ಆಟಗಾರರು ಪಾಕಿಸ್ತಾನಕ್ಕೆ ಹೋಗಲು ನಿರಾಕರಿಸಿದ್ದಾರೆ. ಹತ್ತಾರು ಕ್ರಿಕೆಟಿಗರು ತಮ್ಮ ಹಾಜರಾತಿ ಹಿಂಪಡೆದಿದ್ದಾರೆ. ಇನ್ನು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಆಯ್ಕೆಯಾದ ಹಲವು ಆಟಗಾರರು ಹೊರಬಿದ್ದ ಕಾರಣ ಕೆಲವು ಪಿಎಸ್‌ಎಲ್ ಆಟಗಾರರು ಪಿಸಿಬಿಗೆ ಕೈಕೊಟ್ಟು ಬದಲಿ ಆಟಗಾರರಾಗಿ ಭಾರತಕ್ಕೆ ಬಂದಿಳಿದಿದ್ದಾರೆ. ಇದು ಕೂಡ ಪಿಸಿಬಿಗೆ ಹೊಡೆತ ನೀಡಿದೆ.

ಅಭಿಮಾನಿಗಳಿಲ್ಲದೆ ಪಂದ್ಯ: ಮಾರ್ಚ್ 26ರಂದು ಶುರುವಾಗಲಿರುವ ಪಿಎಸ್‌ಎಲ್ ಪಂದ್ಯಾ ವಳಿಗೆ ಅಭಿಮಾನಿಗಳ ಪ್ರವೇಶವಿರುವುದಿಲ್ಲ. ಭಾನುವಾರದಂದು ಮಾಧ್ಯಮವನ್ನುದ್ದೇಶಿಸಿ ಮಾತನಾಡಿರುವ ಪಿಸಿಬಿ ಅಧ್ಯಕ್ಷ ಮೋಹ್ಸಿನ್ ನಖ್ವಿ, ಪಿಎಸ್‌ಎಲ್ ನಮ್ಮ ದೇಶದ ಕ್ರಿಕೆಟ್ ಹಬ್ಬ, ನಾವು ರದ್ದುಗೊಳಿಸಲಾಗುವುದಿಲ್ಲ. ಟೂರ್ನಿ ವೇಳಾ ಪಟ್ಟಿಯಂತೆ ನಡೆಯುತ್ತದೆ. ಆದರೆ ಅಭಿಮಾನಿಗಳಿಗೆ ಪಂದ್ಯ ನೋಡುವುದಕ್ಕೆ ಅವಕಾಶವಿರುವುದಿಲ್ಲ. ಸದ್ಯ ವಿಶ್ವದಲ್ಲಿ ನಡೆಯುತ್ತಿರುವ ಸಂಘರ್ಷ ಮುಂದಿಟ್ಟು ಕೊಂಡು ಈ ಬಗ್ಗೆ ತೀರ್ಮಾನ ಮಾಡಲಾಗಿದೆ ಎಂದಿದ್ದಾರೆ.

ಎರಡೇ ಮೈದಾನದಲ್ಲಿ ಪಂದ್ಯ: ಪಿಎಸ್‌ಎಲ್ ಪಂದ್ಯಾವಳಿ ವಾಸ್ತವವಾಗಿ ಆರು ಕ್ರೀಡಾಂಗಣಗಳಲ್ಲಿ ನಡೆಯಬೇಕಿತ್ತು. ಆದರೆ ಲಾಜಸ್ಟಿಕ್ಸ್, ಮತ್ತು ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಾದ ಸಂಘರ್ಷಗಳಿಂದ ಎರಡೇ ಸ್ಥಳಗಳಲ್ಲಿ ನಡೆಯಲಿದೆ. ಮೊದಲಿನ ವೇಳಾಪಟ್ಟಿ ಪ್ರಕಾರ ಮುಲ್ತಾನ್, ಪೇಶಾವರ, ಫೈಸಲಾಬಾದ್, ಕರಾಚಿ, ರಾವಲ್ಪಿಂಡಿ ಮತ್ತು ಲಾಹೋರದಲ್ಲಿ ಪಂದ್ಯಗಳು ನಡೆಯಬೇಕಿದ್ದವು. ಆದರೆ ಲಾಹೋರ್ ಮತ್ತು ಕರಾಚಿಯಲ್ಲಿ ಮಾತ್ರ ಪಂದ್ಯಾವಳಿ ನಡೆಸುವುದಕ್ಕೆ ಪಿಸಿಬಿ ಮುಂದಾಗಿದೆ. ಅದಲ್ಲದೆ ಆರಂಭಿಕ ಪಂದ್ಯಕ್ಕೂ ಮುನ್ನ ಯಾವುದೇ ಉದ್ಘಾಟನಾ ಸಮಾರಂಭ ನಡೆಯುವುದಿಲ್ಲ ಎಂದು ಪಿಸಿಬಿ ತಿಳಿಸಿದೆ.

ಇಂಧನ ವ್ಯತ್ಯೆ: ಎರಡೇ ಕ್ರೀಡಾಂಗಣದಲ್ಲಿ ಪಂದ್ಯಾವಳಿ ನಡೆಸುವುದಕ್ಕೆ ಪ್ರಮುಖ ಕಾರಣ ಇಂಧನ ಎಂದು ಬಣ್ಣಿಸಲಾಗಿದೆ. ಯುದ್ಧದ ಪರಿಣಾಮದಿಂದಾಗಿ ವಿಶ್ವವೇ ಇಂಧನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹೀಗಿರುವಾಗ ಪಾಕಿಸ್ತಾನ ಪ್ರಧಾನ ಮಂತ್ರಿ ಶರೀಫ್, ಪಿಎಸ್‌ಎಲ್‌ನಲ್ಲಿ ಭಾಗವಹಿಸುವ ಆಟಗಾರರಿಗೆ ಮತ್ತು ಸಿಬ್ಬಂದಿಗಳಿಗೆ ಇಂಧನ ಉಳಿತಾಯದತ್ತ ಗಮನಹರಿಸಿ ಎಂದಿದ್ದಲ್ಲದೆ, ನಾವು ಶಾಲಾ-ಕಾಲೇಜುಗಳನ್ನು ಬಂದ್ ಮಾಡಿದ್ದೇವೆ. ಜನರಿಗೆ ವರ್ಕ್ ಫ್ರಾಮ್ ಹೋಮ್ ಕೊಟ್ಟಿದ್ದೇವೆ. ಇಂಧನ ಉಳಿತಾಯ ನಮಗೆ ಅತ್ಯವಶ್ಯಕ ಎಂದು ಅಳಲು ತೋಡಿಕೊಂಡಿದ್ದಾರೆ.



ಪಿಎಸ್‌ಎಲ್‌ಗೆ ಆಟಗಾರರೇ ಇಲ್ಲ

ತಂಡಗಳು ಹರಾಜಿನಲ್ಲಿ ವಿವಿಧ ದೇಶಗಳ ಆಟಗಾರರನ್ನು ಆಯ್ಕೆ ಮಾಡಿಕೊಂಡಿದ್ದವು. ಹ್ಯಾರಿ ಬ್ರೂಕ್ ಅಂತಹ ಪ್ರಮುಖ ಆಟಗಾರರನ್ನೂ ತಂಡಗಳು ಖರೀದಿಸಿದ್ದವು. ಒಬ್ಬೊಬ್ಬರಂತೆ ವಿವಿಧ ಕಾರಣಗಳನ್ನು ಹೇಳಿದ ಆಟಗಾರರು ಅಲಭ್ಯತೆ ಖಚಿತಪಡಿಸಿದರು. ಇದಲ್ಲದೆ, ಐಪಿಎಲ್‌ಗಾಗಿ ಇಬ್ಬರು ಆಟಗಾರರು ಭಾರತಕ್ಕೆ ಬರಲಿದ್ದು ಪಿಸಿಬಿಗೆ ಇನ್ನಷ್ಟು ಹಿನ್ನಡೆಯಾಗಿದೆ.

ಆಫ್ರಿಕಾಗೆ ಗೆಲುವು, ಸರಣಿ ಸಮಬಲ

ವಿಲ್ಲಿಂಗ್ಟನ್: ಕಾನರ್ ಎಸ್ಟರ್‌ಹುಯಿಜೆನ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ತಂಡ ಸಾಂಘಿಕ ಬೌಲಿಂಗ್ ದಾಳಿಗೆ ನ್ಯೂಜಿಲೆಂಡ್ ತಂಡ ತತ್ತರಿಸಿದ್ದು ಇಲ್ಲಿ ಮುಕ್ತಾಯಗೊಂಡಿರುವ ನಾಲ್ಕನೇ ಟಿ20 ಪಂದ್ಯದಲ್ಲಿ ಆಫ್ರಿಕಾ ವಿರುದ್ಧ ಸೋಲನುಭವಿಸಿತು.

ವಿಶ್ವಕಪ್ ಮುಗಿದ ತಕ್ಷಣವೇ ನ್ಯೂಜಿಲೆಂಡ್ ಹಾಗೂ ದ.ಆಫ್ರಿಕಾ ತಂಡಗಳು ಎದುರಾಗಿವೆ. ಈ ಹಂತದಲ್ಲಿ ಮೊದಲಿನ ಮೂರು ಪಂದ್ಯದಲ್ಲಿ ಮುನ್ನಡೆ ಸಾಧಿಸಿದ್ದ ಕಿವೀಸ್ ಮುನ್ನಡೆ ಸಾಧಿಸಿತ್ತು. ಈ ಪಂದ್ಯದಲ್ಲಿ ಗೆದ್ದರೆ ಸರಣಿ ವಶಪಡಿಸಿಕೊಳ್ಳಲಿತ್ತು. ಆದರೆ ಭಾನುವಾರದ ಪಂದ್ಯದಲ್ಲಿ ಆಫ್ರಿಕನ್ನರು ಮಿಂಚಿದರು.

ಬ್ಯಾಟಿಂಗ್ ಆಹ್ವಾನ ಪಡೆದ ನಂತರ ಆರಂಭಿಕ ಹಿನ್ನಡೆ ಅನುಭವಿಸಿದರೂ, ಕಾನರ್ ಎಸ್ಟರ್‌ಹುಯಿಜೆನ್ ಅವರ ಅರ್ಧಶತಕದ ನೆರವಿನಿಂದ ಚೇತರಿಸಿಕೊಂಡ ಆಫ್ರಿಕಾ ರುಬಿನ್ ಅವರ ಫಿನಿಶಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿತು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ಆರಂಭದಿಂದಲೂ ಹಿನ್ನಡೆ ಅನುಭವಿಸಿತು. ರಾಬಿಸನ್ ಹಾಗೂ ಕ್ಲೆವರ್ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಅಲ್ಪ ಹೊತ್ತು ನಿಂತರೂ 18.5 ಓವರ್‌ಗಳಲ್ಲಿ 145 ರನ್ ಗಳಿಸಿ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. 57 ರನ್ ಗಳಿಸಿದ ಕಾನರ್ ಎಸ್ಟರ್‌ಹುಯಿಜೆನ್ ಪಂದ್ಯದ ಹೀರೋ ಎನಿಸಿದರು. ಹರಿಣರ ವೇಗಿ ಕೋಸಿ 3 ವಿಕೆಟ್ ಪಡೆದು ಬೆಸ್ಟ್ ಬೌಲರ್ ಎನಿಸಿಕೊಂಡರು. ಆಫ್ರಿಕಾ ಪರ ಬಾರ್ಟಮನ್, ಸುಬರೈನ್ ಹಾಗೂ ಕೇಶವ್ ಕೂಡ ತಲಾ 2 ವಿಕೆಟ್ ಪಡೆದರು. ಐದನೇ ಹಾಗೂ ನಿರ್ಣಾಯಕ ಪಂದ್ಯ ಬುಧವಾರದಂದು ನಡೆಯಲಿದೆ.

ಸಿಎಸ್‌ಕೆ ಆಟಗಾರರ ಸಮಾಗಮ



ಚೆನ್ನೈ: ಶನಿವಾರದಿಂದ ಶುರುವಾಗಲಿರುವ ಐಪಿಎಲ್ ಪಂದ್ಯಾವಳಿಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಅಭಿಮಾನಿಗಳಿಗಾಗಿ ಕಾರ್ಯಕ್ರಮವೊಂದನ್ನು ಮಾಡಿದ್ದು, ತನ್ನ ಫ್ರಾಂಚೈಸಿಗೆ ಆಡಿರುವ ಹಲವು ಆಟಗಾರರನ್ನು ಕರೆಸಿ ಸನ್ಮಾನ ಮಾಡಿತು.

ಚೆನ್ನೈನ ಚೆಪಾಕ್ ಕ್ರೀಡಾಂಗಣ ಅಭಿಮಾನಿಗಳಿಗೆ ಹಳೆ ನೆನಪುಗಳ ಗೂಡಾಗಿ ಗೋಚರಿಸಿತ್ತು. ಚೆನ್ನೈ ತಂಡ ಚಾಂಪಿಯನ್ ಪಟ್ಟಕ್ಕೇರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬ್ಯಾಟರ್ ಸುರೇಶ್ ರೈನಾ, ಆಲ್‌ರೌಂಡರ್ ಡ್ವೇನ್ ಬ್ರಾವೊ, ಸ್ಪಿನ್ನರ್ ಮುತ್ತಯ್ಯಾ ಮುರುಳಿಧರನ್, ವೇಗಿ ಬಾಲಿಂಜರ್, ಸುಬ್ರಮಣ್ಯ ಬದರಿನಾಥ, ಅಂಬಾಟಿ ರಾಯುಡು, ಹರ್ಭಜನ್ ಸಿಂಗ್ ಸೇರಿದಂತೆ ವಿವಿಧ ಮಾಜಿ ಆಟಗಾರರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೌರವ ಸಲ್ಲಿಸಿದೆ.


ಕಾರ್ಯಕ್ರಮದ ಸಮಯದಲ್ಲಿ ಮಹೇಂದ್ರ ಸಿಂಗ್ ಧೋನಿ ಮಾಜಿ ಆಟಗಾರರೊಂದಿಗೆ ಅಣಕು ಆಟವಾಡಿದರು. ರೈನಾ ಸೇರಿದಂತೆ ಪ್ರಮುಖ ಬ್ಯಾಟಿಗರು ಬ್ಯಾಟಿಂಗ್ ಮಾಡಿದರು. ಚೆನ್ನೈ ಸೂಪರ್ ಕಿಂಗ್ಸ್ ಗೆದ್ದ ಎಲ್ಲಾ ಟ್ರೋಫಿಗಳೊಂದಿಗೆ ಫೋಟೋ ಸೆಷನ್ ಕೂಡ ನಡೆಯಿತು.

ವಿಶ್ವ ಚಾಂಪಿಯನ್‌ಗಳಿಗೆ ಸನ್ಮಾನ: ಕಾರ್ಯಕ್ರಮಕ್ಕೂ ಮುನ್ನ ಟಿ20 ವಿಶ್ವಕಪ್ ಗೆದ್ದ ತಂಡದ ಭಾಗವಾಗಿದ್ದ ಶಿವಂ ದುಬೆ, ಸಂಜು ಸ್ಯಾಮ್ಸನ್ ಮತ್ತು ಅಂಡರ್-19 ವಿಶ್ವಕಪ್ ಗೆಲ್ಲಿಸಿಕೊಟ್ಟ ನಾಯಕ ಆಯೂಷ್ ಮಾಥ್ರೆ ಅವರಿಗೆ ಚೆನ್ನೈ ಸೂಪರ್ ಕಿಂಗ್ಸ್ ವಿಶೇಷ ಪಾರಿತೋಷಕ ನೀಡಿತು. ಧೋನಿ ಈ ಆಟಗಾರರಿಗೆ ಸನ್ಮಾನಿಸಿದರು.

ಪದಬಂಧ

5932

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4.ತಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (3)
12.ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15.ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾ ಸದರೆಡೆಗೆ ನುಗ್ಗಿ ಬಂದವರ ವೇಗ (3)
17.ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1.ಆಸ್ತಿಯಲ್ಲಿ ಭಾಗಸ್ಥನೀತ (4)
2.ತಾರೀಖನ್ನು ಹೀಗೂ ಹೇಳುತ್ತೇವೆ (3)
3.ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5.ಇದು ನಾಡಿನ ಒಂದು ಭಾಗ (4)
7.ಜನರ ಕಷ್ಟ-ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9.ಅನುಚಿತವಾದ ಜಂಭವಿದು (5)
10.ರಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11.ಮನದಲ್ಲುಂಟಾಗುವ ಭಾವನೆ-ವಿಚಾರ (4)
13.ಬರದ ನಡುವೆ ಕಾಳಗವಡಗಿದೆ (3)
14.ಇಚ್ಛೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3.ಅಲ್ಲಮಪ್ರಭು
5.ಕೇಳುಗ 6.ಚರ್ವಿತ
7.ಹವಳ 9.ತಂಗುದಾಣ
11.ಪರಂತಪಾ 14.ಗಣಕ
16.ಅಪಾರ 17.ಜವಾರಿ
18.ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ :
1.ತೊಡೆಚಲ್ಲಣ 2.ಸಂಕೇತ
3.ಅಗಣಿತ 4.ಮಣಿಹ
8.ವರ್ಜಿತ 10.ದಾರುಣ
12.ಪಾತರಗಿತ್ತಿ
13.ಜಗಜಟ್ಟಿ 15.ಕರುಳು
16.ಆರಿಕೆ

ಕಿರುಸುದ್ದಿ

ಡ್ರಗ್ಸ್ ಮಾರಾಟ: ಆರೋಪಿ ಬಂಧನ

ಕೊಣಾಜೆ: ಕೊಣಾಜೆ ಠಾಣಾ ವ್ಯಾಪ್ತಿಯ ಬೆಳ್ಮ ದೇರಳಕಟ್ಟೆಯ ಖಾಸಗಿ ಮೆಡಿಕಲ್ ಕಾಲೇಜು ಬಳಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಕೊಣಾಜೆ ಪೊಲೀಸರು ಬಂಧಿಸಿ ಆತನಿಂದ ಸುಮಾರು ಒಂದು ಲಕ್ಷ ಆರು ಸಾವಿರ ಮೌಲ್ಯದ ನಿಷೇಧಿತ ಮಾದಕ ವಸ್ತುವನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ ಆರೋಪಿಯನ್ನು ಕೂಳೂರು ಕಸಬ ಬೆಂಗ್ರೆ ನಿವಾಸಿಯಾದ ಮಹಮ್ಮದ್ ಝಾಕಿರ್ ಹುಸೈನ್ (19) ಎಂದು ಗುರುತಿಸಲಾಗಿದೆ. ಈತ ದೇರಳಕಟ್ಟೆ ಮೆಡಿಕಲ್ ಕಾಲೇಜು ಬಳಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದಾಗ ಆತನಿಂದ 10.6 ಗ್ರಾಂ ತೂಕದ ಎಂಡಿಎಂಎ ಮಾದಕ ವಸ್ತು, ಸ್ಯಾಮ್ ಸಾಂಗ್ ಮೊಬೈಲ್ ಫೋನ್, ಸಿರಿಂಜ್, ಸಿಗರ್ ಲೈಟ್ ಹಾಗೂ ನಂಬರ್ ಪ್ಲೇಟ್ ಇಲ್ಲದ ಬೈಕ್ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈತನ ವಿರುದ್ಧ ಕೊಣಾಜೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಮಾನತುಗೊಂಡ ಮೂಡಬಿದಿರೆ ಇನ್ಸ್‌ಪೆಕ್ಟರ್ ಮೇಲೆ ಅತ್ಯಾಚಾರ ಆರೋಪ

ಬೆಳ್ತಂಗಡಿ: ಮೂಡಬಿದಿರೆ ಇನ್ಸ್‌ಪೆಕ್ಟರ್ ಸಂದೇಶ್ ಪಿ.ಜಿ. ಅಮಾನತು ಬಳಿಕ ಇದೀಗ ಶಿಕ್ಷಕಿ ಮೇಲೆ ಅತ್ಯಾಚಾರ ಮಾಡಿರುವ ಆರೋಪದ ಮೇಲೆ ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳ್ತಂಗಡಿ ತಾಲೂಕಿನ ವೇಣೂರು ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಮುಖ್ಯ ಶಿಕ್ಷಕಿಯಾಗಿದ್ದ ಮಹಿಳೆ ಮೇಲೆ 2018 ರಿಂದ 2023 ರ ನಡುವೆ ಮನೆಗೆ ಬಂದು ಇನ್ಸ್‌ಪೆಕ್ಟರ್ ಸಂದೇಶ್ ಪಿ.ಜಿ. ಬಲವಂತವಾಗಿ ಅತ್ಯಾಚಾರ ಮಾಡಿರುವ ಬಗ್ಗೆ ಮಾ.21 ರಂದು ಸಂಜೆ ವೇಣೂರು ಪೊಲೀಸ್ ಠಾಣೆಯಲ್ಲಿ ನೊಂದ ಮಹಿಳೆ ದೂರು ನೀಡಿದ್ದು, ಅದರಂತೆ ಪೊಲೀಸರು ಇನ್ಸ್‌ಪೆಕ್ಟರ್ ಸಂದೇಶ್ ಪಿಜಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಎಂಡಿಎಂಎ ಸಹಿತ ವ್ಯಕ್ತಿ ಸೆರೆ

ಕಾಸರಗೋಡು: ಮಾದಕದ್ರವ್ಯ ಎಂಡಿಎಂಎ ಸಹಿತ ವ್ಯಕ್ತಿಯೋರ್ವನನ್ನು ಹೊಸದುರ್ಗ ಪೊಲೀಸರು ಬಂಧಿಸಿದ್ದಾರೆ. ಕಣ್ಣೂರು ಪಾಪಿನ್‌ಶೇರಿ ನಿವಾಸಿ ಲತೀಫ್ (38) ಬಂಧಿತ ವ್ಯಕ್ತಿ. ಈತ ಹೊಸದುರ್ಗ ರೈಲು ನಿಲ್ದಾಣದಲ್ಲಿ ಶಂಕಾಸ್ಪದ ರೀತಿಯಲ್ಲಿ ತಿರುಗಾಡುತ್ತಿದ್ದುದನ್ನು ಗಮನಿಸಿದ್ದು, ತಪಾಸಣೆ ನಡೆಸಿದಾಗ ಆತನ ಕೈಯಿಂದ 2.36 ಗ್ರಾಂ ಎಂಡಿಎಂಎ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಸಾಗಾಟ ಪ್ರಕರಣ: ಅಪರಾಧಿಗೆ 20 ವರ್ಷ ಕಠಿಣ ಜೈಲು ಶಿಕ್ಷೆ

ಕಾಸರಗೋಡು: ಕರ್ನಾಟಕ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 22 ಕಿಲೋ ಗಾಂಜಾ ಸಾಗಾಟ ನಡೆಸಿದ ಪ್ರಕರಣದ ಆರೋಪಿಗೆ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು 2 ಲಕ್ಷ ರೂ. ದಂಡ ವಿಧಿಸಿದೆ. ಚೆಂಗಳ ಬಂಬ್ರಾಣಿ ನಗರ ನಿವಾಸಿ ಬಿ.ಎಸ್ ಅಬ್ದುಲ್ ಸಕೀರ್ (40) ಎಂಬಾತನಿಗೆ ಜಿಲ್ಲಾ ಅಡೀಶನಲ್ ಸೆಶನ್ಸ್ ನ್ಯಾಯಾಲಯ (ದ್ವಿತೀಯ)ದ ನ್ಯಾಯಾಧೀಶ ರಾಮುರಮೇಶ್ ಚಂದ್ರಬಾನು ಈ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ದಂಡ ಪಾವತಿಸದಿದ್ದಲ್ಲಿ ಆರೋಪಿಯು 6 ತಿಂಗಳ ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಪ್ರಾಸಿಕ್ಯೂಶನ್ ಪರವಾಗಿ ಅಡೀಶನಲ್ ಗವರ್ನ್‌ಮೆಂಟ್ ಪ್ಲೀಡರ್ ಜಿ.ಚಂದ್ರಮೋಹನ್, ಚಿತ್ರಕಲಾ ಹಾಜರಿದ್ದರು. 2020ರ ಫೆ. 12ರಂದು ಕರ್ನಾಟಕ ರಸ್ತೆಸಾರಿಗೆ ಸಂಸ್ಥೆ ಬಸ್‌ನಲ್ಲಿ ಮಂಜೇಶ್ವರ ಅಬಕಾರಿ ಚೆಕ್‌ಪೋಸ್ಟ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಲಾಗಿತ್ತು. 22 ಕಿಲೋ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಆರೋಪಿ ಪರಾರಿಯಾಗಿದ್ದನು. ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ನಿರ್ದೇಶ ಪ್ರಕಾರ ವಿದ್ಯಾನಗರ ಠಾಣೆ ಪೊಲೀಸರು ಎರ್ನಾಕುಳಂನಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದರು.

ಮಾದಕ ದ್ರವ್ಯ ಸೇವನೆ: ಯುವಕ ಪೊಲೀಸರ ವಶ

ಉಪ್ಪಿನಂಗಡಿ : ಇಲ್ಲಿನ ಪೊಲೀಸ್ ಠಾಣಾ ವ್ಯಾಪ್ತಿಯ ಕರುವೇಲು ಎಂಬಲ್ಲಿ ಮಾದಕ ದ್ರವ್ಯ ಸೇವಿಸಿ ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ ಯುವಕನೋರ್ವನನ್ನು ಉಪ್ಪಿನಂಗಡಿ ಪೊಲೀಸರು ವಶಕ್ಕೆ ತೆಗೆದುಕೊಂಡ ಘಟನೆ ಆದಿತ್ಯವಾರ ಘಟಿಸಿದೆ. ಕೇರಳ ರಾಜ್ಯದ ತಳಿಪರಂಬು ಎಂಬಲ್ಲಿನ ನಿವಾಸಿಯಾಗಿರುವ , ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿ ಎನ್ನಲಾದ ಈ ಯುವಕ ಸಾರ್ವಜನಿಕರಿಗೆ ಕಿರುಕುಳ ನೀಡಿದ ಕಾರಣಕ್ಕೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು, ಪೊಲೀಸರ ಯಾವುದೇ ಪ್ರಶ್ನೆಗಳಿಗೆ ಉತ್ತರಿಸದೆ ಅಸಹಕಾರ ನೀಡುತ್ತಿದ್ದನೆನ್ನಲಾಗಿದೆ. ಪೊಲಿಸರು ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಕಳುಹಿಸಿದ್ದಾರೆ ಎಂದು ತಿಳಿಸಲಾಗಿದೆ.

ಕಾರು-ಬೈಕ್ ಡಿಕ್ಕಿ: ಸವಾರ ಆಸ್ಪತ್ರೆಗೆ ದಾಖಲು

ಉಡುಪಿ: ಕುಂದಾಪುರ ತಾಲೂಕಿನ ಹೊಸೂರು ಗ್ರಾಮದ ವಂಡ್ ಬಳ್ಳಿಯ ತಿರುವಿನ ರಸ್ತೆಯಲ್ಲಿ ಶನಿವಾರ ಮಧ್ಯಾಹ್ನ ಕಾರು ಮತ್ತು ಬೈಕ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಕೆರಾಡಿ ಕಡೆಯಿಂದ ಚಿತ್ತೂರು ಕಡೆಗೆ ಶಶಿಧರ್ ಎಂಬವರು ಚಲಾಯಿಸುತ್ತಿದ್ದ ಕಾರು ಎದುರಿನಿಂದ ಬರುತ್ತಿದ್ದ ಪ್ರಣವ್ ಕುಮಾರ್ ಅವರ ಬೈಕ್ ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಪ್ರಣವ್ ಕುಮಾರ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ಚಾಲಕ ಶಶಿಧರ್ ಅವರಿಗೂ ಗಾಯಗಳಾಗಿದ್ದು, ಕೊಲ್ಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿಗೆ ಸ್ಕೂಟರ್ ಡಿಕ್ಕಿ : ಇಬ್ಬರಿಗೆ ಗಾಯ

ಉಡುಪಿ: ಸಂತೆಕಟ್ಟೆಯ ಭಾರತ್ ಗ್ಯಾಸ್ ಬಳಿಯ ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಶನಿವಾರ ಸಂಜೆ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಅಮೀರ್ ಸುಹೈರ್ (33) ಎಂಬವರು ಗಾಯಗೊಂಡಿದ್ದಾರೆ. ಸ್ವಸ್ತಿಕ್ ಎಂಬವರು ಚಲಾಯಿಸುತ್ತಿದ್ದ ಸ್ಕೂಟರ್ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಅಮೀರ್ ಅವರಿಗೆ ಡಿಕ್ಕಿ ಹೊಡೆದಿದೆ. ಗಾಯಾಳು ಹಾಗೂ ಸ್ಕೂಟರ್ ಸವಾರ ಇಬ್ಬರೂ ಉಡುಪಿಯ ಹೈಟೆಕ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಉಡುಪಿ ಸಂಚಾರ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಾಗಿದೆ.

ಮಂಗಳೂರು–ಬೆಂಗಳೂರು ಹಾದಿಯಲ್ಲಿ ಗ್ರೀನ್ ಸೆಲ್ ಮೊಬಿಲಿಟಿಯ ನ್ಯುಗೋ ಯಶಸ್ವಿ ಓಡಾಟ

ಇವಿ, ಹೈಬ್ರೀಡ್ ಬಸ್‌ಗಳತ್ತ 'ಖಾಸಗಿ' ಚಿತ್ತ

ದಿಗಂತ ವಿಶೇಷ

ಕೃಷ್ಣಪ್ರಸಾದ್

ಮಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಸರ ಪೂರಕ ಉಪಕ್ರಮದ ಭಾಗವಾಗಿ ಇವಿ (ಎಲೆಕ್ಟ್ರಿಕ್), ಹೈಬ್ರೀಡ್ ಮಾದರಿ ಸಾರಿಗೆಗೆ ಒತ್ತು ನೀಡುತ್ತಿದ್ದು, ಸರ್ಕಾರದ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುತ್ತಿರುವ ಖಾಸಗಿ ಕಾರ್ಪೋರೇಟ್ ಸಾರಿಗೆ ಉದ್ಯಮಗಳು ಮಂಗಳೂರು–ಬೆಂಗಳೂರು ನಡುವೆ ಇವಿ ಮತ್ತು ಹೈಬ್ರೀಡ್ ಮಾದರಿಯ ಬಸ್ ಸೇವೆ ನೀಡಲು ಚಿಂತನೆ ನಡೆಸಿವೆ.

ಪ್ರಸ್ತುತ ಮಂಗಳೂರು–ಬೆಂಗಳೂರು–ಮುಲ್ಕಿ ನಡುವೆ ಗ್ರೀನ್ ಸೆಲ್ ಮೊಬಿಲಿಟಿ ಕಂಪೆನಿಯ ನ್ಯುಗೋ ರಾತ್ರಿ ವೇಳೆ ಎರಡು ಇವಿ ಬಸ್ (ಸೀಟರ್) ಸೇವೆ ಆರಂಭಿಸಿದ್ದು, ಪ್ರಯಾಣಿಕರಿಂದ ಉತ್ತಮ ಸ್ಪಂದನೆಯೂ ದೊರೆತಿದೆ. ಪ್ರತಿ ಸೀಟಿನ ಟಿಕೆಟ್ ದರ 450 ರೂ. ಆಗಿದ್ದು, ಕೆಎಸ್ಸಾರ್ಟಿಸಿ ಎಕ್ಸ್‌ಪ್ರೆಸ್ ಬಸ್‌ಗಿಂತಲೂ ಟಿಕೇಟ್ ದರ 30 ರೂ. ಕಡಿಮೆ ಆಗಿದೆ. ಕೆಲವೊಮ್ಮೆ ಆಫರ್‌ನಲ್ಲಿ ಇನ್ನಷ್ಟು ಕಡಿಮೆ ದರದಲ್ಲಿ ಪ್ರಯಾಣಿಕರು ಸಂಚರಿಸುತ್ತಿದ್ದಾರೆ.

ಹವಾನಿಯಂತ್ರಿತ (ಎಸಿ): ನ್ಯೂಗೋ ಸಂಸ್ಥೆಯ ಸೀಟರ್ ಬಸ್ ಸಂಪೂರ್ಣ ಹವಾನಿಯಂತ್ರಿತವಾಗಿದ್ದು, ರಿಡಿಂಗ್‌ಲೈಟ್, ಎಮರ್ಜನ್ಸಿ ಹೊಟ್‌ಲೈನ್, ಯುಎಸ್‌ಬಿ ಚಾರ್ಜಿಂಗ್ ಪಾಯಿಂಟ್, ಸಿಸಿ ಕೆಮರಾ ಸೌಲಭ್ಯಗಳನ್ನು ಹೊಂದಿದೆ. ಇದು ಲೈವ್ ಟ್ರಾಕ್ ವ್ಯವಸ್ಥೆಯನ್ನು ಹೊಂದಿರುವುದರಿಂದ ಬಸ್ ಎಲ್ಲಿದೆ ಎಂದು ತಿಳಿಯಲು ಅನುಕೂಲಕರವಾಗಿದೆ.

ಗ್ರಾಹಕರಿಂದ ಉತ್ತಮ ಸ್ಪಂದನೆ

ನೂತನ ಇಲೆಕ್ಟ್ರಿಕ್ ಬಸ್‌ಗೆ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ವಾರಾಂತ್ಯದಲ್ಲಿ ಬಸ್ ಭರ್ತಿಯಾಗಿ ಸಂಚಾರಿಸುತ್ತಿದೆ. ವಾರದ ನಡುವಿನ ದಿನದಲ್ಲೂ ಪ್ರಯಾಣಿಕರಿಂದ ಬೇಡಿಕೆ ಇದೆ ಎಂದು ಬಸ್ಸಿನ ಚಾಲಕ ನಾಗರಾಜ್ ಮಾಹಿತಿ ನೀಡಿದ್ದಾರೆ. ಪ್ರಸ್ತುತ ಸೀಟರ್ ಬಸ್‌ಗಳು ಬೆಂಗಳೂರಿನಿಂದ ಮಂಗಳೂರಿಗೆ ಹೋಗಿ ಬರುತ್ತಿವೆ. ಗ್ರಾಹಕರಿಂದ ಉತ್ತಮ ಸ್ಪಂದನೆ ದೊರೆತ್ತಿದ್ದು, ರಾತ್ರಿ ವೇಳೆ ಹೈಬ್ರೀಡ್ ಮಾದರಿಯ ಸ್ಲೀಪರ್ ಬಸ್‌ಗಳು ಎರಡು ರೂಟ್‌ಗಳಲ್ಲಿ (ಒಟ್ಟು 4 ಬಸ್‌ಗಳು) ಕಾರ್ಯಾಚರಿಸಲಿದೆ.





ಇವಿಗೆ ಪೂರಕ ವಾತಾವರಣ

ಬಿ.ಸಿ.ರೋಡ್‌ನಿಂದ ಅಡ್ಡಹೊಳೆ (ಗುಂಡ್ಯ) ನಡುವಿನ 63 ಕಿ.ಮೀ. ಚತುಷ್ಪಥ ಕಾಮಗಾರಿ ಮುಕ್ತಾಯ ಹಂತಕ್ಕೆ ಬಂದಿದೆ. ಶಿರಾಡಿಘಾಟಿಯಿಂದ ಸಕಲೇಶಪುರ ವರೆಗಿನ ಹೆದ್ದಾರಿ ಸ್ಥಿತಿಯು ಸುಧಾರಿಸಿದ್ದು, ಮಂಗಳೂರು ಬೆಂಗಳೂರು ಮಾರ್ಗದಲ್ಲಿ ಇವಿ-ಹೈಬ್ರೀಡ್ ಮಾದರಿ ಬಸ್ ಸೇವೆ ಒದಗಿಸಲು ಪೂರಕ ವಾತಾವರಣ ಸೃಷ್ಟಿಯಾಗಿರುವುದರಿಂದ ಖಾಸಗಿ ಕಾರ್ಪೋರೇಟ್ ಸಂಸ್ಥೆಗಳು ಉತ್ಸಾಹವನ್ನು ತೋರಿಸಿವೆ.

ಸೇವೆ ನೀಡುತ್ತಿರುವ ಕಾರ್ಪೋರೇಟ್ ಸಂಸ್ಥೆಗಳು

ದೀರ್ಘ ಪ್ರಯಾಣದ ಎಸಿ ಇಲೆಕ್ಟ್ರಿಕ್ ಬಸ್‌ಗಳು ಬೆಂಗಳೂರು- ಚೆನ್ನೈ, ಬೆಂಗಳೂರು-ಕೊಯಮತ್ತೂರು, ಬೆಂಗಳೂರು-ತಿರುಪತಿ, ವಿಜಯವಾಡ-ವೈಜಾಜ್, ದಿಲ್ಲಿ-ಜೈಪುರ, ದಿಲ್ಲಿ-ಅಮೃತಸರ, ದಿಲ್ಲಿ-ಲಕ್ನೋ ಮಾರ್ಗದಲ್ಲಿ ಇವಿ ಬಸ್‌ಗಳು ಸಂಚರಿಸುತ್ತಿವೆ. ದೇಶದಲ್ಲಿ ನ್ಯುಗೋ, ಫ್ರೆಶ್‌ಬಸ್, ಲಿಫಿ ಸಂಸ್ಥೆಯು ಇಲೆಕ್ಟ್ರಿಕ್ ಎಸಿ ಸೀಟರ್ ಮತ್ತು ಎಸಿ ಸ್ಲೀಪರ್ ಬಸ್‌ಗಳು ಸಾರಿಗೆ ಸೇವೆಯನ್ನು ನೀಡುತ್ತಿವೆ.

200 ಅಧಿಕ ಖಾಸಗಿ ಬಸ್‌ಗಳ ಸಂಚಾರ

ಮಂಗಳೂರು ಬೆಂಗಳೂರು ನಡುವೆ 200ಕ್ಕೂ ಅಧಿಕ ಖಾಸಗಿ ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಇವುಗಳ ಜೊತೆ ಕೆಎಸ್‌ಆರ್‌ಟಿಸಿಯ ಸಾರಿಗೆ ಎಕ್ಸ್‌ಪ್ರೆಸ್, ರಾಜಹಂಸ, ಎಸಿ, ನಾನ್ ಸ್ಲೀಪರ್ ಕೋಚ್ ಜೊತೆಗೆ ಐರಾವತ, ಅಂಬಾರಿ ಉತ್ಸವದಂತಹ 100ಕ್ಕೂ ಅಧಿಕ ಬಸ್‌ಗಳು ಸಂಚಾರ ನಡೆಸುತ್ತಿವೆ. ಕೋವಿಡ್ ಬಳಿಕ ಹೊಸ ಖಾಸಗಿ ಸಂಸ್ಥೆಗಳು ಬಸ್ ಸೇವೆ ನೀಡಲು ಆರಂಭಿಸಿವೆ.

ಘಾಟ್ ರಸ್ತೆ ಸುಲಲಿತ ಪ್ರಯಾಣ

45+2 ಸೀಟುಗಳಿರುವ ಇವಿ ಬಸ್ ಉತ್ತಮವಾದ ಪಿಕ್‌ಅಪ್ ಇದ್ದು, ಘಾಟ್ ರಸ್ತೆಯಲ್ಲೂ ಇವು ಸುಲಲಿತವಾಗಿ ಸಂಚರಿಸುತ್ತವೆ. 35 ಕಿ.ಮೀ. ದೂರವನ್ನು ಆರಾಮದಾಯವಾಗಿ ಸಂಚರಿಸಲು ಸಾಧ್ಯವಾಗಿದೆ.

2 ಗಂಟೆ ಚಾರ್ಜ್, 380 ಕಿ.ಮೀ. ಪ್ರಯಾಣ

ಬೆಂಗಳೂರು–ಮಂಗಳೂರು–ಮುಲ್ಕಿ–ಮಾರ್ಗವಾಗಿ 380 ಕಿ.ಮೀ. ಸಂಚರಿಸುತ್ತಿದ್ದರೂ ನ್ಯುಗೋ ಸಂಸ್ಥೆಯ ಇವಿ ಬಸ್‌ಗೆ ಕೇವಲ 1 ಗಂಟೆ 50 ನಿಮಿಷ ಗಂಟೆ ಚಾರ್ಜ್ ಸಾಕಾಗುತ್ತದೆ. ಸಂಸ್ಥೆಯ ಡಿಪೋದಲ್ಲಿ ಒಮ್ಮೆ 1.30 ಗಂಟೆ ಚಾರ್ಜ್ ಮಾಡಿದರೆ, ಹಾಸನದ ಉದಯಪುರದಲ್ಲಿ ಚಾರ್ಜಿಂಗ್ ಪಾಯಿಂಟ್‌ನಲ್ಲಿ ಮತ್ತೆ 20 ನಿಮಿಷ ಚಾರ್ಜ್ ಮಾಡಲಾಗುತ್ತದೆ.



ಕಡಲಮಕ್ಕಳ ಸಾಗರದ ನಂಟಿಗೆ ಈಗ ಯುದ್ಧದ ಗಂಟು

ಮಲ್ಪೆ ಬಂದರಿನಲ್ಲಿ ಮೀನುಗಾರಿಕೆ ಉದ್ಯಮವೀಗ ಅಲ್ಲೋಲಕಲ್ಲೋಲ!

ಉಡುಪಿ: ಜಗತ್ತಿನ ಯಾವುದೋ ಮೂಲೆಯಲ್ಲಿ ನಡೆಯುತ್ತಿರುವ ಯುದ್ಧವು ಕರಾವಳಿಯ ಜೀವನಾಡಿ, ಏಷ್ಯಾದ ಅತಿ ದೊಡ್ಡ ಮೀನುಗಾರಿಕಾ ಬಂದರು ಎನಿಸಿಕೊಂಡಿರುವ ಮಲ್ಪೆಯ ಮೀನುಗಾರರ ಬದುಕನ್ನು ಅಲ್ಲೋಲಕಲ್ಲೋಲಗೊಳಿಸಿದೆ. ಮೀನಿನ ಬೇಡಿಕೆ ಕುಸಿತ, ರಫ್ತು ಸ್ಥಗಿತ ಮತ್ತು ಹೋಟೆಲ್‌ಗಳ ಮುಚ್ಚುಗಡೆಯಿಂದಾಗಿ ಮಲ್ಪೆ ಮೀನುಗಾರಿಕೆ ಬಂದರು ಇತಿಹಾಸದಲ್ಲೇಕಾಣದಂತಹ ಬಿಕ್ಕಟ್ಟನ್ನು ಎದುರಿಸುತ್ತಿದೆ.

ಪಾತಾಳಕ್ಕೆ ಕುಸಿದ ಮೀನಿನ ಬೆಲೆ

ಕಳೆದ ಕೆಲವು ವಾರಗಳಿಂದ ಮೀನಿನ ಬೆಲೆಗಳು ಮಾರುಕಟ್ಟೆಯಲ್ಲಿ ಭಾರೀ ಪ್ರಮಾಣದಲ್ಲಿ ಕುಸಿದಿವೆ. ಪ್ರತಿ ಕೆಜಿ ಮೀನಿನ ಮೇಲೆ 100 ರಿಂದ 200 ರೂಪಾಯಿಗಳವರೆಗೆ ದರ ಇಳಿಕೆಯಾಗಿದ್ದು, ಮೀನುಗಾರ ಮಹಿಳೆಯರಿಗೆ ತಾವು ಹೂಡಿದ ಅಸಲು ಕೂಡ ವಾಪಸ್ ಸಿಗದಂತಾಗಿದೆ. ಉದಾಹರಣೆಗೆ, ಈ ಹಿಂದೆ ಕೆಜಿಗೆ 1550 ರೂಪಾಯಿ ಇದ್ದ ಮಾಂಜಿ (ಪಾಂಫ್ರೆಟ್) ಈಗ 1400 ರೂಪಾಯಿಗೆ ಇಳಿದಿದ್ದರೆ, ಅಂಜಲ್ ಬೆಲೆ 1100 ರಿಂದ 1000 ರೂಪಾಯಿಗೆ ಕುಸಿದಿದೆ. ದೊಡ್ಡ ಬಂಗುಡೆ, ರಾಣಿ ಮೀನು ಮತ್ತು ಸಿಗಡಿಗಳ ಬೆಲೆಯೂ ಗಣನೀಯವಾಗಿ ಇಳಿದಿರುವುದು ಮೀನುಗಾರರನ್ನು ಕಂಗಾಲಾಗಿಸಿದೆ.

ರಫ್ತು ವಹಿವಾಟು ಸ್ತಬ್ಧ

ಯುದ್ಧದಿಂದಾಗಿ ಅಂತಾರಾಷ್ಟ್ರೀಯ ಹಡಗು ಸಂಚಾರದಲ್ಲಿ ಉಂಟಾಗಿರುವ ವ್ಯತ್ಯಯವು ರಫ್ತು ಉದ್ಯಮವನ್ನು ಕುಸಿಯುವಂತೆ ಮಾಡಿದೆ. ಲಕ್ಷಾಂತರ ರೂಪಾಯಿ ಮೌಲ್ಯದ ಮೀನುಗಳು ಕೋಲ್ಡ್ ಸ್ಟೋರೇಜ್‌ಗಳಲ್ಲೇ ಉಳಿಯುವಂತಾಗಿದೆ. ಇದರಿಂದಾಗಿ ಪ್ರತಿದಿನ ಬಂದರಿನಲ್ಲಿ ನಡೆಯುತ್ತಿದ್ದ ಕೋಟ್ಯಂತರ ರೂಪಾಯಿಗಳ ವಹಿವಾಟು ಸ್ಥಗಿತಗೊಂಡಿದ್ದು, ಸಾವಿರಾರು ಕಾರ್ಮಿಕರು ಕೆಲಸವಿಲ್ಲದೆ ಕುಳಿತುಕೊಳ್ಳುವಂತಾಗಿದೆ.



ವಲಸೆ ಹೊಟೇಲ್ ಕಾರ್ಮಿಕರ ಸಂಕಷ್ಟ

ಮಲ್ಪೆಯ ಹೊಟೇಲ್‌ಗಳನ್ನು ನಂಬಿಕೊಂಡಿದ್ದ ಸಾವಿರಾರು ವಲಸೆ ಕಾರ್ಮಿಕರು ಈಗ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಹೊಟೇಲ್‌ಗಳ ಮುಚ್ಚುಗಡೆಯಿಂದಾಗಿ ಇವರ ದೈನಂದಿನ ಜೀವನವೂ ದುಸ್ತರವಾಗಿದೆ. ರಫ್ತು ಉದ್ಯಮ ಚೇತರಿಸಿಕೊಳ್ಳದ ಹೊರತು ಈ ಬಿಕ್ಕಟ್ಟು ಬಗೆಹರಿಯುವ ಲಕ್ಷಣಗಳು ಕಾಣುತ್ತಿಲ್ಲ.

ದರ ಕುಸಿತದ ಪಟ್ಟಿ (ಕೆಜಿಗೆ)

ಮಾಂಜಿ	1550ರಿಂದ 1400ಕ್ಕೆ ಇಳಿಕೆ ₹150 ನಷ್ಟ
ಅಂಜಲ್	1100ರಿಂದ 1000ಕ್ಕೆ ಇಳಿಕೆ ₹100 ನಷ್ಟ
ಬಂಗುಡೆ	210ರಿಂದ 180ಕ್ಕೆ ಇಳಿಕೆ ₹30 ನಷ್ಟ.

ಹೊಟೇಲ್ ಉದ್ಯಮಕ್ಕೆ ಎಲ್‌ಪಿಜಿ ಬಿಸಿ

ಯುದ್ಧದ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಡುಗೆ ಅನಿಲದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವುದು ಕರಾವಳಿಯ ಹೊಟೇಲ್ ಉದ್ಯಮಕ್ಕೆ ದೊಡ್ಡ ಹೊಡೆತ ನೀಡಿದೆ. ಗ್ಯಾಸ್ ಕೊರತೆ ಮತ್ತು ಹೆಚ್ಚಿದ ವೆಚ್ಚದ ಕಾರಣದಿಂದ ಪ್ರತಿದಿನ ಮೀನು ಊಟದ ಹೊಟೇಲ್‌ಗಳು ಮುಚ್ಚುತ್ತಿವೆ. ಹೊಟೇಲ್ ಮಾಲೀಕರು ಮಾರುಕಟ್ಟೆಗೆ ಬಾರದಿರುವುದು ಮೀನಿನ ಸ್ಥಳೀಯ ಬೇಡಿಕೆಯನ್ನು ಶೂನ್ಯಕ್ಕೆ ತಂದಿದೆ. ಮಲ್ಪೆಯಿಂದ ಕೇರಳದ ಹೊಟೇಲ್‌ಗಳಿಗೆ ಪ್ರತಿದಿನ ಕೋಟ್ಯಂತರ ರೂಪಾಯಿ ಮೌಲ್ಯದ ಮೀನು ಪೂರೈಕೆಯಾಗುತ್ತಿತ್ತು. ಆದರೆ ಈಗ ಅಲ್ಲಿಯೂ ಹೊಟೇಲ್‌ಗಳು ಬಂದ್ ಆಗಿರುವುದರಿಂದ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ.



ಭಾರೀ ಬೇಡಿಕೆ ಪಡೆಯುತ್ತಿರುವ ಕರಾವಳಿಯ ತೆಂಗಿನ ಚಿಪ್ಪುಗಳು

'ಒಂದು ಸಂದರ್ಭದಲ್ಲಿ ತ್ಯಾಜ್ಯವೆಂದು ಪರಿಗಣಿಸಲ್ಪಡುತ್ತಿದ್ದ ತೆಂಗಿನ ಗೆರಟೆಗಳಿಗೆ ಇಂದು ಭಾರೀ ಬೇಡಿಕೆ ಬಂದಿದೆ. ಕೇವಲ ದೇಸೀ ಮಟ್ಟದಲ್ಲಷ್ಟೇ ಅಲ್ಲ, ಜಾಗತೀಕ ಮಟ್ಟದಲ್ಲಿ ಕರಾವಳಿಯ ತೆಂಗಿನ ಗೆರಟೆಗಳು ಸದ್ದು ಮಾಡುತ್ತಿವೆ. ಇದೊಂದು ದೊಡ್ಡ ಉದ್ಯಮವಾಗಿ ಪರವರ್ತನೆಯಾಗುತ್ತಿದ್ದು, ತೆಂಗಿನ ಕಾಯಿಯಂತೆಯೇ ಮೌಲ್ಯಯುತ ವಸ್ತುವಾಗಿ ಗೆರಟೆಗಳು ಪರಿಗಣಿಸಲ್ಪಡುತ್ತಿವೆ. ತೆಂಗಿನಕಾಯಿ ಚಿಪ್ಪು ಪುಡಿ ಮಾರುಕಟ್ಟೆ ಜಾಗತಿಕ ಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಕೈಗಾರಿಕಾ ಕ್ಷೇತ್ರವಾಗಿದೆ. 2025ರಲ್ಲಿ ಸುಮಾರು 360.2 ಮಿಲಿಯನ್ ಮೌಲ್ಯ ಹೊಂದಿದ್ದ ಈ ಮಾರುಕಟ್ಟೆ, 2026ರಿಂದ 2032ರವರೆಗೆ 7.8% ವಾರ್ಷಿಕ ವೃದ್ಧಿದರ ಹೊಂದಿ 609.37 ಮಿಲಿಯನ್‌ಗೆ ಏರಿಕೆಯಾಗುವ ನಿರೀಕ್ಷೆಯಿದೆ.'

ಹರೀಶ್ ಕೆ.ಆದೂರು

ದಿಗಂತ ವಿಶೇಷ

ಮೂಡುಬಿದಿರೆ: ತೆಂಗಿನಕಾಯಿ ಚಿಪ್ಪುಗಳಿಗೆ ಜಾಗತಿಕ ಮಟ್ಟದಲ್ಲಿ ಭಾರೀ ಬೇಡಿಕೆ ಹೆಚ್ಚುತ್ತಿದೆ. ಹಿಂದೆ ತ್ಯಾಜ್ಯವೆಂದು ಪರಿಗಣಿಸಲಾಗುತ್ತಿದ್ದ ಈ ವಸ್ತು ಈಗ ಬಹು ಮೌಲ್ಯಯುತ ಸಂಪನ್ಮೂಲವಾಗಿ ರೂಪಾಂತರಗೊಂಡಿದ್ದು, ಕೋಟ್ಯಂತರ ಮೌಲ್ಯದ ಮಾರುಕಟ್ಟೆಯನ್ನು ಹೊಂದಿದೆ. ಪರಿಸರ ಸ್ನೇಹಿ ಉತ್ಪನ್ನಗಳ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ತೆಂಗಿನ ಚಿಪ್ಪುಗಳನ್ನು ಆಕ್ಟಿವೇಟೆಡ್ ಕಾರ್ಬನ್, ಚಾರ್ಕೋಲ್ ಬ್ರಿಕೆಟ್‌ಗಳು, ಗೃಹೋಪಯೋಗಿ ವಸ್ತುಗಳು ಹಾಗೂಕೈಗಾರಿಕಾಉತ್ಪನ್ನಗಳತಯಾರಿಕೆಯಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.

ಹಲವರಿಗೆ ಉದ್ಯೋಗ

ಇದೀಗ ಗೆರಟೆಗಳ ಆಯುವಿಕೆ, ಅಥವಾ ಸಂಗ್ರಹವೇ ಒಂದು ದೊಡ್ಡ ವ್ಯವಹಾರವಾಗಿ ಪರಿವರ್ತನೆಯಾಗಿದೆ. ಮನೆ ಮನೆಗೆ ವಾಹನಗಳಲ್ಲಿ ಬಂದು ಗೆರಟೆಗಳನ್ನು ಆಯ್ದು ಕೊಂಡೊಯ್ಯುವ ಕಾರ್ಯ ನಡೆಯುತ್ತಿದೆ. ನೆರೆಯ ತಮಿಳ್ನಾಡು, ಕೇರಳ ಭಾಗದಿಂದ ವ್ಯಾಪಾರಿಗಳು ಮನೆ ಬಾಗಿಲಿಗೆಬಂದುಮನೆಯಲ್ಲಿರುವ ಗೆರಟೆಗಳನ್ನು ಸಂಗ್ರಹಿಸಿ ಕೊಂಡೊಯ್ಯುತ್ತಿದ್ದಾರೆ. ಕರಾವಳಿ ಕರ್ನಾಟಕದಾದ್ಯಂತ ತಮಿಳ್ನಾಡಿನ ವ್ಯಾಪಾರಿಗಳು ವಾರಕ್ಕೆ ಎರಡು ಬಾರಿ ಆಗಮಿಸಿ ಗೆರಟೆ ಸಂಗ್ರಹಿಸತೊಡಗಿದ್ದಾರೆ.

ಪೈಪೋಟಿ: ಗೆರಟೆ ಸಂಗ್ರಹದಲ್ಲೂ ಪೈಪೋಟಿ ಆರಂಭವಾಗಿದೆ. ತಮಿಳ್ನಾಡು ಮೂಲದ ವ್ಯಾಪಾರಿಗಳು ಎರಡು ಗೆರಟೆ (ಒಂದು ತೆಂಗಿನಕಾಯಿ)ಗಳಿಗೆ ಒಂದು ರೂಪಾಯಿ ನಿಗದಿಮಾಡಿದರೆ, ಕೇರಳ, ಕಾಸರಗೋಡು ಭಾಗದ ವ್ಯಾಪಾರಿಗಳು ಒಂದೂವರೆ ರೂಪಾಯಿ ಹಣ ನೀಡಿ ಗೆರಟೆ ಸಂಗ್ರಹಿಸಿತ್ತಿದ್ದಾರೆ. ಎಷ್ಟೇ ಗೆರಟೆಗಳಿದ್ದರೂ ತಕ್ಷಣವೇ ಹಣ ಕೊಟ್ಟು ಗೆರಟೆ ಖರೀದಿಸಿ ಕೊಂಡೊಯ್ಯುತ್ತಾರೆ. ಗೂಡ್ಸ್ ವಾಹನಕ್ಕೆ ಮೈಕ್ ಅಳವಡಿಸಿ, 'ಗೆರಟೇ... ಗೆರಟೇ...ಚಿಪ್ಪಿ...ಚಿಪ್ಪೀ....'' ಎಂದು ದೊಡ್ಡದಾಗಿ ಹೇಳುತ್ತಾ ಗೆರಟೆ ಸಂಗ್ರಹಿಸುವ ಕಾಯಕದಲ್ಲಿ ತೊಡಗುತ್ತಿದ್ದಾರೆ.



ಚಾರ್ಕೋಲ್ ಬ್ರಿಕೆಟ್‌ಗಳು ಅಂದರೆ ಇದ್ದಿಲಿನ ಪುಡಿಯನ್ನು ಸಂಕುಚಿತಗೊಳಿಸಿ ತಯಾರಿಸಿದ ಇಟ್ಟಿಗೆಯಾಕಾರದ ಸಣ್ಣ ಇಂಧನ ತುಂಡುಗಳು. ಇವುಗಳನ್ನು ಗೆರಟೆ, ಮರ, ಮರದ ಪುಡಿ ಅಥವಾ ಕೃಷಿ ತ್ಯಾಜ್ಯದಿಂದ ತಯಾರಿಸಲಾಗುತ್ತದೆ. ಬೆಂಕಿ ಹಚ್ಚಲು ದೀರ್ಘಕಾಲದವರೆಗೆ ಉರಿಯುವ ಇಂಧನವಾಗಿ ಬಳಸಲಾಗುತ್ತದೆ.

ಬೇಡಿಕೆಯ ಪ್ರಮುಖ ಕಾರಣಗಳು

ಇಂದು ಗೆರಟೆ ದೊಡ್ಡ ಉದ್ಯಮವಾಗಿ ಪರಿವರ್ತನೆಯಾಗಿದೆ. ಗೆರಟೆಗಳನ್ನು ನೆರೆಯ ಕೇರಳ ರಾಜ್ಯದಲ್ಲಿ ವ್ಯಾಪಕವಾಗಿ ಬಳಸಿ ದೊಡ್ಡ ಉದ್ದಿಮೆಯಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಮುಖ್ಯವಾಗಿ ಆಕ್ಟಿವೇಟೆಡ್ ಕಾರ್ಬನ್ ಮತ್ತು ನೀರು ಶುದ್ಧೀಕರಣ ವ್ಯವಸ್ಥೆಗೆ ಬಳಸಲಾಗುತ್ತಿದೆ ಯಂತೆ. ತೆಂಗಿನ ಚಿಪ್ಪುಗಳು ಉತ್ತಮ ಗುಣಮಟ್ಟದ ಆಕ್ಟಿವೇಟೆಡ್ ಕಾರ್ಬನ್ ತಯಾರಿಕೆಗೆ ಅತ್ಯುತ್ತಮ ಮೂಲವಾಗಿದ್ದು, ನೀರು ಮತ್ತು ಗಾಳಿಯ ಶುದ್ಧೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಕಾರಣಕ್ಕಾಗಿಯೇ ಕೇವಲ ನಮ್ಮದೇಶದಲ್ಲಷ್ಟೇ ಅಲ್ಲ ಜಾಗತಿಕಮಟ್ಟದಲ್ಲೂ ಗೆರಟೆಗೆ ಆದ್ಯತೆ ದೊರಕಲಾರಂಭಿಸಿವೆ.

ಪರಿಸರ ಸ್ನೇಹಿ ಪ್ರವೃತ್ತಿ

ನೈಸರ್ಗಿಕ ಹಾಗೂ ನವೀಕರಿಸಬಹುದಾದ ವಸ್ತುವಾಗಿರುವುದರಿಂದ ಪರಿಸರ ಸ್ನೇಹಿ ಉತ್ಪನ್ನಗಳ ತಯಾರಿಕೆಯಲ್ಲಿ ಹೆಚ್ಚಿನ ಬೇಡಿಕೆ ಇದೆ. ಚಾರ್ಕೋಲ್ ಮತ್ತು ಕೈಗಾರಿಕಾ ಬಳಕೆಗೆ ಇದನ್ನು ಬಳಸಲಾಗುತ್ತಿದೆ. ಉತ್ತಮ ಗುಣಮಟ್ಟದ ಇಂಧನ ಬ್ರಿಕೆಟ್‌ಗಳು ಮತ್ತು ಕೈಗಾರಿಕಾ ಉಪಯೋಗಗಳಿಗೆ ಚಿಪ್ಪುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಲಾಗುತ್ತಿದೆ.

ಗೃಹೋಪಯೋಗಿ, ಕೈಗಾರಿಕಾ ವಸ್ತುಗಳು

ಪಾಲಿಷ್ ಮಾಡಿದ ತೆಂಗಿನ ಚಿಪ್ಪುಗಳಿಂದ ಪಾತ್ರೆಗಳು, ಚಮಚಗಳು ಹಾಗೂ ಅಲಂಕಾರಿಕ ವಸ್ತುಗಳನ್ನು ತಯಾರಿಸಲಾಗುತ್ತಿದೆ. ಕೇರಳ ಮತ್ತು ತಮಿಳ್ನಾಡು ಪ್ರದೇಶಗಳಲ್ಲಿ ಇದನ್ನು ದೊಡ್ಡ ಮಟ್ಟದಲ್ಲಿ ಉದ್ದಿಮೆ ರೂಪದಲ್ಲಿ ಬೆಳೆಸಿರುವುದರಿಂದಾಗಿ ತೆಂಗಿನ ಗುಣಮಟ್ಟದ ಚಿಪ್ಪುಗಳಿಗೆ ಹೆಚ್ಚಿನ ಬೇಡಿಕೆ ಬರಲಾರಂಭಿಸಿವೆ.

ತೆಂಗಿನ ಚಿಪ್ಪುಗಳಿಂದ ತಯಾರಿಸಲ್ಪಟ್ಟ ಇದ್ದಿಲು ಹಾಗೂ ಬ್ರಿಕೆಟ್‌ಗಳಿಗೆ ಜಾಗತಿಕ ಮಟ್ಟದಲ್ಲೂ ಭಾರೀ ಬೇಡಿಕೆಯಿದೆ.

ಏಷ್ಯಾ–ಪ್ಯಾಸಿಫಿಕ್ ಪ್ರದೇಶವು ಉತ್ಪಾದನೆ ಮತ್ತು ಬಳಕೆಯಲ್ಲಿ ಮುಂಚೂಣಿಯಲ್ಲಿದ್ದು, ಚೀನಾ, ಭಾರತ ಮತ್ತು ಜಪಾನ್ ಪ್ರಮುಖ ಮಾರುಕಟ್ಟೆಗಳಾಗಿವೆ. ಭಾರತದಿಂದ ಆಫ್ರಿಕಾ ಮತ್ತು ಯುರೋಪ್ ರಾಷ್ಟ್ರಗಳಿಗೆ ಚಾರ್ಕೋಲ್ ರಫ್ತು ಹೆಚ್ಚುತ್ತಿದೆ. ಈ ಮಾರುಕಟ್ಟೆ ವೇಗವಾಗಿ ಬೆಳೆಯುತ್ತಿದ್ದು, ಹಿಂದೆ ತ್ಯಾಜ್ಯವಾಗಿದ್ದ ತೆಂಗಿನ ಚಿಪ್ಪುಗಳು ಈಗ ವಲಯ ಆರ್ಥಿಕತೆಯ ಪ್ರಮುಖ ಅಂಶವಾಗಿ ಪರಿಣಮಿಸುತ್ತಿವೆ ಎಂಬುದು ಗಮನಾರ್ಹ ಅಂಶ.

---

96 ಸಾವಿರ ಮೆ.ಟನ್ ಕಚ್ಚಾ ತೈಲ ಹೊತ್ತು ತಂದ ಅಕ್ವಾ ಟೈಟಾನ್ | 16,714 ಮೆ.ಟನ್ ಎಲ್‌ಪಿಜಿ ಹೊತ್ತು ತಂದ ಪಿಕ್ಸಿಸ್ ಪಯೋನಿಯರ್

ಯುದ್ಧದ ನಡುವೆ ಮಂಗಳೂರಿಗೆ ಬಂತು ಭರಪೂರ ಇಂಧನ

ಮಂಗಳೂರು: ಮಧ್ಯಪ್ರಾಚ್ಯ ದೇಶಗಳ ಯುದ್ಧದನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ನವ ಮಂಗಳೂರು ಬಂದರಿಗೆ ಆಗಮಿಸಿದ್ದು, ತೈಲ ಇಳಿಸುವ ಕಾರ್ಯ ಭರದಿಂದ ಸಾಗಿದೆ. ಈ ನಡುವೆ ಅಮೇರಿಕಾದಿಂದ ಎಲ್‌ಪಿಜಿ ಹೊತ್ತ ಕಾರ್ಗೋ ಹಡಗು ಕೂಡ ಭಾನುವಾರ ನವಮಂಗಳೂರು ಬಂದರು ತಲುಪಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಈ ಎರಡು ಹಡಗುಗಳ ಆಗಮನದಿಂದಾಗಿ ತೈಲ ಮತ್ತು ಅನಿಲ ಭೀತಿಯಲ್ಲಿದ್ದ ಕರಾವಳಿಯ ಜನತೆ ನಿಟ್ಟುಸಿರು ಬಿಡುವಂತಾಗಿದೆ. ಎಲ್ಲೆಡೆ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳ ಅಭಾವ ತಲೆದೋರಿದ್ದು, ಹೊಟೇಲ್ ಕ್ಯಾಂಟಿನ್‌ಗಳು ಮುಚ್ಚುವ ಸ್ಥಿತಿಗೆ ತಲುಪಿತ್ತು. ಬಹುತೇಕ ಹೋಟೆಲ್ ಮಾಲಕರು ಕಟ್ಟಿಗೆಯ ಮೊರೆ ಹೋಗಿದ್ದರು. ಇದರಿಂದ ತಿಂಡಿ ತೀರ್ಥದ ಬೆಲೆ ಸಹಜವಾಗಿಯೇ ಹೆಚ್ಚಳವಾಗಿತ್ತು. ಇದೀಗ ಅನಿಲ ಹೊತ್ತ ನೌಕೆಯೊಂದು ಆಗಮಿಸಿರುವುದು ಜನತೆಯ ಸಮಾಧಾನಕ್ಕೆ ಕಾರಣವಾಗಿದೆ.

16,714 ಮೆಟ್ರಿಕ್ ಟನ್ ಅನಿಲ:

ಅಮೆರಿಕಾದ ಟೆಕ್ಸಾಸ್‌ನಿಂದ ನವಮಂಗಳೂರು ಬಂದರಿಗೆ ಆಗಮಿಸಿರುವ 'ಪಿಕ್ಸಿಸ್ ಪಯೋನೀರ್' ಹೆಸರಿನ ದ್ರವೀಕೃತ ಪೋಟ್ರೋಲಿಯಂ ಅನಿಲ (ಎಲ್‌ಪಿಜಿ) ಕಾರ್ಗೋ ಹಡಗು 16,714 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಬಂದಿದೆ. ವಿದೇಶದಿಂದ ಕರ್ನಾಟಕಕ್ಕೆ ಆಗಮಿಸಿದ ಮೊದಲ ಎಲ್‌ಪಿ ಜಿ ಹಡಗು ಇದಾಗಿದೆ. ಈ ಹಡಗು ಮಾರ್ಚ್ 14 ರಂದು ಅಮೆರಿಕಾದಿಂದ ಹೊರಟಿತ್ತು.

ಯುದ್ಧ ಪರಿಸ್ಥಿತಿಯ ನಡುವೆ ಎಲ್‌ಪಿಜಿ, ಎಲ್‌ಎನ್‌ಜಿ ಹಾಗೂ ಕಚ್ಚಾ ತೈಲ ಪೂರೈಕೆಯ ಸ್ಥಿತಿ ಗಂಭೀರವಾಗಿದೆ. ಈ ನಡುವೆಯೇ ಪಿಕ್ಸಿಸ್ ಪಯನೀರ್ ಹಡಗು ಆಗಮಿಸಿರುವುದರಿಂದ ಅನಿಲ ಪೂರೈಕೆ ಚೇತರಿಸಿಕೊಳ್ಳುವ ಲಕ್ಷಣ ಗೋಚರಿಸಿದೆ.



ನೆದರ್‌ಲ್ಯಾಡ್ ಬಂದರಿನಿಂದ ಹೊರಟಿತ್ತು

'ಪಿಕ್ಸಿಸ್ ಪಯೋನಿಯರ್' ಹಡಗು ಟೆಕ್ಸಾಸ್‌ನ ನೆದರ್‌ಲ್ಯಾಂಡ್ ಬಂದರಿನಿಂದ ಹೊರಟಿದ್ದು, ಒಟ್ಟು 16,714 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ ಹೊಂದಿದೆ. ಈ ಅನಿಲವನ್ನು ಏಜಿಸ್ ಲಾಜಿಸ್ಟಿಕ್ಸ್ ಸಂಸ್ಥೆಗೆ ಪೂರೈಸಲಾಗುತ್ತಿದೆ. ಒಂದು ದಿನದ ಅಂತರದಲ್ಲಿ ಮಂಗಳೂರಿಗೆ ಆಗಮಿಸಿದ ಎರಡನೇ ಪ್ರಮುಖ ಇಂಧನ ಸಾಗಣೆ ಹಡಗು ಇದಾಗಿದೆ.

ಅಕ್ವಾ ಟೈಟಾನ್ ಹಡಗಿನಿಂದ 96 ಸಾವಿರ ಮೆಟ್ರಿಕ್ ಟನ್ ನಷ್ಟು ಕಚ್ಚಾ ತೈಲವನ್ನು ಎಂಆರ್‌ಪಿಎಲ್ ತೈಲ ಸಂಸ್ಕರಣಾ ಘಟಕಕ್ಕೆ ಪೂರೈಕೆ ಮಾಡಲಾಗುತ್ತಿದೆ. ನವ ಮಂಗಳೂರು ಬಂದರಿನಿಂದ 12 ನಾಟಿಕಲ್ ಮೈಲ್ ದೂರದಿಂದ ಪೈಪ್‌ಲೈನ್ ಮೂಲಕ ಎಂಆರ್‌ಪಿಎಲ್ ತೈಲ ಶುದ್ಧೀಕರಣ ಘಟಕಕ್ಕೆ ಈ ತೈಲವನ್ನು ಮರುಪೂರಣಗೊಳಿಸಲಾಗುತ್ತಿದೆ.

ಬರಲಿವೆ ಮತ್ತಷ್ಟು ಅನಿಲ ಟ್ಯಾಂಕರ್‌ಗಳು

ಮಾರ್ಚ್ ಅಂತ್ಯದ ವೇಳೆಗೆ ಇನ್ನೂ ಕೆಲವು ತೈಲ ಟ್ಯಾಂಕರ್‌ಗಳು ನವಮಂಗಳೂರು ಬಂದರಿಗೆ ಆಗಮಿಸುವ ನಿರೀಕ್ಷೆ ಇದೆ. ಕೆಂಪು ಸಮುದ್ರದ ಯಾಂಬು ಬಂದರಿನಿಂದ 1.36 ಲಕ್ಷ ಟನ್ ಮತ್ತು 2.6 ಲಕ್ಷ ಟನ್ ಕಚ್ಚಾತೈಲ ಹೇರಿಕೊಂಡ ಎರಡು ಹಡಗುಗಳು ಮಂಗಳೂರಿನತ್ತ ಹೊರಟಿವೆ ಎನ್ನಲಾಗಿದೆ. ಎಂಆರ್‌ಪಿಎಲ್ ವರ್ಷಕ್ಕೆ 18.2 ದಶಲಕ್ಷ ಟನ್ ಕಚ್ಚಾ ತೈಲವನ್ನು ಸಂಸ್ಕರಿಸುವ ಸಾಮರ್ಥ್ಯ ಹೊಂದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 25° | ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 23, ಮಾರ್ಚ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ಪತ್ರಕರ್ತ, ಸಾಹಿತಿ ರೇಮಂಡ್ ಡಿ'ಕುನ್ಹಾ ಅವರಿಗೆ ಹುಟ್ಟೂರ ಸನ್ಮಾನ



ಪುಟ 6

'ವಿದ್ಯಾಪೋಷಕ್' ಯೋಜನೆಯಡಿ ಐವರು ಸಹೋದರಿಯರ ನೆರವು

ಕುಕ್ಕೆ ಶ್ರೀ ಸುಬ್ರಹ್ಮಣ್ಯನ ಸನ್ನಿಧಿಗೆ ಊರು ಪರವೂರುಗಳಿಂದ ಹರಿದುಬಂತು ಭಾರೀ ಭಕ್ತಪ್ರವಾಹ



ಯುಗಾದಿ, ರಂಜಾನ್, ರಜಾ ದಿನಗಳು ಜೊತೆಯಾಗಿ ಬಂದ ಹಿನ್ನೆಲೆಯಲ್ಲಿ ನಾಗಾರಾಧನೆಯ ಪುಣ್ಯ ಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ ಅಧಿಕ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ದೇವರ ದರುಶನ ಪಡೆದರು. ಕುಮಾರಧಾರಾ ಸ್ನಾನಘಟ್ಟದಲ್ಲಿ ಅಧಿಕ ಸಂಖ್ಯೆಯ ಭಕ್ತರು ತೀರ್ಥ ಸ್ನಾನ ಪೂರೈಸಿದರು. ಭಕ್ತಾದಿಗಳ ಅನುಕೂಲಕ್ಕಾಗಿ ದೇವಳದಿಂದ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು.

ಸುತ್ತಮುತ್ತ

ಕರಾವಳಿಯಲ್ಲಿ ತಾಪ ಕೋಪ: ಸುಡು ಬಿಸಿಲಿಗೆ ನಾಗರಿಕರು ಹೈರಾಣ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಭಾನುವಾರವೂ ಸುಡು ಬಿಸಿಲಿನ ವಾತಾವರಣ ಮುಂದುವರಿದಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಗರಿಷ್ಠ 36 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಉಡುಪಿಯಲ್ಲಿ 33, ಕಾಸರಗೋಡಿನಲ್ಲಿ 32 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಗ್ರಾಮೀಣ ಭಾಗಗಳಲ್ಲಿ ಸಂಜೆ ಬಳಿಕ ವಿವಿಧೆಡೆ ತಾಪಮಾನ ಹಠಾತ್ ಇಳಿಕೆಯಾಗುತ್ತಿದ್ದು, ಚಳಿಯ ವಾತಾವರಣ ಕಾಣಿಸಿಕೊಳ್ಳುತ್ತಿದೆ.

ಹೊಟೇಲ್‌ಗಳಲ್ಲಿ 'ಗ್ಯಾಸ್ ಟ್ರಬಲ್: ಇಂದು ಸುಧಾರಿಸೀತೇ ಪರಿಸ್ಥಿತಿ?

ಮಂಗಳೂರು: ನಗರದಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆ ಸಮಸ್ಯೆ ಯಥಾಸ್ಥಿತಿ ಮುಂದುವರಿದಿದೆ. ನಗರದ ಕೆಲವೆಡೆಯ ಹೊಟೇಲ್‌ಗಳಿಗೆ ಗ್ಯಾಸ್ ಏಜೆನ್ಸಿ ಮೂಲಕ ಗ್ಯಾಸ್ ಸರಬರಾಜು ಆಗುತ್ತಿದ್ದು, ಇನ್ನು ಕೆಲವೆಡೆ ಮಾತ್ರ ಸಂಕಷ್ಟ ಹಾಗೆಯೇ ಮುಂದುವರಿದಿದೆ. ಭಾನುವಾರ ವಾರದ ರಜಾ ದಿನ ಹಿನ್ನೆಲೆಯಲ್ಲಿ ಬಹುತೇಕ ಹೊಟೇಲ್‌ಗಳು ಮುಚ್ಚಿದ್ದವು. ಸೋಮವಾರ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಲ್ಲಿ ಹೊಟೇಲ್‌ಗಳ ಮಾಲಕರಿದ್ದಾರೆ.

ಟೆಕ್ಸಾಸ್‌ನಿಂದ ಕುಡ್ಲಕ್ಕೆ 'ಎಲ್‌ಪಿಜಿ' ಹಡಗು: ಅಭಾವ ಸ್ಥಿತಿಗೆ ಮುಕ್ತಿ?

ಮಂಗಳೂರು: ಅಮೆರಿಕಾದ ಟೆಕ್ಸಾಸ್‌ನಿಂದ ಎಲ್‌ಪಿಜಿ ಹೇರಿಕೊಂಡ ಕಾರ್ಗೋ ಹಡಗು 'ಫಿಕ್ಸಿಸ್ ಪಯನೀರ್' ನೇರ ಮಂಗಳೂರು ಬಂದರಿಗೆ ಆಗಮಿಸಿದ್ದು, ಕರಾವಳಿ ಭಾಗದ ಜನತೆ ಸಂತಸಗೊಂಡಿದ್ದಾರೆ. ಎಂಆರ್‌ಪಿಎಲ್‌ನಲ್ಲಿ ಇಂಧನ ಇಳಿಸಲಾಗುತ್ತಿದ್ದು, ಈ ಮೂಲಕ ಕಳೆದ ಹಲವು ದಿನಗಳಿಂದ ಕರಾವಳಿ ಭಾಗದಲ್ಲಿಯೂ ಕಾಡುತ್ತಿರುವ ಎಲ್‌ಪಿಜಿ ಅಭಾವ ಸಮಸ್ಯೆಗೆ ಇದರಿಂದ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆಯಲ್ಲಿ ಜನರಿದ್ದಾರೆ.

ಹೊಟೇಲ್‌ಗಳಲ್ಲಿ 'ಗ್ಯಾಸ್ ಟ್ರಬಲ್: ಇಂದು ಸುಧಾರಿಸೀತೇ ಪರಿಸ್ಥಿತಿ?

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಭಾಗದ ಹಲವು ಭಾಗಗಳಲ್ಲಿ ಮುಂದಿನ ಎರಡು ದಿನಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ, ಜೊತೆಗೆ ಒಣಹವೆ ಮುಂದುವರಿಯಲಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು ಜಿಲ್ಲೆಗೂ ತಟ್ಟುತ್ತಿದೆ ಕೊಲ್ಲಿ ಯುದ್ಧದ ಬಿಸಿ

30% ಹೊಟೇಲ್ ಬಂದ್!

ನಿತ್ಯದ ಮೆನುನಲ್ಲಿ 50% ಖಾದ್ಯಕ್ಕೆ ಗೇಟ್‌ಪಾಸ್

ಮಡಿಕೇರಿ: ಮಧ್ಯಪ್ರಾಚ್ಯದ ಯುದ್ಧದ ಪರಿಣಾಮ ಎಲ್‌ಪಿಜಿ ಬಿಕ್ಕಟ್ಟು ಸೃಷ್ಟಿಯಾಗಿ ವಾರ ಕಳೆದಿದೆ. ಕೊಡಗು ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಸಿಗುತ್ತಿದ್ದರೂ, ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಅಲಭ್ಯತೆ ಹೋಟೆಲ್ ಹಾಗೂ ಪ್ರವಾಸೋದ್ಯಮದ ಮೇಲೆ ಗಂಭೀರ ಪರಿಣಾಮ ಬೀರಿದೆ.

ಸಿಲಿಂಡರ್ ಸಿಕ್ಕದರೆ ಮಾತ್ರ ಓಪನ್

ಈಗಾಗಲೇ ಜಿಲ್ಲೆಯ ಶೇ.30ರಷ್ಟು ಹೊಟೇಲ್‌ಗಳು ಮುಚ್ಚಿದ್ದು, ಸಿಲಿಂಡರ್ ಸರಬರಾಜಾದರೆ ಮಾತ್ರ ತೆರೆಯುವ ಪರಿಸ್ಥಿತಿ. ಮತ್ತೆ ಕೆಲವು ಹೊಟೇಲ್, ಪರ್ಯಾಯ ವ್ಯವಸ್ಥೆ ಮೊರೆ ಹೋಗಿದ್ದು, ತಮ್ಮ ನಿತ್ಯದ ಮೆನು ಪೈಕಿ ಶೇ.50ರಷ್ಟನ್ನು ಕೈ ಬಿಟ್ಟಿವೆ. ಸೌದೆ ಒಲೆಯಲ್ಲಿ ಅಡುಗೆ ಮಾಡಲು ಅಡುಗೆಯವರು ಹಿಂದೇಟು ಹಾಕುತ್ತಿದ್ದಾರೆ. ಪರಿಸ್ಥಿತಿ ಇದೇ ರೀತಿ ಇದ್ದರೆ ಜಿಲ್ಲೆಯ ಶೇ.50ಕ್ಕೂ ಅಧಿಕ ಹೋಟೆಲ್, ರೆಸ್ಟೋರೆಂಟ್ ಬಂದ್ ಆಗುವ ಲಕ್ಷಣಗಳಿವೆ.

ಜಿಲ್ಲೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಹೋಟೆಲ್, ರೆಸ್ಟೋ ರಂಟ್‌ಗಳಿದ್ದು, ಇದರೊಂದಿಗೆ ರೆಸಾರ್ಟ್‌ಗಳಲ್ಲಿ ಕೂಡಾ ವಾಣಿಜ್ಯ ಬಳಕೆಯ ಸಿಲಿಂಡರ್ ಬಳಕೆಯಾಗುತ್ತದೆ. ಸಿಲಿಂಡರ್ ಬಿಕ್ಕಟ್ಟು ಕೊಡಗಿನ ಪ್ರವಾಸೋದ್ಯಮ ಮತ್ತು ಹೋಟೆಲ್ ಉದ್ಯಮದ ಮೇಲೂ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ.



ಕೊಡಗು ಜಿಲ್ಲೆಗೆ 9603 ಗ್ಯಾಸ್ ಸಿಲಿಂಡರ್ ಬೇಕು

ಕೊಡಗು ಜಿಲ್ಲೆಗೆ ಅಂದಾಜು 9603 ವಾಣಿಜ್ಯ ಬಳಕೆ ಸಿಲಿಂಡರ್ ಅಗತ್ಯವಿದ್ದು, ಪ್ರತಿ ನಿತ್ಯ 1500 ರಿಂದ 1800 ಸಿಲಿಂಡರ್ ಬೇಡಿಕೆ ಇರುತ್ತದೆ ಆದರೆ ಕಳೆದ ಒಂದು ವಾರದಿಂದ ವಾಣಿಜ್ಯ ಬಳಕೆ ಅನಿಲ ಸಿಲಿಂಡರ್ ಹಾಸ್ಟೆಲ್, ಆಸ್ಪತ್ರೆ ಮುಂತಾದ ಕಡೆಗೆ ಮಾತ್ರ ಪೂರೈಕೆ ಮಾಡಲಾಗುತ್ತಿದೆ.

ಸೀಸನ್‌ನಲ್ಲೇ ಪ್ರವಾಸಿಗರ ಕೊರತೆ...

ಕೊಡಗಿನಲ್ಲಿ ಇನ್ನೇನು ಪ್ರವಾಸೋದ್ಯಮದ ಸೀಸನ್ ಆರಂಭವಾಗಬೇಕಿತ್ತು. ಆದರೆ ಕೊಡಗಿಗೆ ಬಂದರೆ ಊಟ, ತಿಂಡಿಗೆ ಕಷ್ಟವಾಗುವುದೆಂಬ ಕಾರಣಕ್ಕೆ ಮೊದಲೇ ಬುಕ್ಕಿಂಗ್ ಮಾಡಿದ್ದ ಪ್ರವಾಸಿಗರು ತಮ್ಮ ಪ್ರವಾಸವನ್ನು ರದ್ದುಪಡಿಸಿಕೊಂಡಿದ್ದಾರೆ.

ಪುಟಾಣಿಗಳ ಸಾರಥ್ಯದಲ್ಲಿ ಗಣತಿ ಕಾರ್ಯ

ಕುಂಬಳೆ ಪರಿಸರದಲ್ಲಿ ಕಂಡಿತು 33 ಗುಬ್ಬಚ್ಚಿ!

ಎಲ್ಲೆಡೆ ಜಾಗೃತಿ ಮೂಡಿಸುವ ಕಾರ್ಯ

ಕುಂಬಳೆ: ವಿಶ್ವ ಗುಬ್ಬಚ್ಚಿ ದಿನದ ಅಂಗವಾಗಿ ಕುಂಬಳೆ ಹೋಲಿ ಫ್ಯಾಮಿಲಿ ಅನುದಾನಿತ ಹಿರಿಯ ಬುನಾದಿ ಶಾಲೆಯ ಇಕೋ ಕ್ಲಬ್‌ನ ವಿದ್ಯಾರ್ಥಿಗಳು ಗುಬ್ಬಚ್ಚಿಗಳ ಗಣತಿ ಕಾರ್ಯ ಯಶಸ್ವಿಯಾಗಿ ನಡೆಸಿದರು.

ಇಲ್ಲಿನ ಕುಂಬಳೆ ನಗರ, ಸುತ್ತಮುತ್ತ ಗುಬ್ಬಚ್ಚಿಗಳ ಗಣತಿ, ಅವುಗಳ ಸಂರಕ್ಷಣೆ ಕುರಿತು ಜನರಿಗೆ ಜಾಗೃತಿ ಮೂಡಿಸಲಾಯಿತು. »ಪುಟ 6



ರಾಜ್ಯ ಹೆದ್ದಾರಿಯ ಬದಿ ಮರದಲ್ಲಿ ಭಯ ಹುಟ್ಟಿಸಿತು 'ಧಗಧಗ' ಬೆಂಕಿ!

ಮುಲ್ಕಿ: ಇಲ್ಲಿನ ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿ ಕೆಂಚನಕೆರೆ ಬಳಿಯಕಲ್ಲಿ ಮರಕ್ಕೆ ಆಕಸ್ಮಿಕವಾಗಿ ಬೆಂಕಿ ತಗಲಿದ್ದು, ಸ್ಥಳೀಯರು ಭಯಭೀತರಾದ ಘಟನೆ ಭಾನುವಾರ ಮಧ್ಯಾಹ್ನ ನಡೆದಿದೆ.

ಧೂಪದ ಮರ ಕಣ್ಣೆದುರಲ್ಲಿಯೇ ಧಗಧಗ

ಕೆಂಚನಕೆರೆ ಶಾಲೆ ಪರಿಸರದ ಹೆದ್ದಾರಿಯ ಬದಿಯ ಧೂಪದ ಮರಕ್ಕೆ ಏಕಾಏಕಿಯಾಗಿ ಬೆಂಕಿ ತಗಲಿದ್ದು, ಕ್ಷಣದಲ್ಲಿ ಅದು ಧಗಧಗ ಉರಿಯಲಾರಂಭಿಸಿದೆ. ಮರದ ಬದಿಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಇದ್ದ ಕಾರಣ ಕೂಡಲೇ ಸ್ಥಳೀಯರಾದ ಶಮೀನ ಆಳ್ವ ಅವರು ಅಗ್ನಿಶಾಮಕ ದಳ, ಮುಲ್ಕಿ ಮೆಸ್ಕಾಂಗೆ ತಿಳಿಸಿದ್ದು, ಸ್ಥಳೀಯರ ನೆರವಿನಲ್ಲಿ ಮರಕ್ಕೆ ನೀರು ಹಾಯಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಮುಲ್ಕಿ ಮೆಸ್ಕಾಂ ಇಲಾಖೆಯ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ ಯಾರೋ ದುಷ್ಕರ್ಮಿಗಳು ಮರಕ್ಕೆ ಬೆಂಕಿ ಕೊಟ್ಟಿರಬಹುದು ಎಂದು ಶಂಕಿಸಲಾಗಿದೆ.



ಬ್ರಹ್ಮರಕೂಟ್ಲು ಟೋಲ್ ಗೇಟ್‌ನಲ್ಲಿ ಚಾಲಕರಿಗೆ ಮತ್ತೊಂದು ಸವಾಲು

ದುಡ್ಡು ತಗೊಳ್ಳುವಲ್ಲಿ ಕಾಡಿದೆ ದಿಡ್ಡು ಸಮಸ್ಯೆ

ಸಂಗಮ ವಿಶೇಷ

ಬಂಟ್ವಾಳ: ಮಂಗಳೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿನ ಬ್ರಹ್ಮರಕೂಟ್ಲು ಅವೈಜ್ಞಾನಿಕ ಟೋಲ್ ಗೇಟ್ ಅವಾಂತರ ಮುಂದುವರಿದಿದೆ!

ಟೋಲ್ ಗೇಟ್ ರಸ್ತೆ ಮಧ್ಯದಲ್ಲೇ ನಿರ್ಮಿಸಲಾದ ಕಾಂಕ್ರಿಟ್ ಪಿಲ್ಲರ್ ಬೆಡ್ ವಾಹನ ಸವಾರರ ಪಾಲಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ.

ಮಹಿಳೆ ಕಾಲಿಗೆ ತೀವ್ರ ಗಾಯ

ಟೋಲ್ ಗೇಟ್ ರಸ್ತೆಯ ವಾಹನ ಸಂಚಾರ ಸ್ಥಳಲ್ಲೇ ಈ ಕಾಂಕ್ರಿಟ್ ದಿಡ್ಡು ಇದ್ದು, ಇಲ್ಲಿ ಯಾವುದೇ ಸುರಕ್ಷತಾ ಕ್ರಮ ಅಳವಡಿಸದೇ ಇರುವ ಕಾರಣ ಶನಿವಾರ ರಾತ್ರಿ ವೇಳೆ ಸ್ಕೂಟರ್ ಹಿಂದೆ ಕುಳಿತು ಸಂಚರಿಸುತ್ತಿದ್ದ ಮಹಿಳೆಯ ಕಾಲಿಗೆ ದಿಡ್ಡು ತಾಗಿ ತೀವ್ರತರ ಗಾಯವಾಗಿದೆ. ಈ ಘಟನೆ ನಡೆದ ಕೆಲವೇ ಹೊತ್ತಿನಲ್ಲಿ ಚಾಲಕನ ಗಮನಕ್ಕೆ ಬಾರದೆ ಲಾರಿಯೊಂದು ಇಲ್ಲಿನ ಈ ಕಾಂಕ್ರಿಟ್ ದಿಡ್ಡಿಗೆ ಡಿಕ್ಕಿ ಹೊಡೆದುಕೊಂಡಿದೆ.



ಸ್ಥಳದಲ್ಲಿ ಕೆಲಕಾಲ ಮಾತಿನ ಚಕಮಕಿ

ಈ ವೇಳೆ ವಾಹನ ಸವಾರರು, ಟೋಲ್ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದಿದೆ. »ಪುಟ 6

ಇಲ್ಲಿರುವುದು ಉತ್ತರ ಭಾರತ ಮೂಲದ ಯುವಕರು!

ಬ್ರಹ್ಮರ ಕೂಟ್ಲು ಟೋಲ್ ಕೇಂದ್ರದಲ್ಲಿ ಉತ್ತರ ಭಾರತ ಮೂಲದ ಯುವಕರು ಸಿಬ್ಬಂದಿಗಳಾಗಿದ್ದಾರೆ. ಇವರಿಗೆ ಸ್ಥಳೀಯರ ಸಮಸ್ಯೆ ಅರ್ಥವಾಗುತ್ತಿಲ್ಲ, ಹೀಗಾಗಿ ಇವರಿಂದ ಸಮಸ್ಯೆಗೆ ಪರಿಹಾರದ ನಿರೀಕ್ಷೆಗಳಿಲ್ಲ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಅವ್ಯವಸ್ಥೆಯ ಆಗರವಾಗಿರುವ ಈ ಟೋಲ್ ಗೇಟ್, ಸುಲಿಗೆ ಮಾಡುವ ಕೇಂದ್ರವಾಗಿದೆ ಎಂಬ ಗಂಭೀರ ಆರೋಪ ಚಾಲಕ ಸಮುದಾಯ ಮತ್ತು ಸಾರ್ವಜನಿಕರಿಂದ ಕೇಳಿಬರುತ್ತಿದೆ.



ದೇಂದಡ್ಕ ದೇವಳದ ಬ್ರಹ್ಮಕಲಶ: ಭಕ್ತರಿಂದ ಹೊರೆಕಾಣಿಕೆ ಸಮರ್ಪಣೆ 2

ಚುನಾವಣೆ: 1606 ಪ್ರಿಸೈಡಿಂಗ್, ಪ್ರಥಮ ಮತಗಟ್ಟೆ ಅಧಿಕಾರಿ ನೇಮಕ 5

ಸುತ್ತ ಮುತ್ತ

ಕಾರ್ನಾಡ್ ಪಡುಬೈಲು ದೈವಸ್ಥಾನದಲ್ಲಿ ನೇಮ



ಮುಲ್ಕಿ: ಕಾರ್ನಾಡ್ ಪಡುಬೈಲು ಶ್ರೀ ಕೋರ್ದಬ್ಬು ದೈವಸ್ಥಾನದಲ್ಲಿ ವರ್ಷಾವಧಿ ನೇಮದ ಅಂಗವಾಗಿ ಶ್ರೀ ಕೋರ್ದಬ್ಬು ಮತ್ತು ತನ್ನಿಮಾನಿಗ ದೈವಗಳ ನೇಮ ಶನಿವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮಾ.21 ಶನಿವಾರ ಬೆಳಿಗ್ಗೆ 7:20ಕ್ಕೆ ಗಜ ಕಂಬ ಮುಹೂರ್ತ, ಮಧ್ಯಾಹ್ನ 12ಕ್ಕೆ ಚಪ್ಪರ ಆರೋಹಣ, 12:30 ರಿಂದ ಸಾರ್ವಜನಿಕ ಅನ್ನ ಸಂತರ್ಪಣೆ, ಸಂಜೆ 8ಕ್ಕೆ ಭಂಡಾರ ಇಳಿಯುವುದು, ರಾತ್ರಿ 9:30ರಿಂದ ಶ್ರೀ ಕೋರ್ದಬ್ಬು ಮತ್ತು ತನ್ನಿಮಾನಿಗ ದೈವಗಳ ನೇಮ ನಡೆಯಿತು . ಈ ಸಂದರ್ಭ ಜಗದೀಶ್ ಶೆಟ್ಟಿ ಕಾರ್ನಾಡ್ ಗುತ್ತು, ರಮಾನಂದ ಪಡುಬೈಲು, ಶೈಲೇಶ್ ಪೈಯ್ಯೋಟ್ಟು, ನಿತೇಶ್ ಪೂಜಾರಿ ಪಡುಬೈಲು, ಶೈಲೇಶ್ ಮಾದುಮನೆ ಹಾಗೂ ಗುರಿಕಾರರು ಹಾಗೂ ಪಡು ,ಮೂಡು ಕಾರ್ನಾಡು , ಕನ್ನಡಿಗರ ಬೆಟ್ಟು ಗ್ರಾಮಸ್ಥರು ಊರಿನ ಹತ್ತು ಸಮಸ್ತರು ಉಪಸ್ಥಿತರಿದ್ದರು. ಮಾ.22ರಂದು ಶ್ರೀ ಧೂಮಾವತಿ ಮತ್ತು ಬಂಟ ದೈವಗಳ ನೇಮೋತ್ಸವ ನಡೆಯಿತು.

ನಾಳೆಯಿಂದ ಉಳಾಯಿಬೆಟ್ಟು ಪಾಲಿಕಟ್ಟೆ ನೇಮ

ಕೈಕಂಬ: ಗುರುಪುರ ಸಮೀಪದ ಉಳಾಯಿಬೆಟ್ಟು ಪೆರ್ಮಂಕಿ ಪಾಲಿಕಟ್ಟೆ ಶ್ರೀ ವೈದ್ಯನಾಥ, ಮೈಸಂದಾಯ, ಧೂಮಾವತಿ ಬಂಟ ದೈವಸ್ಥಾನದ ಕಾಲಾವಧಿ 'ಪಾಲಿಕಟ್ಟೆ ನೇಮ'ವು ನಾಳೆಯಿಂದ ಮಾ.26ರವರೆಗೆ ನಡೆಯಲಿದೆ. ನಾಳೆ ಬೆಳಿಗ್ಗೆ 7:30ರಿಂದ ಪೆರ್ಮಂಕಿಗುತ್ತು ಮನೆಯಲ್ಲಿ ಗಣಪತಿ ಹೋಮ, ದೈವಗಳಿಗೆ ಹೋಮ ಕಜ್ಜಾಯ ಸೇವೆ, ದೈವದ ದರ್ಶನ, ದೈವಗಳ ಭಂಡಾರವು ಪೆರ್ಮಂಕಿಗುತ್ತು ಮನೆಯಿಂದ ಪಾಲಿಕಟ್ಟೆ ದೈವಸ್ಥಾನಕ್ಕೆ ಬಂದು ಭಂಡಾರ ಏರುವುದು. ಮಧ್ಯಾಹ್ನ 12:30ರಿಂದ ಸಾರ್ವಜನಿಕ ಅನ್ನಸಂತರ್ಪಣೆ, ಸಂಜೆ 7:30ಕ್ಕೆ ಪೆರ್ಮಂಕಿ ಶ್ರೀ ಸದಾಶಿವ ದೇವಸ್ಥಾನದಿಂದ ದೇವರ ಪ್ರಸಾದ ತರುವುದು. ರಾತ್ರಿ 9:30ಕ್ಕೆ ಮೂಲ ಮೈಸಂದಾಯ ದೈವದ ನೇಮ, ರಾತ್ರಿ 11:15ಕ್ಕೆ ಶ್ರೀ ವೈದ್ಯನಾಥ ದೈವದ ಗಗ್ಗರ ಸೇವೆ, ದರ್ಶನ ಬಲಿ, ಪಲ್ಲಕಿ ಬಲಿ, ವಲಸರಿ, ಅಭಯ ಪ್ರದಾನ ನಡೆಯಲಿದೆ. ಮಾ. 25ರ ರಾತ್ರಿ 9:30ರಿಂದ ಶ್ರೀ ಜುಮಾದಿ ಬಂಟ ದೈವಗಳ ನೇಮ, ನೇಮದ ಬಳಿಕ ದೈವದ ಭಂಡಾರವು ಪೆರ್ಮಂಕಿಗುತ್ತು ಮನೆಗೆ ನಿರ್ಗಮಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.30-ಏ.3: ಬಂಟ ದೈವಸ್ಥಾನದ ಪುನರ್ ಕಲಶಾಭಿಷೇಕ, ನೇಮ

ಬಂಟ್ವಾಳ: ಇಲ್ಲಿಯ ನಗರದ ನಂದನಹಿತ್ಲು ಶ್ರೀ ವೈದ್ಯನಾಥ ಅರಸು ಜುಮಾದಿ ಬಂಟ ದೈವಸ್ಥಾನದ ಪುನರ್ ಕಲಶಾಭಿಷೇಕ ಹಾಗೂ ಕಾಲಾವಧಿ ನೇಮವು ಮಾ.30ರಿಂದ ಏ.3ರವರೆಗೆ ನಡೆಯಲಿದ್ದು, ಈ ಪ್ರಯುಕ್ತ ಮಾ.24ರಂದು ಕ್ಷೇತ್ರದಲ್ಲಿ ಕೋಳಿಗುಂಟ ನಡೆಯಲಿದೆ ಎಂದು ದೈವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾ.30ರಂದು ಸಂಜೆ ಸಾಮೂಹಿಕ ಪ್ರಾರ್ಥನೆ ಸ್ವಸ್ತಿ ಪುಣ್ಯಾಹವಾಚನ, ಸಪ್ತಶುದ್ಧಿ, ವಾಸ್ತು ಪೂಜೆ, ವಾಸ್ತು ಹೋಮ, ರಾಕ್ಷೋಘ್ನ ಹೋಮ, ದಿಕ್ಪಾಲಕ ಬಲಿ ಮಾ.31 ಬೆಳಿಗ್ಗೆ 6ಕ್ಕೆ ಗಣಹೋಮ, ಶ್ರೀ ನಾಗದೇವರಿಗೆ ಪಂಚವಿಂಶತಿ ಕಲಶಾಭಿಷೇಕ, ನಾಗತಂಬಿಲ (ಸರ್ಪತ್ರಯ ಹೋಮ)ಸಂಜೆ 6ಕ್ಕೆ ಶ್ರೀ ಕ್ಷೇತ್ರದ ಧರ್ಮ ದೈವಗಳಿಗೆ ಕಲಶಾಧಿವಾಸ, ಅಧಿವಾಸ ಹೋಮಗಳು ನಡೆಯಲಿದೆ. ಏ.1ರಂದು ಬೆಳಿಗ್ಗೆ 6ಕ್ಕೆ ಗಣಹೋಮ, ಕಲಶ ಪ್ರತಿಷ್ಠೆ, ಪ್ರಧಾನ ಹೋಮ, ಶ್ರೀ ದೈವಗಳಿಗೆ ಪುನರ್ ಕಲಶಾಭಿಷೇಕ, ನಾಗದೇವರಿಗೆ ತಂಬಿಲ ಸೇವೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, 12.30ಕ್ಕೆ ಅನ್ನಸಂತರ್ಪಣೆ, ಸಂಜೆ 7 ರಿಂದ 8.30ರವರೆಗೆ ಭಜನಾ ಸಂಕೀರ್ತನೆ, ರಾತ್ರಿ 10ಕ್ಕೆ ಶ್ರೀ ಅರಸು ದೈವದ ನೇಮ, ಏ.2ರಂದು ಸಂಜೆ 7ರಿಂದ ರಾತ್ರಿ 8.30ರವರೆಗೆ ಭಜನಾ ಸಂಕೀರ್ತನೆ 9ಕ್ಕೆ ಶ್ರೀ ಜುಮಾದಿ ಬಂಟ ದೈವಗಳ ನೇಮ ನಡೆಯಲಿದೆ. ಏ.3ರಂದು ಸಂಜೆ ಗಂಟೆ 6ರಿಂದ 7.30ರವರೆಗೆ ಭಜನಾ ಸಂಕೀರ್ತನೆ, ರಾತ್ರಿ 10ಕ್ಕೆ ಶ್ರೀ ವೈದ್ಯನಾಥ ದೈವದ ನೇಮ, ದೈವದ ಪೇಟೆ ಸವಾರಿ ಬಂಡಿ ಉತ್ಸವ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಯಶಸ್ವಿ ಹಿನ್ನಲೆಯಲ್ಲಿ 'ಧನ್ಯೋಸ್ಮಿ ಕಾರ್ಯಕ್ರಮ'

ಭಕ್ತಾದಿಗಳಲ್ಲಿ ಕೃತಾರ್ಥಭಾವ ಮೂಡಿದೆ: ಪ್ರತಾಪಸಿಂಹ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದಲ್ಲಿ ಊರಿಗೆ ಊರೇ ಸೇರಿ ಜನಾರ್ದನ ಸ್ವಾಮಿಯ ಸೇವೆಯೆಂದು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಪ್ರತಿಯೊಬ್ಬರೂ ಮಾಡಿದ ಸೇವೆಯನ್ನು ಸ್ವಾಮಿ ಗುರುತಿಸಿ ಅವರಿಗೆ ಉತ್ತರೋತ್ತರ ಶ್ರೇಯಸ್ಸು ಕರುಣಿಸುತ್ತಾನೆ. ಇದು ನಮಗೆ ದೊರೆತ ಅಪೂರ್ವ ಭಾಗ್ಯ. ಬ್ರಹ್ಮಕಲಶೋತ್ಸವದ ಯಶಸ್ಸಿನ ಸತ್ಫಲ ಊರಿನ ಭಕ್ತಾದಿಗಳಿಗೆ ಲಭಿಸುತ್ತದೆ. ಎಲ್ಲರ ಅಳಿಲ ಸೇವೆ, ಊರಿನ ಒಗ್ಗಟ್ಟಿನಿಂದ ಇಡೀ ಸಮಾಜ, ಹೃದಯಕ್ಕೆ ಬ್ರಹ್ಮಕಲಶವಾಗಿದೆ. ಅದರ ಆನಂದವನ್ನು ನಾವು ಅನುಭವಿಸಿ, ಕೃತಾರ್ಥಭಾವ ಮೂಡಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ, ಎಂಎಲ್ಸಿ ಶಾಸಕ ಪ್ರತಾಪಸಿಂಹ ನಾಯಕ್ ನುಡಿದರು.

ಅವರು ಮಾ.21ರಂದು ಉಜಿರೆ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವ ಯಶಸ್ವಿಯಾಗಿ ಸಂಪನ್ನಗೊಂಡ ಹಿನ್ನೆಲೆಯಲ್ಲಿ ಎಲ್ಲಾ ಕಾರ್ಯಕ್ರಮಗಳು ಅಭೂತ ಪೂರ್ವ ಯಶಸ್ಸಿಗೆ ಕಾರಣರಾದ ವಿಜಯಗೋಪುರ ನಿರ್ಮಾಣ ಸಮಿತಿ ಹಾಗೂ ಬ್ರಹ್ಮ ಕಲಶೋತ್ಸವ ಸಮಿತಿಯ ವಿವಿಧ ಸಂಚಾಲಕರು, ಸಹಸಂಚಾಲಕರು ಹಾಗೂ ಸರ್ವ ಸದಸ್ಯರು ಮತ್ತು ಶ್ರಮಸೇವೆಯಲ್ಲಿ ಭಾಗವಹಿಸಿದ ಸರ್ವ ಭಕ್ತಾದಿಗಳಿಗೆ ಕೃತಜ್ಞತೆ ಸಲ್ಲಿಸುವ 'ಧನ್ಯೋಸ್ಮಿ ಕಾರ್ಯಕ್ರಮ'ದಲ್ಲಿ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.



'ಧನ್ಯೋಸ್ಮಿ ಕಾರ್ಯಕ್ರಮ'ದಲ್ಲಿ ಸಭೆಯನ್ನು ಉದ್ದೇಶಿಸಿ, ಶಾಸಕ ಹರೀಶ್ ಪೂಂಜ ಮಾತನಾಡಿದರು.

ಬ್ರಹ್ಮಕಲಶೋತ್ಸವ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ನವಶಕ್ತಿ ಮಾತನಾಡಿ, ಎಲ್ಲವೂ ಅಚ್ಚುಕಟ್ಟಾಗಿ ನಡೆದಿದೆ. ಉಜಿರೆಯ ಬ್ರಹ್ಮಕಲಶೋತ್ಸವ ಇತಿಹಾಸ ನಿರ್ಮಿಸಿ ತಾಲೂಕು, ಜಿಲ್ಲೆಗೆ ಮಾದರಿಯಾಗಿದೆ. ಅನ್ನದಾನದಲ್ಲಿ ಹಿಡಿಯಕ್ಕಿ ಸೇವೆ ಅದ್ಭುತ ಯಶಸ್ಸು ಕಂಡಿದೆ. ಉಜಿರೆಯಲ್ಲಿ ಕಾರ್ಯಕರ್ತರ ದೊಡ್ಡ ತಂಡವೇ ನಿರ್ಮಾಣವಾಗಿರುವುದು ಅಭಿನಂದನೀಯ. ತನಗೆ ವಿಜಯಗೋಪುರ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿಕೊಟ್ಟವರು ಕೀರ್ತಿಶೇಷ ವಿಜಯರಾಘವ ಪಡುವೆಟ್ನಾಯರು. ಇಂಜಿನಿಯರ್ ಗಣೇಶ್ ಗೌಡ ಲಾಭವಿಲ್ಲದೆ ವಿಜಯಗೋಪುರವನ್ನು ಸುಂದರವಾಗಿ ನಿರ್ಮಿಸಿಕೊಟ್ಟಿದ್ದಾರೆ ಎಂದು ಅಭಿನಂದಿಸಿದರು.

ಶಾಸಕ ಹರೀಶ್ ಪೂಂಜ ಅಭಿನಂದಿಸಿ, ಶರತ್ ಕೃಷ್ಣ ಪಡುವೆಟ್ನಾಯರು ಗ್ರಾಮದ ಎಲ್ಲಾ 4500 ಮನೆಗಳಿಗೆ ತೆರಳಿ ಮಾಹಿತಿ ನೀಡಿ ಅವರ ಸಂಪರ್ಕ, ಸಂಬಂಧ, ಪ್ರಯತ್ನದಿಂದ ಬ್ರಹ್ಮಕಲಶೋತ್ಸವ ಯಶಸ್ವಿಯಾಗಿದೆ. ಉಜಿರೆ ಗ್ರಾಮದ ತಾಯಂದಿರು ಮೂಲಪ್ರೇರಣೆಯಾಗಿ ಮಾತೃಶಕ್ತಿಗೆ ಅಭಿನಂದನೆ. ಗಳು ಬ್ರಹ್ಮಕಲಶೋತ್ಸವ ಜೀವನ ಪರ್ಯಂತ ಅವಿಸ್ಮರಣೀಯವಾಗಿ 'ನಭೂತೋ ನ ಭವಿಷ್ಯತಿ' ಎಂಬಂತೆ ದಾಖಲಿಸಲ್ಪಟ್ಟಿದೆ. ಭಾಗವಹಿಸಿದವರೆಲ್ಲರೂ ಪುಣ್ಯಶಾಲಿಗಳು ಎಂದರು.

> ಬ್ರಹ್ಮಕಲಶೋತ್ಸವದ ಯಶಸ್ಸಿನ ನಂತರ ತಿರುಗಿ ನೋಡಿದರೆ ಊರಿನ ಭಕ್ತ ಜನರ ಭಕ್ತಿ,ಶ್ರಮ,ಭಾವನೆ ವ್ಯಕ್ತವಾಗಿ ಇಡೀ ರಾಜ್ಯ ತಿರುಗಿ ನೋಡುವಂತೆ ಮಾಡಿದೆ. ಊರಿನ ಭಕ್ತಾದಿಗಳು ತಮ್ಮ ಎಲ್ಲ ಶ್ರಮದಿಂದ ತನು ಮನ ಧನ ಗಳಿಂದ ಸರ್ವಸ್ವವನ್ನೂ ಧಾರೆಯೆರೆದು ಯಶಸ್ವಿಗೊಳಿಸಿದ್ದಾರೆ. ತೆರೆಯ ಮರೆಯಲ್ಲಿ ಸಹಸ್ರಾರು ಕೈಗಳು ದುಡಿದು ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ.
> ● ಶರತ್ ಕೃಷ್ಣ ಪಡುವೆಟ್ನಾಯ, ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರ

ಪ್ರಧಾನ ಸಂಚಾಲಕ ಕೆ. ಮೋಹನ್ ಕುಮಾರ್ ಮಾತನಾಡಿ, ತೆರೆಯ ಹಿಂದಿನ ಶಕ್ತಿಯಾಗಿ ಧರ್ಮಸ್ಥಳದ ಡಾ.ಡಿ. ವೀರೇಂದ್ರ ಹೆಗ್ಗಡೆ, ಹರ್ಷೇಂದ್ರ ಕುಮಾರ್ ಆಶೀರ್ವಾದದಿಂದ ಧರ್ಮಯಾನ ಐತಿಹಾಸಿಕ ದಾಖಲೆಯಾಗಲು ಸಾಧ್ಯವಾಯಿತು. ಸುಪ್ರಸಾದ ಅನ್ನಛತ್ರ ದೇವರ ಇಚ್ಛೆಯಂತೆ ಅದ್ಭುತವಾಗಿ ಮೂಡಿಬಂದಿದೆ. ಎಲ್ಲಾ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆದಿದ್ದು ನಿರ್ವಹಿಸಲು ದೇವರು ಶಕ್ತಿ,ಆರೋಗ್ಯ ಕೊಟ್ಟಿದ್ದಾರೆ. ಮುಂದೆಯೂ ಸಮಾಜಸೇವೆ ಮಾಡುವ ಶಕ್ತಿಯನ್ನು ದೇವರು ಅನುಗ್ರಹಿಸಲಿ ಎಂದು ನುಡಿದರು.

ಸುಪ್ರಸಾದ ಅನ್ನಛತ್ರದ ಸಂಚಾಲಕ ಅರುಣಕುಮಾರ್ ಅನುಭವ ಹಂಚಿಕೊಂಡರು. ಇದೇ ಸಂದರ್ಭ ಅಡುಗೆ ಸಿದ್ಧಪಡಿಸಿದ ಪಾಕತಜ್ಞ ರವಿ ಭಟ್ ಕುಂಟಿನಿ ದಂಪತಿಯನ್ನು ಸಮಿತಿ ವತಿಯಿಂದ ಗೌರವಿಸಲಾಯಿತು. ಶ್ರೀ ಜನಾರ್ದನ ಸ್ವಾಮಿಯ ಭಾವಚಿತ್ರವನ್ನು ಸಮರ್ಪಿಸಿದ ಕಲಾವಿದ ಯಾದವ ಅವರನ್ನು ಗೌರವಿಸಲಾಯಿತು. ಸಮಿತಿ ಕೋಶಾಧಿಕಾರಿ ಲಕ್ಷ್ಮಣ ಸಫಲ್ಯ ಮತ್ತು ರಾಜೇಶ್ ಪೈ, ಕಾರ್ಯದರ್ಶಿ ಭರತ್ ಕುಮಾರ್, ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್., ಮಾತೃಶಕ್ತಿ ಶಿಲಾ ಸಂಚಯನ ಸಮಿತಿ ಅಧ್ಯಕ್ಷೆ ವನಿತಾ ವಿ.ಶೆಟ್ಟಿ ಇದ್ದರು. ಎಸ್‌ಡಿಎಂ ಕಾಲೇಜಿನ ಉಪನ್ಯಾಸಕ ಡಾ. ಶ್ರೀಧರ ಭಟ್ ನಿರೂಪಿಸಿದರು. ಸಮಿತಿ ಕಾರ್ಯದರ್ಶಿ ರವೀಂದ್ರ ಶೆಟ್ಟಿ ಸ್ವಾಗತಿಸಿ, ಸಹ ಕೋಶಾಧಿಕಾರಿ ಸಂಜೀವ ಶೆಟ್ಟಿ ಕುಂಟಿನಿ ವಂದಿಸಿದರು.

ದೇಂದಡ್ಕ ದೇವಳದ ಬ್ರಹ್ಮಕಲಶ: ಭಕ್ತರಿಂದ ಹೊರೆಕಾಣಿಕೆ ಸಮರ್ಪಣೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಮಾ.20ರಿಂದ 25ರ ವರೆಗೆ ಅಷ್ಟಬಂಧ ಪ್ರತಿಷ್ಠಾ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕದ ಅಂಗವಾಗಿ ಭಾನುವಾರ ಸಂಜೆ ಗ್ರಾಮಸ್ಥರಿಂದ ಬೃಹತ್ ಹಸಿರು ಹೊರ ಕಾಣಿಕೆ ಸಮರ್ಪಣಾ ಕಾರ್ಯಕ್ರಮ ನಡೆಯಿತು.

ಕವತ್ತಾರು ಪುತ್ತೂರು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನೆ ನಡೆದು ವಿವಿಧ ಬಿರುದಾವಳಿಗಳೊಂದಿಗೆ ಬೃಹತ್ ಹಸಿರುವಾಣಿ ಹೊರೆ ಕಾಣಿಕೆ ಬೃಹತ್ ಮೆರವಣಿಗೆ ಮೂಲಕ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನಕ್ಕೆ ತಲುಪಿ ಕ್ಷೇತ್ರದ ತಂತ್ರಿಗಳಾದ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಅರ್ಚಕರಾದ ಸುಬ್ರಮಣ್ಯ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು.

ಈ ಸಂದರ್ಭ ದೇವಸ್ಥಾನದ ಆಡಳಿತ ಮಂಡಳಿ ಪ್ರಮುಖರು, ಸದಸ್ಯರು ಭಕ್ತಾದಿಗಳು ಉಪಸ್ಥಿತರಿದ್ದರು.

> **ಮಾ.23ರಂದು ಪ್ರತಿಷ್ಠೆ**
> ಶ್ರೀ ಕ್ಷೇತ್ರದಲ್ಲಿ ಮಾ.23ರಂದು ಬೆಳಿಗ್ಗೆ 8ಗಂಟೆಯಿಂದ ಬಿಂಬಶುದ್ಧಿ, ನವಗ್ರಹ ಯಾಗ, ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ಸಂಜೆ 5ರಿಂದ ದಿಶಾ ಹೋಮ, ಧ್ವಜ ಕಲಶ, ಸಿರಿಗಳಿಗೆ ಕಲಶಾಭಿಷೇಕ, ಅಷ್ಟಬಂಧ ಪ್ರತಿಷ್ಠೆ ನಡೆಯಲಿದೆ.

ಭಗವದ್ಗೀತೆ ಅಭ್ಯಾಸದಿಂದ ಮನಸ್ಸಿನ ನಿಯಂತ್ರಣ: ಸುಬ್ರಾಯ ನಂದೋಡಿ

ಸುರತ್ಕಲ್: ಗೋವಿಂದ ದಾಸ ಕಾಲೇಜಿನ ಎ.ವಿ. ಹಾಲ್‌ನಲ್ಲಿ 28ನೇ ತಿಂಗಳಿನ ಮಂಥನ ಕಾರ್ಯಕ್ರಮ ಶನಿವಾರ ನಡೆಯಿತು.

ಕರ್ನಾಟಕ ಪ್ರಾಂತ ದಕ್ಷಿಣದ ಕುಟುಂಬ ಪ್ರಬೋಧನ ಪ್ರಾಂತ ಸಂಯೋಜಕರಾದ ಸುಬ್ರಾಯ ನಂದೋಡಿಯವರು ಮುಖ್ಯ ವಕ್ತಾರರಾಗಿ ಭಾಗವಹಿಸಿ 'ಗೀತೆ -ಬದುಕಿನ ದಾರಿ' ಎಂಬ ವಿಚಾರದ ಬಗ್ಗೆ ಮಾತನಾಡಿದರು.

ಜೀವನವೆಂಬ ಯುದ್ಧಭೂಮಿಯಲ್ಲಿ ಬುದ್ಧಿ ಮತ್ತು ಮನಸ್ಸುಗಳೇ ಕೃಷ್ಣಾರ್ಜುನರು. ಮನಸ್ಸಿನ ಏರಿಳಿತಗಳಿಗೆ ಬುದ್ಧಿಯ ಮೂಲಕ ನಿಯಂತ್ರಣದ ಲಗಾಮನ್ನು ಪ್ರಯೋಗಿಸಿದಾಗ ಜೀವನ ಉದ್ದೇಶಿತ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯ. ಸಾಧನೆಯ ರೂಪದಲ್ಲಿ ಭಗವದ್ಗೀತೆಯ ಅಭ್ಯಾಸದಿಂದ ಅದು ಸಾಧ್ಯ. ಆಧುನಿಕತೆಯ ಹುಚ್ಚು ಆಸೆಯಿಂದ ದಾರಿ ತಪ್ಪಿದ ಯುವ ಜನತೆ ಈ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಕರ್ತವ್ಯ ಭಾವದಿಂದ ಭಗವಂತನಿಗೋಸ್ಕರ ಕೆಲಸ ಮಾಡಿದಾಗ ಮಾತ್ರ ಮನೆಯಿಂದ ದೇಶ ಸುಭಿಕ್ಷವಾಗಲು ಸಾಧ್ಯ ಎಂದು ವಿವರಿಸಿದರು.



> ಮನಸ್ಸಿನ ನಿಯಂತ್ರಣ ಅತೀ ಅಗತ್ಯ. ಮನಸ್ಸು ಶುದ್ಧವಾಗಿದ್ದರೆ ಎಲ್ಲವೂ ಸಾಧ್ಯ. ಯುವ ಸಮುದಾಯ ಈ ನಿಟ್ಟಿನಲ್ಲಿ ಎಚ್ಚರ ವಹಿಸಬೇಕಿದೆ.
> ● ಸುಬ್ರಾಯ ನಂದೋಡಿ

ಶ್ರೀ ಕೃಷ್ಣಮೂರ್ತಿ ಕುಳಾಯಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾವಿತ್ರಿ ರಮೇಶ್ ಭಟ್ ಸ್ವಾಗತಿಸಿ, ಸುರೇಶ್ ಮುಕ್ಕ ವಂದಿಸಿದರು. ಶ್ರೇಯಾ ಕೃಷ್ಣ ವೈಯಕ್ತಿಕ ಗೀತೆ ಹಾಡಿದರು. ಸಂಜಯ್ ಕಾರ್ಯಕ್ರಮ ನಿರೂಪಿಸಿದರು.

ಚಿನ್ನಾಭರಣ ಮಳಿಗೆ ಉದ್ಘಾಟನೆ



ಮಂಗಳೂರು: ಬಾಬಿ ಚೆಮ್ಮನೂರು ಒಡೆತನದ, 163 ವರ್ಷಗಳ ವಿಶ್ವಾಸಾರ್ಹ ಇತಿಹಾಸ ಹೊಂದಿರುವ ಆಭರಣ ಸಮೂಹ- ಬಾಬಿ ಚೆಮ್ಮನೂರು ಇಂಟರ್ ನ್ಯಾಶನಲ್ ಜ್ಯುವೆಲ್ಲರ್ಸ್‌ನ 58ನೇ ಶೋರೂಮ್ ನಗರದ ಕ್ಲಾಕ್ ಟವರ್ ಬಳಿ ಭಾನುವಾರ ಅದ್ದೂರಿಯಾಗಿ ಉದ್ಘಾಟನೆಗೊಂಡಿತು.

ಸ್ಟಾರ್ ಆಕರ್ಷಣೆಯಾಗಿ ಬಾಲಿವುಡ್ ನಟ ಇಮ್ರಾನ್ ಹಶ್ಮಿ, ರಿಯಲ್ ಸ್ಟಾರ್ ಉಪೇಂದ್ರ, ಶಾಸಕ ವೇದವ್ಯಾಸ ಕಾಮತ್ ಅವರ ಉಪಸ್ಥಿತಿಯಲ್ಲಿ ಚೆಮ್ಮನೂರು ಜ್ಯುವೆಲ್ಲರಿ ಶೋರೂಮ್‌ಗೆ ಅಧಿಕೃತ ಚಾಲನೆ ನೀಡಲಾಯಿತು.

ಇದೇ ಸಂದರ್ಭ ಬಾಬಿ ಚೆಮ್ಮನೂರು ಅವರು ಬಡ ರೋಗಿಗಳಿಗೆ ಬೋಚೆ ಫ್ಯಾನ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆರ್ಥಿಕ ಸಹಾಯ ವಿತರಿಸಿದರು.

ಚೆಮ್ಮನೂರು ಜ್ಯುವೆಲ್ಲರಿ ಸಂಸ್ಥೆಯ ಮಾಲೀಕ ಬಾಬಿ ಚೆಮ್ಮನೂರು, ಗಾಣಿಗ ಅಭಿವೃದ್ಧಿ ನಿಗಮ ಅಧ್ಯಕ್ಷ ವಿಶ್ವಾಸ್ ಕುಮಾರ್ ದಾಸ್, ಮಾಜಿ ಶಾಸಕ ಮೊಹಿಯುದ್ದೀನ್ ಬಾವ, ಮಾಜಿ ಮೇಯರ್ ಮನೋಜ್ ಕೋಡಿಕಲ್, ಉಪ ಮೇಯರ್ ಪೂರ್ಣಿಮಾ, ಮುಖಂಡ ಜಗದೀಶ್ ಅಧಿಕಾರಿ, ಎಲಿಯಾಸ್, ಬಾಬಿ ಚೆಮ್ಮನೂರು ಇಂಟರ್ ನ್ಯಾಶನಲ್ ಗ್ರೂಪ್‌ನ ಮಾರ್ಕೆಟಿಂಗ್ ಜನರಲ್ ಮ್ಯಾನೇಜರ್ ಅನಿಲ್ ಸಿ.ಪಿ. ಸ್ವಾಗತಿಸಿದರು.

ಸಂಸದರ ನಿಧಿಯಿಂದ ತುಂಬೆ ಗ್ರಾಮದ ರಸ್ತೆ ಅಭಿವೃದ್ಧಿಗೆ ಶಿಲಾನ್ಯಾಸ



ಬಂಟ್ವಾಳ: ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ಪ್ರದೇಶಾಭಿವೃದ್ಧಿ ನಿಧಿ 5 ಲಕ್ಷ ರೂ. ವೆಚ್ಚದಲ್ಲಿ ಬಿಜೆಪಿ ಮಂಗಳೂರು ಮಂಡಲದ ಪುದು ಮಹಾ ಶಕ್ತಿ ಕೇಂದ್ರಕ್ಕೊಳಪಟ್ಟ ತುಂಬೆ ಗ್ರಾಮದ ವಳವೂರ್ ಮಿತ್ತಕರೆ ದಿ. ಹರಿನಾಥ ಭಂಡಾರಿ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಿ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಭಾನುವಾರ ಗುದ್ದಲಿಪೂಜೆ ನೆರವೇರಿಸಲಾಯಿತು.

ಗ್ರಾಮದ ಅಭಿವೃದ್ಧಿಗೆ ಪ್ರಯತ್ನ

ಶೇಖರ್ ಪೂಜಾರಿ ವಳವೂರ್ ಅವರು ಗುದ್ದಲಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಬಿಜೆಪಿ ಮಂಗಳೂರು ಮಂಡಲದ ಉಪಾಧ್ಯಕ್ಷ ಮನೋಜ್ ಆಚಾರ್ಯ ನಾಣ್ಯ ಮಾತನಾಡಿ, ಮುಂದಿನ ದಿನಗಳಲ್ಲಿ ತುಂಬೆ ಗ್ರಾಮಕ್ಕೆ ಸಂಸದರ ನಿಧಿಯಿಂದ ಇನ್ನಷ್ಟು ಅನುದಾನವನ್ನು ಪಡೆದುಕೊಂಡು ತುಂಬೆ ಗ್ರಾಮವನ್ನು ಅಭಿವೃದ್ದಿಪಡಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದರು.

ಈ ಸಂದರ್ಭ ಮಂಗಳೂರು ಮಂಡಲದ ಹಿಂದುಳಿದ ಮೋರ್ಚಾದ ಅಧ್ಯಕ್ಷರಾದ ಗಣೇಶ್ ಸುವರ್ಣ ತುಂಬೆ, ಪುದು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುಕೇಶ್ ಶೆಟ್ಟಿ ತೇವು, ಪ್ರಧಾನ ಕಾರ್ಯದರ್ಶಿ ರೂಪೇಶ್ ಜ್ಯೋತಿಗುಡ್ಡೆ, ಮಾಜಿ ಪಂಚಾಯತ್ ಸದಸ್ಯರಾದ ಕಿಶೋರ್ ರಾಮಲಕಟ್ಟೆ, ಸಂಜೀವ ಪೂಜಾರಿ ರಾಮಲಕಟ್ಟೆ, ಮನೋಜ್ ವಳವೂರ್, ಹಿರಿಯರಾದ ಸಂಜೀವ ಪೂಜಾರಿ, ಮಾಧವ ವಳವೂರ್, ಜಯ. ಆರ್. ಎಸ್. ರಾಮಲಕಟ್ಟೆಪೂವಪ್ಪ ವಳವೂರ್, ಮನೋಹರ್ ಪುಡಿಕಲ್ಲೈಕೋಡಿ, ಅಜಿತ್ ಉಮನಗುಡ್ಡೆ ಮತ್ತಿತರರು ಉಪಸ್ಥಿತರಿದ್ದರು. ಮನೋಹರ್ ಪರ್ಲಕ್ಕೆ ಸ್ವಾಗತಿಸಿ,ವಂದಿಸಿದರು. ಈ ಅನುದಾನ ಮಂಜೂರಾತಿ ಸಿಗುವಲ್ಲಿ ಮಂಗಳೂರು ಮಂಡಲದ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್ ಸಹಕರಿಸಿದರು.

ಮಾ.28: ಚೀರುಂಭ ಭಗವತೀ ಕ್ಷೇತ್ರದಲ್ಲಿ ನಡಾವಳಿ ಉತ್ಸವ, ಗೊನೆ ಮುಹೂರ್ತ



ಉಳ್ಳಾಲ: ಚೀರುಂಭ ಭಗವತೀ ಕ್ಷೇತ್ರದಲ್ಲಿ ನಡಾವಳಿ ಉತ್ಸವದ ಪೂರ್ವಭಾವಿಯಾಗಿ ಗೊನೆ ಮುಹೂರ್ತ ನಡೆಯಿತು.

ತಾಯಿ ಭಗವತಿಯ ಆಶೀರ್ವಾದದಿಂದ ಉತ್ಸವದ ಎಲ್ಲಾ ಕಾರ್ಯಕ್ರಮಗಳು ಸಾಂಘವಾಗಿ ನಡೆಯಲಿ. ಊರಿನ ಭಕ್ತ ಭಾಂದವರು ಬಂದು ನಡಾವಳಿ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರ ಸುರೇಶ್ ಭಟ್ನಗರ ವಿನಂತಿಸಿದರು.

ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದಲ್ಲಿ ಇದೇ ಮಾ.28ರಂದು ನಡೆಯಲಿರುವ ನಡಾವಳಿ ಉತ್ಸವದ ಪೂರ್ವಭಾವಿಯಾಗಿ ಭಾನುವಾರದಂದು ಶ್ರೀ ಕ್ಷೇತ್ರದಲ್ಲಿ ಪ್ರಧಾನ ಅರ್ಚಕರಾದ ಮಂಜಪ್ಪ ಕಾರ್ನವರ್ ಅವರ ಮಾರ್ಗದರ್ಶನದಲ್ಲಿ ನಡೆದ ಗೊನೆ ಮುಹೂರ್ತದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮಾ.28ಕ್ಕೆ ಪೂರ್ವಾಹ್ನ 10ಕ್ಕೆ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಭಂಡಾರ ಮಂದಿರದಿಂದ ಗರ್ಭಗುಡಿಗಳಿಗೆ ಶ್ರೀ ಭಗವತಿಯರ ಭಂಡಾರ ಆಗಮಿಸಿ, ರಾತ್ರಿ 10ರಿಂದ ನಡಾವಳಿ ಉತ್ಸವ, ಬಲಿ, ಮೂರ್ತಿ ದರ್ಶನ, ಹರಕೆ ಇತ್ಯಾದಿ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆಯೆಂದರು.

ಕ್ಷೇತ್ರದ ಆಚಾರ ಪಟ್ಟವರು ಮತ್ತು ಗುರಿಕಾರರು, ಚೀರುಂಭ ಭಗವತೀ ಕ್ಷೇತ್ರದ ಅಧ್ಯಕ್ಷ ಚಿದಾನಂದ ಗುರಿಕಾರ ನಂದ್ಯ, ಪ್ರಧಾನ ಕಾರ್ಯದರ್ಶಿ ಯಶವಂತ ಉಚ್ಚಿಲ್, ಕೋಶಾಧಿಕಾರಿ ಜಗದೀಶ್ ಉಳ್ಳಾಲಬೈಲ್, ಮೊಕ್ತೇಸರ ವಿಶ್ವನಾಥ ಉಚ್ಚಿಲ್, ರಾಘವ ಕೈಕಂಬ, ಉಮೇಶ್ ಕೊಣಾಜೆ, ಸದಾಶಿವ ಉಳ್ಳಾಲ್, ಉಪಾಧ್ಯಕ್ಷ ದಿನೇಶ್ ಕುಂಪಲ,ದಾಮೋದರ ಪಡ್ಪು ನಾಗಪ್ಪ ಅಡ್ಯಾರ್, ಜನಾರ್ಧನ ಕಾಯರ್‌ಪಳಿಕೆ, ಕಾರ್ಯದರ್ಶಿ ಕಾಂಚನ್ ಕುಮಾರ್, ಸುರೇಶ್ ಬೀರಿ, ಹರಿಶ್ಚಂದ್ರ ಕುತ್ತಾರ್, ಧನಂಜಯ ಬೆಂಜನಪದವು, ಗೌರವ ಸಲಹೆಗಾರ ನಾಗೇಶ್ ತೊಕ್ಕೊಟ್ಟು ಪ್ರಕಾಶ್ ಕುಮಾರ್ ಕೆ.ಪಿ.ನಾರ್ಲ, ತಾರಾನಾಥ್ ಕೊಡ್ಮನ್, ವೆಂಕಪ್ಪ ಮೋರ್ಲ, ಯುವ ವೇದಿಕೆಯ ಪ್ರಧಾನ ಸಂಚಾಲಕ ಕೇಶವ ತೊಕ್ಕೊಟ್ಟು,ಮಹಿಳಾ ವೇದಿಕೆಯ ಪ್ರಧಾನ ಸಂಚಾಲಕಿ ಮಾಧವಿ ಉಳ್ಳಾಲ್ ಮೊದಲಾದವರು ಉಪಸ್ಥಿತರಿದ್ದರು.



ಮುಲ್ಕಿ ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ದೇಂದಡ್ಕ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ಭಾನುವಾರ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿ ಹಾಗೂ ಪ್ರಧಾನ ಅನುವಂಶಿಕ ಅರ್ಚಕ ಪಿ ಸುಬ್ರಹ್ಮಣ್ಯ ಭಟ್ ನೇತೃತ್ವದಲ್ಲಿ ಮೃತ್ಯುಂಜಯ ಯಾಗ, ಗಣಪತಿ ಶಾಂತಿ ನಡೆಯಿತು.



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವತಿಯಿಂದ ಪದವಿನಂಗಡಿ ಪೇರ್ಲಗುರಿ ಶ್ರೀ ಪ್ರಸನ್ನ ಗಣಪತಿ ಶಾಖೆಯಲ್ಲಿ ಸಮಿತಿಯ ಭಾವಚಿತ್ರಕ್ಕೆ ಹೂವು ಹಾಕಿ, ಓಂಕಾರದಲ್ಲಿ ಹಣತೆ ಹಚ್ಚಿ ಯುಗಾದಿ ಆಚರಿಸಲಾಯಿತು. ಶಾಖೆಯ ಯೋಗ ಬಂಧು ರೂಪಲತಾ ಅವರು ಬೌದ್ಧಿಕ್ ನೀಡಿದರು. ಯೋಗ ಶಿಕ್ಷಕ ಜೀವನ್ ಬೊಲ್ಲುಗುಡ್ಡೆ, ಸಂಚಾಲಕಿ ಲೋಲಾಕ್ಷಿ ಇದ್ದರು.

ವಿಶ್ವಕರ್ಮ ಸಹಕಾರ ಬ್ಯಾಂಕಿನ ಮೆಲ್ಕಾರ್ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ'

ಸ್ವಚ್ಛತಾ ಕಾರ್ಯ ಸಮಾಜಮುಖಿ: ಡಾ. ಆತ್ಮರಂಜನ್ ರೈ

ಮಂಗಳೂರು: ವಿಶ್ವಕರ್ಮ ಬ್ಯಾಂಕ್ ಆರ್ಥಿಕ ಚಟುವಟಿಕೆಗಳೊಂದಿಗೆ ಸಮಾಜಮುಖಿಯಾಗಿ ಸ್ವಚ್ಛತೆಯಂತಹ ಆವಶ್ಯ ಪರಿಸರ ಜಾಗೃತಿಯ ಕಾರ್ಯವನ್ನು ಯಾವುದೇ ತಾರತಮ್ಯವಿಲ್ಲದೆ ಎಲ್ಲರನ್ನೂ ಸೇರಿಸಿಕೊಂಡು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ಜೀರ್ಣೋದ್ದಾರ ಸಮಿತಿ ಅಧ್ಯಕ್ಷ ಡಾ. ಆತ್ಮರಂಜನ್ ರೈ ಹೇಳಿದರು.

ಅವರು ವಿಶ್ವಕರ್ಮ ಸಹಕಾರ ಬ್ಯಾಂಕಿನ ಮೆಲ್ಕಾರ್ ಶಾಖೆಯ ವತಿಯಿಂದ 'ಸ್ವಚ್ಛತಾ ಹೀ ಸೇವಾ' ಧ್ಯೇಯದೊಂದಿಗೆ ನಡೆದ 36ನೇ ಸ್ವಚ್ಛ ಭಾರತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ್ದರು.

ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ಜೀರ್ಣೋದ್ದಾರ ಸಮಿತಿಯ ಅಧ್ಯಕ್ಷ ಡಾ. ಆತ್ಮರಂಜನ್ ರೈ, ವ್ಯವಸ್ಥಾಪಕ ಸಮಿತಿಯ ಸದಸ್ಯರಾದ ಆಡಳಿತ ಸದಸ್ಯ ಪ್ರತಿಭಾ.ಎ. ರೈ ಹಾಗೂ ಯುವಸಂಗಮ ಮೆಲ್ಕಾರ್ ಇದರ ಗೌರವಾಧ್ಯಕ್ಷ ಎಂ.ಎನ್. ಕುಮಾರ್ ಹಸಿರು ನಿಶಾನೆ ತೋರಿಸುವ ಮೂಲಕ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ಪರಿಸರದಲ್ಲಿ ಪರಿಸರದಲ್ಲಿ ಸ್ವಚ್ಛತಾ ಶ್ರಮದಾನವು ನಡೆಯಿತು. ಬ್ಯಾಂಕಿನ ನಿರ್ದೇಶಕ ಜಯಪ್ರಕಾಶ್ ಆಚಾರ್ಯ ಭಂಡಾರಿಬೆಟ್ಟು, ಬಿಜು ಜಯ ಆಚಾರ್ಯ, ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ಆಡಳಿತ ಮೊಕ್ತೇಸರ ಡಾ. ಪ್ರಶಾಂತ್ ಮಾರ್ಲ, ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ಜೀರ್ಣೋದ್ದಾರ ಸಮಿತಿಯ ಸದಸ್ಯರು, ಶ್ರೀ ನರಹರಿ ಪರ್ವತ ಸದಾಶಿವ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರು, ವ್ಯವಸ್ಥಾಪಕ ಆನಂದ್, ಗ್ರಾ.ಪಂ. ಸದಸ್ಯ ರಾಘವ ಪೂಜಾರಿ, ಯುವ ಸಂಗಮ ಮೆಲ್ಕಾರ್ ಇದರ ಸದಸ್ಯರು, ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಮೆಲ್ಕಾರ್ ಇದರ ಸದಸ್ಯರು, ಶಾಖಾ ವ್ಯವಸ್ಥಾಪಕ ಉಷಾ ಕೆ. ಹಾಗೂ ಸಿಬ್ಬಂದಿಗಳು, ಬ್ಯಾಂಕಿನ ಸದಸ್ಯರು, ಗ್ರಾಹಕರು ಸ್ವಯಂ ಸೇವಕರಾಗಿ ಭಾಗವಹಿಸಿ ಕಾರ್ಯಕ್ರಮದಲ್ಲಿ ಸಹಕರಿಸಿದರು.

ಉಪ್ಪಿನಂಗಡಿ ಸೂರ್ಯ ಆಸ್ಪತ್ರೆಯ ವರ್ಷಾಚರಣೆ

ವಿವಿಧ ಸಂಘಟನೆಗಳಿಂದ ರಕ್ತದಾನ

ಉಪ್ಪಿನಂಗಡಿ: ಇಲ್ಲಿನ ಸೂರ್ಯ ಆಸ್ಪತ್ರೆಯು ತನ್ನ ಪ್ರಥಮ ವರ್ಷಾಚರಣೆಯ ಸಂದರ್ಭದಲ್ಲಿ, ಉಪ್ಪಿನಂಗಡಿಯ ಜೆ ಸಿ ಐ, ರೋಟರಿ ಕ್ಲಬ್, ಹವ್ಯಕ ವಲಯ, ಐ.ಸಿ.ವೈ.ಯಂ, ಯುವವಾಹಿನಿ ಉಪ್ಪಿನಂಗಡಿ , ಹಾಗೂ ಪುತ್ತಿಲ ಪರಿವಾರ ಸೇವಾ ಟ್ರಸ್ಟ್ ಸಂಘಟನೆಗಳ ಸಹಭಾಗಿತ್ವದಲ್ಲಿ ಪುತ್ತೂರಿನ ರೋಟರಿ ಕ್ಯಾಂಪ್ಕೊ ರಕ್ತನಿಧಿ ವತಿಯಿಂದ ಭಾನುವಾರ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಯಿತು.

ಶಿಬಿರವನ್ನು ಉಪ್ಪಿನಂಗಡಿಯ ಖ್ಯಾತ ವೈದ್ಯರಾದ ಡಾ. ರಾಜಾರಾಮ ಕೆ.ಬಿ . ಮತ್ತು ಡಾ.ಕೆ.ಜಿ. ಭಟ್ ಜಂಟಿಯಾಗಿ ಉದ್ಘಾಟಿಸಿದರು.



ಈ ಸಂದರ್ಭ ಮಾತನಾಡಿದ ಡಾ. ರಾಜಾರಾಮ ಅವರು, ರಕ್ತದಾನ ನಮ್ಮ ಜೀವನದ ಅತ್ಯಮೂಲ್ಯ ದಾನ, ಸ್ವಯಂ ಪ್ರೇರಣೆ ಮೂಲಕ ಈ ಪುಣ್ಯಕಾರ್ಯದ ಮೂಲಕ ಪರೋಪಕಾರ ಮಾಡುವಂತೆ ಶುಭ ಹಾರೈಸಿದರು. ಸೂರ್ಯ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ರಾಜೇಶ್ ಎಸ್. ಸ್ವಾಗತಿಸಿ, ಉಪ್ಪಿನಂಗಡಿಯ ಜೆಸಿಐ ಅಧ್ಯಕ್ಷ ಅವನೀಶ್ ಪಿ. ವಂದಿಸಿದರು. ಆಸ್ಪತ್ರೆಯ ವ್ಯವಸ್ಥಾಪಕ ಸುಮಂತ್ ನಿರ್ವಹಿಸಿದರು. ಶಿಬಿರದಲ್ಲಿ 33 ಯುನಿಟ್ ರಕ್ತ ಸಂಗ್ರಹಿಸಲಾಯಿತು.

ಸುತ್ತ ಮುತ್ತ

ಶ್ರೀ ಕ್ಷೇತ್ರ ಮೋಂತಿಮಾರು: ಆ್ಯಂಬುಲೆನ್ಸ್ ಸಮರ್ಪಣೆ ಇಂದು, ನಾಳೆ ಜಾತ್ರೆ

ಬಂಟ್ವಾಳ: ತಾಲೂಕಿನ ಮಂಚಿ ಗ್ರಾಮದ ಮೋಂತಿಮಾರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಸಾಮೂಹಿಕ ಕುಂಕುಮಾರ್ಚನೆ ಮತ್ತು 'ದುರ್ಗಿ ನಾಮಧೇಯದ ಆ್ಯಂಬುಲೆನ್ಸ್ ಲೋಕಾರ್ಪಣೆ ಕಾರ್ಯಕ್ರಮ ಭಾನುವಾರ ನಡೆಯಿತು. ಶ್ರೀ ಕ್ಷೇತ್ರದ ವರ್ಷಾವಧಿ ಜಾತ್ರೆಯು ಇಂದು ಮತ್ತು ನಾಳೆ ನಡೆಯಲಿದ್ದು, ಇಂದು ರಾತ್ರಿ 10.30ರಿಂದ ಸಾಂಸ್ಕೃತಿಕ ಕಾರ್ಯಕ್ರಮದಂಗವಾಗಿ ವಿಧಾತ್ರಿ ಕಲಾವಿದೆರ್ ಕುಡ್ಲ ಇವರಿಂದ ಜೈ ಹನುಮಾನ್ ಸಿನಿ ನಾಟಕ ಪ್ರದರ್ಶನಗೊಳ್ಳಲಿದೆ. ನಾಳೆ ಜಾತ್ರೋತ್ಸವದ ಅಂಗವಾಗಿ ಪಲ್ಲಕ್ಕಿ ಉತ್ಸವ, ಕುಣಿತ ಭಜನೆ, ನೃತ್ಯ ವೈಭವ ಹಾಗೂ ಭರತನಾಟ್ಯ ಪ್ರದರ್ಶನಗೊಳ್ಳಲಿದೆ.

ನೆಟ್ಟುಮಾಡು ಭಗವತಿ ದೇವಿ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಕಲಶ

ನಾಪೋಕ್ಲು: ಸಮೀಪದ ಕಕ್ಕಬ್ಬೆಯ ಯವಕಪಾಡಿ ಗ್ರಾಮದ ನೆಟ್ಟುಮಾಡು ಭಗವತಿ ದೇವಿಯ ಬ್ರಹ್ಮ ಕಲಶ ಮತ್ತು ಪುನರ್ ಪತಿಷ್ಠಾಪನೆಯು ಮಾ.22



ರಿಂದ ಆರಂಭಗೊಂಡಿದ್ದು 25ರ ವರೆಗೆ ನಡೆಯಲಿದೆ.

ಬ್ರಹ್ಮಕಲಶ ಕಾರ್ಯಕ್ರಮವು ನೀಲೇಶ್ವರ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಹಾಗೂ ಕೂಡುಕಟ್ಟಿನ ಯಜಮಾನತ್ವದಲ್ಲಿ ಜರುಗಲಿದೆ. ಮಾ.24 ರಂದು ಬೆಳಿಗ್ಗೆ ಗಣಪತಿ ಹೋಮ, ಸಂಹಾರ ತತ್ವ ಹೋಮ, ಸಂಹಾರ ತತ್ವ ಕಲಶ ಪೂಜೆ, ಸಂಹಾರ ತತ್ವ ಕಲಶಾಭಿಷೇಕ, ಅನುಜ್ಞಾ ಕಲಶಾಭಿಷೇಕ,ಅನುಜ್ಞಾಪ್ರಾರ್ಥನೆ,ದೇವ ಕಲಶ ಪೂಜೆ, ಜೀವದ್ವಾಪನೆ, ಜೀವ ಕಲಶ ನೆರವೇರಲಿದೆ. ಮಾ.25ರಂದು ಬೆಳಿಗ್ಗೆ ಗಣಪತಿ ಹೋಮ, ಪ್ರಾಸಾದ ಪ್ರತಿಷ್ಠೆ, ಪೀಠ ಪ್ರತಿಷ್ಠೆ ನಡೆಯಲಿದೆ. ಬೆಳಿಗ್ಗೆ 10:21 ರಿಂದ 11:30ರ ವೃಷಭ ಲಗ್ನದಲ್ಲಿ ಅಮ್ಮನವರ ಬಿಂಬ ಪ್ರತಿಷ್ಠೆ ಜೀವ ಕಲಶ ಅಭಿಷೇಕ, ಶಿಖರ ಪ್ರತಿಷ್ಠೆ, ಪರಿವಾರ ಪ್ರತಿಷ್ಠೆ ನಡೆಯಲಿದ್ದು ಮಧ್ಯಾಹ್ನ ಮಹಾಪೂಜೆ ಪ್ರಸಾದ ವಿತರಣೆ ಹಾಗೂ ಮಂತ್ರಾಕ್ಷತೆ ನಡೆಯಲಿದೆ.

ಸದಸ್ಯತ್ವ ಆಂದೋಲನ

ನಾಪೋಕ್ಲು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಗೆ ಹೊಸ ಸದಸ್ಯರ ಸದಸ್ಯತ್ವ ನೋಂದಣಿ ಆರಂಭಗೊಂಡಿದ್ದು, 2012ರಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಸ್ಥಾಪನೆಯಾಗಿದೆ. ಈ ಸಮಿತಿಯು ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸುವುದು ವಿಜ್ಞಾನ ಬೇಸಿಗೆ ಶಿಬಿರ, ಜನರಿಗೆ ಮಾರಕವಾಗಿರುವ ಯೋಜನೆಗಳ ವಿರುದ್ಧ ಜನಾಂದೋಲನ , ವಿಜ್ಞಾನ ಕಾರ್ಯಾಗಾರ ಮುಂತಾದ ವಿಚಾರಗಳನ್ನು ಒಳಗೊಂಡ ಕಾರ್ಯ ನಡೆಸುತ್ತಿದೆ. ಇದರ ಕೇಂದ್ರ ಕಚೇರಿ ಬೆಂಗಳೂರಿನ ವಸಂತನಗರದಲ್ಲಿದೆ. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಸದಸ್ಯತ್ವ ನೋಂದಣಿ ಮಾಡಿಕೊಳ್ಳಲು ಅಧ್ಯಕ್ಷೆ ಎಂ.ಟಿ. ಸರಳಕುಮಾರಿ (ಮೊ:9483785729)ಕಾರ್ಯದರ್ಶಿ ಕುಮಾರ್ ಎನ್. ಎಸ್ (ಮೊ:9483252878) ಹಾಗೂ ಜಿಲ್ಲಾ ಸಂಯೋಜಕ ಹರೀಶ್ (ಮೊ:8088163975) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಕೆ.ಜೆ. ವಿ. ಎಸ್ ಕಾರ್ಯದರ್ಶಿ ಕುಮಾರ್ ಎನ್.ಎಸ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪವಿತ್ರ ಬಲಿಪೂಜೆ

ಬಂಟ್ವಾಳ: ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ವಿಟ್ಲ ವಲಯದ ಪೆರುವಾಯಿ ಫಾತಿಮಾ ಮಾತೆಯ ದೇವಾಲಯದ ಸಭಾಭವನದಲ್ಲಿ ವಿಟ್ಲ ವಲಯ ಸ್ತ್ರೀ ಸಂಘಟನೆಯ ಕಾರ್ಯಕ್ರಮವು ನಡೆಸಲಾಯಿತು. ವಿಟ್ಲ ವಲಯ ಧರ್ಮಗುರುಗಳಾದ ಫಾ.ಐವನ್ ಮೈಕಲ್ ರೊಡ್ರೀಗಸ್, ಶಂಬೂರ್ ಚರ್ಚ್ ಧರ್ಮಗುರು ಫಾ. ಸಂತೋಷ್ ಡಿ ಸೋಜಾ, ದೇಲಂತಬೆಟ್ಟು ಚರ್ಚ್ ಧರ್ಮಗುರು ಫಾ.ರಿಚಾರ್ಡ್ ಡಿ ಸೋಜಾ,ಪೆರುವಾಯಿ ಚರ್ಚ್ ಧರ್ಮಗುರು ಫಾ. ಸೈಮಾನ್ ಡಿ ಸೋಜಾ ಮತ್ತು ಸಾಲೆತ್ತೂರು ಚರ್ಚ್ ಧರ್ಮಗುರು ಫಾ.ಮನೋಜ್ ಫುರ್ಟಾಡೊ ಇವರು ಮಹಿಳೆಯರಿಗಾಗಿ ಪವಿತ್ರ ಬಲಿಪೂಜೆ ಸಮರ್ಪಿಸಿದರು. ಮಂಗಳೂರು ಧರ್ಮಪ್ರಾಂತ್ಯದ ಅಧ್ಯಕ್ಷ ಗ್ರೇಟಾ ಪಿಂಟೊ, ಸ್ತ್ರೀ ಆಯೋಗದ ಕಾರ್ಯದರ್ಶಿ ಅನಿತಾ ಫ್ರಾಂಕ್ ,ಮಾಣಿಲಾ ಸ್ತ್ರೀ ಸಂಘಟನೆಯ ಅಧ್ಯಕ್ಷೆ ಸುಚಿತಾ ಡಿ ಸೋಜಾ, ಪೆರುವಾಯಿ ಚರ್ಚ್ ಉಪಾಧ್ಯಕ್ಷರಾದ ಡೇನಿಸ್ ಮೊಂತೆರೊ, ಕಾರ್ಯದರ್ಶಿ ವಿನ್ಸೆಂಟ್ ಡಿ ಸೋಜಾ,ಆಯೋಗದ ಸಂಯೋಜಕ ರೋಲ್ಫ್ ಡಿ ಸೋಜಾ ಉಪಸ್ಥಿತರಿದ್ದರು. ವಲಯ ಅಧ್ಯಕ್ಷ ಪ್ರಫುಲ್ಲ ಜಾನೆಟ್ ಡಿ ಕ್ರೂಜ್ ಮತ್ತು ಕಾರ್ಯದರ್ಶಿ ರೇಶ್ಮಾ ಡಿಸೋಜಾ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೌಕ್ರಾಡಿ ಗ್ರಾಮದಲ್ಲಿ ಮನೆ ನಿರ್ಮಾಣ

ಬಡ ಕುಟುಂಬದ ಬಾಳಿಗೆ ಬೆಳಕಾದ 'ವಾತ್ಸಲ್ಯ' ಯೋಜನೆ

ಕಡಬ: ಸುಮಾರು 10 ವರ್ಷಗಳಿಂದ ಗುಡಿಸಲಿನಲ್ಲಿ ಜೀವನ ಸಾಗಿಸುತ್ತಿದ್ದ ಕೌಕ್ರಾಡಿ ಗ್ರಾಮದ ಬಡ ಕುಟುಂಬಕ್ಕೆ ಈಗ ಸುರಕ್ಷಿತ ಆಶ್ರಯ ಲಭಿಸಿದೆ.

ಕಡಬ ತಾಲೂಕಿನ ಕೌಕ್ರಾಡಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ವಾತ್ಸಲ್ಯ ಯೋಜನೆಯಡಿ ಕಟ್ಟೆಮಜಲು ನಿವಾಸಿ ಕೇಶವ ಅವರಿಗೆ ನೂತನ ಮನೆ ನಿರ್ಮಿಸಿ ಶನಿವಾರ ಹಸ್ತಾಂತರಿಸಲಾಯಿತು. ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಅವರ ಕನಸಿನ ಯೋಜನೆಯದ ಈ 'ವಾತ್ಸಲ್ಯ' ಯೋಜನೆಯಡಿ ಅಸಹಾಯಕ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಆಶ್ರಯ ಒದಗಿಸುವ ಮಹತ್ವದ ಕಾರ್ಯ ನಡೆಯುತ್ತಿದೆ. ಕೇಶವ ಅವರ ಕುಟುಂಬವು ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು ಎರಡು ಮಕ್ಕಳೊಂದಿಗೆ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಈ ಹಿನ್ನಲೆಯಲ್ಲಿ ಕಾರ್ಯಕರ್ತರ ಪರಿಶೀಲನೆಯ ಬಳಿಕ ಮನೆ ನಿರ್ಮಾಣಕ್ಕೆ ಆಯ್ಕೆ ಮಾಡಲಾಗಿತ್ತು. ಸುಮಾರು



ರೂ.1.90 ಲಕ್ಷ ವೆಚ್ಚದಲ್ಲಿ ಒಂದು ತಿಂಗಳ ಅವಧಿಯಲ್ಲಿ ಮನೆ ನಿರ್ಮಿಸಿ ಹಸ್ತಾಂತರ ಮಾಡಲಾಗಿದೆ. ಈಗಾಗಲೇ ಕೇಶವ ಅವರು ಯೋಜನೆಯಲ್ಲಿ ಪ್ರತಿ ತಿಂಗಳು ಮಾಶಾಸನವನ್ನು ಪಡೆಯುತ್ತಿರುವುದು ಗಮನಾರ್ಹವಾಗಿದೆ.

ವಾತ್ಸಲ್ಯ ಮನೆಯನ್ನು ಹಸ್ತಾಂತರ ಮಾಡಿದ ಜಿಲ್ಲಾ ನಿರ್ದೇಶಕ ಬಾಬು ನಾಯ್ಕ್ ಮಾತನಾಡಿ, ಧರ್ಮಸ್ಥಳದ ವತಿಯಿಂದ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದು ಲಕ್ಷಾಂತರ ಬಡ ಕುಟುಂಬಗಳಿಗೆ ಕ್ಷೇತ್ರದಿಂದ ಸಹಾಯ ಹಸ್ತ ಸಿಕ್ಕಿದೆ. ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರು ಈ ವಾತ್ಸಲ್ಯ ಯೋಜನೆಯನ್ನು ಆರಂಭಿಸಿದ್ದು ಅಸಹಾಯಕ ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡುತ್ತಿರುವುದು ಪುಣ್ಯದ ಕಾರ್ಯ. ಬಡವರ ಕಣ್ಣೀರು ಒರೆಸುವ ಕೆಲಸವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಡೆಯುತ್ತಿದೆ ಎಂದು ಹೇಳಿದರು.

ಕೌಕ್ರಾಡಿ ವರ್ತಕ ಹಾಗೂ ಕೈಗಾರಿಕಾ ಸಂಘದ ಅಧ್ಯಕ್ಷ ಸತೀಶ್ ಕೆ.ಎಸ್. ಮಾತನಾಡಿ, ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳನ್ನು ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಯೋಜನೆಯ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಯು ಸಹ ಸ್ವಾವಲಂಬಿಯಾಗಿ ಸ್ವಾಭಿಮಾನಿಯಾಗಿ ಬದುಕಬೇಕೆಂಬುದೇ ಯೋಜನೆಯ ಉದ್ದೇಶವಾಗಿದೆ. ಕಳೆದ 40ಕ್ಕೂ ಹೆಚ್ಚು ವರ್ಷಗಳಿಂದ ಯೋಜನೆಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವ್ಯಾಪಿಸಿದೆ. ಧರ್ಮಸ್ಥಳದ ಮಾತೃಶ್ರೀ ಹೇಮಾವತಿ ಅಮ್ಮನವರ ಕನಸಿನ ಕಾರ್ಯಕ್ರಮವಾಗಿರುವ ವಾತ್ಸಲ್ಯ ಮನೆ ಅಸಹಾಯಕ ಕುಟುಂಬಗಳಿಗೆ ಆಶ್ರಯ ಮತ್ತು ಆಸರೆಯಾಗಿದೆ ಎಂದರು.

ಕಟ್ಟೆ ಮಜಲು ಧೂಮಾವತಿ ದೇವಸ್ಥಾನದ ಅಧ್ಯಕ್ಷ ಸದಾನಂದ ಗೌಡ ಅವರು ವಾತ್ಸಲ್ಯ ಮನೆಯ ನಾಮಫಲಕವನ್ನು ಅನಾವರಣಗೊಳಿಸಿದರು. ವಲಯ ಒಕ್ಕೂಟದ ಅಧ್ಯಕ್ಷ ಕುಶಾಲಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು.

ನೆಲ್ಯಾಡಿ ಶಿಲ್ಪಕಾಂಪ್ಲೆಕ್ಸ್ ಮಾಲಕ ಶಿವಣ್ಣ ಪಿ. ಹೆಗ್ಡೆ ಶ್ರೀ ಕ್ಷೇತ್ರ ಧರ್ಮಸ್ಥಳ ಯೋಜನೆಯ ಕಡಬ ತಾಲೂಕಿನ ಯೋಜನಾಕಾರಿ ಪ್ರಕಾಶ್ ಕುಮಾರ್, ಕೌಕ್ರಾಡಿ ಒಕ್ಕೂಟದ ಅಧ್ಯಕ್ಷ ಬಾಲಕೃಷ್ಣಗೌಡ, ಶೌರ್ಯ ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ರಮೇಶ್, ತುಕಾರಾಮ ರೈ ನೆಲ್ಯಾಡಿ, ಮೇಸ್ತ್ರಿ ರವಿ, ವಲಯ ಶೌರ್ಯ ಘಟಕದ ಸ್ವಯಂಸೇವಕರು, ಒಕ್ಕೂಟಗಳ ಅಧ್ಯಕ್ಷರು, ಪದಾಕಾರಿಗಳು, ಸೇವಾ ಪ್ರತಿನಿಗಳು ಉಪಸ್ಥಿತರಿದ್ದರು. ಸೇವಾ ಪ್ರತಿನಿಗಳಾದ ನಮಿತಾ ಶೆಟ್ಟಿ ಮತ್ತು ಅಶ್ವಿನಿ ಸಹಕರಿಸಿದರು.

ವಲಯ ಮೇಲ್ವಿಚಾರಕ ಆನಂದ ಡಿ.ಬಿ. ಸ್ವಾಗತಿಸಿ, ಜ್ಞಾನವಿಕಾಸ ಸಮನ್ವಯಾಕಾರಿ ಚೇತನ ಜಿ. ವಂದಿಸಿದರು.

ನಾರ್ಯ: ಮೇ 8ರಂದು ಶ್ರೀ ಆದಿಬ್ರಹ್ಮ ಮೊಗೇರ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠೆ



ಕೊಣಾಜೆ: ದೈವ ದೇವರ ಸಾನಿಧ್ಯವನ್ನು ಇನ್ನಷ್ಟು ಪ್ರಭಾವಶಾಲಿಯಾಗಿ ಬೆಳಗಿಸುವುದು ಹಾಗೂ ಪಾರಂಪರಿಕ ಆಚರಣೆಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಎಲ್ಲರ ಜವಾಬ್ದಾರಿ ಎಂದು ಶ್ರೀ ಕ್ಷೇತ್ರ ಕಣಂತೂರಿನ ಆನುವಂಶಿಕ ಮೊಕ್ತೇಸರರಾದ ಯಂ. ಪದ್ಮನಾಭ ರೈ ಯಾನೆ ಮಂಜು ಭಂಡಾರಿ ನಾರ್ಯಗುತ್ತು ಅಭಿಪ್ರಾಯಪಟ್ಟರು.

ನಾರ್ಯ ಕಳ ಶ್ರೀ ಆದಿಬ್ರಹ್ಮ ಮೊಗೇರ ಜೀರ್ಣೋದ್ಧಾರ ಸಮಿತಿ ಮತ್ತು ಬ್ರಹ್ಮಕಲ ಶೋತ್ಸವ ಸಮಿತಿ ವತಿಯಿಂದ ಮೇ 8ರಂದು ಪುನರ್ ಪ್ರತಿಷ್ಠಾ ಬ್ರಹ್ಮಕಲಶೋ ತ್ಸವದ ಪ್ರಯುಕ್ತ ಶ್ರೀ ಕ್ಷೇತ್ರದ ವಠಾರದಲ್ಲಿ ಭಾನುವಾರ ಜರಗಿದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪೂರ್ವಜರು ದೈವ-ದೇವರ ಆರಾಧನೆ ಯನ್ನು ಕೇವಲ ಆಚರಣೆಯಾಗಿ ನೋಡದೆ, ಅದನ್ನು ಜೀವನದ ಅವಿಭಾಜ್ಯ ಅಂಗವಾಗಿ ಬೆಳೆಸಿಕೊಂಡಿದ್ದಾರೆ. ಆ ಪರಂಪರೆಯನ್ನು ಕಾಪಾಡಿ, ಸಮಾಜದಲ್ಲಿ ಭಕ್ತಿ, ಶ್ರದ್ಧೆ ಮತ್ತು ಒಗ್ಗಟ್ಟನ್ನು ಬೆಳೆಸುವುದು ಅತ್ಯಗತ್ಯ. ದೈವದ ಸಾನಿಧ್ಯವು ದೇವಸ್ಥಾನಗಳಲ್ಲೇ ಸೀಮಿತವಾಗದೆ, ಪ್ರತಿಯೊಬ್ಬರ ಮನಸ್ಸು ಮತ್ತು ನಡೆನುಡಿಗಳಲ್ಲಿ ಪ್ರತಿಫಲಿಸಬೇಕು. ಯುವ ಪೀಳಿಗೆಗೆ ಧಾರ್ಮಿಕ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪರಿಚಯಿಸುವ ಮೂಲಕ ಈ ಪವಿತ್ರ ಪರಂಪರೆಯನ್ನು ಉಳಿಸುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್ ಮಾತನಾಡಿದರು. ಈ ಸಂದರ್ಭ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಬಾಬು ಎನ್., ಯಶವಂತ್ ದೇರಾಜೆ , ಬಾಲಕೃಷ್ಣ ಶೆಟ್ಟಿ ಕೆಳಗಿನ ನಾರ್ಯ, ಸುಮಲತಾ ಕೊಣಾಜೆ, ಸುಮನಾ ಹರೀಶ್ ಶೆಟ್ಟಿ, ಬ್ರಹ್ಮಕಲಶೋತ್ಸವ ಮಹಿಳಾ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಬಾಳೆಪುಣಿ ಮಾಜಿ ಸದಸ್ಯ ಭಾಸ್ಕರ್ ಕೋಟ್ಯಾನ್, ಹುಕ್ರಪ್ಪ ಚಂದ್ರಶೇಖರ್ ಕಲ್ಲಾಪು, ಸತೀಶ್ ಜೋಗಿ ಬದ್ಯಾರು, ಸತೀಶ್ ಪೂಜಾರಿ ಸಜಿಪ ಮುನ್ನೂರು, ಹರೀಶ್ ಕೊಟತ್ತಜೆ, ಮುರಳೀಧರ್ ಕೊಣಾಜೆ, ಪದ್ಮನಾಭ ಗಟ್ಟಿ ಕೊಣಾಜೆ ಉಪಸ್ಥಿತರಿದ್ದರು. ಸುಧೀರ್ ಬಾಳೆಪುಣಿ ಸ್ವಾಗತಿಸಿದರು. ರಾಘವ ಎನ್.ಟಿ ಕಕ್ಕೆಮಜಲು ನಿರೂಪಿಸಿದರು. ಭೋಜಾನಂದ ನಾರ್ಯ ನಿರೂಪಿಸಿದರು.

ಹಾಕತ್ತೂರಿನ ಯುವ ಸ್ಪಂದನ ಯೂತ್ ಫೌಂಡೇಶನ್‌ಗೆ ಪದಾಧಿಕಾರಿಗಳ ಆಯ್ಕೆ

ಮಡಿಕೇರಿ: ಕಳೆದ 7 ವರ್ಷಗಳಿಂದ 'ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ' ಎಂಬ ಧ್ಯೇಯದೊಂದಿಗೆ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಮಡಿಕೇರಿ ತಾಲೂಕಿನ ಹಾಕತ್ತೂರು ಗ್ರಾಮದ ಸಾಮಾಜಿಕ ಸೇವಾ ಸಂಸ್ಥೆ 'ಯುವ ಸ್ಪಂದನ ಯೂತ್ ಫೌಂಡೇಶನ್' ನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಅಧ್ಯಕ್ಷರಾಗಿ ಸುನಿಲ್ ಕುಮಾರ್ ಕೆ.ಎಸ್ ಆಯ್ಕೆಯಾಗಿದ್ದಾರೆ.







ಇತ್ತೀಚೆಗೆ ನಡೆದ ಸಂಘಟನೆಯ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಕಾರ್ಯ ದರ್ಶಿಯಾಗಿ ಮಿಲನ್ ಪೂಜಾರಿ ಬಿ.ಎಸ್ ಹಾಗೂ ಉಪಾಧ್ಯಕ್ಷರಾಗಿ ಪೊನ್ನಪ್ಪ (ಅಣ್ಣು) ಆಯ್ಕೆಯಾದರು.

ಜನಪರ ಕಾರ್ಯ

ನೂತನ ಅಧ್ಯಕ್ಷ ಸುನೀಲ್ ಕುಮಾರ್ ಕೆ.ಎಸ್ ಮಾತನಾಡಿ, ನೂತನವಾಗಿ ಆಯ್ಕೆಯಾದ ಉತ್ಸಾಹಿ ಯುವ ಪದಾಧಿಕಾರಿಗಳ ತಂಡವು ಮುಂಬರುವ ದಿನಗಳಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಇನ್ನಷ್ಟು ಜನಪರ ಕಾರ್ಯಗಳನ್ನು ಹಮ್ಮಿಕೊಳ್ಳುವ ದೃಢ ಸಂಕಲ್ಪ ಹೊಂದಿದೆ ಎಂದರು.ಈ ಫೌಂಡೇಶನ್ ಕಳೆದ 7 ವರ್ಷಗಳಿಂದ ಹಾಕತ್ತೂರು ಹಾಗೂ ಸುತ್ತಮುತ್ತಲಿನ ಅನೇಕ ನೊಂದ ಜೀವಗಳಿಗೆ ಆಸರೆಯಾಗುತ್ತಾ ಬಂದಿದೆ. ಸುಮಾರು 30ಕ್ಕೂ ಹೆಚ್ಚು ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವುದರ ಜೊತೆಗೆ, ಸಂಘಟನೆಯು ಶಿಕ್ಷಣ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡುತ್ತಿದೆ.

ಮಕ್ಕಳ ಭವಿಷ್ಯಕ್ಕೆ ಅಡಿಪಾಯ

ಬಡ ಹಾಗೂ ಅರ್ಹ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಅಗತ್ಯವಿರುವ ಆರ್ಥಿಕ ಸಹಕಾರ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳ ಭವಿಷ್ಯಕ್ಕೆ ಅಡಿಪಾಯ ಹಾಕುತ್ತಿದೆ. ಪ್ರತಿ ವರ್ಷ ಆಯೋಜಿಸುವ ಕ್ರೀಡಾಕೂಟಗಳಿಂದ ಬರುವ ಸಂಪೂರ್ಣ ಲಾಭಾಂಶವನ್ನು ಸಮಾಜದ ತುರ್ತು ಅಗತ್ಯವಿರುವ ಜನರ ಕಣ್ಣೀರು ಒರೆಸಲು ಬಳಸುತ್ತಾ ಬಂದಿರುವುದು ಈ ಸಂಘಟನೆಯ ವಿಶೇಷತೆಯಾಗಿದೆ. ದಾನಿಗಳ ಉದಾರ ಸಹಕಾರ ಹಾಗೂ ಕಾರ್ಯಕರ್ತರ ನಿಸ್ವಾರ್ಥ ಶ್ರಮದಿಂದ ಇಂದು ಈ ಸಂಸ್ಥೆ ಸಮಾಜದ ಭರವಸೆಯ ಆಶಾಕಿರಣವಾಗಿ ಬೆಳೆದು ನಿಂತಿದೆ ಎಂದರು.

ಪುತ್ತೂರು: ಅರ್ಹ ಫಲಾನುಭವಿಗಳಿಗೆ ಮೀನುಗಾರಿಕಾ ಸಲಕರಣೆಗಳ ವಿತರಣೆ



ಪುತ್ತೂರು: ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಮೀನು ಕೃಷಿಕರಿಗೆ ಮೀನುಗಾರಿಕಾ ಇಲಾಖೆಯಿಂದ ರೂ.10 ಸಾವಿರ ಮೌಲ್ಯದ ಮೀನುಗಾರಿಕಾ ಸಲಕರಣೆಗಳನ್ನು ಅರ್ಹ ಫಲಾನುಭವಿಗಳಿಗೆ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ವಿತರಿಸಿದರು.

ಈ ಸಂದರ್ಭ ಮುಡಾ ಅಧ್ಯಕ್ಷ ಅಮಳ ರಾಮಚಂದ್ರ ಉಪಸ್ಥಿತರಿದ್ದರು. ನಿಡ್ಪಳ್ಳಿಯ ಮೋಹಿನಿ, ಕೆದಂಬಾಡಿಯ ಕೆ. ಕಿರಣ್ ಕುಮಾರ್, ನರಿಮೊಗರಿನ ಬಿ. ಶಾಂತಪ್ಪ, ಬಡಗನ್ನೂರಿನ ಪದ್ಮಾವತಿ, ಪಡುವನ್ನೂರಿನ ಭವಾನಿ, ಒಳಮೊಗರಿನ ಚಂದ್ರಶೇಖರ ಮತ್ತು ಕೆಯ್ಯೂರಿನ ಕೃಷ್ಣಪ್ಪ ಕೆ. ಅವರಿಗೆ ಫಲಾನುಭವಿಗಳಾಗಿದ್ದಾರೆ.



ಕಿನ್ನಿಗೋಳಿ ಇಲ್ಲಿನ 'ಕಾವೇರಿ ಫ್ರೆಂಡ್ಸ್ ಸರ್ಕಲ್' ಹೊಸಕಾವೇರಿ ಇವರ ವತಿಯಿಂದ 26ನೇ ವರ್ಷದ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆಯು ನಡೆಯಿತು. ನೂರಾರು ಭಕ್ತರು ಭಾಗವಹಿಸಿದರು.



ಅಡ್ಯಾರ್‌ನ ವಿಜಯ ಗ್ರಾಮೀಣ ಅಭಿವೃದ್ಧಿ ಪ್ರತಿಷ್ಠಾನದ ಆಶ್ರಯದಲ್ಲಿ ಪಡೀಲ್ ಸರ್ವಶಕ್ತಿ ಮಹಿಳಾ ಮಂಡಳಿಯ ಸಹಯೋಗದೊಂದಿಗೆ 'ಆರಿ ಎಂಬ್ರಾಯಿಡರಿ' ತರಬೇತಿ ಶಿಬಿರ ಇತ್ತೀಚೆಗೆ ಶ್ರೀ ಬ್ರಾಹ್ಮರಿ ಸಭಾಂಗಣದಲ್ಲಿ ಉದ್ಘಾಟನೆಗೊಂಡಿತು. ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜ್ಯೋತಿರಾಜ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಬ್ಯಾಂಕ್ ಒಫ್ ಬರೋಡದ ಪುನೀತ್ ಶೆಟ್ಟಿ, ಸಂಪನ್ಮೂಲ ವ್ಯಕ್ತಿಯಾಗಿ ಅಂಜನಾ ಪ್ರಭಾಕರ್ ಮತ್ತು ತೇಜಾಕ್ಷಿ ಮೋಹನ್ ಇದ್ದರು. ಸುಮಾರು ಮೂವತ್ತು ಶಿಬಿರಾರ್ಥಿಗಳು ಭಾಗವಹಿಸಿದ್ದರು, ಶಕುಂತಲಾ ಎಸ್. ಗಟ್ಟಿ ಕಾರ್ಯಕ್ರಮ ನಿರೂಪಿಸಿದರು. ವನಿತಾ ಆಳ್ವ ವಂದಿಸಿದರು.



ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ರಾಮನವಮಿಯಂದು ನಡೆಯುವ ಜಾತ್ರಾ ಮಹೋತ್ಸವದ ಪೂರ್ವಭಾವಿಯಾಗಿ ಭಾನುವಾರ ಶ್ರೀಕ್ಷೇತ್ರದ ಶ್ರೀ ವ್ಯಾಸಮಹರ್ಷಿ ವೇದಪಾಠ ಶಾಲೆಯ ಒಳ ಪ್ರಾಂಗಣದಲ್ಲಿ ಅಂಕುರಾರೋಪಣೆಗಾಗಿ ಮೃತ್ತಿಕಾ ಹರಣ ನಡೆಯಿತು.ಈ ಸಂದರ್ಭ ಶ್ರೀ ಕ್ಷೇತ್ರದ ಅರ್ಚಕ ವೃಂದ ಆಡಳಿತ ಮಂಡಳಿ, ಭಕ್ತವೃಂದದವರು ಇದ್ದರು.

ಅಖಿಲ ಕೊಡವ ಸಮಾಜದ ಕಾರ್ಯಕಾರಿ ಮಂಡಳಿಯ ರಚನೆ



ಪೊನ್ನಂಪೇಟೆ: ಕೊಡಗು ಮತ್ತು ಕೊಡವ ಜನಾಂಗದ ಹಿತಾಸಕ್ತಿ ಕಾಪಾಡುವ, ಮಾರ್ಗ ದರ್ಶನ ನೀಡುವ ನಿಟ್ಟಿನಲ್ಲಿ 1942ರಲ್ಲಿ ಸ್ಥಾಪನೆಯಾದ ಕೊಡವ ಜನಾಂಗದ ತಕ್ಕಾಮೆ ಮೂಲಕ ಪ್ರಾಧಿನಿಧಿಕ ಸಂಸ್ಥೆಯಾದ ಅಖಿಲ ಕೊಡವ ಸಮಾಜದ ನೂತನ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಅವರ ಅಧ್ಯಕ್ಷತೆಯಲ್ಲಿ ನೂತನ ಆಡಳಿತ ಮಂಡಳಿಯನ್ನು ಅವಿರೋಧವಾಗಿ ರಚನೆ ಮಾಡಲಾಗಿದೆ.

ಈಗಾಗಲೇ ಜಿಲ್ಲೆಯ ವಿವಿಧ ಭಾಗಗಳಿಂದ ಆಯ್ಕೆಮಾಡಳಾದ ಕೇಂದ್ರ ಸಮಿತಿ 42 ಸದಸ್ಯರ ಸಭೆಯಲ್ಲಿ ಕಾರ್ಯಕಾರಿ ಮಂಡಳಿ ರಚನೆ ಮಾಡಲಾಗಿದೆ. ಅಧ್ಯಕ್ಷರಾಗಿ ದೇಶ ತಕ್ಕರಾದ ಪರದಂಡ ಸುಬ್ರಮಣಿ ಕಾವೇರಪ್ಪ ಅವರು ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಪೋರೆರ ಬಿದ್ದಪ್ಪ, ಗೌರವ ಕಾರ್ಯದರ್ಶಿಯಾಗಿ ಚೊಟ್ಟೆಂಡ ಪ್ರಭು ಸೋಮಯ್ಯ, ಜಂಟಿ ಕಾರ್ಯದರ್ಶಿಗಳಾಗಿ ಚೇಂದ್ರಿಮಾಡ ಡಿ. ಪೃಥ್ವಿ ಮತ್ತು ಮನ್ನೇರ ಸರಸ್ವತಿ ರಮೇಶ್, ಖಜಾಂಚಿಯಾಗಿ ಕಾಯಪಂಡ ಸುನಿಲ್, ಕಾನೂನು ಸಲಹೆಗಾರರಾಗಿ ಕುಟ್ಟಂಡ ವಿಜಯ ಉತ್ತಪ್ಪ ಅವರು ಆಯ್ಕೆಯಾಗಿದ್ದಾರೆ. ಶನಿವಾರ ವಿರಾಜಪೇಟೆ ಕಾವೇರಿ ಕಲ್ಯಾಣ ಮಂಟಪದಲ್ಲಿ ನಡೆದ ಸಭೆಯಲ್ಲಿ ಆಡಳಿತ ಮಂಡಳಿಯನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಾಸ್ತಾನ ಆರೋಗ್ಯ ಕೇಂದ್ರದಲ್ಲಿ ಎ.ಜೆ ಆಸ್ಪತ್ರೆ ಸಹಭಾಗಿತ್ವದಡಿ ಆರೋಗ್ಯ ಶಿಬಿರ



ಕೋಟ: ಆರೋಗ್ಯವಂತ ಸಮಾಜದಲ್ಲಿ ವೈದ್ಯರ ಸೇವೆ ಬಹುಮುಖ್ಯವಾದದ್ದು, ಅದೇ ರೀತಿ ಆರೋಗ್ಯ ಶಿಬಿರಗಳು ಅಷ್ಟೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಸಾಸ್ತಾನದ ಸಾಮಾಜಿಕ ಕಾರ್ಯಕರ್ತ ಐರೋಡಿ ವಿಠ್ಠಲ್ ಪೂಜಾರಿ ಹೇಳಿದರು.

ಭಾನುವಾರ ಪ್ರಾಥಮಿಕ ಆರೋಗ್ಯ ಕೇಂದ್ರ ಸಾಸ್ತಾನ ಇಲ್ಲಿ ಎ.ಜೆ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕುಂಟಿಕಾನ, ಮಂಗಳೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಸಾಸ್ತಾನ, ರೋಟರಿ ಕ್ಲಬ್ ಸಾಸ್ತಾನ – ಹಂಗಾರಕಟ್ಟೆ ಇವರ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಕಳಕಳಿ

ಪ್ರಸಿದ್ಧ ಆಸ್ಪತ್ರೆಗಳು ಆರೋಗ್ಯ ಶಿಬಿರಗಳನ್ನು ಆಯೋಜಿಸುವ ಮೂಲಕ ಸಮಾಜದ ಕಳಕಳಿಯನ್ನು ವ್ಯಕ್ತಪಡಿಸುವ ಕೇಂದ್ರಗಳಾಗಿ ರೂಪುಗೊಂಡಿವೆ ಇದರಲ್ಲಿ ಎಜೆ ಆಸ್ಪತ್ರೆ ಬಹುಮುಖ್ಯ ಪಾತ್ರ ವಹಿಸಿದೆ ಎಂದರು.

ರೋಟರಿ ಕ್ಲಬ್ ಹಂಗಾರಕಟ್ಟೆ ಸಾಸ್ತಾನ ಅಧ್ಯಕ್ಷೆ ಜ್ಯೋತಿ ಉದಯ್ ಕುಮಾರ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಮುಖ್ಯ ಅಭ್ಯಾಗತರಾಗಿ ಎ.ಜೆ ಆಸ್ಪತ್ರೆ ಮಂಗಳೂರು ಇದರ ಹೃದ್ರೋಗ ತಜ್ಞ ಡಾ. ಅಶೋಕ್ ಉಪಾಧ್ಯಾಯ, ಎಜೆ ಆಸ್ಪತ್ರೆಯ ಪ್ರಮುಖ ವೈದ್ಯರಾದ ಆರತಿ ಎಸ್ ರಾಜ್, ನಿರೀಕ್ಷಾ, ನಿಖಿಲ್ ಉಪಸ್ಥಿತರಿದ್ದರು.

ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ರಾಘವೇಂದ್ರ ರಾವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮವನ್ನು ಫಾರ್ಮಸಿ ಅಧಿಕಾರಿ ಸೀಮಾ ಮ್ಯಾಥ್ಯು ನಿರೂಪಿಸಿದರು. ರೋಟರಿ ಕಾರ್ಯದರ್ಶಿ ಮುರುಳಿಧರ ನಾಯರಿ ವಂದಿಸಿದರು.

ರೇಮಂಡ್ ಡಿ'ಕುನ್ಹಾ ಅವರಿಗೆ ಹುಟ್ಟೂರ ಸನ್ಮಾನ ಕಾರ್ಯಕ್ರಮದಲ್ಲಿ ವಿವೇಕ್ ಆಳ್ವ ಸಲಹೆ

ಹೊಸ ವಿಚಾರ ಕಲಿಯುವ ಆಸಕ್ತಿ ಯುವಕರಲ್ಲಿ ಬೆಳೆಯಲಿ

ಮೂಡುಬಿದಿರೆ: ಪತ್ರಕರ್ತ, ಸಾಹಿತಿ ರೇಮಂಡ್ ಡಿ'ಕುನ್ಹಾ ತಾಕೋಡೆ ಅವರ 22ನೇ ಪುಸ್ತಕ ಬೊಳ್ಳಿಲು ಬಿಡುಗಡೆ ಹಾಗೂ ಹುಟ್ಟೂರಿನ ಸನ್ಮಾನ, ಕವಿಗೋಷ್ಠಿ ಕಾರ್ಯಕ್ರಮ ಮೂಡುಬಿದಿರೆಯ ಸಮಾಜಮಂದಿರದಲ್ಲಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಭಾನುವಾರ ನಡೆಯಿತು.

ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಅವರು, ಇಂದಿನ ಯುವ ಪೀಳಿಗೆಗೆ ಯಾವ ವಿಚಾರದಲ್ಲೂ ಸಹನೆ, ಆಸಕ್ತಿಗಳು ಇಲ್ಲವಾಗಿದೆ. ಭಾಷೆಯ ಬಗೆಗಿನ ಪ್ರೀತಿ ಕಡಿಮೆಯಾಗುತ್ತಿದೆ. ಹೊಸ ವಿಚಾರಗಳನ್ನು ಕಲಿಯುವ ಆಸಕ್ತಿ ಯುವಕರಲ್ಲಿ ಬೆಳೆಯಬೇಕು, ಕೇಳುವ ಮನಸ್ಸು ಇರಬೇಕು ಎಂದು ಹೇಳಿದರು.



ಇಂದು ಎ.ಐ ತಂತ್ರಜ್ಞಾನದ ಆವಿಷ್ಕಾರವಾಗಿದ್ದರೂ, ಇಂತಹ ಸಾಹಿತ್ಯ ರಚನೆಗಳು ಪರಿಣಾಮಕಾರಿಯಾಗಲು ಸಾಧ್ಯವೇ ಇಲ್ಲ ಎಂದ ವಿವೇಕ್ ಆಳ್ವ ಯುವಜನತೆ ಸಾಹಿತ್ಯಕ ಕಾರ್ಯಕ್ರಮಗಳಲ್ಲಿ, ಭಾಷಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಕರೆನೀಡಿದರು.

ಇದೇ ಸಂದರ್ಭದಲ್ಲಿ ರೇಮಂಡ್ ತಾಕೋಡೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ತುಳುಕೂಟ ರಿ. ಮೂಡುಬಿದಿರೆ, ಕಾರ್ಯನಿರತ ಪತ್ರಕರ್ತರ ಸಂಘ ಮೂಡುಬಿದಿರೆ, ಪ್ರೆಸ್ ಕ್ಲಬ್ ಮೂಡುಬಿದಿರೆ, ಜೆಸಿಐ ಮೂಡುಬಿದಿರೆ ತ್ರಿಭುವನ್, ಸೀನಿಯರ್ ಛೇಂಬರ್ ಇಂಟರ್ ನ್ಯಾಷನಲ್ ಮೂಡುಬಿದಿರೆ, ರೋಟರಿ ಕ್ಲಬ್ ಆಫ್ ಟೆಂಪಲ್ ಟೌನ್ ಮೂಡುಬಿದಿರೆ , ಅಭಿಮಾನಿ ಬಳಗ ತಾಕೊಡೆ, ಅಭಿಮಾನಿ ರಿಕ್ಷಾ ಚಾಲಕ ಮಾಲಕರ ಬಳಗ ಮೂಡುಬಿದಿರೆ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದರು.

ಜೇಸಿ ಅಧ್ಯಕ್ಷ ಸುಧಾಕರ ಶೆಟ್ಟಿ, ರೋಟರಿ ಅಧ್ಯಕ್ಷ ಹರೀಶ್ ಎಂ.ಕೆ, ಪತ್ರಕರ್ತರ ಸಂಘದ ಅಧ್ಯಕ್ಷ ನವೀನ್ ಸಾಲ್ಯಾನ್, ಪ್ರೆಸ್ ಕ್ಲಬ್ ಅಧ್ಯಕ್ಷ ಸೀತಾರಾಮ ಆಚಾರ್ಯ, ತುಳುಕೂಟ ಅಧ್ಯಕ್ಷ ಧನಕೀರ್ತಿ ಬಲಿಪ, ಚಂದ್ರಹಾಸ ದೇವಾಡಿಗ, ರಾಜೇಶ್ ಸುವರ್ಣ, ಆಲ್ಬರ್ಟ್, ಸದಾನಂದ ನಾರಾವಿ ಇದ್ದರು. ಗೀತಾ ಲಕ್ಷ್ಮೀಶ್ ಶೆಟ್ಟಿ ಕೃತಿ ಪರಿಚಯ ಮಾಡಿದರು. ಸದಾನಂದ ನಾರಾವಿ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು.

ಮಾ.26: ನೂತನ ರಾಜಗೋಪುರ ಸಮರ್ಪಣೆ

ಬೈಂದೂರು: ಹೆರಂಜಾಲು ಗ್ರಾಮದ ಇತಿಹಾಸ ಹಾಗೂ ಪೌರಾಣಿಕ ಪ್ರಸಿದ್ಧ ಶ್ರೀ ಗುಡೇ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ನೂತನ ರಾಜಗೋಪುರ ನಿರ್ಮಿಸಲಾಗಿದ್ದು, ಸಮರ್ಪಣಾ ಕಾರ್ಯಕ್ರಮ ಮಾ.23ರಿಂದ 27ರವರೆಗೆ ನಡೆಯಲಿದೆ ಎಂದು ದೇವಳದ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ, ರಾಜಗೋಪುರ ಸೇವಾಕರ್ತ ಎಚ್. ಜಯಶೀಲ ಎನ್. ಶೆಟ್ಟಿ ಹೇಳಿದರು.

ಭಾನುವಾರ ದೇವಳದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಮಾ.23ರಂದು ಹೊರೆ ಕಾಣಿಕೆ ಸಮರ್ಪಣೆ. ಮಾ.24ರಂದು ಅತಿರುದ್ರ ಮಹಾಯಾಗದ ಪ್ರಧಾನ ಸಂಕಲ್ಪ, ರುದ್ರಪಠಣ ಆರಂಭ. ಮಾ.25ರಂದು ಬೆಳಿಗೆ ಧ್ವಜಪ್ರತಿಷ್ಠೆ, ಮಹಾಬಲಿ ಪೀಠ, ಕ್ಷೇತ್ರಪಾಲ, ಸ್ವರ್ಣಶಿಖರ ಪ್ರತಿಷ್ಠೆ, ಕಲಾಹೋಮ ಮಹಾಪೂಜೆ, ಸಂಜೆ ರಂಗಪೂಜೆ, 108 ಕಲಶ ಸ್ಥಾಪನೆ, ನಂತರ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಮಂಗಳೂರು ತಂಡದವರಿಂದ ಕೊಲ್ಲೂರು ಶ್ರೀ ಮೂಕಾಂಬಿಕಾ ಒಂದು ನೃತ್ಯಗಾಥೆ ಹಾಗೂ ನೃತ್ಯ ಕಾರ್ಯಕ್ರಮಗಳು ನಡೆಯಲಿದೆ ಎಂದರು. ಮಾ.26ರಂದು ಬೆಳಿಗ್ಗೆ 11.32ಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ನೂತನ ಮಹಾರಾಜಗೋಪುರವನ್ನು ಲೋಕಾರ್ಪಣೆ ಮಾಡಲಿದ್ದಾರೆ. ರಾಜ್ಯ ಮುಜರಾಯಿ ಸಚಿವ ಆರ್. ರಾಮಲಿಂಗ ರೆಡ್ಡಿ ಅವರು ನೂತನ ಹೆಬ್ಬಾಗಿಲು ಸಮರ್ಪಣೆ ಮಾಡಲಿದ್ದಾರೆ. ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ದೇವಳದ ಧ್ವಜಸ್ತಂಭ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಬಾಲಚಂದ್ರ ಜಾರಕಿಹೊಳಿ ಅವರು ಯಾಗಶಾಲೆ ಸಮರ್ಪಣೆ ಮಾಡಲಿದ್ದಾರೆ. ನಂತರ ಶಾಸಕ ಗುರುರಾಜ್ ಗಂಟಿಹೊಳೆ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು, ಪ್ರಮುಖರು ಭಾಗವಹಿಸಲಿದ್ದಾರೆ ಎಂದರು. ಮಾ.27 ರಂದು ಬೆಳಿಗ್ಗೆ ಶಾಸಕ ಗುರುರಾಜ್ ಗಂಟಿಹೊಳೆ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಅಂದು ನಂತರ ಸಾಲಿಗ್ರಾಮ ಮೇಳದವರಿಂದ ನಂದೀಶ್ ಶೆಟ್ಟಿ, ಬಿಲ್ಯಾಡಿ ಅವರ ರಚನೆಯ ಗುಡೇ ಮಹಾಲಿಂಗೇಶ್ವರ ಮಹಾತ್ಮೆ ನೂತನ ಯಕ್ಷಗಾನ ಪ್ರಸಂಗದ ಪ್ರದರ್ಶನ ನಡೆಯಲಿದೆ ಎಂದರು. ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಪದ್ಮನಾಭ ಮೇರ್ಟ್, ಖಜಾಂಜಿ ಹೆಚ್. ವಿಜಯ್ ಶೆಟ್ಟಿ, ಅರ್ಚಕ ಮಂಜುನಾಥ ಅಡಿಗ, ಬಟ್ನಾಡಿ ಅಣ್ಣಪ್ಪ ಶೆಟ್ಟಿ, ಕಿರಣ್ ಶೆಟ್ಟಿ ಸುಧಾಕರ ಶೆಟ್ಟಿ, ಜಯಶೀಲ ಶೆಟ್ಟಿ, ಸುಭಾಷ್ಚಂದ್ರ ಶೆಟ್ಟಿ ಇದ್ದರು.

ಸುತ್ತ ಮುತ್ತ

ಕಂಬಳ ಫೋಟೋ ಸ್ಪರ್ಧೆ: ನವೀನ್ ಪ್ರಥಮ

ಬಂಟ್ವಾಳ: ಸೌತ್ ಕೆನರಾ ಫೋಟೋ ಗ್ರಾಫರ್ಸ್ ಅಸೋಸಿಯೇಷನ್ ಬಂಟ್ವಾಳ ವತಿಯಿಂದ ನಾವೂರು ಗ್ರಾಮದ ಕೋಡಿಬೈಲ್‌ನಲ್ಲಿ ಇತ್ತೀಚೆಗೆ ನಡೆದ ಮುಡೂರು– ಪಡೂರು ಕಂಬಳದಲ್ಲಿ ಜಿಲ್ಲಾ ಮಟ್ಟದ ಫೋಟೋ ಸ್ಪರ್ಧೆಯಲ್ಲಿ ನವೀನ್ ದೇವಾಡಿಗ ಬಂಟ್ವಾಳ ಪ್ರಥಮ ಸ್ಥಾನ ಪಡೆದಿದ್ದಾರೆ. ಸ್ಟೀವನ್ ಪಾಯಸ್ ಮಂಗಳೂರು ದ್ವಿತೀಯ, ಚಂದ್ರ ಕಲ್ಮಲೆ ತೃತೀಯ ಬಹುಮಾನ ಗಳಿಸಿದ್ದಾರೆ. ಹಿರಿಯ ಛಾಯಾಗ್ರಾಹಕ ಆಸ್ಟ್ರೋಮೋಹನ್ ಉಡುಪಿ ಅವರು ತೀರ್ಪುಗಾರರಾಗಿದ್ದರು.

ಸರಕಾರದಿಂದ ಕೊಡಗು ಜಿಲ್ಲೆಗೆ ಹೆಚ್ಚಿನ ಪ್ರಾಧಾನ್ಯತೆ: ಎ.ಎಸ್.ಪೊನ್ನಣ್ಣ

ಮಡಿಕೇರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಳೆದ ಮೂರು ವರ್ಷದಲ್ಲಿ ಕೊಡಗು ಜಿಲ್ಲೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದೆ



ಎಂದು ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ಅವರು ತಿಳಿಸಿದರು.

ನಗರದ ಸುದರ್ಶನ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿವಾಸಿ ಜನರ ಅಭಿವೃದ್ಧಿಗಾಗಿ ಹಲವು ವರ್ಷಗಳಿಂದ ಕೇಳಿ ಬರುತ್ತಿದ್ದ 'ಆದಿವಾಸಿಗಳ ಅಭಿವೃದ್ಧಿ ನಿಗಮ 'ಬಜೆಟ್'ನಲ್ಲಿ ಪ್ರಕಟಿಸುವ ಮೂಲಕ ಸರ್ಕಾರ ಈ ಜನರ ಧ್ವನಿಗೆ ಸ್ಪಂದಿಸಿದೆ. ಹಾಗೆಯೇ ಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಯನ್ನು ಘೋಷಿಸಲಾಗಿದೆ ಎಂದರು.

ವೀರಾಜಪೇಟೆಯ ವಿ.ಬಾಡಗ ಗ್ರಾಮದಲ್ಲಿ 11 ಎಕರೆ ಪ್ರದೇಶದಲ್ಲಿ 'ಕ್ರೀಡಾ ತರಬೇತಿ ಕೇಂದ್ರ' ಆರಂಭವಾಗಲಿದೆ. ಇದರಿಂದ ಜಿಲ್ಲೆಯ ವಿದ್ಯಾರ್ಥಿಗಳು ಒಲಂಪಿಕ್ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಏ.2-14: ಶಿರೂರು ಅಳ್ವೆಗದ್ದೆ ದೇವಳದ ಬ್ರಹ್ಮಕಲಶೋತ್ಸವ

ಬೈಂದೂರು: ಶಿರೂರು ಅಳ್ವೆಗದ್ದೆಯ ಐತಿಹಾಸಿಕ ಹಿನ್ನೆಲೆಯ ಕಾರಣಿಕ ಶ್ರೀ ಮಹಾಗಣಪತಿ ದೇವಸ್ಥಾನ ನವನಿರ್ಮಾಣಗೊಂಡಿದ್ದು, ಇದರ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವ ಏ.2ರಿಂದ 14ರವರೆಗೆ ನಡೆಯಲಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ



ಧರ್ಮಾಧಿಕಾರಿ ಡಾ. ಡಿ ವಿರೇಂದ್ರ ಹೆಗ್ಗಡೆ ಯವರ ಮಾರ್ಗದರ್ಶನದಲ್ಲಿ ಡಾ. ಜಿ. ಶಂಕರ್ ನೇತೃತ್ವದಲ್ಲಿ ವೇದಮೂರ್ತಿ ರಾಮಚಂದ್ರ ಪರಂಭಟ್ಟ ಶಿರಾಲಿ ತಂತ್ರಿವರ್ಯರ ಪೌರೋಹಿತ್ಯದಲ್ಲಿ ಧಾರ್ಮಿಕ ಕಾರ್ಯಗಳು ನಡೆಯಲಿದೆ.

ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀ ವಾಗೀಶ್ವರಿ ಲಕ್ಷ್ಮೀನೃಸಿಂಹ ಭಾಗವತ ಮಹಾಪೀಠಂ ಪುಣ್ಯಸಂಗಮ ಕ್ಷೇತ್ರ ಶ್ರೀ ಮಠ ಬಾಳೆಕುದ್ರು ಹಂಗಾರಕಟ್ಟೆ ಶ್ರೀ ವಾಸುದೇವ ಸದಾಶಿವಾಶ್ರಮ ಶ್ರೀಪಾದಂಗಳವರು, ಜಗದ್ಗುರು ಆದಿ ಶಂಕರಾಚಾರ್ಯ ಮಹಾಸಂಸ್ಥಾನಂ ಶ್ರೀಮದ್ ಎಡನೀರು ಮಠ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಆಶೀರ್ವಚನ ನೀಡಲಿದ್ದಾರೆ. ಪ್ರತಿದಿನ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅನ್ನಸಂತರ್ಪಣೆ ನಡೆಯಲಿದ್ದು, ವಿವಿಧ ಧಾರ್ಮಿಕ ಮುಖಂಡರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಗಡಿಭಾಗದಲ್ಲಿರುವ ಸುವಿಶಾಲ ಶಿರೂರು ಗ್ರಾಮದಲ್ಲಿರುವ ಪುರಾತನ ಐತಿಹ್ಯವಿರುವ ಧಾರ್ಮಿಕ ಶ್ರದ್ಧಾಕೇಂದ್ರ, ಈ ಊರಿನ ಹೆಸರೇ ಹೇಳುವಂತೆ ಇದು ಸಮುದ್ರದ 'ಅಳಿವೆ' ಪ್ರದೇಶದಲ್ಲಿರುವ ಗದ್ದೆಯಾದ್ದರಿಂದ ಈ ಊರಿಗೆ ಅಳ್ವೆಗದ್ದೆ ಎಂಬುದು ಅನ್ವರ್ಥನಾಮವೂ ಹೌದು. ಇಲ್ಲಿನ ಅಧಿದೇವತೆಯಾದ ಶ್ರೀ ಮಹಾಗಣಪತಿ, ಆರಾಧ್ಯ ಮಹಾಗಣಪತಿಯು ಅಳ್ವೆಗದ್ದೆಯಲ್ಲಿ ನೆಲೆಸಿದ ಹಿನ್ನೆಲೆಯು ಅತ್ಯಂತ ಕೌತುಕದ ಸಂಗತಿ. ಸರಿ ಸುಮಾರು ಎಂಟುನೂರೈವತ್ತು ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಕಾಶಿಯಿಂದ ಗಣಪತಿ ವಿಗ್ರಹವನ್ನು ತಂದು ಪೂಜಿಸಲು ಪ್ರಾರಂಭಿಸಿದರೆಂಬ ಮಾತು ಪ್ರಚಲಿತದಲ್ಲಿದೆ. ಅಳ್ವೆಗದ್ದೆ ಶ್ರೀ ಮಹಾಗಣಪತಿ ದೇವಸ್ಥಾನದ ಗೌರವಾಧ್ಯಕ್ಷ ನಾಡೋಜ ಡಾ. ಜಿ. ಶಂಕರ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮ ಎನ್. ಅಳ್ವೆಗದ್ದೆ, ದೇವಳದ ಅಧ್ಯಕ್ಷ ಗಣಪತಿ ಎಸ್. ಮೊಗವೀರ ಹಾಗೂ ಸಮಿತಿಯ ಸರ್ವ ಸದಸ್ಯರು ಉತ್ಸವದ ತಯಾರಿಯಲ್ಲಿ ತೊಡಗಿದ್ದಾರೆ.

ನಟ, ಕೊಡವ ಧಾರಾವಾಹಿಗಳ ನಿರ್ದೇಶಕ ದಿ.ಎ.ಟಿ. ರಘು ಅವರ ಮೊದಲ ವರ್ಷದ ಪುಣ್ಯ ಸ್ಮರಣೆ

'ಹೆಬ್ಬುಲಿ' ಪುಸ್ತಕದ ಬಿಡುಗಡೆ, ಕವನ ವಾಚನ, ಪುಷ್ಪ ನಮನ

ಮಡಿಕೇರಿ: ಕೊಡಗು ಕಲಾವಿದರ ಸಂಘದ ವತಿಯಿಂದ ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ, ನಟ ಹಾಗೂ ಕೊಡವ ಧಾರಾವಾಹಿಗಳ ನಿರ್ದೇಶಕ ದಿ.ಎ.ಟಿ. ರಘು ಅವರ ಮೊದಲ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮ ವಿರಾಜಪೇಟೆಯಲ್ಲಿ ನೆರವೇರಿತು.



ನಗರದ ಕೆ.ಕೆ.ಗ್ರೂಪ್ಸ್ ಸಭಾಂಗಣದಲ್ಲಿ ಕೊಡಗು ಕಲಾವಿದರ ಸಂಘದ ಅಧ್ಯಕ್ಷ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿನಿಮಾ ತಂತ್ರಜ್ಞ ಸುರೇಶ್ ಪಿ. ಹುಲಿಕೇರಿ ಅವರು ರಚಿಸಿರುವ ಎ.ಟಿ.ರಘು ಅವರ ಸಿನಿ ಪಯಣದ 'ಹೆಬ್ಬುಲಿ' ಎಂಬ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಲೇಖಕಿ ಉಳುವಂಗಡ ಕಾವೇರಿ ಉದಯ ಅವರು ರಚಿಸಿರುವ ಎ.ಟಿ.ರಘು ಸ್ಮರಣಾರ್ಥ ಸಾಹಿತ್ಯವನ್ನು ಟಿ.ಡಿ.ಮೋಹನ್ ಗಾಯನ ರೂಪದಲ್ಲಿ ಪ್ರಸ್ತುತ ಪಡಿಸಿದರು. ತಂದೆಯ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಎ.ಟಿ.ರಘು ಅವರ ಪುತ್ರಿ ಬಯವಂಡ ಬಿನು ಸಚಿನ್, ಕೊಡಗು ಕಲಾವಿದರ ಸಂಘದ ಕಲಾವಿದರಿಂದ ದೊರೆತ ಪ್ರೀತಿ, ಗೌರವಕ್ಕೆ ನಾನು ಸದಾ ಚಿರಋಣಿಯಾಗಿರುತ್ತೇನೆ ಎಂದು ಹೇಳಿದರು. ಸಿನಿಮಾ ತಂತ್ರಜ್ಞ ಸುರೇಶ್ ಪಿ.ಹುಲಿಕೇರಿ ಮಾತನಾಡಿ, ಹಿರಿಯರಾದ ಎ.ಟಿ.ರಘು ಅವರೊಂದಿಗಿನ ಕಳೆದ 12 ವರ್ಷಗಳ ಒಡನಾಟ ಅವಿಸ್ಮರಣೀಯವೆಂದರು.

ಕಲಾವಿದರಾದ ನೆರವಂಡ ಉಮೇಶ್, ಪುಗ್ಗೇರ ಆಕಾಶ್, ಅಲ್ಲಾರಂಡ ವಿಠಲ್ ನಂಜಪ್ಪ ಚೆರುವಾಳಂಡ ಸುಜಲ ನಾಣಯ್ಯ ಹಾಗೂ ತಾತಂಡ ಪ್ರಭಾ ನಾಣಯ್ಯ ಅವರು ಎ.ಟಿ.ರಘು ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ನೆನಪಿಸಿಕೊಂಡರು. ಕಾರ್ಯಕ್ರಮದಲ್ಲಿ ಉಳುವಂಗಡ ಕಾವೇರಿ ಉದಯ್ ಕವನ ವಾಚನ ಮಾಡಿದರು. ತಾತಂಡ ಶ್ರೇಯ ಸೋಮಣ್ಣ ಅವರು ಭರತನಾಟ್ಯದ ಮೂಲಕ ಗಮನ ಸೆಳೆದರು.

ಅಧ್ಯಕ್ಷರಾಗಿ ವಿಠಲ್ ನಾಣಯ್ಯ ಆಯ್ಕೆ

ಇದೇ ಸಂದರ್ಭ ಕೊಡಗು ಕಲಾವಿದರ ಸಂಘವನ್ನು ಪುನರ್ ರಚಿಸಲಾಗಿದ್ದು, ನೂತನ ಅಧ್ಯಕ್ಷರಾಗಿ ವಾಂಚಿರ ವಿಠಲ್ ನಾಣಯ್ಯ, ಕಾರ್ಯದರ್ಶಿಯಾಗಿ ಕಬ್ಬಚ್ಚಿರ ರಶ್ಮಿ ಕಾರ್ಯಪ್ಪ ಹಾಗೂ ಸಹ ಕಾರ್ಯದರ್ಶಿಯಾಗಿ ಮಲ್ಲಮಾಡ ಶ್ಯಾಮಲ ಸುನಿಲ್ ಅವಿರೋಧವಾಗಿ ಆಯ್ಕೆಯಾದರು. ಇತರ ಪದಾಧಿಕಾರಿಗಳನ್ನು ಮುಂದಿನ ದಿನಗಳಲ್ಲಿ ಆಯ್ಕೆ ಮಾಡಲಾಗುವುದು ಎಂದು ಪ್ರಮುಖರು ತಿಳಿಸಿದರು.

ಕಾರ್ಯದರ್ಶಿ ಈರಮಂಡ ಹರಿಣಿ ವಿಜಯ್ ಅವರು ಕಳೆದ ಸಭೆಯ ವರದಿಯನ್ನು ಮಂಡಿಸಿದರು. ನಿರ್ದೇಶಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್, ಪುಗ್ಗೇರ ಆಕಾಶ್, ಸೋಮಯಂಡ ಎಸ್.ಬೆಳ್ಯಪ್ಪ ಅನಂತಶಯನ ಬಿ.ಜಿ, ಚೋಕಂಡ ನಾಜಿರ್, ಬಿದ್ದಂಡ ಉತಮ್ ಪೊನ್ನಪ್ಪ, ಅಚೆಯಡ ಗಗನ್ ಗಣಪತಿ, ಈರಮಂಡ ವಿಜಯ್, ನಾಪಂಡ ಆಶಾ ರವಿ, ಪೆಮ್ಮಂಡ ಉಷಾ ಗಣೇಶ್, ಸಂಕೇತ್ ಶಿವಪ್ಪ, ಜಾದೂಗಾರ್ ವಿಕ್ರಂ ಶೆಟ್ಟಿ, ಕಾಳಮಂಡ ಜಗತ್, ಕಾಳಮಂಡ ನಯನ, ಬಾಳೆಯಡ ಪ್ರತೀಶ್ ಪೂವಯ್ಯ, ತಾತಂಡ ನೈನಾ ಸೋಮಣ್ಣ ಸೇರಿದಂತೆ ಅನೇಕ ಕಲಾವಿದ ಸದಸ್ಯರುಗಳು ಉಪಸ್ಥಿತರಿದ್ದರು.

ಟಿ.ಡಿ.ಮೋಹನ್, ಕಬ್ಬಚ್ಚಿರ ರಶ್ಮಿ ಕಾರ್ಯಪ್ಪ, ಕೊಟ್ರಂಡ ಶ್ರೀಕಾಂತ್ ಪೂವಣ್ಣ, ಕ್ಯಾ. ಬಿದ್ದಂಡ ನಾಣಿ ದೇವಯ್ಯ, ಎಚ್.ಬಿ.ಗೋಪಾಲ್ ಅವರಿಂದ ಹಾಡು ಹಾಗೂ ಅಂಡಮಾಡ ಪವನ್ ಅಯ್ಯಪ್ಪ ಅವರಿಂದ ನಡೆದ ನೃತ್ಯ ಪ್ರದರ್ಶನ ಗಮನ ಸೆಳೆಯಿತು. ಬಯವಂಡ ಬೀನಾ ಸಚಿನ್ ಪ್ರಾರ್ಥಿಸಿ ಟಿ.ಡಿ.ಮೋಹನ್ ಸ್ವಾಗತಿಸಿ, ಕಬ್ಬಚ್ಚಿರ ರಶ್ಮಿ ಕಾರ್ಯಪ್ಪ ನಿರೂಪಿಸಿ, ತಾತಂಡ ಪ್ರಭಾ ನಾಣಯ್ಯ ವಂದಿಸಿದರು. 'ಹೆಬ್ಬುಲಿ' ಪುಸ್ತಕಕ್ಕೆ ಕಲಾವಿದ ಅಲ್ಲಾರಂಡ ವಿಠಲ್ ನಂಜಪ್ಪ ಅವರು ಸಹಕಾರ ನೀಡಿದ್ದಾರೆ.

ವಿಶ್ವ ಅರಣ್ಯ ದಿನಾಚರಣೆಯ ಪ್ರಯುಕ್ತ ಬೃಹತ್ ಸ್ವಚ್ಛತಾ ಅಭಿಯಾನ

ಪೆರ್ನಾಜೆಯಿಂದ ಪಂಜಿಗುಂಡಿಯವರೆಗೆ ಸ್ವಚ್ಛತೆ

ಸುಳ್ಯ: ಕರ್ನಾಟಕ ಅರಣ್ಯ ಇಲಾಖೆ ಪುತ್ತೂರು ವಲಯ, ಸ್ಕೌಟ್ ಗೈಡ್ ಯುವಧ್ವನಿ, ಯುವಕ ಮಂಡಲ ಕನಕಮಜಲು, ಗ್ರಾಮ ಪಂಚಾಯತ್ ಕನಕಮಜಲು ಇವುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಅರಣ್ಯ ದಿನಾಚರಣೆ ಪ್ರಯುಕ್ತ ಸ್ವಚ್ಛತಾ ಅಭಿಯಾನ ಪೆರ್ನಾಜೆಯಿಂದ ಪಂಜಿಗುಂಡಿಯವರೆಗೆ ಶನಿವಾರ ನಡೆಯಿತು.



ಪೆರ್ನಾಜೆಯಿಂದ ಆನೆಗುಂಡಿ ಮೂಲಕ ಪಂಜಿಗುಂಡಿಯವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಕಸಗಳನ್ನು ಹೆಕ್ಕಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಈ ಸಂಧರ್ಭದಲ್ಲಿ ಪುತ್ತೂರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಬ್ಬಯ್ಯ ನಾಯ್ಕ, ವಲಯ ಅರಣ್ಯಾಧಿಕಾರಿ ಕಿರಣ್ ಬಿ.ಎಂ, ಜಾಲ್ಸೂರು ಶಾಖೆಯ ಉಪ ವಲಯಾರಣ್ಯಾಧಿಕಾರಿ ರಂಜಿತಾ ಪಿ., ಕನಕಮಜಲು ಗಸ್ತು ಅರಣ್ಯ ಪಾಲಕ ಸನತ್‌ಕುಮಾರ್, ವಿವಿಧ ಭಾಗದ ಉಪವಲಯಾರಣ್ಯಾಧಿಕಾರಿಗಳು, ಗಸ್ತು ಅರಣ್ಯ ಪಾಲಕರು, ಅರಣ್ಯ ಇಲಾಖೆಯ ಸಿಬ್ಬಂದಿ, ಕನಕಮಜಲು ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಶ್ರೀಧರ್ ಕುತ್ಯಾಳ, ಶಾರದಾ ಉಗ್ಗಮೂಲೆ, ಮಾಜಿ ಸದಸ್ಯ ಜಗನ್ನಾಥ ಮಾಣಿಮಜಲು, ಅಡ್ಕಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ವಿಜಯಕುಮಾರ್ ನರಿಯೂರು,

> ರಸ್ತೆ ಇಕ್ಕೆಲಗಳಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಬೇಕಿದೆ. ಇಲ್ಲಿ ತ್ಯಾಜ್ಯ ರಾಶಿ ಹಾಕಿದರೆ ಪರಿಸರ ಹಾಗೂ ಪ್ರವಾಸೋದ್ಯಮಕ್ಕೆ ಹೊಡೆತ ಬೀಳಲಿದೆ. ಅಲ್ಲದೇ ಪ್ರವಾಸಿಗರಿಗೂ ಇರಿಸು ಮುರಿಸು ಉಂಟು ಮಾಡಲಿದೆ. ಈ ಬಗ್ಗೆ ಜನರಲ್ಲಿಯೇ ಜಾಗೃತಿ ಮೂಡಬೇಕಿದೆ. ಈ ಬಗ್ಗೆ ಎಲ್ಲಾ ಸ್ಥಳೀಯಾಡಳಿತ ಕ್ರಮ ಕೈಗೊಳ್ಳಬೇಕು.
>
> ● ಸುಬ್ಬಯ್ಯ ನಾಯ್ಕ, ಪುತ್ತೂರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

ಕನಕಮಜಲು ಯುವಕ ಮಂಡಲದ ಅಧ್ಯಕ್ಷ ಅಶ್ವಥ್ ಅಡ್ಕಾರು, ಸ್ಕೌಟ್ ಗೈಡ್ ಯುವ ಧ್ವನಿ ಅಧ್ಯಕ್ಷ ಭರತ್ ನಾಯಕ್, ಭಾರತ್ ಸ್ಕೌಟ್ ಗೈಡ್ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷ ರಾಜು ಪಂಡಿತ್, ಕಾರ್ಯದರ್ಶಿ ಪ್ರೇಮಲತಾ, ಕೋಶಾಧಿಕಾರಿ ರೇವತಿ, ಸ್ಕೌಟ್ ಗೈಡ್ ಶಿಕ್ಷಕರಾದ ಶ್ರೀಹರಿ ಪೈಂದೋಡಿ, ನಳಿನಾಕ್ಷಿ ಕಲ್ಮಡ್ಕ, ಪ್ರಮುಖರಾದ ಹರೀಶ್ ಮೂರ್ಜೆ, ಬಾಲಚಂದ್ರ ನೆಡಿಲು ಮೊದಲಾದವರು ಉಪಸ್ಥಿತರಿದ್ದರು.

ಸ್ವಚ್ಛತಾ ಅಭಿಯಾನದಲ್ಲಿ ಅರಣ್ಯ ಇಲಾಖಾ ಅಧಿಕಾರಿ ಹಾಗೂ ಸಿಬ್ಬಂದಿ, ಸುಳ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ಸುಳ್ಯ ರೋಟರಿ, ವಿನೋಬಾನಗರ ವಿವೇಕಾನಂದ ಶಾಲಾ ಸೌಟ್ ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯುವ ಧ್ವನಿಯ ಸಂಯೋಜಕ ಕೀರ್ತನ್ ಕಾರ್ಯಕ್ರಮ ನಿರ್ವಹಿಸಿದರು. ಉಪಹಾರದ ವ್ಯವಸ್ಥೆಯನ್ನು ಕನಕಮಜಲು ಯುವಕ ಮಂಡಲ, ನೀರು ಹಾಗೂ ಹಣ್ಣುಗಳನ್ನು ದಿನೇಶ್ ರಾವ್ ಮೊಗೇರು ನೀಡಿ ಸಹಕರಿಸಿದರು.

ವಿಟ್ಲದಲ್ಲಿ ಚಿರಂತನ ಚಾರಿಟೇಬಲ್ ಟ್ರಸ್ಟ್‌ನ 2ನೇ ಶಾಖೆ ಉದ್ಘಾಟನೆ

ನೊಂದ ಜೀವಕ್ಕೆ ಆಶ್ರಯ ಅಗತ್ಯ: ಚಿತಕಾಮಾನಂದಜಿ

ವಿಟ್ಲ: ಹಿರಿಯ ನಾಗರಿಕರಿಕರಿಗೆ ಅವಶ್ಯಕವಾದ ವ್ಯವಸ್ಥೆಯನ್ನು ಚಿರಂತನ ಮಾಡಿಕೊಂಡು ಬರುತ್ತಿದ್ದಾರೆ. ನೊಂದ ಜೀವಕ್ಕೆ ಆಲಂಬನೆ ನೀಡುವ ಅವಶ್ಯತೆ ಯಿದೆ. ಸಮಾಜಮುಖಿ ಸೇವೆಗಳ ಮೂಲಕ ದೇರಾಜೆ ಕುಟುಂಬ ದೇವರ ಸೇವೆ ಮಾಡುತ್ತಿದೆ. ಸಹನೆ, ಭಾವನೆ ಇದ್ದಾಗ ಮಾತ್ರ ವೃದ್ಧಾಶ್ರಮ ನಡೆಸಲು ಸಾಧ್ಯ ಎಂದು ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ಚಿತಕಾಮಾನಂದಜಿ ಹೇಳಿದರು.



ವಿಟ್ಲ ಅಪ್ಪೇರಿಪಾದೆಯಲ್ಲಿ ಚಿರಂತನ ಚಾರಿಟೇಬಲ್ ಟ್ರಸ್ಟ್‌ನ ಎರಡನೇ ಶಾಖೆಯಾಗಿ 'ಆಲಂಬನ' ಲೋಕಾರ್ಪಣೆ ನಡೆಸಿ ಆಶೀರ್ವಚನ ನೀಡಿದರು.

ಬೆಂಗಳೂರು ಸಪ್ತಕದ ಜಿ. ಎಸ್. ಹೆಗಡೆ, ಮಂಗಳೂರು ಎಂ.ಆರ್.ಪಿ. ಎಲ್. ಮ್ಯಾನೇಜರ್ ಕೇಶವ ಪಟಾಳಿ, ಮಾಜಿ ಮೇಯರ್ ದಿವಾಕರ ಕದ್ರಿ, ವಿಟ್ಲ ಅರಮನೆಯ ಬಂಗಾರ ಅರಸರು, ವಿಟ್ಲ ಪದವಿಪೂರ್ವ ಕಾಲೇಜಿನ ನಿವೃತ್ತ ಉಪ ಪ್ರಾಂಶುಪಾಲ ಎಚ್. ಸುಬ್ರಹ್ಮಣ್ಯ ಭಟ್, ಮೂರ್ತಿ ದೇರಾಜೆ, ಇಂದಿರಾ ಜಾನಕಿ, ಟ್ರಸ್ಟಿ ಶಿವಾನಂದ ರೈ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಾರ್ಯಕ್ರಮ

ಟ್ರಸ್ಟಿ ಸೌಮ್ಯ ಲಕ್ಷ್ಮಿ ಭಟ್ ಸ್ವಾಗತಿಸಿದರು. ಟ್ರಸ್ಟಿ ಭಾರವಿ ದೇರಾಜೆ ಪ್ರಸ್ತಾವನೆಗೈದರು.

> **ಭಗವಂತನ ಸೇವೆ**
>
> ಅವಿಭಾಜ್ಯ ಕುಟುಂಬ ದಲ್ಲಿ ವೃದ್ಧಾಶ್ರಮದ ಅವಶ್ಯಕತೆಯಿಲ್ಲ. ಹಿಂದೆ ಬಾಂಧವ್ಯಗಳಿತ್ತು, ಈಗ ಕಾಲ ಬದಲಾವಣೆಯಾಗಿ ಕುಟುಂಬ ಸಣ್ಣದಾಗುತ್ತಿದೆ. ಈಗ ವೃದ್ಧಾಶ್ರಮದ ಅವಶ್ಯಕತೆ ಹೆಚ್ಚಾಗುತ್ತಿದೆ. ಆಶ್ರಮ ಗಳಲ್ಲಿ ಮಾನವ ರೂಪದ ಭಗವಂತ ಸೇವೆ ನಡೆಯುತ್ತದೆ.
>
> ● ಸ್ವಾಮಿ ಚಿತಕಾಮಾನಂದಜಿ, ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು

> **ಕುಟುಂಬ ವ್ಯವಸ್ಥೆ ಶ್ರೇಷ್ಠ ಪರಂಪರೆ**
>
> ಭಾರತದ ಕುಟುಂಬ ವ್ಯವಸ್ಥೆ ಶ್ರೇಷ್ಠ ಪರಂಪರೆಯಾಗಿದೆ. ಕೊಡು ಕುಟುಂಬ ಪಾಲಿಗೆ ಬಂದದ್ದನ್ನು ಅನುಭವಿಸುವುದನ್ನು ಕಲಿಸಿದೆ. ಸಂಗೀತ, ಸಾಹಿತ್ಯ ನಮ್ಮನ್ನು ಸಂಸ್ಕಾರಯುತರನ್ನಾಗಿಸುತ್ತದೆ. ಅರಿವೇ ಗುರು ಆದಾಗ ಎಲ್ಲವೂ ಸಾಧ್ಯವಾಗುತ್ತದೆ.
>
> ● ಜಿ. ಎಸ್. ಹೆಗಡೆ, ಸಪ್ತಕ ಬೆಂಗಳೂರು

ವಂದಿಸಿದರು. ತೇಜಸ್ವಿ ಜೂನಿಯರ್ ಶಂಕರ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಗೀತ ರಸಮಂಜರಿ ನಡೆಯಿತು.

ಮೂರು ತಿಂಗಳುಗಳ ಉಚಿತ ಟೈಲರಿಂಗ್ ತರಬೇತಿಯ ಸಮಾರೋಪ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ ಟ್ರಸ್ಟ್ (ರಿ.) ಇದರ ಜ್ಞಾನ ವಿಕಾಸ ಕಾರ್ಯಕ್ರಮ ದಡಿಯಲ್ಲಿ ಮೂರು ತಿಂಗಳುಗಳ ಕಾಲ ನಡೆದ ಉಚಿತ ಟೈಲರಿಂಗ್ ತರಬೇತಿಯ ಸಮಾರೋಪ ಸಮಾರಂಭ ಬಂಟ್ವಾಳ ಭಂಡಾರಿಬೆಟ್ಟುವಿನ ವ್ಯಾಯಾಮ ಶಾಲೆಯಲ್ಲಿ ನಡೆಯಿತು.

ಬಂಟ್ವಾಳ ಪುರಸಭೆಯ ನಿಕಟ ಪೂರ್ವ ಸದಸ್ಯರಾದ ಹರಿಪ್ರಸಾದ್ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ನಡೆಯುವ ಕಾರ್ಯಕ್ರಮಗಳು ಉತ್ತಮ ವೇದಿಕೆ ಯಾಗಿದೆ. ಮೂರು ತಿಂಗಳುಗಳ ಕಾಲ ಉಚಿತವಾಗಿ ಪಡೆದುಕೊಂಡ ತರಬೇತಿ ಯಿಂದ ಸ್ವಾವಲಂಬಿಗಳಾಗಿ ಎಂದರು.

ಸೌಲಭ್ಯಗಳ ಬಗ್ಗೆ ಮಾಹಿತಿ

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷರಾದ ರೊನಾಲ್ಡ್ ಡಿಸೋಜ ಅಮ್ಟಾಡಿ ವಹಿಸಿದ್ದರು ಗ್ರಾಮಾಭಿವೃದ್ಧಿ ಯೋಜನೆಯ ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ. ಅವರು ಮಾತನಾಡಿ, ನಮ್ಮಲ್ಲಿರುವ ವಿದ್ಯೆಯನ್ನು ನಾವು ಸರಿಯಾಗಿ ಬಳಸಿದಾಗ ನಾವು ಯಶಸ್ವಿಯನ್ನು ಕಾಣಬಹುದಲ್ಲದೆ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಹಿಳೆಯರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭ ವಲಯ ಮೇಲ್ವಿಚಾರಕರಾದ ಗಿರೀಶ್, ಜ್ಞಾನವಿಕಾಸ ಸಮನ್ವಯ ಅಧಿಕಾರಿ ಸವಿತಾ, ತರಬೇತಿ ಶಿಕ್ಷಕಿ ವಸಂತಿ, ಒಕ್ಕೂಟದ ಅಧ್ಯಕ್ಷರಾದ ವಿಜಯ, ಸೇವಾ ಪ್ರತಿನಿಧಿ ವನಿತಾ ಉಪಸ್ಥಿತರಿದ್ದರು.

ಧಾರ್ಮಿಕ ಆಚರಣೆಗಳು ಸಂಸ್ಕೃತಿಯ ಪ್ರತೀಕ: ಡಾ. ದೇವಿಪ್ರಸಾದ್ ಅಭಿಮತ



ಕಿನ್ನಿಗೋಳಿ: ಧಾರ್ಮಿಕ ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದ್ದು, ನಮ್ಮ ಪೂರ್ವಿಕರ ಆಚರಣೆಗಳು ನಂಬಿಕೆಗಳು ನಮ್ಮನ್ನು ಬೆಳೆಸಿ ಮಾರ್ಗದರ್ಶನ ನೀಡಿವೆ ಅವನ್ನು ಮುಂದುವರೆಸುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದು ಬೆಂಗಳೂರು ಸತ್ಯ ಸಾಯಿ ಶಿಕ್ಷಣ ಸಂಸ್ಥೆಯ ಹಾಗೂ ವಿ. ನಾರಾಯಣ ಸಂಸ್ಥೆಯ ಮುಖ್ಯಸ್ಥ ಡಾ. ದೇವಿಪ್ರಸಾದ್ ಶೆಟ್ಟಿ ಹೇಳಿದರು.

ಅವರು ಪಕ್ಷಿಕೆರೆ ಸಮೀಪದ ಪಂಜ ಕೋಯಿಕುಡೆ ಶ್ರೀ ಶನೈಶ್ಚರ ಮಂಡಳಿಯ ವಾರ್ಷಿಕ ಪೂಜಾ ಮಂಗಲೋತ್ಸವದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ಮಂಡಳಿಯ ಗೌರವಾಧ್ಯಕ್ಷ ಪಂಜ ವಾಸುದೇವ ಭಟ್, ಪಂಜದ ಗುತ್ತು ಪ್ರವೀಣ್ ಆಳ್ವ, ನವೀನ್ ಶೆಟ್ಟಿನಲ್ಯ ಗುತ್ತು, ಚಂದ್ರಹಾಸ ಶೆಟ್ಟಿ ಮೊಗಪಾಡಿ, ವಿಠೋಭ ಭಜನಾ ಮಂದಿರದ ಅಧ್ಯಕ್ಷ ಶರತ್ ಶೆಟ್ಟಿ, ಜಯಶೆಟ್ಟಿ ಬಾಕಿಮಾರು ಗುತ್ತು, ರಘುರಾಮ ಶೆಟ್ಟಿ ಬಾಳಿಕೆ ಮನೆ, ಬಾಲಕೃಷ್ಣ ದೇವಾಡಿಗ ಪಂಜ, ಮಮತಾ ಶೆಟ್ಟಿ, ಸದಾನಂದ ಶೆಟ್ಟಿ ಕೊಯಿಕುಡೆ, ಕಾರ್ಯದರ್ಶಿ ಕಿರಣ್, ಕೋಶಾಧಿಕಾರಿ ಪದ್ಮನಾಭ ಪೂಜಾರಿ ಪಂಜ ಮೊದಲಾದವರು ಇದ್ದರು. ಮಂಡಳಿಯ ಅಧ್ಯಕ್ಷ ಸುರೇಶ್ ದೇವಾಡಿ ಗ ಪಂಜ ಸ್ವಾಗತಿಸಿದರು. ಸತೀಶ್ ಶೆಟ್ಟಿ ನಿರೂಪಿಸಿದರು.

ಸಾಧಕರಿಗೆ ಪ್ರತಿಭಾ ಪುರಸ್ಕಾರ ಪ್ರದಾನ

ಇದೇ ಸಂದರ್ಭ ಸ್ಥಳೀಯ ಎಸ್ಎಸ್ ಎಲ್‌ಸಿಯಲ್ಲಿ ಅಧಿಕ ಅಂಕ ಪಡೆದ ಸಾಧಕ ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಪವರ್ ಲಿಫ್ಟಿಂಗ್‌ನಲ್ಲಿ ಪ್ರಶಸ್ತಿ ಪಡೆದ ಸಾಧಕಿ ಪ್ರಿಯಾ ಪ್ರಕಾಶ್ ಅವರನ್ನು ಗೌರವಿಸಲಾಯಿತು.



ಬೈಂದೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಬೈಂದೂರು ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮೋಹನ ಪೂಜಾರಿ ಸಮ್ಮುಖದಲ್ಲಿ ಯುವನಿಧಿ ಮಾಹಿತಿ ಶಿಬಿರ ನಡೆಯಿತು. ಗ್ಯಾರಂಟಿ ಸಮಿತಿ ಅಧ್ಯಕ್ಷರು, ಕಾಲೇಜಿನ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಯುವನಿಧಿ ಬಗ್ಗೆ ಮಾಹಿತಿ ನೀಡಿದರು. ಕಾಲೇಜಿನ ಪ್ರಾಂಶುಪಾಲ ನಾಗರಾಜ ಶೆಟ್ಟಿ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಿಬ್ಬಂದಿ ಪೃಥ್ವಿರಾಜ್, ಗ್ಯಾರಂಟಿ ಸಮಿತಿ ಸದಸ್ಯರಾದ ಮಾಲತಿ ಶಿವಾನಂದ, ಸೂರ್ಯಕಾಂತಿ ನಾಗೇಶ್, ರಾಮಚಂದ್ರ ಖಾರ್ವಿ ಇದ್ದರು. ಉಪನ್ಯಾಸಕಿ ಸುಚಿತ್ರ ನಿರ್ವಹಿಸಿದರು.



ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು, ಕೆಪಿಸಿಸಿ ಮುಖ್ಯ ವಕ್ತಾರ ವಿ. ಆರ್. ಸುದರ್ಶನ್ ಮತ್ತು ಕೆಪಿಸಿಸಿ ಉಪಾಧ್ಯಕ್ಷ, ನಾರಾಯಣಸ್ವಾಮಿ ಅವರು ಭೇಟಿ ನೀಡಿ ಶ್ರೀ ದೇವಿಯ ದರುಶನ ಪಡೆದುಕೊಂಡರು. ದೇವಳದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ್ ಶೆಟ್ಟಿ ಅವರನ್ನು ದೇವಳದ ವತಿಯಿಂದ ಗೌರವಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಕಾಂಗ್ರೆಸ್ ಮುಖಂಡ ದಿನೇಶ್ ಹೆಗ್ಡೆ ಮೊಳಹಳ್ಳಿ, ಬೈಂದೂರು ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕೊಲ್ಲೂರು ರಮೇಶ್ ಗಾಣಿಗ, ಕೊಲ್ಲೂರು ಮೆಸ್ಕಾಂ ಸಲಹಾ ಸಮಿತಿ ಸದಸ್ಯ ವಿನಾಯಕ ಆಚಾರ್ಯ ಇದ್ದರು.

ಮಾ. 29-ಏ.6ರವರೆಗೆ ಬಳ್ಳಮಂಜ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಉತ್ಸವ

ಶ್ರೀ ಈಶ್ವರ ದೇವರ ಲಿಂಗ ಪುನಃ ಪ್ರತಿಷ್ಠಾಪನೆ ಅಷ್ಟಬಂಧ ಬ್ರಹ್ಮಕಲಶ

ಬೆಳ್ತಂಗಡಿ: ಬಳ್ಳಮಂಜದಲ್ಲಿನ ಮಹತೋಭಾರ ಅನಂತೇಶ್ವರ ಸ್ವಾಮಿ ದೇವಸ್ಥಾನಕ್ಕಾಗಿ ಪುನಃ ನಿರ್ಮಿಸಿದ ನೂತನ ಧ್ವಜಸ್ತಂಭ, ನೂತನ ಬ್ರಹ್ಮ ರಥ ಸಹಿತ ಈಶ್ವರ ದೇವರ ನೂತನ ಶಿಲಾಮಯ ಮಂಟಪ ಗರ್ಭಗೃಹದ ಸಮರ್ಪಣಾ ಪೂರ್ವಕವಾಗಿ ಶ್ರೀ ಈಶ್ವರ ದೇವರ ಲಿಂಗ ಪುನಃ ಪ್ರತಿಷ್ಠಾಪನೆ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ನೂತನ ಬ್ರಹ್ಮ ರಥದಲ್ಲಿ ಪ್ರಥಮ ಬ್ರಹ್ಮರಥೋತ್ಸವ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ದೇರೆಬೈಲು ಡಾ.ಶಿವಪ್ರಸಾದ ತಂತ್ರಿ ನೇತೃತ್ವದಲ್ಲಿ ಮಾ. 29ರಿಂದ ಏ.6ರವರೆಗೆ ನಡೆಯಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ, ಶಾಸಕ ಹರೀಶ್ ಪೂಂಜ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಕ್ಷೇತ್ರದ ಅನುವಂಶೀಯ ಆಡಳಿತ ಮೊಕ್ತೇಸರ ಡಾ.ಎಂ.ಹರ್ಷ ಸಂಪಿಗೆತ್ತಾಯ ಮಾತನಾಡಿ, ಸುಮಾರು 3 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ದೇವಸ್ಥಾನದ ಹಲವಾರು ಕೆಲಸ ಕಾರ್ಯಗಳು ನಡೆದಿವೆ. ಬ್ರಹ್ಮ ಕಲಶೋತ್ಸವ ಪ್ರಯುಕ್ತ ಈಗಾಗಲೇ ಶೇ.90ರಷ್ಟು ಕೆಲಸಗಳು ಪೂರ್ಣಗೊಂಡಿವೆ. ಸಾವಿರಾರು ಭಕ್ತರು ನಿತ್ಯ ಕರಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಶಾಸಕ ಪೂಂಜ ಅವರ 10 ಲಕ್ಷ ರೂ. ಅನುದಾನದಿಂದ ದೇವಾಲಯದ ಪಶ್ಚಿಮ ಭಾಗದಲ್ಲಿ ಶೀಟ್ ಅಳವಡಿಸಲಾಗುತ್ತಿದೆ ಎಂದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ವಸಂತ ಗೌಡ ಮರಕ್ಕಡ ಮಾತನಾಡಿ, ಬ್ರಹ್ಮ ಕಲಶೋತ್ಸವಕ್ಕೆ 50 ಸಾವಿರ ಜನ ಸೇರುವ ನಿರೀಕ್ಷೆಯಿದೆ. ಮಾ.22ರಂದು ಮಡಂತ್ಯಾರಿನಿಂದ ತಣ್ಣೀರುಪಂತ ತನಕ ರಸ್ತೆ ಬದಿ ಸ್ವಚ್ಛತೆ ನಡೆಸಲಾಗುವುದು.ಸ್ವಚ್ಛತಾ ಕಾರ್ಯದಲ್ಲಿ ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಲಿದ್ದಾರೆ ಎಂದರು.

ದೇರೆಬೈಲು' ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಡಾ.ಶಿವಪ್ರಸಾದ ತಂತ್ರಿ ವೈದಿಕ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸುಧೀರ್ ಕುಮಾರ್ ಶೆಟ್ಟಿ ಕೊರೊಟ್ಟು, ಅರ್ಚಕ ಲಕ್ಷ್ಮೀಶ ಶಗ್ರಿತ್ತಾಯ, ಡಾ.ಪಿ.ಅನಂತಕೃಷ್ಣ ಭಟ್ ಮಂಗಳೂರು, ಚಂದ್ರಕಾಂತ್ ನಿಡ್ಡಾಜೆ, ಹೊನ್ನಪ್ಪ ಕುಲಾಲ್ ಮಾಣೂರು, ನಾರಾಯಣ ಪೂಜಾರಿ ಬಳ್ಳಮಂಜ, ಅವಿನಾಶ್ ಕುಲಾಲ್ ಮಾಣೂರು, ಗೋಪಾಲ ಪೂಜಾರಿ ಕೊಲಾಜೆ, ಪ್ರಶಾಂಶ್ ಶೆಟ್ಟಿ ಮೂಡಯೂರು, ತುಳಸಿದಾಸ್ ಪೈ ಇದ್ದರು.

ಬೈಂದೂರು ಶಾಸಕರಿಗೆ ಸಂಘಟನೆಯ ಮನವಿ

ಕಾರ್ಮಿಕರ ನಿಧಿ ಬಳಕೆಗೆ ವಿರೋಧ

ಕುಂದಾಪುರ: 2026–27ನೇ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಸರ್ಕಾರದ ವಿವಿಧ ಯೋಜನೆಗಳಿಗೆ ಕಟ್ಟಡ ಕಾರ್ಮಿಕರ ನಿಧಿಯ ಬಳಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿ ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ವತಿಯಿಂದ ಶನಿವಾರ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಗುರುರಾಜ ಗಂಟಿಹೊಳೆ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿಯನ್ನು ಸ್ವೀಕರಿಸಿದ ಶಾಸಕರು, ಕಾರ್ಮಿಕರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆ. ಹಾಗೂ ಹೆಚ್ಚುವರಿಯಾಗಿ ಕಟ್ಟಡ ಕಾರ್ಮಿಕರಗೆ ಇಎಸ್ಐ ಸೌಲಭ್ಯಕ್ಕಾಗಿ ಹೆಚ್ಚಿನ ಪ್ರಯತ್ನ ಮಾಡುತ್ತೇನೆಂದು ಭರವಸೆ ನೀಡಿದರು.



ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ರಾಜೀವ ಪಡುಕೋಣೆ, ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೇಮಕ್ಕಿ, ಕೋಶಾಧಿಕಾರಿ ಗೋಪಾಲಕೃಷ್ಣ, ಪದಾಧಿಕಾರಿಗಳಾದ ಮಂಜು ಪೂಜಾರಿ ಪಡುವರಿ, ರೋನಿ ನಜರೆತ್, ಅಣ್ಣಪ್ಪ ದೇವಾಡಿಗ ತೊಂಡೆಮಕ್ಕಿ, ಶಾಂತ ಉಪ್ಪುಂದ, ನಾಗರತ್ನ ನಾಡ, ನಾಗರತ್ನ ಪಡುವರಿ ಮೊದಲಾದವರು ಉಪಸ್ಥಿತರಿದ್ದರು.

ಸುತ್ತಮುತ್ತ

ಇಂದು ನುಡಿನಮನ, ಕವಿತಾ ವಾಚನ

ಮಂಜೇಶ್ವರ: ರಾಷ್ಟ್ರಕವಿ ಗೋವಿಂದ ಪೈ ಜನ್ಮದಿನಾಚರಣೆಯಂಗವಾಗಿ ಮಂಜೇಶ್ವರ ಕವಿಗೃಹ ಗಿಳಿವಿಂಡುವಿನಲ್ಲಿ ನುಡಿನಮನ, ಕವಿತಾ ವಾಚನ ಮಾ.23ರಂದು ಸಂಜೆ 4 ಗಂಟೆಯಿಂದ ಜರಗಲಿದೆ. ಗೋವಿಂದ ಪೈ ಸ್ಮಾರಕ ಸಮಿತಿ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಕವಿಗಳಿಗೆ ಕವಿತೆ ವಾಚಿಸುವ ಅವಕಾಶವಿದೆ ಎಂದು ಸಮಿತಿ ಅಧ್ಯಕ್ಷ ಉಮೇಶ್ ಎಂ.ಸಾಲ್ಯಾನ್ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಮಾ.25ರಂದು ಕಡಪ್ಪು ವನಶಾಸ್ತರ ಸನ್ನಿಧಿಯಲ್ಲಿ ವನಭೋಜನ

ಪೆರ್ಲ: ಎಣ್ಮಕಜೆ ಪಂಚಾಯತ್‌ನ ಕಡಪ್ಪು ಶ್ರೀ ವನಶಾಸ್ತಾರ ದೇವರ ಸನ್ನಿಧಿಯಲ್ಲಿ ವಿಶೇಷ ವನಭೋಜನ ಸಮಾರಂಭ ಮಾ.25ರಂದು ಜರಗಲಿದೆ. ಮಣಿಮುಂಡ ಶ್ರೀ ಮಹಾಲಿಂಗ ಉಪಾಧ್ಯಾಯ ಅವರ ನೇತೃತ್ವದಲ್ಲಿ ಕಾರ್ಯಕ್ರಮ ಜರಗಲಿರುವುದಾಗಿ ಪ್ರಕಟಣೆ ತಿಳಿಸಿದೆ.

ವಾವಡುಕ್ಕ ಶಾಲೆಯ 45ನೇ ವಾರ್ಷಿಕೋತ್ಸವ, ಬೀಳ್ಕೊಡುಗೆ ಸಮಾರಂಭ

ಕಾಸರಗೋಡು: ವಾವಡುಕ್ಕ ಸರಕಾರಿ ಎಲ್‌ಪಿ ಶಾಲೆಯ 45ನೇ ಶಾಲಾ ವಾರ್ಷಿಕೋತ್ಸವ ಮತ್ತು ಈ ವರ್ಷ ಸೇವೆಯಿಂದ ನಿವೃತ್ತರಾಗುತ್ತಿರುವ ಶಾಲಾ ಮುಖ್ಯ ಶಿಕ್ಷಕರ ಬೀಳ್ಕೊಡುಗೆ ಸಮಾರಂಭವು ಶಾಲೆಯಲ್ಲಿ ಜರಗಿತು.

ವಾರ್ಷಿಕೋತ್ಸವದ ಅಂಗವಾಗಿ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು. ಬಳಿಕ ಬಾಲಚಂದ್ರನ್ ಕೊಟ್ಟೋಡಿ ಅವರು ಪೋಷಕರಿಗಾಗಿ ಪ್ರೇರಣಾ ತರಗತಿ ನಡೆಸಿದರು. ಶಾಲಾ ಮುಖ್ಯ ಶಿಕ್ಷಕ ಸಿ.ಎಂ.ಕುಂಞಿಕಣ್ಣನ್ ಮಾಸ್ತರ್ ಹಾಗೂ ಚೆರಿಪ್ಪಾಡಿ ಅಂಗನವಾಡಿ ಶಿಕ್ಷಕಿ ಮೀನಾಕ್ಷಿ ಟೀಚರ್ ಅವರನ್ನು ಬೀಳ್ಕೊಡಲಾಯಿತು. ಸಮಾರಂಭವನ್ನು ಕಾರಡ್ಕ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸಿ.ಬಾಲನ್ ಉದ್ಘಾಟಿಸಿದರು. ಬೇಡಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷ ಕೆ.ಕುಂಞಿರಾಮನ್ ಅಧ್ಯಕ್ಷತೆ ವಹಿಸಿದ್ದರು. ಎಸ್.ಕೆ. ಕಾಸರಗೋಡು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ನಿವೃತ್ತ ಮುಖ್ಯ ಶಿಕ್ಷಕ ಶಶಿಧರನ್ ಮಾಸ್ತರ್ ಅವರ ಹೆಸರಿನಲ್ಲಿ ಹಾಗೂ ಶಂಕರನ್ ಎಂಬ್ರಾಂದಿರಿ ಮತ್ತು ಕೃಷ್ಣನ್ ಚೆರಿಪ್ಪಾಡಿ ಅವರ ಹೆಸರಿನಲ್ಲಿರುವ ದತ್ತಿಯನ್ನು ಕಾಸರಗೋಡು ಎಇಒ ನಾರಾಯಣ ಅವರು ವಿತರಿಸಿದರು. ಬೇಡಡ್ಕ ಗ್ರಾಮ ಪಂಚಾಯತ್ ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಡಿ.ವಿಷ್ಣುರಾಜ್ ಚೆರಿಪ್ಪಾಡಿ ಅತ್ಯುತ್ತಮ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ವಿತರಿಸಿದರು. ನವ್ಯಾ ಟೀಚರ್ ವರದಿ ವಾಚಿಸಿದರು. ವಿವಿಧ ವಲಯಗಳ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು. ಶಾಲಾ ಪಿಟಿಎ ಅಧ್ಯಕ್ಷ ಎ.ವಿ.ಬಾಲಕೃಷ್ಣನ್, ಪಿಇಸಿ ಕಾರ್ಯದರ್ಶಿ ಮನೋಜ್ ಮಾಸ್ತರ್, ಸಿಆರ್‌ಸಿ ಪ್ರತಿನಿಧಿ ಸಿಂಧು ಟೀಚರ್ ಉಪಸ್ಥಿತರಿದ್ದರು. ದೃಶ್ಯ ಎಂ. ಸ್ವಾಗತಿಸಿ, ಸಿಬ್ಬಂದಿ ಕಾರ್ಯದರ್ಶಿ ಬಾಲಕೃಷ್ಣನ್ ಪಿ. ವಂದಿಸಿದರು.

ತೆಕ್ಕಿಲ್‌ಪರಂಬ ಶಾಲೆಯಲ್ಲಿ ವೈದ್ಯಕೀಯ ಶಿಬಿರ

ಕಾಸರಗೋಡು: ತೆಕ್ಕಿಲ್‌ಪರಂಬ ಸರಕಾರಿ ಯುಪಿ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗಾಗಿ ವೈದ್ಯಕೀಯ ಶಿಬಿರ ಜರಗಿತು.

ಶಾಲಾ ಸಮಾಜ ಸೇವಾ ಯೋಜನೆ, ತ್ರೇಸ್ಯಮ್ಮ ಕಣ್ಣಿನ ಆಸ್ಪತ್ರೆ ಮತ್ತು ಸೆಂಚುರಿ ದಂತ ಆಸ್ಪತ್ರೆಯ ಸಹಯೋಗದೊಂದಿಗೆ ವೈದ್ಯಕೀಯ ಶಿಬಿರವನ್ನು ಆಯೋಜಿಸಲಾಗಿತ್ತು. ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಅಂಜನಾ ಪವಿತ್ರನ್ ಶಿಬಿರವನ್ನು ಉದ್ಘಾಟಿಸಿದರು. ಪಿಟಿಎ ಅಧ್ಯಕ್ಷ ಉಣ್ಣಿಕೃಷ್ಣನ್ ಪೊಯಿನಾಚಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕ ಅಬೂಬಕ್ಕರ್ ಬಿ., ಎಸ್‌ಎಂಸಿ ಅಧ್ಯಕ್ಷ ಶ್ರೀಜಿತ್ ಕುಮಾರ್ ಎನ್.ಸಿ., ಹಿರಿಯ ಸಹಾಯಕಿ ರಾಧಾ ಜೆ.ಎಸ್., ಸಿಬ್ಬಂದಿ ಕಾರ್ಯದರ್ಶಿ ಸುಹರಾ ಟಿ.ಕೆ., ಎಸ್‌ಎಸ್‌ಎಸ್ ಸಂಯೋಜಕ ಪ್ರಜೀಶ್ ಉಪಸ್ಥಿತರಿದ್ದರು. ಡಾ.ರಿಯಾ ಮತ್ತು ಡಾ.ಟಿನು ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯ ನೇತೃತ್ವ ವಹಿಸಿದ್ದರು. ಶಿಬಿರದ ಅಂಗವಾಗಿ ಕಣ್ಣಿನ ತಪಾಸಣೆ ಮತ್ತು ದಂತ ತಪಾಸಣೆ ನಡೆಸಲಾಯಿತು. ವಿದ್ಯಾರ್ಥಿಗಳ ಆರೋಗ್ಯ ಜಾಗೃತಿಯನ್ನು ಹೆಚ್ಚಿಸಲು ಅಗತ್ಯದ ಸೂಚನೆಗಳನ್ನು ನೀಡಲಾಯಿತು. ಈ ಸಂದರ್ಭ ಶಾಲಾ ಅಧಿಕಾರಿಗಳು, ಪಿಟಿಎ ಪದಾಧಿಕಾರಿಗಳು ಮತ್ತು ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಶಿಬಿರದಲ್ಲಿ ಭಾಗವಹಿಸಿದ್ದರು.

ಕೇರಳ ವಿಧಾನಸಭಾ ಚುನಾವಣೆಗೆ 1606 ಪ್ರಿಸೈಡಿಂಗ್ ಆಫೀಸರ್, ಪ್ರಥಮ ಮತಗಟ್ಟೆ ಅಧಿಕಾರಿಗಳ ನೇಮಕ

ಮತಗಟ್ಟೆ ಅಧಿಕಾರಿಗಳ ಮೊದಲ ಹಂತದ ರ‍್ಯಾಂಡಮೈಸೇಶನ್



ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಮೊದಲ ಹಂತದ ಮತಗಟ್ಟೆ ಅಧಿಕಾರಿಗಳ ರ‍್ಯಾಂಡಮೈಸೇಶನ್ (ಚುನಾವಣಾ ಕರ್ತವ್ಯಗಳಿಗೆ ಅಧಿಕಾರಿಗಳ ನೇಮಕಾತಿ) ಪ್ರಕ್ರಿಯೆಯು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭಾನುವಾರ ಜರಗಿತು.

ಜಿಲ್ಲೆಯ 1146 ಮತಗಟ್ಟೆಗಳಿಗಾಗಿ ಒಟ್ಟು 1606 ಪ್ರಿಸೈಡಿಂಗ್ ಅಧಿಕಾರಿಗಳನ್ನು ಮತದಾನ ಕರ್ತವ್ಯಕ್ಕಾಗಿ ನೇಮಿಸಲಾಗಿದೆ. ಈ ಪೈಕಿ 868 ಮಹಿಳೆಯರು ಮತ್ತು 738 ಪುರುಷರು ಒಳಗೊಂಡಿದ್ದಾರೆ. ಜಿಲ್ಲೆಯಲ್ಲಿ ನೇಮಕಗೊಂಡ ಪ್ರಥಮ ಮತಗಟ್ಟೆ ಅಧಿಕಾರಿಗಳ ಸಂಖ್ಯೆಯೂ 1606 ಆಗಿದೆ. ಈ ಪೈಕಿ 1020 ಮಹಿಳೆಯರು ಮತ್ತು 586 ಪುರುಷರು ಸೇರಿದ್ದಾರೆ. ನೇಮಕಗೊಂಡ 3212 ಮತಗಟ್ಟೆ ಅಧಿಕಾರಿಗಳಲ್ಲಿ 2047 ಮಹಿಳೆಯರು ಮತ್ತು 1165 ಪುರುಷರು ಒಳಗೊಂಡಿರುವರು. ಮತದಾನ ಕರ್ತವ್ಯಗಳಿಗೆ ಅಗತ್ಯಕ್ಕಿಂತ ಶೇಕಡಾ 40ಕ್ಕಿಂತಲೂ ಹೆಚ್ಚಿನ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಮತದಾನ ಕರ್ತವ್ಯಗಳಿಗೆ ಅಧಿಕಾರಿಗಳನ್ನು ನೇಮಿಸುವ ನೇಮಕಾತಿ ಆದೇಶವು ಆರ್ಡರ್ ಎಂಬ ಪೋರ್ಟಲ್‌ನಲ್ಲಿ ಲಭ್ಯವಿದೆ. ಆಯಾ ಸಂಸ್ಥೆಗಳು ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು ಮತ್ತು ಮತದಾನಕ್ಕೆ ನೇಮಕಗೊಂಡ ಅಧಿಕಾರಿಗಳಿಗೆ ಹಸ್ತಾಂತರಿಸುವ ಸ್ಥಿತಿಯನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವು ಮಾ.24ರಂದು ಪ್ರಾರಂಭವಾಗಲಿದೆ. ತರಬೇತಿಯು ಮಾ.24, 25, 26 ಮತ್ತು 27 ರಂದು ಜರಗಲಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಎಡಿಎಂ ಕೆ.ವಿ.ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಮತ್ತು ಕಲೆಕ್ಟರೇಟ್ ಚುನಾವಣಾ ವಿಭಾಗದ ಜೂನಿಯರ್ ಸೂಪರಿಂಟೆಂಡೆಂಟ್ ಎ.ರಾಜೀವನ್ ಮುಂತಾದವರು ಭಾಗವಹಿಸಿದ್ದರು.

ಇಂದು ಮತಯಂತ್ರ, ಸ್ಟ್ರಾಂಗ್ ರೂಮ್‌ಗೆ

ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಇಲೆಕ್ಟ್ರಾನಿಕ್ಸ್ ಮತಯಂತ್ರಗಳನ್ನು (ಇವಿಎಂ) ಕಲೆಕ್ಟರೇಟ್‌ನ ಗೋದಾಮಿನಿಂದ ಕಾಸರಗೋಡು ಸರಕಾರಿ ಕಾಲೇಜು, ನಾಯನ್ಮಾರಮೂಲೆ ತನ್‌ಬಿಹುಲ್ ಇಸ್ಲಾಂ ಹೈಯರ್ ಸೆಕೆಂಡರಿ ಶಾಲೆ ಮತ್ತು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯ ವಿತರಣಾ ಕೇಂದ್ರಗಳಿಗೆ ತಲುಪಿಸಲು ನಿರ್ಧರಿಸಲಾಗಿದೆ.

ಒಟ್ಟು 1418 ಇವಿಎಂ ಯಂತ್ರಗಳನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಚುನಾವಣಾ ಆಯೋಗದ ಗೋದಾಮಿನಿಂದ ವಿಶೇಷವಾಗಿ ಸಿದ್ಧಪಡಿಸಲಾದ ಸ್ಟ್ರಾಂಗ್ ರೂಮ್‌ಗಳಿಗೆ ಕೊಂಡೊಯ್ಯಲಾಗುವುದು. ವಿವಿಧ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳಿಗೆ ಇವಿಎಂಗಳ ವಿತರಣೆ ಮಾ.23ರಂದು ಬೆಳಗ್ಗೆ 10 ಗಂಟೆಯಿಂದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ನೇತೃತ್ವದಲ್ಲಿ ನಡೆಯಲಿದೆ.

ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕಾಗಿ ತಲಾ 263 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು ವಿವಿಪಿಎಟಿ ಯಂತ್ರಗಳನ್ನು ವಿತರಿಸಲಾಗುವುದು. ಕಾಸರಗೋಡು ಕ್ಷೇತ್ರಕ್ಕೆ ತಲಾ 250 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 272 ವಿವಿಪಿಎಟಿ ಯಂತ್ರಗಳನ್ನು ಒದಗಿಸಲಾಗುವುದು. ಉದುಮ ಕ್ಷೇತ್ರಕ್ಕಾಗಿ ತಲಾ 270 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 293 ವಿವಿಪಿಎಟಿ ಯಂತ್ರಗಳನ್ನು ವಿತರಿಸಲಾಗುವುದು.

ಕಾಞಂಗಾಡು ಕ್ಷೇತ್ರಕ್ಕೆ ತಲಾ 272 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 296 ವಿವಿಪಿಎಟಿ ಯಂತ್ರಗಳನ್ನು ನೀಡಲಾಗುವುದು. ತೃಕ್ಕರೀಪ್ಪೂರ ಕ್ಷೇತ್ರಕ್ಕಾಗಿ ತಲಾ 248 ಬ್ಯಾಲೆಟ್ ಯೂನಿಟ್, ಕಂಟ್ರೋಲ್ ಯೂನಿಟ್ ಮತ್ತು 270 ವಿವಿಪಿಎಟಿ ಯಂತ್ರಗಳನ್ನು ವಿತರಿಸಲು ಯೋಜನೆ ರೂಪಿಸಲಾಗಿದೆ. ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪ್ಪೂರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಅಧಿಕಾರಿಗಳು ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಜಿಲ್ಲಾಧಿಕಾರಿಗಳಿಂದ ಇಲೆಕ್ಟ್ರಾನಿಕ್ಸ್ ಮತಯಂತ್ರಗಳನ್ನು ಸ್ವೀಕರಿಸುವರು. ನಂತರ ವಿಶೇಷ ಪೊಲೀಸ್ ಭದ್ರತಾ ಬೆಂಗಾವಲಿನೊಂದಿಗೆ ಜಿಪಿಎಸ್ ಸುಸಜ್ಜಿತ ವಾಹನದಲ್ಲಿ ವಿವಿಧ ಕೇಂದ್ರಗಳಲ್ಲಿರುವ ಸ್ಟ್ರಾಂಗ್ ರೂಮ್‌ಗಳಿಗೆ ತಲುಪಿಸುವ ಕಾರ್ಯ ನಡೆಯಲಿದೆ.

ಕನ್ನೆಪಾಡಿ-ಪಡಿಪ್ಪರೆ ರಸ್ತೆ ಬದಿಯ ಅಪಾಯಕಾರಿಯಾಗಿದ್ದ ಮರ ತೆರವು



ಬದಿಯಡ್ಕ: ಕುಂಬಳೆ - ಮುಳ್ಳೇರಿಯ ಕೆಎಸ್‌ಟಿಪಿ ರಸ್ತೆಯ ಬದಿಯಡ್ಕ - ನೀರ್ಚಾಲು ಸಮೀಪದ ಪಡಿಪ್ಪರೆ ಎಂಬಲ್ಲಿ ರಸ್ತೆಗೆ ವಾಲಿಕೊಂಡಿದ್ದ ತೆಂಗಿನಮರವೊಂದು ಅಪಾಯಕಾರಿಯಾಗಿ ಪರಿಣಮಿಸಿದ ಹಿನ್ನೆಲೆಯಲ್ಲಿ ಅದನ್ನು ತೆರವುಗೊಳಿಸಲಾಯಿತು.

ಬದಿಯಡ್ಕ ಗ್ರಾಮ ಪಂಚಾಯತ್‌ನ ನೀರ್ಚಾಲು ವಾರ್ಡ್ ವ್ಯಾಪ್ತಿಯ ಕನ್ನೆಪ್ಪಾಡಿ ಪಡಿಪ್ಪರೆ ಎಂಬಲ್ಲಿ ರಸ್ತೆಯ ಬದಿಯಲ್ಲೇ ಇದ್ದ ತೆಂಗಿನ ಮರವೊಂದು ರಸ್ತೆಗೆ ವಾಲಿಕೊಂಡಿತ್ತು. ತಿರುವಿನ ಸ್ಥಳವಾಗಿರುವುದರಿಂದ ಘನ ವಾಹನಗಳು ಸಂಚರಿಸುವ ವೇಳೆ ಈ ವಾಲಿಕೊಂಡಿರುವ ತೆಂಗಿನ ಮರವು ಅನೇಕ ವಾಹನಗಳಿಗೆ ತಾಗಿಕೊಳ್ಳುತ್ತಿತ್ತು. ಅದನ್ನು ತಪ್ಪಿಸುವುದಕ್ಕಾಗಿ ವಾಹನ ಚಾಲಕರು ಸ್ವಲ್ಪ ಬಲಭಾಗಕ್ಕೆ ಸಂಚರಿಸುತ್ತಿದ್ದರು. ಆದರಿಂದಾಗಿ ಎದುರಿನಿಂದ ಬರುವ ವಾಹನಕ್ಕೆ ತೊಂದರೆಯಾಗುತ್ತಿತ್ತು.

ಇದನ್ನು ಗಮನಿಸಿದ ವಾರ್ಡ್ ಸದಸ್ಯ ಶ್ಯಾಮಪ್ರಸಾದ ಸರಳಿ ಹಾಗೂ ಗ್ರಾಮ ಪಂಚಾ ಯತ್ ಅಧ್ಯಕ್ಷ ಶಂಕರ ಡಿ. ಮಾತುಕತೆ ನಡೆಸಿ ಮುಂದಿನ ಕಾರ್ಯ ಕೈಗೊಳ್ಳಲಾಯಿತು.

ವಿದ್ಯುತ್ ಇಲಾಖೆ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಮಾತುಕತೆ ನಡೆಸಿ ಅವರ ಸಹಯೋಗದೊಂದಿಗೆ ಕಾರ್ಮಿಕರು ತೆಂಗಿನಮರದ ತೆರವು ಕಾರ್ಯವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದರು. ಭಾನುವಾರ ಬೆಳಗ್ಗೆ ಈ ಕಾರ್ಯ ನಡೆಸಲಾಯಿತು.

ಮರವನ್ನು ತೆರವುಗೊಳಿಸಿರುವುದಕ್ಕೆ ವಾಹನ ಚಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.

> **ಯಶಸ್ವಿಯಾದ ಮರ ತೆರವು ಕಾರ್ಯ**
>
> **ರಸ್ತೆಯ ಬದಿಯಲ್ಲೇ ಇದ್ದ ಈ ತೆಂಗಿನಮರವನ್ನು ತೆರವುಗೊಳಿಸಬೇಕೆಂದು ವಾಹನ ಚಾಲಕರು, ಸಾರ್ವಜನಿಕರು ಗ್ರಾಮ ಪಂಚಾಯತ್‌ಗೆ ಮನವಿ ನೀಡಿದ್ದರು. ನೀರ್ಚಾಲು ವಾರ್ಡ್ ಸದಸ್ಯ ಶ್ಯಾಮಪ್ರಸಾದ ಸರಳಿ ಅವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಗಣಪತಿ ಭಟ್‌ರೊಂದಿಗೆ ಮಾತುಕತೆ ನಡೆಸಿದರು. ಅವರು ಸೂಕ್ತವಾಗಿ ಸ್ಪಂದಿಸಿ ಈ ಕಾರ್ಯವನ್ನು ನಡೆಸಿರುವುದು ಅಭಿನಂದನೀಯ.**
>
> • **ಶಂಕರ ಡಿ., ಅಧ್ಯಕ್ಷರು, ಬದಿಯಡ್ಕ ಗ್ರಾಮ ಪಂಚಾಯತ್**

ಕೇರಳದಲ್ಲಿ ಬಿಜೆಪಿಗೆ ಈ ಬಾರಿ ಗೆಲ್ಲುವ ವಾತಾವರಣ: ಕೆ.ಸುರೇಂದ್ರನ್



ಕಾಸರಗೋಡು: ಈ ಬಾರಿ ಕೇರಳದಲ್ಲಿ ಬಿಜೆಪಿಗೆ ಗೆಲ್ಲುವ ಎಲ್ಲಾ ವಾತಾವರಣವಿದೆ. ಇಲ್ಲಿ ಬಿಜೆಪಿಯು ಸೋಲುವುದು ನಮ್ಮ ಸಣ್ಣ ಸಣ್ಣ ತಪ್ಪಿನಿಂದಾಗಿದೆ. ಆದ್ದರಿಂದ ಈ ಚುನಾವಣೆಯಲ್ಲಿ ನಾವು ಈ ಬಗ್ಗೆ ಹೆಚ್ಚಿನ ಗಮನಹರಿಸಬೇಕೆಂದು ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಹೇಳಿದ್ದಾರೆ.

ದೇಶೀಯ ಅಧ್ಯಾಪಕ ಪರಿಷತ್ (ಎನ್‌ಟಿಯು)ನ ಕಾಸರಗೋಡು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ರಾಮದಾಸ ನಗರದಲ್ಲಿರುವ ಎನ್‌ಟಿಯು ಜಿಲ್ಲಾ ಕಾರ್ಯಾಲಯದಲ್ಲಿ ಭಾನುವಾರ ಜರಗಿದ ಅಧ್ಯಾಪಕರ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಕೇರಳದಲ್ಲಿ ಇತರ ಕ್ಷೇತ್ರಗಳಲ್ಲಿ ಹಿಂದುಗಳ ಸಂಖ್ಯೆ ಹೆಚ್ಚಾಗಿದ್ದರೂ ರಾಜಕೀಯದಲ್ಲಿ ನಮ್ಮ ಸ್ವಾಧೀನ ತೀರಾ ಕಡಿಮೆಯಾಗಿದೆ. ಕೇರಳದಲ್ಲಿ ನಮಗೆ ಒಂದು ಸೀಟು ನಷ್ಟವಾಗುವಾಗ ಅದು ನಷ್ಟವಾಗುವುದು ಕೇವಲ ಸೀಟು ಮಾತ್ರವಲ್ಲ, ಬದಲಾಗಿ ಅದು ನಮ್ಮ ಉತ್ತಮ ನಿರೀಕ್ಷೆ ನಷ್ಟವಾಗುವುದು ಎಂದರು.

ಕೇರಳದಲ್ಲಿ ಸಂಘ ಪರಿವಾರವು ಹಲವು ರೀತಿಯಲ್ಲಿ ಕೆಲಸ ಮಾಡುತ್ತಿದೆ. ಆದರಲ್ಲಿ ಎನ್‌ಟಿಯು ಪ್ರಮುಖವಾಗಿದೆ. ಆದರೆ ಅದು ಮತವಾಗಿ ಪರಿವರ್ತನೆಗೊಳ್ಳುತ್ತಿಲ್ಲ. ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಬಗ್ಗೆ ಕೊಚ್ಚಿಯ ಜನರಲ್ಲಿ ಅಭಿಪ್ರಾಯ ಕೇಳಿದಾಗ ಶೇಕಡಾ 45ರಷ್ಟು ಉತ್ತಮ ಪ್ರತಿಕ್ರಿಯೆ ಲಭಿಸಿತ್ತು. ಆದರೆ ಚುನಾವಣೆ ವೇಳೆ ಸೀಟು ಕಡಿಮೆಯಾಗುತ್ತದೆ. ಚುನಾವಣೆ ವೇಳೆ ಎಲ್ಲರೂ ಒಂದೇ ಹಾದಿಯಲ್ಲಿ ಸಾಗುತ್ತಿಲ್ಲ, ಇದುವೇ ಇದಕ್ಕೆ ಕಾರಣ. ಕೇರಳದಲ್ಲಿ ವಿಶ್ವಾಸಿಗಳಿಗೆ ಹಾನಿಯುಂಟಾದಾಗ ಅದರ ವಿರುದ್ಧ ಹೋರಾಟ ಮಾಡಿದ್ದು ಬಿಜೆಪಿ ಮಾತ್ರವಾಗಿದೆ ಎಂದು ಕೆ.ಸುರೇಂದ್ರನ್ ಹೇಳಿದರು.

ಸಮಾರಂಭವನ್ನು ಮಧೂರು ಗ್ರಾ.ಪಂ. ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್ ಉದ್ಘಾಟಿಸಿದರು. ಎನ್‌ಟಿಯು ಜಿಲ್ಲಾಧ್ಯಕ್ಷ ಟಿ.ಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಅನೂಪ್ ಕುಮಾರ್ ನಿವೃತ್ತ ಅಧ್ಯಾಪಕರನ್ನು ಸನ್ಮಾನಿಸಿದರು. ರಾಜ್ಯ ಉಪಾಧ್ಯಕ್ಷರುಗಳಾದ ಪ್ರಭಾಕರನ್ ನಾಯರ್, ಬಿಜು ಮಾಸ್ತರ್, ಶುಭಹಾರೈಸಿದರು. ಮಹಾಬಲ ಭಟ್ ಸ್ವಾಗತಿಸಿ, ವಂದಿಸಿದರು. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರಿಗೆ ಇದೇ ವೇಳೆ ಎನ್‌ಟಿಯು ಜಿಲ್ಲಾ ಸಮಿತಿ ವತಿಯಿಂದ ಇಡು ಗಂಟು ನೀಡಲಾಯಿತು.

ಮಾ.23-25: ಅಡೂರಲ್ಲಿ ಶ್ರೀ ಗಣಪತಿ, ಶ್ರೀ ಮಹಾವಿಷ್ಣು ದೇವರ ಪುನರ್ ಪ್ರತಿಷ್ಠೆ



ಮುಳ್ಳೇರಿಯ: ಅಡೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ಕ್ಷೇತ್ರದಲ್ಲಿ ಶ್ರೀ ಗಣಪತಿ ದೇವರ ಮತ್ತು ಶ್ರೀ ಮಹಾವಿಷ್ಣು ದೇವರ ಪುನರ್ ಪ್ರತಿಷ್ಠಾ ಮಹೋತ್ಸವವು ಮಾ.23ರಿಂದ 25ರ ತನಕ ಎಡನೀರು ಶ್ರೀ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಮಾ.23ರಂದು ಬೆಳಗ್ಗೆ 10.30ಕ್ಕೆ ಹಸಿರುವಾಣಿ ಸಮರ್ಪಣೆ, ಸಂಜೆ 6ರಿಂದ ದೇವತಾ ಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹವಾಚನ, ರಾಕೋಘ್ನ ಹೋಮ, ವಾಸ್ತು ಹೋಮ, ವಾಸ್ತುಬಲಿ, ವಾಸ್ತು ಪುಣ್ಯಾಹ ನಡೆಯಲಿದೆ.

ಮಾ.24ರಂದು ಬೆಳಗ್ಗೆ 5ರಿಂದ ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮ, ಶಾಂತಿಹೋಮ, ತತ್ವಹೋಮ, ತತ್ವಕಲಶ ಪೂಜೆ, ಜೀವಕಲಶ, ಶಯ್ಯೋನಯನ, ಮಹಾಪೂಜೆ, ಸಂಜೆ 5ರಿಂದ ಧ್ಯಾನಾದಿವಾಸ, ಅದಿವಾಸ ಹೋಮ, ಕುಂಭೇಶ ಕರ್ಕರಿ ಪೂಜೆ, ಪರಿಕಲಶ ಪೂಜೆ, ಬ್ರಹ್ಮಕಲಶ ಪೂಜೆ, ಮಹಾಪೂಜೆ ನಡೆಯಲಿದೆ.

ಮಾ.25ರಂದು ಬೆಳಗ್ಗೆ 6ಕ್ಕೆ ಗಣಪತಿ ಹೋಮ, 9.30ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತ. 9.35ಕ್ಕೆ ಶ್ರೀ ಗಣಪತಿ ದೇವರ ಪ್ರತಿಷ್ಠೆ 10.15ಕ್ಕೆ ಧಾರ್ಮಿಕ ಸಭೆ ಜರಗಲಿದ್ದು ಉತ್ಸವ ಸಮಿತಿ ಅಧ್ಯಕ್ಷ ರಾಮಚಂದ್ರ ಮಣಿಯಾಣಿ ಅತ್ತನಾಡಿ ಅಧ್ಯಕ್ಷತೆ ವಹಿಸುವರು. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಮತ್ತು ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಆಶೀರ್ವಚನ ನೀಡುವರು.

ಮಾಯಪ್ಪಾಡಿ ಅರಮನೆಯ ದಾನಮಾರ್ತಾಂಡ ವರ್ಮ ರಾಜ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಸಂತ ಪೈ ಬದಿಯಡ್ಕ, ಕಾರ್ಯ ನಿರ್ವಹಣಾ ಅಧಿಕಾರಿ ಕೆ.ಜಗದೀಶ್ ಪ್ರಸಾದ್, ಉದ್ಯಮಿ ಮಹಾಬಲೇಶ್ವರ ಭಟ್ ಎಡಕ್ಕಾನ, ಡಾ.ಸದಾಶಿವ ಶೆಟ್ಟಿ ಕುಳೂರು ಕನ್ಯಾನ, ಕೆ.ಕೆ. ಶೆಟ್ಟಿ ಕುತ್ತಿಕ್ಕಾರು, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಕಾಂತಡ್ಕ ಭಾಗವಹಿಸುವರು.

ಮಹಾಗಣಪತಿ ದೇಗುಲ, ನಮಸ್ಕಾರ ಮಂಟಪದ ನಿರ್ಮಾಣ ಪ್ರಾಯೋಜಕ ಮಹಾಬಲೇಶ್ವರ ಭಟ್ ಎಡಕ್ಕಾನ, ಶ್ರೀ ಮಹಾವಿಷ್ಣುವಿನ ದೇಗುಲದ ಪುನರ್ ನಿರ್ಮಾಣದ ಪ್ರಾಯೋಜಕರಾದ ಅಖಿಲ ಕೇರಳ ಯಾದವ ಸಭಾ ಪರವಾಗಿ ನಾರಾಯಣ ಮಣಿಯಾಣಿ ನಾಗಮೂಲೆ, ನಂದಿ ಮಂಟಪದ ನಿರ್ಮಾಣದ ಪ್ರಾಯೋಜಕರ ಪರವಾಗಿ ಯಶೋದ ವಿಶ್ವನಾಥ ನಾಯಕ್ ಮಂಡೆಬೆಟ್ಟು, ಪ್ರಭಾಕರ ನಾಯಕ ಮಂಡೆಬೆಟ್ಟು, ರಕ್ತೇಶ್ವರೀ ಗುಡಿಯ ಪ್ರಾಯೋಜಕರಾದ ಡಾ.ಭಾಸ್ಕರ ರಾವ್ ಕೆರೆಮೂಲೆ, ದೇವರ ನೈವೇದ್ಯ ಕೊಠಡಿ ನಿರ್ಮಾಣದ ಪ್ರಾಯೋಜಕರಾದ ಗ್ರಾಮಸ್ಥರನ್ನು ಈ ಸಂದರ್ಭದಲ್ಲಿ ಗೌರವಿಸಲಾಗುವುದು.

ಬೆಳಗ್ಗೆ 10.45ರಿಂದ 11.30ರ ಶುಭಮುಹೂರ್ತದಲ್ಲಿ ಶ್ರೀ ವಿಷ್ಣು ದೇವರ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ, ಮಹಾಪೂಜೆ, ಮಂತ್ರಾಕ್ಷತೆ, ಮಧ್ಯಾಹ್ನ 2ರಿಂದ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದವರಿಂದ ಕಿರಾತಾರ್ಜುನ ಎಂಬ ಯಕ್ಷಗಾನ ನಡೆಯಲಿದೆ.

ರಾಣಿಪುರದಲ್ಲಿ ವಿಶ್ವ ಜಲ ದಿನಾಚರಣೆ



ಕಾಸರಗೋಡು: ವಿಶ್ವಜಲ ದಿನಾಚರಣೆಯ ಅಂಗವಾಗಿ ರಾಣಿಪುರ ಅರಣ್ಯ ಸಂರಕ್ಷಣಾ ಸಮಿತಿ ಹಾಗೂ ಕೇರಳ ಅರಣ್ಯ ಮತ್ತು ವನ್ಯಜೀವಿ ಇಲಾಖೆಯ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ರಾಣಿಪುರ ಪ್ರವಾಸೋದ್ಯಮ ಕೇಂದ್ರದ ಪರಿಸರದಲ್ಲಿ ಭಾನುವಾರ ಹಮ್ಮಿಕೊಳ್ಳಲಾಯಿತು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅರಣ್ಯ ಸಂರಕ್ಷಣಾ ಸಮಿತಿ ಅಧ್ಯಕ್ಷ ಎಸ್. ಮಧುಸೂದನನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಿಟಿಪಿಸಿ ಕಾರ್ಯದರ್ಶಿ ಜೆ.ಕೆ. ಜಿಜೇಶ್ ಕುಮಾರ್, ಪನತ್ತಡಿ ವಲಯ ಅರಣ್ಯಾಧಿಕಾರಿ ಎಂ.ಪಿ.ರಾಜು, ಬೀಟ್ ಅರಣ್ಯಾಧಿಕಾರಿಗಳಾದ ವಿಷ್ಣುಕೃಷ್ಣನ್ ಮತ್ತು ಡಿ.ಕೆ.ವಿಮಲ್ ರಾಜ್ ಮಾತನಾಡಿದರು.

ಬೇಸಿಗೆಯ ತೀವ್ರತೆಯ ನಡುವೆಯೂ ರಾಣಿಪುರ, ಪಂದಕ್ಕಲ್, ಅಚ್ಚಂಪಾರ, ಕುಂದುಪಳ್ಳಿ, ಪರಕ್ಕಡವು ಮೊದಲಾದ ಪ್ರದೇಶಗಳಲ್ಲಿ ಬಿದಿರಿನ ಪಾತ್ರೆಗಳಲ್ಲಿ ನೀರು ಹಾಯಿಸಿ ಪಕ್ಷಿಗಳಿಗೆ ನೀರು ಒದಗಿಸಲಾಗುತ್ತಿದೆ. ಹಿಂದಿನ ವರ್ಷಗಳಲ್ಲೂ ಈ ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಂಡಿತ್ತು.

ಶ್ರೀಕೃಷ್ಣ ಭಜನಾ ಮಂದಿರ ರಜತ ಸಂಭ್ರಮ: ಒಡಿಯೂರು ಸ್ವಾಮೀಜಿಗೆ ಆಮಂತ್ರಣ ಪತ್ರ



ಕಾಸರಗೋಡು: ನಗರದ ಅಮ್ಮೆ ಶ್ರೀ ಕೃಷ್ಣ ಭಜನಾ ಮಂದಿರದಲ್ಲಿ ಏ. 23ರಿಂದ 25ರ ವರೆಗೆ ನಡೆಯಲಿರುವ ಮಂದಿರದ ರಜತ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಒಡಿಯೂರು ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿಗಳವರಿಗೆ ನೀಡಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು.

ಈ ಸಂದರ್ಭ ಸಮಿತಿಯ ಉಪಾಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ಪ್ರಧಾನ ಕಾರ್ಯದರ್ಶಿ ಗುಣಪಾಲ ಅಮ್ಮೆ, ಕೋಶಾಧಿಕಾರಿ ವೇಣುಗೋಪಾಲ್, ಸಮಿತಿ ಕಾರ್ಯದರ್ಶಿಗಳಾದ ರಾಜೇಶ್ ಅಮ್ಮೆ, ಕಿಶೋರ್ ಎಸ್‌ವಿಟಿ, ರಾಮಚಂದ್ರ ಅಮ್ಮೆ, ಯೋಗೀಶ್ ಅಮ್ಮೆ ಉಪಸ್ಥಿತರಿದ್ದರು.



ಬಂದ್ಯೋಡು ಅಡ್ಕ ಶ್ರೀ ಭಗವತೀ ಕ್ಷೇತ್ರದಲ್ಲಿ ಜರಗಿದ ಕಳಿಯಾಟ ಮಹೋತ್ಸವಕ್ಕೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಭೇಟಿ ನೀಡಿ ಶ್ರೀ ದೇವರ ಅನುಗ್ರಹ ಪಡೆದರು.

90 ವರ್ಷಗಳ ಬಳಿಕ ಬ್ರಹ್ಮಕಲಶದ ಸಂಭ್ರಮ | ಮಾ.29ರಿಂದ ಏ.3ರ ವರೆಗೆ ಎಣ್ಮಕಜೆ, ಪಡ್ರೆ, ಬದಿಯಡ್ಕ, ಕುಂಬ್ಡಾಜೆಯ ಚೌಗ್ರಾಮ ದೇವಸ್ಥಾನದಲ್ಲಿ ಅದ್ದೂರಿ ಉತ್ಸವ

ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇಗುಲ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ





ಪೆರ್ಲ: ಎಣ್ಮಕಜೆ ಹಾಗೂ ಬದಿಯಡ್ಕ ಗ್ರಾಮ ಪಂಚಾಯತ್‌ನ ಸಂಗಮ ಪ್ರದೇಶ ನೆಲ್ಲಿಕುಂಜೆಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಮಾ.29ರಿಂದ ಏ. 3ರ ವರೆಗೆ ಜರಗಲಿದೆ.

ಎಣ್ಮಕಜೆ, ಪಡ್ರೆ, ಬದಿಯಡ್ಕ, ಕುಂಬ್ಡಾಜೆ ಗ್ರಾಮಗಳನ್ನೊಳಗೊಂಡ ಚೌಗ್ರಾಮ ದೇವಸ್ಥಾನ ಇದಾಗಿದ್ದು, ದೇಲಂಪಾಡಿ ಬ್ರಹ್ಮಶ್ರೀ ಗಣೇಶ ತಂತ್ರಿಯವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿರುವುದಾಗಿ ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಬಾಲಸುಬ್ರಹ್ಮಣ್ಯ ಸರ್ಪಮಲೆ ದೇವಸ್ಥಾನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಶೃಂಗೇರಿ ಜಗದ್ಗುರು ಶ್ರೀ ಭಾರತೀ ತೀರ್ಥ ಸ್ವಾಮೀಜಿ ಹಾಗೂ ತತ್ಕರಕಮಲ ಸಂಜಾತ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳ ದಿವ್ಯಾನುಗ್ರಹ, ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರ ಪೂರ್ಣಾನುಗ್ರಹ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನ ಹಾಗೂ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾಗಿ ಹೊಸನಗರ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ದಿವ್ಯಾನುಗ್ರಹದೊಂದಿಗೆ ಕಾರ್ಯಕ್ರಮ ಜರಗಲಿದೆ. ದೇವಸ್ಥಾನಕ್ಕೆ 800 ವರ್ಷಕ್ಕೂ ಹೆಚ್ಚಿನ ಇತಿಹಾಸವಿದ್ದು, 1934ರಲ್ಲಿ ಬ್ರಹ್ಮಕಲಶ ನಡೆದಿರುವ ಬಗ್ಗೆ ಮಾಹಿತಿಯಿದೆ. 90 ವರ್ಷಗಳ ಬಳಿಕ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ನಡೆಯುತ್ತಿದೆ.

ಮಾ.29ರಂದು ಬೆಳಗ್ಗೆ 10ಕ್ಕೆ ಪೆರ್ಲ ಶ್ರೀ ಸತ್ಯನಾರಾಯಣ ಮಂದಿರದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ನೆಲ್ಲಿಕುಂಜೆ ಕ್ಷೇತ್ರಕ್ಕೆ ಹೊರಡುವುದು. ಸಂಜೆ 5ಕ್ಕೆ ತಂತ್ರಿವರ್ಯರಿಗೆ ಪೂರ್ಣಕುಂಭ ಸ್ವಾಗತ, ರಾತ್ರಿ 7 ಗಂಟೆಗೆ ದೀಪ ಪ್ರಜ್ವಲನೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ನಡೆಯುವುದು. ಪ್ರತಿ ದಿನ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿರುವುದು. ಮಾ.30ರಂದು ಸಂಜೆ 4ಕ್ಕೆ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಹಾಗೂ ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಸ್ವಾಮೀಜಿಯವರು ಆಶೀರ್ವಚನ ನೀಡುವರು. ಉಪನ್ಯಾಸಕ ಡಾ.ರವೀಶ ಪಡುಮಲೆ ಧಾರ್ಮಿಕ ಭಾಷಣ ಮಾಡುವರು. ಏ.3ರಂದು ಬೆಳಗ್ಗೆ 5ಕ್ಕೆ 108 ತೆಂಗಿನಕಾಯಿ ಗಣಪತಿ ಹೋಮ, ಪ್ರತಿಷ್ಠಾ ಪಾಣಿ, 9.21ರ ವೃಷಭ ಲಗ್ನ ಸುಮುಹೂರ್ತದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಪ್ರತಿಷ್ಠೆ ಜೀವಕಲಶಾಭಿಷೇಕ, ಬ್ರಹ್ಮಕಲಶಾಭಿಷೇಕ, ಪ್ರತಿಷ್ಠಾ ಬಲಿ ನಡೆಯುವುದು, ಅಪರಾಹ್ನ 3 ಗಂಟೆಗೆ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಆಶೀರ್ವಚನ ನೀಡುವರು. ಕಜಂಪಾಡಿ ಸುಬ್ರಹ್ಮಣ್ಯ ಭಟ್ ಧಾರ್ಮಿಕ ಭಾಷಣ ಮಾಡುವರು. ಶೃಂಗೇರಿ ಶ್ರೀ ಶಾರದಾಪೀಠ ಕೋಟೆಕಾರು ಮಠದ ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ ಹಾಗೂ ಕರ್ನಾಟಕ ಬ್ಯಾಂಕ್ ಎಂಡಿ ರಾಘವೇಂದ್ರ ಶ್ರೀನಿವಾಸ ಭಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಸುದ್ದಿಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಮಾನಾಥ ರೈ ಮೇಗಿನ ಕಡಾರು, ಡಾ.ಮೇಘಶ್ಯಾಮ್ ನೆಲ್ಲಿಕುಂಜೆ, ಗೋಪಾಲಕೃಷ್ಣ ಶರ್ಮ ಸರವು, ಮಹೇಶ್ ಗುತ್ತು, ಶ್ರೀಕೃಷ್ಣ ಭಟ್ ಶಿರಂತಡ್ಕ, ದಾಸಪ್ಪ ರೈ ನೆಲ್ಲಿಕುಂಜೆ, ಡಾ.ಸತೀಶ್ ಪುಣಿಂಚಿತ್ತಾಯ, ರಾಜಶೇಖರ್ ನೆಲ್ಲಿಕುಂಜೆ ಉಪಸ್ಥಿತರಿದ್ದರು.

ಸುತ್ತ ಮುತ್ತ

ಜ್ಞಾನಸುಧಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಕಾರ್ಯಾರಂಭ

ಕಾರ್ಕಳ: ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್‌ಟ್ರಸ್ಟ್ ಐದನೇ ಅಂಗಸಂಸ್ಥೆ ಅಜೆಕಾರ್ ಜ್ಞಾನಸುಧಾಆಂಗ್ಲ ಮಾಧ್ಯಮ ಪ್ರೌಢಶಾಲೆ ಪದ್ಮನಗರ, ಅಜೆಕಾರು 2026–27ನೇ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭ ಮಾಡಲು ಶಾಲಾ ಶಿಕ್ಷಣ ಇಲಾಖೆ ಕರ್ನಾಟಕ ಸರಕಾರದಿಂದಅನುಮೋದನೆ ಪಡೆದಿದೆ. ಅಜೆಕಾರಿನ ಪದ್ಮನಗರದಲ್ಲಿಟ್ರಸ್ಟ್‌ನ 4ನೇ ಕ್ಯಾಂಪಸ್ ನಿರ್ಮಾಣಗೊಂಡಿದ್ದು ಟ್ರಸ್ಟಿನ ಸಮಾಜಸೇವಾ ಮತ್ತು ಶೈಕ್ಷಣಿಕ ಕಾಳಜಿಯ ಭಾಗವಾಗಿ ಅಜೆಕಾರಿನ ಮರ್ಣೆ ಗ್ರಾ.ಪಂ. ವ್ಯಾಪ್ತಿಯ ವಿದ್ಯಾರ್ಥಿಗಳಿಗೆ 9ನೇ ತರಗತಿಯಿಂದಉಚಿತ ಶಿಕ್ಷಣವನ್ನು ನೀಡುವುದಾಗಿ ನಿರ್ಧರಿಸಿದೆ. ಟ್ರಸ್ಟ್ ಕಳೆದ 15 ವರ್ಷಗಳಿಂದ ಮೌಲ್ಯಾಧಾರಿತ ಶಿಕ್ಷಣ ನೀಡುವುದರೊಂದಿಗೆ ಅನೇಕ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದೆ. ಪ್ರಸ್ತುತ ಎಂಟನೇ ತರಗತಿ ಪೂರ್ಣಗೊಳಿಸಿ 9ನೇ ತರಗತಿಗೆಅಜೆಕಾರ್ ಜ್ಞಾನಸುಧಾ ಸಂಸ್ಥೆಯಲ್ಲಿ ದಾಖಲಾತಿ ಬಯಸುವ ವಿದ್ಯಾರ್ಥಿಗಳು ಎಂಟನೇ ತರಗತಿಯ ಅಂಕಪಟ್ಟಿ ಆಧಾರ್‌ಕಾರ್ಡ್ ಹಾಗೂ ಪೋಷಕರೊಂದಿಗೆ ಶಾಲಾ ಕಚೇರಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆದು ಕೊಳ್ಳಬಹುದುಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಏ.30ರ ಒಳಗೆ ಶಾಲಾ ಕಚೇರಿ ಅಥವಾ ದೂ.ಸಂಖ್ಯೆ 7992920707ನ್ನು ಸಂಪರ್ಕಿಸಲು ಕೋರಲಾಗಿದೆ.

ಹೊನ್ನನಕೇರಿ–ಸಾಲೇರಹಿತ್ಲು ನಾಗಬನದ ಪ್ರತಿಷ್ಠಾ ವರ್ಧಂತಿ



ಕುಂದಾಪುರ: ಇಲ್ಲಿನ ಪಾರಿಜಾತ ಸರ್ಕಲ್ ಸಮೀಪದ ಹೊನ್ನನಕೇರಿಯಲ್ಲಿರುವ ಸಾಲೇರಹಿತ್ಲು ನಾಗಬನದ 43ನೇ ವರ್ಷದ ಪ್ರತಿಷ್ಠಾ ವರ್ಧಂತಿ ಮಹೋತ್ಸವವು ಶುಕ್ರವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವೇ.ಮೂ.ನಾರಾಯಣ ಹೊಳ್ಳರ ನೇತೃತ್ವದಲ್ಲಿ ಜರುಗಿತು. ಬೆಳಿಗ್ಗೆ 7ಕ್ಕೆ ಶ್ರೀ ದೇವರಿಗೆ ಫಲ ಸಮರ್ಪಣೆ, ಗುರು ಪ್ರಾರ್ಥನೆ, ಗಣಪತಿ ಪೂಜೆ, ಗಣಪತಿ ಹೋಮ, ಪ್ರಧಾನ ಹೋಮ, ಕಲಶ ಸ್ನಾಪನೆ, ಶ್ರೀನಾಗ ದೇವರಿಗೆ ಕಲಶಾಭಿ ಷೇಕ, ಮಹಾ ಪೂಜೆ, ಮಹಾ ಮಂಗಳಾರತಿ ನೆರವೇರಿತು. 11 ಗಂಟೆಗೆ ಶ್ರೀ ನಾಗದೇವರ ದರ್ಶನ ಸೇವೆ ಯು ನಾಗಪಾತ್ರಿಗಳಾದ ಬಡಾಕೆರೆ ಲೋಕೇಶ್ ಅಡಿಗರವರಿಂದ ನಡೆಯಿತು. ಪಲ್ಲಪೂಜೆ ನೆರವೇರಿತು. ಹೊನ್ನನಕೇರಿ ನಾಗೇಂದ್ರ ಸೇವಾ ಸಮಿತಿಯ ಅಧ್ಯಕ್ಷರು ಇದ್ದರು.

ಮೊದಲನೇ ಪುಟದಿಂದ

ಗುಬ್ಬಚ್ಚಿ

ಅಲ್ಲದೆ ಪರಿಸರ ಸಮತೋಲನವನ್ನು ಕಾಪಾಡುವ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರ ವಹಿಸುವ ಗುಬ್ಬಚ್ಚಿಗಳು ಅಳಿವಿನಂಚಿನಲ್ಲಿವೆ ಎಂಬುದನ್ನು ವಿವರಿಸಿ ತಿಳಿಸಲಾಯಿತು. ಆದರೂ ಕುಂಬಳೆ ಪೇಟೆ ಹಾಗೂ ಪರಿಸರ ವ್ಯಾಪ್ತಿಯಲ್ಲಿ ಗುಬ್ಬಚ್ಚಿಗಳ ಸಂಖ್ಯೆಯಲ್ಲಿ ಇಳಿಮುಖವಾಗಲಿಲ್ಲ ಎಂಬುದು ಕುಂಬಳೆಯ ವಿವಿಧ ಅಂಗಡಿ ಮಾಲಕರ ಅಭಿಮತವಾಗಿದೆ. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆಸಿದ ಗುಬ್ಬಚ್ಚಿ ಗಣತಿಯಲ್ಲಿ ಸುಮಾರು 33 ಗುಬ್ಬಚ್ಚಿಗಳು ಕುಂಬಳೆ ಪರಿಸರದಲ್ಲಿರುವುದು ಅರಿವಿಗೆ ಬಂತು. ಪಕ್ಷಿ ತಜ್ಞರಾದ ಶಿಕ್ಷಕ ರಾಜು ಕಿದೂರು, ಮಾಕ್ಸಿನ್ ರೋಡ್ರಿಗ್ರಸ್, ಪಕ್ಷಿ ನಿರೀಕ್ಷಕ ಸಂಕರ್ಷಣ್, ಉಷಾಕಿರಣ್ ಮುಂತಾದವರು ಗಣತಿಗೆ ನೇತೃತ್ವ ವಹಿಸಿದ್ದರು. ವಿದ್ಯಾರ್ಥಿಗಳಾದ ಸ್ಪಂದನ, ಸಾಧನಾ, ಚೈತ್ರಾ, ಧೃತಿ, ಸಾತ್ವಿಕಾ, ಲಕ್ಷ್ಯ, ನಿಹಾರಿಕಾ ಇದ್ದರು.

ದಿಡ್ಡು ಸಮಸ್ಯೆ

ಬ್ರಹ್ಮರಕೊಟ್ಲು ಟೋಲ್ ಗೇಟ್ ತೆರವುಗೊಳಿಸಬೇಕು ಎಂಬ ಕೂಗು ಎದ್ದು ಸಾಂಕೇತಿಕ ಪ್ರತಿಭಟನೆಯು ಇತ್ತೀಚೆಗೆ ನಡೆದಿತ್ತು. ತದನಂತರ ಹೋರಾಟಗಾರರಿಂದ ಈ ಸಂಬಂಧ ಯಾವುದೇ ಹೋರಾಟದ ಸುಳಿವು ಇಲ್ಲದಿದ್ದು ಸಾರ್ವಜನಿಕ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ಜಪ್ತಿ | ಯಕ್ಷಗಾನ ಕಲಾರಂಗದ 'ವಿದ್ಯಾಪೋಷಕ್' ಯೋಜನೆಯಡಿ ಐವರು ಸಹೋದರಿಯರ ನೆರವು

ಬಡ, ಪ್ರತಿಭಾವಂತ ವಿದ್ಯಾರ್ಥಿಗೆ ನೂತನ ಮನೆ ಹಸ್ತಾಂತರ

ಉಡುಪಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 97.6% ಅಂಕ ಗಳಿಸಿ ಅಂಕಗಳಲ್ಲಷ್ಟೇ ಅಲ್ಲದೆ, ಬಡತನದ ನಡುವೆಯೂ ಅದಮ್ಯ ಚೇತನ ಮೆರೆದಿದ್ದ ಪ್ರತಿಭಾವಂತ ವಿದ್ಯಾರ್ಥಿ ನಿಖಿಲ್ ಬದುಕಿಗೆ ಈಗ ಹೊಸ ಆಸರೆ ಸಿಕ್ಕಿದೆ. ಯಕ್ಷಗಾನ ಕಲಾರಂಗದ 'ವಿದ್ಯಾಪೋಷಕ್' ಯೋಜನೆಯಡಿ ನಿಖಿಲ್ ಕುಟುಂಬಕ್ಕೆಕುಂದಾಪುರದ ಜಪ್ತಿಯಲ್ಲಿ ಸುಸಜ್ಜಿತ ನೂತನ ಮನೆ 'ಮಂಜುನಾಥ ನಿಲಯ'ವನ್ನು ಹಸ್ತಾಂತರಿಸುವ ಮೂಲಕ ಸಂಸ್ಥೆ ತನ್ನ 91ನೇ ಮನೆ ನಿರ್ಮಾಣದ ಸಾರ್ಥಕತೆಯನ್ನು ಮೆರೆದಿದೆ.



ಹೆಣ್ಣುಮಕ್ಕಳ ಸಾರ್ಥಕ ಸೇವೆ

ಪಾಂಡೇಶ್ವರ ಮಂಜುನಾಥ ಹೊಳ್ಳರ ಸ್ಮರಣಾರ್ಥ ಹಾಗೂ ಸರಸ್ವತಿ ಹೊಳ್ಳರ ಗೌರವಾರ್ಥ ಅವರ ಐವರು ಪುತ್ರಿಯರು ಈ ಮನೆಗೆ ಪ್ರಾಯೋಜಕತ್ವ ವಹಿಸಿರುವುದು ವಿಶೇಷ. 7 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಈ ಮನೆಯನ್ನು ತಾಯಿ ಸರಸ್ವತಿ ಹೊಳ್ಳರು ಶನಿವಾರ (ಮಾ. 21) ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪುತ್ರಿ ಡಾ. ಗೀತಾ ಸಾಮಕ್, 'ದೃಷ್ಟಿ ದೋಷದ ನಡುವೆಯೂ ಮಾದರಿ ಕೃಷಿಕರಾಗಿ, ಹತ್ತಕ್ಕೂ ಹೆಚ್ಚು ಬಡವರಿಗೆ ಮನೆ ಕಟ್ಟಿಸಿಕೊಟ್ಟ ನಮ್ಮ ತಂದೆಯೇ ನಮಗೆ ಪ್ರೇರಣೆ. ಇಂದು ಅಮ್ಮನ ಕೈಯಿಂದಲೇ ಈ ಮನೆ ಉದ್ಘಾಟನೆಯಾಗುತ್ತಿರುವುದು ನಮಗೆ ಧನ್ಯತೆ ತಂದಿದೆ ಎಂದು ಭಾವುಕರಾದರು.

ಪಾರದರ್ಶಕತೆಗೆ ಸಾಕ್ಷಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, 'ಯಕ್ಷಗಾನ ಕಲಾರಂಗವು ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ಮುಲಾಜಿಗೊಳಗಾಗದೆ, ಸ್ವತಃ ಮನೆಗೆ ಭೇಟಿ ನೀಡಿ ಅರ್ಹರನ್ನು ಗುರುತಿಸುತ್ತದೆ. ಇಂತಹ ಪಾರದರ್ಶಕ, ತಕ್ಷಣ ಸ್ಪಂದಿಸುವ ಸಂಸ್ಥೆಯನ್ನು ನಾನೆಲ್ಲೂ ಕಂಡಿಲ್ಲ ಎಂದು ಶ್ಲಾಘಿಸಿದರು. ಶಿವಮೊಗ್ಗದ ರೋಟರಿ ಮಾಜಿ ಗವರ್ನರ್ ಡಾ. ಪಿ. ನಾರಾಯಣ, ತಮ್ಮ ಕುಟುಂಬದ ಹೆಣ್ಣುಮಕ್ಕಳ ಸಮಾಜಮುಖಿ ಕಾರ್ಯಕ್ಕೆ ಅಭಿಮಾನ ವ್ಯಕ್ತಪಡಿಸಿದರು.

ಸಮಾಜಕ್ಕೆ ದೊಡ್ಡ ಸಂದೇಶ

ಜಿಲ್ಲಾ ಕಸಾಪ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗರು ಮಾತನಾಡಿ, ಈ ಸಂಸ್ಥೆಯ ಕ್ರಿಯಾಶೀಲತೆಯೇ ಸಮಾಜಕ್ಕೆ ಒಂದು ದೊಡ್ಡ ಸಂದೇಶ ಎಂದರು. ಕಲಾರಂಗದ ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಅವರು ಸಂಸ್ಥೆಯ ಆಶಯಗಳ ಕುರಿತು ಪ್ರಸ್ತಾವನೆ ಮಂಡಿಸಿ ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯಲ್ಲಿ ಉಷಾ ಎನ್. ಹೆಬ್ಬಾರ್, ಡಾ. ಗಣೇಶ್ ಮಧ್ಯಸ್ಥ ಕಿಶೋರ್ ಶೆಟ್ಟಿ ಹಾಗೂ ಹೊಳ್ಳರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಹೊಳ್ಳರ ಸಮಾಜಮುಖಿ ಪರಂಪರೆ

ಈ ಮನೆಗೆ ಪ್ರಾಯೋಜಕತ್ವ ನೀಡಿದ ಪಾಂಡೇಶ್ವರ ಮಂಜುನಾಥ ಹೊಳ್ಳರ ಕುಟುಂಬದ ಹಿನ್ನೆಲೆ ಅತ್ಯಂತ ಆದರ್ಶಪ್ರಾಯವಾಗಿದೆ. ಮಂಜುನಾಥ ಹೊಳ್ಳರು ದೃಷ್ಟಿ ದೋಷದ ಸವಾಲಿನ ನಡುವೆಯೂ ಹತ್ತಕ್ಕೂ ಅಧಿಕ ಬಡವರಿಗೆ ಮನೆ ನಿರ್ಮಿಸಿಕೊಟ್ಟ ಧೀಮಂತ ವ್ಯಕ್ತಿ. ಈಗ ಅವರ ಐವರು ಪುತ್ರಿಯರು (ಡಾ. ಗೀತಾ ಸಾಮಕ್ ಮತ್ತು ಸೋದರಿಯರು) ತಮ್ಮ ತಂದೆಯ ಸ್ಮರಣಾರ್ಥ ಹಾಗೂ ತಾಯಿ ಸರಸ್ವತಿ ಹೊಳ್ಳರ ಗೌರವಾರ್ಥ 7 ಲಕ್ಷ ರೂಪಾಯಿ ವೆಚ್ಚದಲ್ಲಿ ಈ 91ನೇ ಮನೆಯನ್ನು ನಿರ್ಮಿಸಿಕೊಡುವ ಮೂಲಕ ತಂದೆಯ ಸಮಾಜಸೇವಾ ಪರಂಪರೆಯನ್ನು ಅರ್ಥಪೂರ್ಣವಾಗಿ ಮುಂದುವರಿಸಿದ್ದಾರೆ.

ಉಡುಪಿ: 55 ಫಲಾನುಭವಿಗಳಿಗೆ ವೃತ್ತಿಪರ ಸೌಲಭ್ಯಗಳ ಹಸ್ತಾಂತರ




ಉಡುಪಿ: 2025–26ನೇ ಸಾಲಿನ ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣ ಪೂರೈಕೆ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಉಡುಪಿ ಶಾಸಕರಾದ ಯಶ್‌ಪಾಲ್ ಸುವರ್ಣರವರು ತಮ್ಮ ಕಚೇರಿಯಲ್ಲಿ ಟೈಲರಿಂಗ್ ಮಿಷನ್, ಮರಗೆಲಸ, ಗಾರೆ ಕೆಲಸ, ಎಲೆಕ್ಟ್ರಿಷಿಯನ್, ಬ್ಯೂಟಿಪಾರ್ಲರ್ ಕಿಟ್‌ಗಳನ್ನು 55 ಮಂದಿ ಫಲಾನುಭವಿಗಳಿಗೆ ಸಾಂಕೇತಿಕವಾಗಿ ವಿತರಿಸಿದರು.

ಬಳಿಕ ಮಾತನಾಡಿ, ಈ ಯೋಜನೆಗಳ ಮೂಲಕ ಆಯಾ ವೃತ್ತಿಯಲ್ಲಿ ತೊಡಗಿರುವವರಿಗೆ ಅಗತ್ಯವಾದ ಕಿಟ್‌ಗಳನ್ನು ನೀಡಲಾಗಿದ್ದು, ಇದರಿಂದ ಜನರ ಉದ್ಯೋಗದಲ್ಲಿ ಸ್ಥಿರತೆ ಹಾಗೂ ಆದಾಯ ಹೆಚ್ಚಳಕ್ಕೆ ಸಹಾಯವಾಗಲಿದೆ. ಹಲವರು ತಮ್ಮ ಜೀವನೋಪಾಯವನ್ನು ಸುಧಾರಿಸಿಕೊಳ್ಳಲು ಈ ಯೋಜನೆಗಳ ನೆರವು ಪ್ರಮುಖವಾಗಲಿದೆ. ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಇಂತಹ ಯೋಜನೆಗಳನ್ನು ಸರಕಾರ ಜಾರಿಗೆ ತಂದಿದ್ದು ಜನರು ಈ ಮೂಲಕ ಸ್ವಾವಲಂಬಿ ಜೀವನ ನಡೆಸಬೇಕು ಎಂದರು.

ಇದೇ ವೇಳೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕ ಶ್ರೀ ಕೃಷ್ಣ ಪೂಜಾರಿ ಅವರಿಗೆ ಕೃತಕ ಕಾಲು ವಿತರಿಸಲಾಯಿತು. ಈ ವೇಳೆ ಗ್ರಾಮಾಂತರ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕರಾದ ಜಿ. ವಾಮನ ನಾಯಕ್, ಹಂದಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಶೋಭಾ, ನಿವೃತ್ತ ಶಿಕ್ಷಕಿ ಲಲಿತಾ ಬಾಯಿ, ಕೆಂಜೂರು ಶಾಲೆಯ ಮುಖ್ಯ ಶಿಕ್ಷಕ ಕೆ.ಶಾಂತಾರಾಮ ಶೆಟ್ಟಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಫಲಾನುಭವಿಗಳು ಉಪಸ್ಥಿತರಿದ್ದರು.

ಮಾ. 24, 25ರಂದು ಕಾಪುವಿನಲ್ಲಿ 'ಸುಗ್ಗಿ ಮಾರಿಪೂಜೆ'ಯ ವೈಭವ



ಕಾಪು: ತುಳುನಾಡಿನ ಸಪ್ತ ಜಾತ್ರೆಗಳಲ್ಲಿ ಒಂದಾಗಿರುವ ಕಾಪುವಿನ ಸುಗ್ಗಿ ಮಾರಿಪೂಜೆಯು ಮಾರ್ಚ್ 24 ಮತ್ತು 25ರಂದು ಅತ್ಯಂತ ಶ್ರದ್ಧಾಭಕ್ತಿಯಿಂದ ಜರುಗಲಿದೆ.

ಕಾಪುವಿನ ಶ್ರೀ ಹಳೆ ಮಾರಿಯಮ್ಮ ದೇವಸ್ಥಾನ, ಶ್ರೀ ಹೊಸ ಮಾರಿಯಮ್ಮ ದೇವಸ್ಥಾನ ಮತ್ತು ಶ್ರೀ ಮೂರನೇ ಮಾರಿಯಮ್ಮ ದೇವಸ್ಥಾನಗಳಲ್ಲಿ ಏಕಕಾಲದಲ್ಲಿ ಈ ಕಾಲಾವಧಿ ಸುಗ್ಗಿ ಮಾರಿಪೂಜೆ ನೆರವೇರಲಿದೆ.

ಮಾ. 24ರಂದು ರಾತ್ರಿ ಹಳೆ ಮಾರಿಯಮ್ಮ ದೇವಸ್ಥಾನಕ್ಕೆ ವೆಂಕಟರಮಣ ದೇವಸ್ಥಾನದಿಂದ ಹಾಗೂ ಹೊಸ ಮತ್ತು ಮೂರನೇ ಮಾರಿಯಮ್ಮ ದೇವಸ್ಥಾನಗಳಿಗೆ ಶ್ರೀ ಲಕ್ಷ್ಮೀ ಜನಾರ್ದನ ದೇವಸ್ಥಾನದಿಂದ ದೇವಿಯ ಬಿಂಬ ಮತ್ತು ಚಿನ್ನಾಭರಣಗಳನ್ನು ಮೆರವಣಿಗೆಯ ಮೂಲಕ ತರಲಾಗುವುದು. ಬಳಿಕ ದೇವಿಯನ್ನು ಗದ್ದುಗೆಯೇರಿಸುವುದರೊಂದಿಗೆ ಮಾರಿಪೂಜೆ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುತ್ತದೆ.

ಮಾ. 25ರಂದು ಸಂಜೆ ದರ್ಶನ ಸೇವೆ ನಡೆದ ಬಳಿಕ ಮಾರಿಯಮ್ಮ ದೇವಿಯ ಬಿಂಬ ವಿಸರ್ಜನೆ ಮಾಡಲಾಗುವುದು.

ಭಕ್ತರ ಅನುಕೂಲಕ್ಕಾಗಿ ಮೂರೂ ಮಾರಿಗುಡಿಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಹಳೆ ಮಾರಿಯಮ್ಮ ದೇವಸ್ಥಾನದ ಆಡಳಿತ ಮೊಕ್ತೇಸರ ಪ್ರಸಾದ್ ಜಿ. ಶೆಣೈ, ಹೊಸ ಮಾರಿಗುಡಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಡಿಕೆರೆ ರತ್ನಾಕರ ಶೆಟ್ಟಿ, ಕಾರ್ಯನಿರ್ವಹಣಾಧಿಕಾರಿ ರವಿಕಿರಣ್, ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ. ವಾಸುದೇವ ಶೆಟ್ಟಿ ಹಾಗೂ ಮೂರನೇ ಮಾರಿಗುಡಿಯ ಮನೋಹರ್ ಎಸ್. ಶೆಟ್ಟಿ ಮತ್ತು ಕಾರ್ಯನಿರ್ವಹಣಾಧಿಕಾರಿ ಮಂಜುಳಾ ಟಿ. ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುದರಂಗಡಿ: ರಸ್ತೆ ಕಾಮಗಾರಿಗೆ ಗುದ್ದಲಿಪೂಜೆ, ಉದ್ಘಾಟನೆ



ಪಡುಬಿದ್ರಿ: ಕಾಪು ವಿಧಾನಸಭಾ ಕ್ಷೇತ್ರದ ಮುದರಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿವಿಧ ರಸ್ತೆ ಅಭಿವೃದ್ಧಿಗೆ ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅವರ ಶಿಫಾರಸ್ಸಿನ ಮೇರೆಗೆ 30 ಲಕ್ಷ ರೂಪಾಯಿ ಅನುದಾನದ ಮಂಜೂರಾಗಿದ್ದು ಇದರ ಗುದ್ದಲಿ ಪೂಜೆ ಹಾಗೂ ಉದ್ಘಾಟನೆಯನ್ನು ಭಾನುವಾರ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ನೆರವೇರಿಸಿದರು.

ಮುದರಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಾಂತೂರು ಗ್ರಾಮದ ವಾದಿರಾಜ ಆಚಾರ್ಯ ಮನೆಯಿಂದ ಅಶ್ವತ್ಥಕಟ್ಟೆ ವರಗೆ ರಸ್ತೆ ಅಭಿವೃದ್ಧಿ – 10 ಲಕ್ಷ, ಪಿಲಾರು ಗ್ರಾಮ ತೆಂಕಿಲ ಜಾರುಬೊಟ್ಟು ರಸ್ತೆ ಕಾಂಕ್ರೀಟೀಕರಣ – 10 ಲಕ್ಷ ಸೇರಿದಂತೆ ಒಟ್ಟು 20 ಲಕ್ಷ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಪಿಲಾರು ಗ್ರಾಮದ ತಂಬಿದಬೆಟ್ಟು ಜಾರಂದಾಯ ದೈವಸ್ಥಾನ ರಸ್ತೆ ಡಾಂಬರೀಕರಣ – 10 ಲಕ್ಷ ಇದರ ಉದ್ಘಾಟನೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮುದರಂಗಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷರಾದ ಮೋಹಿನಿ ಮಾಜಿ ಸದಸ್ಯರಾದ ರವೀಂದ್ರ ಪ್ರಭು, ಶಿವರಾಮ್ ಭಂಡಾರಿ, ಯಶೋಧ, ಸ್ಥಳೀಯರಾದ ಸುಧೀರ್ ರಾವ್, ವಿಶ್ವನಾಥ ಶೆಟ್ಟಿ ಜಯರಾಮ್ ಶೆಟ್ಟಿ ಮಿಥೇಶ್, ಹರಿದಾಸ್ ಪ್ರಭು, ಶೈಲೇಂದ್ರ ಶೆಟ್ಟಿ ಅಶೋಕ್ ನಾಯಕ್, ಸತೀಶ್ ಆಚಾರ್ಯ, ಗಂಗಾಧರ ಶೆಟ್ಟಿ ಭೋಜು ಹೆಗ್ಡೆ, ದೇವಿಪ್ರಸಾದ್ ಶೆಟ್ಟಿ ಹರಿಣಾಕ್ಷ ಶೆಟ್ಟಿ ನಾಗೇಶ್ ನಾಯಕ್ ಉಪಸ್ಥಿತರಿದ್ದರು.

ಕೋಡಿ ಕನ್ಯಾಣದಲ್ಲಿ ಆರೋಗ್ಯ ತಪಾಸಣೆ, ಮಾಹಿತಿ ಶಿಬಿರ ಉದ್ಘಾಟನೆ



ಕೋಟ: ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಸಮಸ್ಯೆ ಕಟ್ಟಿಟ್ಟ ಬುತ್ತಿ ಆದರ ಬಗ್ಗೆ ಕಾಳಜಿ ಅತ್ಯಗತ್ಯ ಎಂದು ಉಡುಪಿ ಪ್ರಸಿದ್ಧ ವೈದ್ಯ ನರೇಂದ್ರ ಕುಮಾರ್ ಎಚ್ .ಎಸ್. ಹೇಳಿದರು.

ಭಾನುವಾರ ಕೋಡಿ ಕನ್ಯಾಣದ ಸೇತುವೆ ಬಳಿ ಕೆನರಾ ಬ್ಯಾಂಕ್ ಮಣಿಪಾಲ ವೃತ್ತ ಪ್ರಾಯೋಜಕತ್ವದಲ್ಲಿ ಸೀಎಂಸಿ2 ಮಂಗಳೂರು, ಉಡುಪಿ ಕಿನಾರ ಮೀನುಗಾರ ಉತ್ಪಾದಕ ಕಂಪನಿ, ಅಯೋಧ್ಯಾ ಫ್ರೆಂಡ್ಸ್ ಕೋಡಿ ಕನ್ಯಾಣ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು. ಕೆನರಾ ಬ್ಯಾಂಕ್ ಮಣಿಪಾಲ ಇದರ ಹಿರಿಯ ಪ್ರಬಂಧಕಿ ಅನಿತಾ ಶೆಟ್ಟಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸೀಎಂಸಿ2 ಮಂಗಳೂರು ಅಧ್ಯಕ್ಷ ರಮೇಶ್ ಎಂ.ಆರ್ ವಹಿಸಿದ್ದರು. ಮಂಗಳೂರು ಫಾದರ್ ಮುಲ್ಲರ್ ಆಸ್ಪತ್ರೆ ಚರ್ಮರೋಗ ತಜ್ಞೆ ಡಾ. ಮಿಶೆಲ್ ಫರ್ನಾಂಡಿಸ್, ಮಂಗಳೂರಿನ ವೈದ್ಯೆ ಡಾ. ಸ್ಫೂರ್ತಿ, ಅಯೋಧ್ಯಾ ಫ್ರೆಂಡ್ಸ್‌ನ ಸುದಿನಾ ಕೋಡಿ, ಕೋಟದ ತೋಳಾರ್ ಓಷಿಯನ್ ಪ್ರಾಡಕ್ಟ್ ಮ್ಯಾನೇಜರ್ ಯೋಗೀಶ್ ಕುಮಾರ್, ಸೀಎಂಸಿ2 ಮಂಗಳೂರು ಕಾರ್ಯದರ್ಶಿ ಡಾ. ಸೋಮಶೇಖರ್ ಎಸ್.ಆರ್. ಇದ್ದರು. ಸೀಎಂಸಿ2 ಮಹಾನಿರ್ದೇಶಕ ಡಾ.ಶಿವಕುಮಾರ್ ಮಗದ ಸ್ವಾಗತಿಸಿದರು. ಉಪನ್ಯಾಸಕಿ ಶೀತಲ್ ನಿರೂಪಿಸಿದರು. ಸಂತೋಷ್ ಮೆಂಡನ್ ಸಹಕರಿಸಿದರು. ಚರ್ಮ ಮತ್ತು ಕೀಲು ರೋಗ ಸಮಾಲೋಚನೆ ಪರಿಹಾರ ಕ್ರಮಗಳು, ಕರಾವಳಿ ಮೀನು ಕೃಷಿ ಅವಕಾಶಗಳ ಬಗ್ಗೆ ಮಾಹಿತಿ, ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ, ಹಣಕಾಸು ಸಾಕ್ಷರತೆ ಮತ್ತು ಜೀವ ವಿಮೆಗಳ ಬಗ್ಗೆ ಮಾಹಿತಿ ನಡೆಯಿತು.

ಬೆಣ್ಗೇರೆ: ನಾಗ ಮಂಡಲೋತ್ಸವ, ಅಷ್ಟಬಂಧ ಪ್ರತಿಷ್ಠಾಪನಾ ವರ್ಧಂತ್ಯುತ್ಸವ



ಕುಂದಾಪುರ: ಕಷ್ಟದ ಆ ಹಿಂದಿನ ದಿನಗಳಲ್ಲಿ ದೇವರ ಮೇಲಿನ ಪ್ರೀತಿ ಭಕ್ತಿಯಿಂದ ಬೆಣ್ಗೇರೆಯಲ್ಲಿ ಶ್ರೀ ನಾಗ ದೇವಸ್ಥಾನ ಸ್ಥಾಪಿಸಿ, ದೇವಸ್ಥಾನವನ್ನು ಇಷ್ಟು ಎತ್ತರಕ್ಕೆ ತಂದು ಸಂಪೂರ್ಣ ವ್ಯವಸ್ಥೆ ಇರುವ ದೇವಸ್ಥಾನವಾಗಿ ಮೂಡಿರುವುದು ಮೇಸ್ತ ಸಮಾಜದ ಹೆಮ್ಮೆ. ಮೇಸ್ತ ಸಮಾಜ ನಂಬಿಕೊಂಡು ಬಂದಿರುವ ನಾಗಾರಾಧನೆ, ನಾಗ ದೇವಸ್ಥಾನದ ಮೂಲಕ ಈ ಭಾಗದ ಎಲ್ಲರಿಗೂ ದೇವರ ಅನುಗ್ರಹ ಪ್ರಾಪ್ತಿಯಾಗುತ್ತದೆ. ಇಂತಹ ಧಾರ್ಮಿಕ ದೇವತಾ ಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬರುವ ಹಾಗೆ ದೇವರು ಅನುಗ್ರಹಿಸಲಿ ಎಂದು ಬೆಣ್ಗೇರೆ ಶ್ರೀ ನಾಗ ದೇವಸ್ಥಾನದ ಅಧ್ಯಕ್ಷ ಉಮೇಶ ಎಲ್. ಮೇಸ್ತ ಹೇಳಿದರು.

ಬೆಣ್ಗೇರೆ ಶ್ರೀ ನಾಗ ದೇವಸ್ಥಾನದಲ್ಲಿ 51ನೇ ನಾಗ ಮಂಡಲೋತ್ಸವ ಹಾಗೂ ಅಷ್ಟಬಂಧ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಪ್ರಯುಕ್ತ ಶುಕ್ರವಾರ ಸಂಜೆ ಜರಗಿದ ಧಾರ್ಮಿಕ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇವಸ್ಥಾನದ ಪ್ರಧಾನ ಪುರೋಹಿತರಾದ ರಾಘವೇಂದ್ರ ಅಡಿಗ, ಪಾಂಡೇಶ್ವರದ ಅಷ್ಟಾಂಗ ಯೋಗ ಗುರುಕುಲದ ಡಾ.ವಿಜಯ ಮಂಜರು, ಅಖಿಲ ಕರ್ನಾಟಕ ಚಾರೋಡಿ ಮೇಸ್ತ ಸಮಾಜದ ಉಪಾಧ್ಯಕ್ಷ ಸತೀಶ ಮೇಸ್ತ ಶಿರೂರು, ಬೆಣ್ಗೇರೆ ಖಾರ್ವಿ ಸಮಾಜ ಅಧ್ಯಕ್ಷ ಮಂಜುನಾಥ ಖಾರ್ವಿ, ಮತ್ಸ್ಯೋದ್ಯಮಿ ಮಡಿ ಸುರೇಶ ಖಾರ್ವಿ, ನಾಗಶ್ರೀ ಮಹಿಳಾ ಮಂಡಳಿ ಅಧ್ಯಕ್ಷೆ ಕುಸುಮ ಮೇಸ್ತ, ಶ್ರೀ ಸುಬ್ರಹ್ಮಣ್ಯೇಶ್ವರ ಯೂತ್ ಕ್ಲಬ್ ಅಧ್ಯಕ್ಷ ರಾಮದಾಸ ಕೆ.ಮೇಸ್ತ, ದೇವಸ್ಥಾನದ ಕಾರ್ಯದರ್ಶಿ ಶ್ರೀಧರ ಪಿ.ಮೇಸ್ತ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಪ್ರಕಾಶ ಮೇಸ್ತ ಸ್ವಾಗತಿಸಿದರು. ಶ್ರೀನಿವಾಸ ಮೇಸ್ತ ವಂದಿಸಿದರು. ಸುಂದರ ಜಿ. ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಕಳ ಫೋಟೋಗ್ರಾಫರ್ಸ್ ಅಸೋಸಿಯೇಶನ್: ಆರೋಗ್ಯ ತಪಾಸಣೆ



ಕಾರ್ಕಳ: ದೈನಂದಿನ ಕಾರ್ಯ ಚಟುವಟಿಕೆಯ ಜೊತೆ ಜೊತೆಗೆ ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಅವಶ್ಯವಾಗಿ ಮಾಡಿಸಿಕೊಳ್ಳಬೇಕು ಎಂದು ಶಾಸಕ ವಿ. ಸುನೀಲ್ ಕುಮಾರ್ ಹೇಳಿದರು.

ಅವರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸೌತ್ ಕೆನರಾ ಫೋಟೋಗ್ರಾಫರ್ಸ್ ಅಸೋಸಿಯೇಶನ್ ಕಾರ್ಕಳ ವಲಯದ ವತಿಯಿಂದ ಕೆಎಂಸಿ ಮಣಿಪಾಲ ಆಸ್ಪತ್ರೆಯ ಸಹಯೋಗದಲ್ಲಿ ದಿ. ಜಯಕರ ಸುವರ್ಣ (ಆಶಾ ಸ್ಟುಡಿಯೋ ಬಜಗೋಳಿ) ಸ್ಮರಣಾರ್ಥ ಭಾನುವಾರ ಬಜಗೋಳಿ ಸಭಾಭವನದಲ್ಲಿ ನಡೆದ ಆರೋಗ್ಯ ಉಚಿತ ತಪಾಸಣೆ, ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸ್ವಚ್ಛ ಬ್ರಿಗೇಡ್ ಬಜಗೋಳಿ ತಂಡ ಹಾಗೂ ದಿ. ಜಯಕರ ಸುವರ್ಣ ಅವರ ಪತ್ನಿ ಶಾಂತಾ ಜಯಕರ್ ಸುವರ್ಣ ಅವರನ್ನು ಅಭಿನಂದಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಎಸ್‌ಕೆಪಿಎ ಕಾರ್ಕಳ ವಲಯ ಅಧ್ಯಕ್ಷ ಪ್ರಮೋದ್‌ಚಂದ್ರ ಪೈ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಬಜಗೋಳಿ ಆರೋಗ್ಯ ಕ್ಲಿನಿಕ್‌ನ ಡಾ. ಎ.ಕೆ. ವೆಂಕಟಗಿರಿ ರಾವ್, ಆಶ್ವಿನಿ ಕ್ಲಿನಿಕ್‌ನ ಡಾ. ರಾಮದಾಸ್ ಹೆಗ್ಡೆ ಮುಡ್ರಾಲು ಆಶಾನಿಕೇತನದ ಶಾಂತಾ ಜಯಕರ್ ಸುವರ್ಣ, ಬಜಗೋಳಿ ಶ್ರೀ ಗಣಪತಿ ಸೇವಾ ಸಮಿತಿಯ ಅಧ್ಯಕ್ಷ ಕೆ. ದೇವಿದಾಸ್ ಪ್ರಭು, ನಲ್ಲೂರು ಮೈತ್ರಿ ಯುವ ವೇದಿಕೆ ಅಧ್ಯಕ್ಷ ಜಯರಾಮ್ ಶೆಟ್ಟಿ, ಬಜಗೋಳಿ ಅಬ್ಬೆಂಜಾಲು ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ಸಂದೀಪ್ ಶೆಟ್ಟಿ, ಕೆರ್ವಾಶೆ ಯುವಜನ ವೇದಿಕೆ ಅಧ್ಯಕ್ಷ ಜೀವನ್ ಕುಮಾರ್, ಮಾಳ ಗೆಳೆಯರ ಬಳಗದ ಅಧ್ಯಕ್ಷ ನಂದು ಗೋಪನ್ ಕೆ. ಆರ್., ಎಸ್‌ಕೆಪಿಎ ಉಡುಪಿ–ದ.ಕ. ಜಿಲ್ಲಾ ಉಪಾಧ್ಯಕ್ಷ ದತ್ತಾತ್ರೇಯ, ಮಾಜಿ ಅಧ್ಯಕ್ಷ ಪದ್ಮಪ್ರಸಾದ್ ಜೈನ್, ಕಾರ್ಕಳ ವಲಯ ಗೌರವಾಧ್ಯಕ್ಷ ಸುಶೀಲ್ ಕುಮಾರ್ ಟಿ.ವಿ. ಇದ್ದರು. ಪ್ರಸಾದ್ ಐಸಿರ ನಿರೂಪಿಸಿ, ಶೇಖರ್ ಕುಕ್ಕುಜೆ ವಂದಿಸಿದರು.

ಉತ್ತರ ಭಾರತದ ರಾಜ್ಯಗಳ ಅಪರೂಪದ ಜಾನಪದ ನೃತ್ಯ ಪ್ರದರ್ಶನ

ಸಾಂಸ್ಕೃತಿಕ ಲೋಕದ ಗಮನ ಸೆಳೆದ ರತ್ನಾಕರ ಉತ್ಸವ

ಉಡುಪಿ: ಇತ್ತೀಚೆಗೆ ನಡೆದ 'ರತ್ನಾಕರ ಉತ್ಸವ–2026' ಸಾಂಸ್ಕೃತಿಕ ಲೋಕದ ಗಮನ ಸೆಳೆದಿದೆ. ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಅವರ ನೇತೃತ್ವದಲ್ಲಿ, ರಂಗಭೂಮಿ ಉಡುಪಿ ಮತ್ತು ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಎಂ.ಜಿ.ಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಈ ವಿಶಿಷ್ಟ ಜಾನಪದ ಹಬ್ಬ ಆಯೋಜನೆಯಾಗಿತ್ತು.



ಉತ್ತರ ಭಾರತದ ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತೀಸ್‌ಗಢ, ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ಅಪರೂಪದ ಜಾನಪದ ನೃತ್ಯಗಳು ಪ್ರದರ್ಶನಗೊಂಡವು.

ಆಂಧ್ರದ ಉರುಮುಲು, ಮಧ್ಯಪ್ರದೇಶದ ಬಧಾಯಿ, ಮರಾಠಿ ಸಂಸ್ಕೃತಿಯ ಲಾವಣಿ, ಕೋಲಿ ಮತ್ತು ಟಾರ್ಪಾ ನೃತ್ಯಗಳು ಪ್ರೇಕ್ಷಕರ ಮನಗೆದ್ದವು. ಛತ್ತೀಸ್‌ಗಢದ ಪಂತಿ ಹಾಗೂ ತೆಲಂಗಾಣದ ಗುಸ್ಸಾಡಿ ನೃತ್ಯಗಳು ವಿಶೇಷ ಮೆರುಗು ನೀಡಿದವು. ತುಳುನಾಡಿನ ಹೆಮ್ಮೆಯ ಕೊರಗರ ಕುಣಿತ, ಕಂಗೀಲು ಹಾಗೂ ಗೊಂಡೊಳು ನೃತ್ಯಗಳ ಮೂಲಕ ಕರಾವಳಿಯ ಮೂಲ ಸಂಸ್ಕೃತಿಯನ್ನು ಅನಾವರಣಗೊಳಿಸಲಾಯಿತು. ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ (ನಾಗಪುರ) ಹಾಗೂ ಕರ್ನಾಟಕ ಜಾನಪದ ಪರಿಷತ್ತಿನ ಸಹಯೋಗದೊಂದಿಗೆ 300ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. ಸಂಸದ ಕೋಟ ಶ್ರೀನಿವಾಸ ಪೂಜಾರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದರು.

ಮಣೂರು ಶ್ರೀ ಮಹಾಲಿಂಗೇಶ್ವರ ಜಾತ್ರೆ ಪ್ರಯುಕ್ತ ಪೂರ್ವ ಸಿದ್ಧತೆ

ಪಂಚವರ್ಣ, ಮಣೂರು ಫ್ರೆಂಡ್ಸ್ ಸ್ವಚ್ಛತಾ ಕಾರ್ಯ

ಕೋಟ: ಮಣೂರು ಹೇರಂಬ ಮಹಾಗಣಪತಿ ಹಾಗೂ ಶ್ರೀ ಮಹಾಲಿಂಗೇಶ್ವರ ಸಾನಿಧ್ಯ ಕಾರಣಿಕ ಕ್ಷೇತ್ರವಾಗಿದ್ದು ಇಲ್ಲಿನ ವಾರ್ಷಿಕ ರಥೋತ್ಸವ ಅರ್ಥಪೂರ್ಣವಾಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರ ಭಾಗವಹಿಸುವಿಕೆ ಬಹುಮುಖ್ಯವಾಗಿದೆ ಎಂದು ಮಣೂರು ಮಹಾಲಿಂಗೇಶ್ವರ ದೇಗುಲದ ಅಧ್ಯಕ್ಷ ಸತೀಶ್ ಎಚ್. ಕುಂದರ್ ಹೇಳಿದರು.



ಭಾನುವಾರ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ 295ನೇ ವಾರದ ಪರಿಸರಸ್ನೇಹಿ ಕಾರ್ಯಕ್ರಮದ ಸಲುವಾಗಿ ಮಣೂರು ದೇಗುಲ ಜಾತ್ರೆಯ ಪ್ರಯುಕ್ತ ಮಣೂರು ಫ್ರೆಂಡ್ಸ್ ಮಣೂರು ಇವರ ಸಂಯೋಜನೆಯೊಂದಿಗೆ ದೇಗುಲ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ ದೇಗುಲ ಸ್ವಚ್ಛತೆಯಿಂದ ಮನಸ್ಸು ಭಕ್ತಿಭಾವಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಇಲ್ಲಿನ ಈ ಸಂಘಟನೆಗಳ ದೇಗುಲ ಸ್ವಚ್ಛತಾ ಕಾರ್ಯಕ್ರಮ ನಿದರ್ಶನವಾಗಿದೆ ಎಂದು ಏಪ್ರಿಲ್ 2ರಂದು ನಡೆಯುವ ಜಾತ್ರೆಯನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ಪಂಚವರ್ಣದ ಅಧ್ಯಕ್ಷ ಮನೋಹರ್ ಪೂಜಾರಿ, ಮಣೂರು ಫ್ರೆಂಡ್ಸ್ ಅಧ್ಯಕ್ಷ ರಾಘವೇಂದ್ರ ಪೂಜಾರಿ, ಪಂಚವರ್ಣ ಮಹಿಳಾ ಅಧ್ಯಕ್ಷೆ ಲಲಿತಾ ಪೂಜಾರಿ, ಕಾರ್ಯಾಧ್ಯಕ್ಷೆ ಕಲಾವತಿ ಅಶೋಕ, ಮಣೂರು ಫ್ರೆಂಡ್ಸ್ ಗೌರವಾಧ್ಯಕ್ಷ ಸುರೇಶ್ ಆಚಾರ್ ಇದ್ದರು.